ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಣಜಿ: ಮಿಂಚಿದ ಸ್ಮರಣ್, ಕರುಣ್

ಹುಬ್ಬಳ್ಳಿಯಲ್ಲಿ ಭಾನುವಾರ ಆರಂಭವಾದ ಚಂಡೀಗಢ ವಿರುದ್ಧದ ರಣಜಿ ಪಂದ್ಯದಲ್ಲಿ ಕರ್ನಾಟಕದ ಬ್ಯಾಟ್ಸ್‌ಮನ್ ಸ್ಮರಣ್ ರವಿಚಂದ್ರನ್ ಅಜೇಯ ಶತಕ (105) ಸಿಡಿಸಿದ್ದಾರೆ. ಮೊದಲ ದಿನದಾಂತ್ಯಕ್ಕೆ ಕರ್ನಾಟಕ 5 ವಿಕೆಟ್ ನಷ್ಟಕ್ಕೆ 298 ರನ್ ಗಳಿಸಿ ಸುಸ್ಥಿತಿಯಲ್ಲಿದೆ. ಕರುಣ್ ನಾಯರ್ 95 ರನ್ ಗಳಿಸಿ ಔಟ್ ಆದರು.

ಭಾವುಕ ಸಭೆಯಲ್ಲಿ ಬದುಕುಳಿದವರು ಕಂಡಂತೆ! ಲೋಕಾರ್ಪಣೆ

ಇಸ್ರೇಲ್‌ನಲ್ಲಿ 2023ರ ಅಕ್ಟೋಬರ್ 7 ರಂದು ಹಮಾಸ್ ನಡೆಸಿದ ಹತ್ಯಾಕಾಂಡದ ಕುರಿತು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಕನ್ನಡಕ್ಕೆ ಅನುವಾದಿಸಿರುವ ಬದುಕುಳಿದವರು ಕಂಡಂತೆ! ಕೃತಿಯನ್ನು ಭಾನುವಾರ ಬೆಂಗಳೂರಿನ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಲಾಯಿತು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ತೇಜಸ್ವಿ ಸೂರ್ಯ, ಲೇಖಕ ವಿಶ್ವೇಶ್ವರ ಭಟ್, ವಿಶ್ವವಾಣಿ ಪುಸ್ತಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕಿ ಸುಷ್ಮಾ ಭಟ್, ವಿಶ್ವವಾಣಿ ಸಿಇಒ ಚಿದಾನಂದ ಕಡಲಾಸ್ಕರ ಉಪಸ್ಥಿತರಿದ್ದರು.

ದೆಹಲಿಯಲ್ಲಿ ರಾಜ್ಯ ರಾಜಕೀಯ ಕದನ ಕುತೂಹಲ
ಇಂದು ಸಿಎಂ ಸಿದ್ದು-ಖರ್ಗೆ ಸಂಪುಟ ಸರ್ಜರಿ ಚರ್ಚೆ

ಕೆಪಿಸಿಸಿ ಪಟ್ಟ ಬಿಡಲ್ಲ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಸಚಿವ ಸಂಪುಟ ಪುನಾರಚನೆಗೆ ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ತೋರಿಸಿರುವ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ದೆಹಲಿಯಲ್ಲಿ ಮಾತುಕತೆ ನಡೆಸಲಿದ್ದಾರೆ. ಈ ಬೆಳವಣಿಗೆ ಮಧ್ಯೆಯೇ ಕೆಪಿಸಿಸಿ ಅಧ್ಯಕ್ಷ ಪಟ್ಟ ಬಿಡಲಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಇದೇ ವೇಳೆ ಪುನಾರಚನೆಯಲ್ಲಿ ಅವಕಾಶ ಗಿಟ್ಟಿಸಲು ಹಲವು ಶಾಸಕರು ಮುಂದಾಗಿದ್ದು ದೆಹಲಿಯತ್ತ ಮುಖ ಮಾಡುವ ಸಂಭವವಿದೆ.

ಬಿಹಾರ ವಿಧಾನಸಭೆ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರ ದೆಹಲಿ ಭೇಟಿಯ ವೇಳೆ ಹೆಚ್ಚಿನ ಚರ್ಚೆಯಾಗಿಲ್ಲ. ಆದರೆ, ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿದ ವೇಳೆ ಸಂಪುಟ ಪುನಾರಚನೆಗೆ ಹಸಿರು ನಿಶಾನೆ ತೋರಿಸಿದ್ದಾರೆ ಎಂದು ಹೇಳಲಾಗಿದೆ. ಸರಕಾರ ಎರಡೂವರೆ ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಂಪುಟ ಪುನಾರಚನೆ ಕೈಗೊಳ್ಳಬಹುದು ಎಂದು ರಾಹುಲ್ ಗಾಂಧಿ ಹೇಳಿದ್ದು, ಇನ್ನು ಮುಂದೆ ಯಾರನ್ನು ಕೈಬಿಡಬೇಕು ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಚರ್ಚೆಗಳು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗಿನ ಸಭೆಯಲ್ಲಿ ನಡೆಯಲಿದೆ ಎನ್ನಲಾಗಿದೆ. ಶನಿವಾರ ರಾತ್ರಿ ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಂಜೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. ಈ ವೇಳೆ ಸಲ್ಲಿಸಬೇಕಾದ ಮನವಿ ಪತ್ರ ತಯಾರಿಕೆ ನಡೆದಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲೇ ಬೀಡು ಬಿಟ್ಟಿದ್ದು ಅವರ ನಡೆಯೂ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಸೋಮವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡುತ್ತಿದ್ದು, ಹೈಕಮಾಂಡ್ ನಾಯಕರ ಜೊತೆ ಮಹತ್ವದ ಮಾತುಕತೆ ನಡೆಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಅವರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

→ 4

ಹಗಲು ರಾತ್ರಿ ಪಕ್ಷ ಕಟ್ಟಿದ್ದೇನೆ, ಕಾಂಗ್ರೆಸ್ ಪಕ್ಷಕ್ಕೆ ಬ್ಲ್ಯಾಕ್ ಮೇಲ್ ಮಾಡುವವನು ನಾನಲ್ಲ. ನಾನು ಪಕ್ಷದ ಶಿಸ್ತಿನ ಸಿಪಾಯಿ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನೇಕೆ ರಾಜೀನಾಮೆ ನೀಡಲಿ? ನನ್ನ ಮಾನಸಿಕ , ದೈಹಿಕ ಹಾಗೂ ರಾಜಕೀಯ ಆರೋಗ್ಯ ಸರಿಯಾಗಿದೆ.

-ಡಿ.ಕೆ.ಶಿವಕುಮಾರ್, ಡಿಸಿಎಂ

ಸಂದಿಗ್ಧತೆಗಳೇನು?

1. ಸಂಪುಟ ಪುನಾರಚನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ಧತೆ
2. ಸಂಪುಟದಲ್ಲಿ ಸ್ಥಾನ ಗಿಟ್ಟಿಸಲು ಹಲವು ಶಾಸಕರು ದೆಹಲಿಗೆ ದೌಡು, ಲಾಬಿ
3. ಸರಕಾರದ ಹಲ ಹಿರಿಯ ಸಚಿವರಿಗೆ ಸ್ಥಾನ ಕಳೆದುಕೊಳ್ಳುವ ಭೀತಿ
4. ಸಿದ್ದರಾಮಯ್ಯ, ಶಿವಕುಮಾರ್, ಖರ್ಗೆ ಪಟ್ಟ ಸರಿದೂಗಿಸುವ ಒತ್ತಡ

ಸಿಎಂ ಸಿದ್ದು ಸ್ಥಾನ ಅಬಾಧಿತ: ಪರಂ

ಸಚಿವ ಸಂಪುಟ ಪುನಾರಚನೆಯಾದರೆ ನಾಯಕತ್ವ ಬದಲಾವಣೆಯಾಗುವುದಿಲ್ಲ. ಸಿಎಂ ಸಿದ್ದರಾಮಯ್ಯ ಅವರ ಸ್ಥಾನ ಅಬಾಧಿತ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗುವ ಮುನ್ನ, ನಾನು ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಅನಂತರದ ವಿದ್ಯಮಾನಗಳ ಬಗ್ಗೆ ಮಾಹಿತಿ ಇಲ್ಲ. ಆದರೆ ಸಚಿವ ಸಂಪುಟ ಪುನಾರಚನೆಗೆ ಅನುಮತಿಸಲಾಗಿದೆ ಎಂಬ ವರದಿಯನ್ನು ನೋಡಿದ್ದೇನೆ. ಬಹಳಷ್ಟು ಮಂದಿ ಶಾಸಕರಿಗೆ ಸಚಿವರಾಗಬೇಕು ಎಂದು ಬಹಳಷ್ಟು ದಿನಗಳಿಂದಲೂ ಬೇಡಿಕೆ ಇದೆ. ಸಂಪುಟ ಪುನಾರಚನೆ ಮುಖ್ಯಮಂತ್ರಿ ಪರಮಾಧಿಕಾರ ಎಂದರು.

ಆರ್‌ಎಸ್‌ಎಸ್ ಪಥಸಂಚಲನದ ವೇಳೆ ಹೂಮಳೆ
ಬಿಗಿ ಭದ್ರತೆ, ಹೊರಗಿನವರಿಗೆ ಪ್ರವೇಶ ನಿರಾಕರಣೆ

ಖರ್ಗೆ ಕೋಟೆಯಲ್ಲಿ ಸಂಘಪಥ ಸುಸೂತ್ರ

ಕಲಬುರಗಿ: ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ತೀವ್ರ ಕಾನೂನು ಸಂಘರ್ಷ, ಚರ್ಚೆಗೆ ಕಾರಣವಾಗಿದ್ದ ಚಿತ್ತಾಪುರ ಆರ್‌ಎಸ್‌ಎಸ್ ಪಥ ಸಂಚಲನ ಭಾನುವಾರ ಶಾಂತವಾಗಿ, ಸುಸೂತ್ರ ವಾಗಿ ಮುಗಿದಿದೆ. ಬಿಗಿ ಪೊಲೀಸ್ ಭದ್ರತೆ, ಜಿಲ್ಲಾಡಳಿತದ ಷರತ್ತುಗಳ ನಡುವೆ ರಾಷ್ಟ್ರೀಯ ಸ್ವಯಂಸೇವಕ ಸಂಘದ 350 ಗಣವೇಷಧಾರಿಗಳು, 50 ಘೋಷ್ ವಾದಕರು ಶಿಸ್ತುಬದ್ಧವಾಗಿ ಪಥಸಂಚಲನ ನಡೆಸಿದರು. ಖರ್ಗೆ ಕುಟುಂಬದ ಕೋಟೆಯೆಂದು ಕರೆಸಿಕೊಂಡಿರುವ ಚಿತ್ತಾಪುರದಲ್ಲಿ ಸಂಚಲನ ನಡೆಸಲು ವಿರೋಧ ವ್ಯಕ್ತವಾಗಿತ್ತು. ಅಂತಿಮವಾಗಿ ಹೈಕೋರ್ಟ್‌ನ ಕಲಬುರಗಿ ಪೀಠ ಅನುಮತಿ ನೀಡಿದ್ದರಿಂದ ವಿವಾದ ಅಂತ್ಯವಾಗಿತ್ತು.

ಬಜಾಜ್ ಕಲ್ಯಾಣ ಮಂಟಪದಿಂದ ಪ್ರಾರಂಭ ವಾದ ಪಥಸಂಚಲನ ಪಟ್ಟಣದ ಪ್ರಮುಖ ಸ್ಥಳಗ ಳಾದ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಸರಕಾರಿ ಗ್ರಂಥಾಲಯ, ಬಸವ ಆಸ್ಪತ್ರೆ, ರಾಘವೇಂದ್ರ ಖಾನಾವಳಿ ರಸ್ತೆ, ಕಾಶಿ ಗಲ್ಲಿಯ ಗಣೇಶ ಮಂದಿರ, ಕೆನರಾ ಬ್ಯಾಂಕ್, ತಾಲೂಕು ಪಂಚಾಯತ್ ಕಾರ್ಯಾಲಯ, ಸರ್ಕಾರಿ ಪದವಿ ಪೂರ್ವ ಕಾಲೇಜುನಿಂದ ಪುನಃ ಬಸವೇಶ್ವರರ ಸರ್ಕಲ್‌ನಿಂದ ಮರಳಿ ಬಜಾಜ್ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮದೊಂದಿಗೆ ದೇಶದ ಹೈವೋಲ್ಟೇಜ್ ಪಥಸಂಚಲನ ಮುಕ್ತಾಯವಾಯಿತು. ಒಟ್ಟು 2 ಕಿ.ಮೀ. ಮೆರವಣಿಗೆ ಸಾಗಿತು.

→ 4

100 ವರ್ಷಗಳಲ್ಲಿ ಮೊದಲ ಬಾರಿಗೆ ಕಾನೂನು ಮತ್ತು ಸಾಂವಿಧಾನಿಕ ಅನುಮತಿಯೊಂದಿಗೆ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆಸುವ ಮೂಲಕ ನಿಯಮಗಳನ್ನು ಪಾಲಿಸುತ್ತಿದೆ. ನಾನು ಪಥಸಂಚಲನಕ್ಕೆ ವಿರೋಧ ಮಾಡಿರಲಿಲ್ಲ. ಅನುಮತಿ ಪಡೆಯಬೇಕೆಂದು ಮಾತ್ರ ತಿಳಿಸಿದ್ದೆ.

-ಪ್ರಿಯಾಂಕ್ ಖರ್ಗೆ, ಸಚಿವ

ಬಿಹಾರ: ನ.20ಕ್ಕೆ ಪ್ರಮಾಣವಚನ?

ಪಟನಾ: ಬಿಹಾರ ಚುನಾವಣೆಯನ್ನು ಭರ್ಜರಿಯಾಗಿ ಗೆದ್ದ ಹಿನ್ನೆಲೆಯಲ್ಲಿ ಸೋಮವಾರ ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆಂದು ಮೂಲಗಳು ಹೇಳಿವೆ. ತಕ್ಷಣವೇ ಹೊಸ ಸರಕಾರ ರಚನೆಗೆ ಪ್ರಕ್ರಿಯೆಗಳು ಆರಂಭವಾಗಲಿವೆ. ಮೂಲಗಳ ಪ್ರಕಾರ ನ.19 ಅಥವಾ 20ಕ್ಕೆ ಹೊಸ ಸರಕಾರದ ಪ್ರಮಾಣವಚನ ನಡೆಯಲಿದೆ. ನಿತೀಶ್ ಮುಖ್ಯ ಮಂತ್ರಿಯಾಗಿ ಮುಂದುವರಿಯುವ ನಿರೀಕ್ಷೆಯಿದೆ.

ಮನೆ ತೊರೆದ ಲಾಲು ಪುತ್ರಿಯರು

ಬಿಹಾರ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡ ಬಳಿಕ ಆರ್‌ಜೆಡಿ ಪಕ್ಷದ ನಾಯಕ ಲಾಲೂ ಪ್ರಸಾದ್ ಯಾದವ್ ಕುಟುಂಬ ದೊಳಕ್ಕೆ ಭಾರೀ ಒಳಜಗಳ ಆರಂಭವಾಗಿದೆ. ಶನಿವಾರ ಸಹೋದರ ತೇಜಸ್ವಿ ಯಾದವ್ ವಿರುದ್ಧ ಸಿಟ್ಟಾಗಿ ಪುತ್ರಿ ರೋಹಿಣಿ ಕುಟುಂಬದೊಂದಿಗೆ ಸಂಬಂಧವನ್ನೇ ಕಡಿದುಕೊಂಡಿದ್ದರು. ಇದೀಗ ಇನ್ನೂ ಮೂವರು ಪುತ್ರಿಯರಾದ ರಾಜಲಕ್ಷ್ಮೀ, ರಾಗಿಣಿ, ಚಂದಾ ಕೂಡ ಸಂಬಂಧ ಕಡಿದುಕೊಂಡಿದ್ದಾರೆ.



ಬೆಳಗಾವಿಯಲ್ಲಿ ಬ್ಯಾಕ್ಟೀರಿಯಾದಿಂದ 30 ಜಿಂಕೆ ಸಾವು

ಕೃಷ್ಣಮೃಗ ಸಾವು: ತಜ್ಞರ ಭೇಟಿ

ಬೆಳಗಾವಿ: ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿಯ 30 ಕೃಷ್ಣಮೃಗಗಳು (ಜಿಂಕೆ) ಬ್ಯಾಕ್ಟೀರಿಯಾ ಸೋಂಕಿನಿಂದ ಅಸುನೀಗಿವೆ ಎಂದು ಭಾನುವಾರ ಮರಣೋತ್ತರ ಪರೀಕ್ಷೆ ನಡೆಸಿದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಬೆಂಗಳೂರು ಶಾಖೆಯ ತಜ್ಞ ಡಾ.ಚಂದ್ರಶೇಖರ್ ಮತ್ತು ಬನ್ನೇರುಘಟ್ಟ ಉದ್ಯಾನವನದ ವೈದ್ಯ ಮಂಜುನಾಥ್ ತಂಡವು ಮಾಹಿತಿ ನೀಡಿದೆ. ಮೂರು ಕೃಷ್ಣಮೃಗಗಳ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ತಂಡವು ಬ್ಯಾಕ್ಟೀರಿಯಾ ಹಿಮೋರೇಜಿಕ್ ಸೇಪ್ಟಿಸಿಮಿಯಾ (ಎಚ್‌ಎಸ್)ದಿಂದ ಮೃತಪಟ್ಟಿವೆ ಎಂದು ತಜ್ಞ ವೈದ್ಯರ ತಂಡ ಖಚಿತಪಡಿಸಿದೆ. ವೈದ್ಯರ ತಂಡದ ಜತೆಗೆ ಕರ್ನಾಟಕ ಮೃಗಾಲಯ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಸಹ ಇದ್ದರು.

ಬೆಳಗಾವಿಯ ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರುಮೃಗಾಲಯದಲ್ಲಿ ಮೃತಪಟ್ಟ ಕೃಷ್ಣಮೃಗಗಳ ಪರೀಕ್ಷೆ ನಡೆಸಿದ ವೈದ್ಯರ ತಂಡ.

→ 4

ಮೊದಲನೇ ಟೆಸ್ಟ್ ಭಾರತಕ್ಕೆ ಸೋಲು

ಕೋಲ್ಕತ್ತಾ: ಇಲ್ಲಿ ನಡೆದ 1ನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ದ.ಆಫ್ರಿಕಾ ನೀಡಿದ ಕೇವಲ 124 ರನ್ ಗುರಿಯನ್ನು ಬೆನ್ನಟ್ಟಲಾಗದೇ 30 ರನ್ ಸೋಲು ಕಂಡಿದೆ. ಭಾನುವಾರ 3ನೇ ದಿನ 7 ವಿಕೆಟ್‌ಗೆ 97 ರನ್‌ನೊಂದಿಗೆ ಬ್ಯಾಟಿಂಗ್ ಮುಂದುವರಿಸಿದ ದ.ಆಫ್ರಿಕಾ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 153 ರನ್ ಗಳಿಸಿತ್ತು. ಸಣ್ಣ ಗುರಿ ಬೆನ್ನಟ್ಟಿದ ಭಾರತ, 93 ರನ್‌ಗೆ ಆಲೌಟಾಯಿತು. ಗಿಲ್ ಗಾಯಗೊಂಡಿದ್ದು ಭಾರತಕ್ಕೆ ಮುಳುವಾಯಿತು.

ಡಿ.16ಕ್ಕೆ ಐಪಿಎಲ್ ಮಿನಿ ಹರಾಜು

ಮುಂಬಯಿ: ಐಪಿಎಲ್ 2026ಕ್ಕೆ ಪೂರ್ವಭಾವಿಯಾಗಿ ಈ ಬಾರಿ ಡಿ.16ಕ್ಕೆ ಕಿರು ಹರಾಜು ನಡೆಯಲಿದೆ. ಅಬುಧಾಬಿಯಲ್ಲಿರುವ ಎತಿಹಾದ್ ಅನ್ನು ಹರಾಜಿನ ಸ್ಥಳವಾಗಿ ಆಯ್ಕೆ ಮಾಡಲಾಗಿದೆ. ಹರಾಜಿನಲ್ಲಿ ಆಟಗಾರರನ್ನು ತಂಡಗಳಿಗೆ ಒಟ್ಟು 237.55 ಕೋಟಿ ರು. ಮೊತ್ತವನ್ನು ಹೊಂದಿರುತ್ತವೆ. ಹರಾಜಿನಲ್ಲಿ ಗರಿಷ್ಠ 77 ಸ್ಥಾನ ಭರ್ತಿ ಮಾಡಬಹುದು, ಅದರಲ್ಲಿ 31 ಸ್ಥಾನಗಳು ವಿದೇಶಿ ಆಟಗಾರರು ಸೇರಿದ್ದಾರೆ. ಒಂದೇ ದಿನದಲ್ಲಿ ಹರಾಜು ನಡೆಯಲಿದೆ.

ತುಪ್ಪದ ಕಲಬೆರಕೆ ತಪ್ಪಿಸಲು ಕೆಎಂಎಫ್‌ಗೆ ಮೊರೆ

ಹೆಚ್ಚುವರಿ 1000 ಟನ್ ನಂದಿನಿ ತುಪ್ಪಕ್ಕೆ ತಿರುಪತಿ ಟ್ರಸ್ಟ್ ಬೇಡಿಕೆ

ಬೆಂಗಳೂರು: ನಕಲಿ ತುಪ್ಪಕ್ಕೆ ತಡೆ ಹಾಕುವ ನಿಟ್ಟಿನಲ್ಲಿ ನಿಟ್ಟಿನಲ್ಲಿ ಟಿಟಿಡಿ (ತಿರುಪತಿ ತಿರುಮಲ ದೇವಸ್ವಂ ಟ್ರಸ್ಟ್) ಟ್ರಸ್ಟ್ ಕೆಎಂಎಫ್‌ನಿಂದ ನಂದಿನಿ ತುಪ್ಪ ಖರೀದಿಗೆ ಮುಂದಾಗಿತ್ತು. ಇದೀಗ ಮತ್ತೆ ಟಿಟಿಡಿಯಿಂದ ನಂದಿನಿ ತುಪ್ಪಕ್ಕೆ ಭಾರೀ ಬೇಡಿಕೆ ಬಂದಿದೆ ಎಂದು ಮೂಲಗಳು ಹೇಳಿವೆ. ತಿರುಪತಿಯಲ್ಲಿ ನಕಲಿ ತುಪ್ಪದ ಹಾವಳಿ ಬೆಳಕಿಗೆ ಬಂದ ನಂತರ 2024 ಆಗಸ್ಟ್‌ನಿಂದ ಟಿಟಿಡಿ ಕರ್ನಾಟಕದ ನಂದಿನಿ ತುಪ್ಪವನ್ನು ತಿರುಪತಿ ಲಾಡು ತಯಾರಿಕೆಗೆ ಬಳಸುತ್ತಿದೆ.

ಹಿಂದಿಗಿಂತ 1000 ಟನ್ ಹೆಚ್ಚುವರಿ ನಂದಿನಿ ತುಪ್ಪವನ್ನು ಟಿಟಿಡಿ ಕೇಳಿದೆಯೆಂದು ವರದಿಗಳು ಹೇಳಿವೆ. ಈ ಪ್ರಕಾರ ಕೆಎಂಎಫ್‌ನಿಂದ ಪ್ರತಿನಿತ್ಯ 3ರಿಂದ 3.5 ಟನ್ ತುಪ್ಪ, ತಿಂಗಳಿಗೆ ಸುಮಾರು 300 ಟನ್ ತುಪ್ಪ ತಿರುಮಲ ಬೆಟ್ಟವನ್ನು ತಲುಪುತ್ತಿದೆ. ಪ್ರತಿನಿತ್ಯ ಟಿಟಿಡಿ ಸಿಬ್ಬಂದಿ, ಕೆಎಂಎಫ್ ನಂದಿನಿ ತುಪ್ಪ ಉತ್ಪಾದನಾ ಘಟಕಗಳಿಗೆ ಸ್ವತಃ ತೆರಳಿ, ವಾಹನವನ್ನು ಲಾಕ್ ಮಾಡಿಕೊಂಡು ತೆಗೆದುಕೊಂಡು ಹೋಗುತ್ತಾರೆ. ತಿರುಪತಿ ತಲುಪಿದ ನಂತರವೇ ಲಾಕ್ ಓಪನ್ ಮಾಡಲಾಗುತ್ತದೆ. ಜಿಪಿಎಸ್ ಸಿಸ್ಟಮ್ ಸಹ ಅಳವಡಿಕೆ ಮಾಡಿದ್ದು, ಬಿಗಿ ಭದ್ರತೆಯಲ್ಲಿ ತುಪ್ಪ ಹೋಗುತ್ತಿದೆ. ಯಾವುದೇ ಹಂತದಲ್ಲೂ ಕಲಬೆರಕೆ ನಡೆಯಬಾರದು ಎಂಬ ಕಾರಣದಿಂದ ಈ ಎಚ್ಚರಿಕೆ ತೆಗೆದುಕೊಳ್ಳಲಾಗಿದೆ.

ಚಹಾ, ಮಸಾಲೆ ಸೇರಿ 200 ಉತ್ಪನ್ನಗಳ ತೆರಿಗೆ ಇಳಿಕೆ | ಭಾರತೀಯರಿಗೆ ಲಾಭ

ಟ್ರಂಪ್‌ಗೆ ಮುಳುವಾದ ಸುಂಕಬಾಧೆ

ದೆಹಲಿ: ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿದೆ ಎನ್ನುವುದೂ ಸೇರಿ ಹಲವು ಕಾರಣಗಳನ್ನು ನೀಡಿ ಭಾರತದ ಉತ್ಪನ್ನಗಳ ಮೇಲೆ ಭಾರೀ ಸುಂಕ ಹೇರಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೆತ್ತಗಾಗಿದ್ದಾರೆ. 250ಕ್ಕೂ ಅಧಿಕ ಕೃಷಿ ಮತ್ತು ಆಹಾರ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿತ ಮಾಡಿದ್ದಾರೆ. ಇದರಿಂದ ಭಾರತದ ಚಹಾ, ಸಾಂಬಾರ (ಮಸಾಲೆ) ಪದಾರ್ಥಗಳು, ಇತರೆ ಆಹಾರ ಉತ್ಪನ್ನಗಳಿಗೆ ಲಾಭವಾಗಿದೆ. ಭಾರತದಿಂದ ಮತ್ತೆ ಅಮೆರಿಕಕ್ಕೆ ಈ ಪದಾರ್ಥಗಳ ರಫ್ತು ಹೆಚ್ಚಳವಾಗುವುದು ಖಚಿತ.

ಆಗಸ್ಟ್ ಕೊನೆಯ ಹೊತ್ತಿಗೆ ಭಾರತೀಯ ವ್ಯಾಪಾರಿಗಳಿಗೆ, ಕೃಷಿಕರಿಗೆ ಅಮೆರಿಕದಿಂದ ಭಾರೀ ಆಘಾತ ಎದುರಾಯಿತು. ಚಹಾ, ಕಾಫಿ, ಮಸಾಲೆ, ಗೋಡಂಬಿ ಪದಾರ್ಥಗಳು ಸೇರಿದಂತೆ ನಿರ್ದಿಷ್ಟ ವಸ್ತುಗಳ ಮೇಲೆ ತೆರಿಗೆಯನ್ನು ಶೇ.25ರಿಂದ 50ಕ್ಕೇರಿಸಲಾಯಿತು. ಇದರಲ್ಲಿ ಶಿಕ್ಷಾರೂಪದಲ್ಲಿ ಶೇ.25 ತೆರಿಗೆಯೂ ಸೇರಿತ್ತು. ಇದರ ವಿರುದ್ಧ ಅಮೆರಿಕದಲ್ಲೇ ಉಂಟಾದ ಮತದಾರರ ಆಕ್ರೋಶ, ಬೆಲೆಯೇರಿಕೆ ಸಮಸ್ಯೆಗಳಿಂದ ಟ್ರಂಪ್ ಈ ಹೆಚ್ಚುವರಿ ತೆರಿಗೆಯನ್ನು ತೆಗೆದುಹಾಕಿದ್ದಾರೆ. ಅಲ್ಲಿಗೆ ಅವರು ತಮ್ಮದೇ ದೇಶೀಯರ ಆಕ್ರೋಶಕ್ಕೆ ಮಣಿದು ಮೆತ್ತಗಾಗಿದ್ದಾರೆ.

ಯಾವುದಕ್ಕೆಲ್ಲ ಸುಂಕ ಇಳಿಕೆ?: ಕರಿಮೆಣಸು, ಲವಂಗ, ಜೀರಿಗೆ, ಏಲಕ್ಕಿ, ಅರಿಶಿನ, ಶುಂಠಿ, ಟೀ, ಕಾಫಿ ಪದಾರ್ಥಗಳು, ಮಾವು ಉತ್ಪನ್ನಗಳು, ಗೋಡಂಬಿಯಂತಹ ಕೃಷಿ ಉತ್ಪನ್ನಗಳಿಗೆ ಈ ಲಾಭ ಸಿಕ್ಕಿದೆ. ಆದರೆ ಬಾಸುಮತಿ ಅಕ್ಕಿ, ಸೀಗಡಿ ಮೀನಿನ ತೆರಿಗೆ ಇಳಿದಿಲ್ಲ. ಇನ್ನೂ ಹಲವು ಸಮುದ್ರೋತ್ಪನ್ನಗಳ ಬೆಲೆ ಹಾಗೆಯೇ ಇದೆ. ಈ ಉತ್ಪನ್ನಗಳ ಬೆಲೆಯಿಳಿಕೆ ಬಗ್ಗೆಯೂ ನಿರೀಕ್ಷೆ ಹೆಚ್ಚಳವಾಗಿದೆ.

ಈ ವರ್ಷ ಆಗಸ್ಟ್ ಕೊನೆಗೆ ಸುಂಕ ಏರಿಸಿದ್ದರಿಂದ ಸೆಪ್ಟೆಂಬರ್ ಹೊತ್ತಿಗೆ ಅಮೆರಿಕಕ್ಕೆ ಭಾರತೀಯ ಕೃಷಿಯುತ್ಪನ್ನಗಳ ರಫ್ತು ಶೇ.12 ಕುಸಿದು ಶೇ.5.43 ಬಿಲಿಯನ್ ಡಾಲರ್‌ಗಳಿಗೆ (48.15 ಸಾವಿರ ಕೋಟಿ ರು.) ತಲುಪಿತ್ತು. ಇದರ ಪ್ರಮಾಣ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ 5.7 ಬಿ.ಡಾ. (50.5 ಸಾವಿರ ಕೋಟಿ ರು.) ಇತ್ತು. ಕಳೆದ ವರ್ಷ ಅಮೆರಿಕಕ್ಕೆ ಭಾರತದ ಒಟ್ಟು ರಫ್ತು 87 ಬಿ.ಡಾ. (7.7 ಲಕ್ಷ ಕೋಟಿ ರು.) ಇತ್ತು. ಭಾರತೀಯ ಆಹಾರೋತ್ಪನ್ನಗಳು ಅದರಲ್ಲೂ ಮಸಾಲೆ ಪದಾರ್ಥಗಳ ಮೇಲೆ ಅವಲಂಬಿತರಾಗಿರುವ ಅಮೆರಿಕನ್ನರು ಆಘಾತಕ್ಕೊಳಗಾಗಿದ್ದರು. ಬೆಲೆಯೇರಿಕೆಯಿಂದ ಟ್ರಂಪ್ ವಿರುದ್ಧ ಸಿಟ್ಟಾಗಿದ್ದರು. ಅಲ್ಲಿ ನಡೆದ ಉಪಚುನಾವಣೆಯಲ್ಲಿ ಟ್ರಂಪ್ ಅವರ ರಿಪಬ್ಲಿಕನ್ ಪಕ್ಷ ಸೋತಿದ್ದೂ ಆಯ್ತು. ಇವೆಲ್ಲದರಿಂದ ಟ್ರಂಪ್ ಮೆತ್ತಗಾಗಿದ್ದಾರೆಂದು ಹೇಳಲಾಗಿದೆ.

ಎಚ್-1ಬಿ ವೀಸಾ ವಿಚಾರದಲ್ಲೂ ಮೆತ್ತಗೆ

ಭಾರತೀಯರು ಅಮೆರಿಕ ಪ್ರವೇಶಿಸುವುದನ್ನು ತಡೆಯಲೆಂದೇ ಎಚ್-1ಬಿ ವೀಸಾ ಪಡೆಯಲು 80 ಲಕ್ಷ ರು.ಗೂ ಅಧಿಕ ಹಣ ಪಾವತಿಸಬೇಕೆಂದು ಟ್ರಂಪ್ ನಿಯಮ ಮಾಡಿದ್ದರು. ಆದರೆ ಇದರಿಂದ ಅಮೆರಿಕಕ್ಕೇ ನಷ್ಟವಾಗುತ್ತದೆ, ದೇಶದಲ್ಲಿ ಸ್ಥಳೀಯ ಪ್ರತಿಭೆಗಳ ಕೊರತೆಯಿದೆ. ಅವರನ್ನು ವಿದೇಶದಿಂದ ಕರೆಸಬೇಕಾಗುತ್ತದೆ ಎಂದು ಟ್ರಂಪ್ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಈ ಬಗ್ಗೆ ಇನ್ನೂ ಅಧಿಕೃತ ಆದೇಶವಾಗದಿದ್ದರೂ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳುವ ಸುಳಿವು ನೀಡಿದ್ದಾರೆ.

ಸೊಂಪಾದ ಪುಟಗಳು



ಸಿದ್ದು ಸೇಫ್ ಆಗಿದ್ದೇ ಬಿಜೆಪಿಗೆ ಚಿಂತೆ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ 6

ಇದು ಪಾಸ್ ಪೋರ್ಟ್ ಸ್ಥಾನ ಪುರಾಣ..

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಯಶಸ್ಸು ನಮ್ಮನ್ನು ಸಂತಸಪಡಿಸುವುದೋ ಇಲ್ಲವೋ ಎಂಬುದು ತಿಳಿದಿಲ್ಲ. ಆದರೆ ಸಂತುಷ್ಟ ಮನಸ್ಸು ಯಾವತ್ತೂ ನಮ್ಮನ್ನು ಯಶಸ್ಸಿನ ಕಡೆಗೆ ಸಾಗಿಸುತ್ತದೆ.

ವಕ್ರತುಂಡೋಕ್ತಿ

ಕೆಲವರು ನಿಮ್ಮನ್ನು ಇಷ್ಟಪಡದಿದ್ದರೆ ಬೇಸರಿಸಿಕೊಳ್ಳಬೇಡಿ. ಎಲ್ಲರೂ ಒಂದೇ ಅಭಿರುಚಿ ಹೊಂದಿರಲು ಸಾಧ್ಯವಿಲ್ಲ.

ದೆಹಲಿ ಸ್ಫೋಟ ರೂವಾರಿ ಉಮರ್ ಸಹಚರ ಬಂಧನ

ದೆಹಲಿ: ನ.10ರ ದೆಹಲಿ ಸ್ಫೋಟದ ಪಿತೂರಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಮೀರ್ ರಶೀದ್ ಅಲಿಯನ್ನು ದೆಹಲಿಯಲ್ಲಿ ಎನ್‌ಐಎ ಭಾನುವಾರ ಬಂಧಿಸಿದೆ. ಈತ ಕಾರು ಸ್ಫೋಟದಲ್ಲಿ ಮೃತಪಟ್ಟಿದ್ದ ವೈದ್ಯ ಉಮರ್ ನಬಿಯೊಂದಿಗೆ ಸೇರಿ ಸಂಚು ರೂಪಿಸಿದ್ದ ಎಂದು ಮೂಲಗಳು ಹೇಳಿವೆ. ಸ್ಫೋಟಗೊಂಡಿದ್ದ ಐ20 ಕಾರು ರಶೀದ್ ಅಲಿ ಹೆಸರಲ್ಲೇ ಇತ್ತು. ಈತ ಜಮ್ಮು ಕಾಶ್ಮೀರದ ಪಂಪೋರ್ ಜಿಲ್ಲೆಯ ಸಂಬೂರಾ ನಿವಾಸಿ ಎನ್ನಲಾಗಿದೆ. ನ.10ರ ದೆಹಲಿ ಸ್ಫೋಟದಲ್ಲಿ 10 ಮಂದಿ ಮೃತಪಟ್ಟಿದ್ದರು.

ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನ ಶುರು

ತಿರುವನಂತಪುರಂ: ಲಕ್ಷಾಂತರ ಜನರು ಭೇಟಿ ನೀಡುವ ಕೇರಳದ ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದ ದ್ವಾರಗಳು ಭಾನುವಾರ ಮತ್ತೆ ತೆರೆದಿದೆ. ಸೋಮವಾರದಿಂದ ಭಕ್ತರ ಯಾತ್ರೆ ಆರಂಭವಾಗಲಿದೆ. ಜ.20ರವರೆಗೆ ಮುಂದುವರಿಯಲಿದೆ. ಈ ಮಧ್ಯೆ, ಕೇರಳದಲ್ಲಿ ಮೆದುಳು ಜ್ವರವಿರುವುದರಿಂದ ಪಂಪಾ ನದಿಯಲ್ಲಿ ಸ್ನಾನ ಮಾಡುವಾಗ ಮೂಗಿನೊಳಕ್ಕೆ ನೀರು ಹೋಗದಂತೆ ನೋಡಿಕೊಳ್ಳಿ ಎಂದು ಕೇರಳ ಸರಕಾರ ಸೂಚಿಸಿದೆ.



ಫನ್‌ತರಂಗ
- ರಘುಪತಿ ಶೃಂಗೇರಿ -

ಸಮಾಚಾರ ಸಣ್ಣದಲ್ಲ

ಬಿಜೆಪಿ ವತಿಯಿಂದ ಬಿರ್ಸಾ ಮುಂಡಾ ಜಯಂತಿ

ಚಾಮರಾಜನಗರ: ಚಾಮರಾಜನಗರದಲ್ಲಿ ಬಿಜೆಪಿ ವತಿಯಿಂದ ಬಿರ್ಸಾ ಮುಂಡಾ ಜಯಂತಿ ಆಯೋಜನೆ ಮಾಡಲಾಗಿದ್ದು ವಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ಮುಖಂಡರಾದ ಬಂಗಾರು ಹನುಮಂತು ಸೇರಿ ಮುಖಂಡರು ಭಾಗಿಯಾಗಿದ್ದಾರೆ. ನಗರದ ಶ್ರೀಚಾಮ ರಾಜೇಶ್ವರ ದೇವಸ್ಥಾನದ ಮುಂಭಾಗ ಮೆರವಣಿಗೆಗೆ ಚಾಲನೆ ಕೊಟ್ಟು ಹೆಜ್ಜೆ ಹಾಕಿದ ಅಶೋಕ್, ಜಿಲ್ಲಾಡಳಿತ ಭವನ ಮುಂಭಾಗ ಗೊರವರ ಕುಣಿತಕ್ಕೆ ಹೆಜ್ಜೆ ಹಾಕಿದರು. ಢಮರುಗ ಹಿಡಿದು ನೃತ್ಯ ಮಾಡಿದ ಅಶೋಕ್ ಅವರಿಗೆ ಬಿಜೆಪಿ ಮುಖಂಡರಾದ ಬಂಗಾರು ಹನುಮಂತು, ಸಿ.ಎಸ್. ನಿರಂಜನಕುಮಾರ್,ರಾಮ ಚಂದ್ರು ಸಾಥ್ ಕೊಟ್ಟರು.

ಅಪಘಾತ: ಕೃಷಿ ಇಲಾಖೆ ಉದ್ಯೋಗಿ ಸಾವು

ಮದ್ದೂರು: ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯ ಗೊಂಡು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಮದ್ದೂರು ತಾಲೂಕು ಕೃಷಿ ಇಲಾಖೆಯ ದ್ವಿತೀಯ ದರ್ಜೆ ಗುಮಾಸ್ತೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಅಸುನೀಗಿದ್ದಾರೆ. ಸೋಮನಹಳ್ಳಿ ಗ್ರಾಮದ ನಿವಾಸಿಯಾದ ಶ್ವೇತಾ (38) ಕೃಷಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನ. 5ರ ಬುಧವಾರ ಪಟ್ಟಣದ ಮೈಸೂರು-ಬೆಂಗಳೂರು ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವೇಳೆ ಕಾರ್‌ಡಿಕ್ಕಿಯಾಗಿದೆ. ಅಪಘಾತದ ವೇಳೆ ತಲೆ ಮತ್ತು ಕೈಭಾಗಕ್ಕೆ ತೀವ್ರ ಪೆಟ್ಟಾಗಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಖಾಸಗಿ ಆಸ್ಪತ್ರೆಗೆ ದಾಖಲಿಸಿ ತೀವ್ರ ನಿಗಾ ಘಟಕದಲ್ಲಿ ಇಡಲಾಗಿತ್ತು. ಭಾನುವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಂಗೇರಿ ಒಕ್ಕಲಿಗರ ಮಠಕ್ಕೆ 1ಲಕ್ಷ ದೇಣಿಗೆ

ಕೃಷ್ಣರಾಜಪೇಟೆ: ಬೆಂಗಳೂರಿನ ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದಲ್ಲಿ ನಡೆಯುವ ಅನ್ನ ದಾಸೋಹ ಕಾರ್ಯಕ್ರಮಕ್ಕೆ ಅನುಕೂಲವಾಗಲೆಂದು ಸಮಾಜ ಸೇವಕ ಆರ್‌ಟಿಒ ಮಲ್ಲಿಕಾರ್ಜುನ್ ಅವರು ಒಂದು ಲಕ್ಷ ರು.ಗಳನ್ನು ದೇಣಿಗೆಯಾಗಿ ನೀಡುವ ಮೂಲಕ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಡಾ. ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.ಶ್ರೀ ಮಲ್ಲಿ ಕಾರ್ಜುನ್ ಚಾರಿಟೇಬಲ್ ಟ್ರಸ್ಟಿನ ಪರವಾಗಿ ಚೆಕ್ ಅನ್ನು ಶ್ರೀಗಳ ಅಮೃತ ಹಸ್ತಕ್ಕೆ ಮಲ್ಲಿಕಾರ್ಜುನ್ ಅವರು ಹಸ್ತಾಂತರ ಮಾಡಿ ಶ್ರೀಗಳು ಪೂರ್ವಾಶ್ರಮದಲ್ಲಿ ಅಪರ ಜಿಲ್ಲಾಧಿಕಾರಿಯಾಗಿ, ಎಸಿಯಾಗಿ, ತಹಸೀಲ್ದಾರ್‌ಆಗಿ ಕೆ.ಆರ್.ಪೇಟೆ ಮತ್ತು ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯ ಸ್ಮರಿಸಿದರು. ಸನ್ಯಾಸ ಧೀಕ್ಷೆ ಪಡೆದ ನಂತರವೂ ತಮ್ಮ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮ ಮಾಡುತ್ತಿದ್ದಾರೆ. ಎಂದು ಮಲ್ಲಿಕಾ ರ್ಜುನ್ ತಿಳಿಸಿದರು. ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಅವರು ಆರ್.ಟಿ.ಓ ಅಧಿಕಾರಿ ಮಲ್ಲಿಕಾರ್ಜುನ್ ಅವರು ದಲಿತರಿಗೆ ಬಡವರಿಗೆ, ಶೋಷಿತರಿಗೆ ತಮ್ಮ ಶಕ್ತಿ ಮೀರಿ ನೆರವಿನ ಹಸ್ತ ಚಾಚುತ್ತಿದ್ದಾರೆ ಎಂದರು. ಹಿರಿಯ ಪತ್ರಕರ್ತರಾದ ಬಳ್ಳೇಕೆರೆ ಮಂಜುನಾಥ್, ಹರಿಚರ ಣ್ತಿಲಕ್, ಡಾ.ಕೆ.ಆರ್.ನೀಲಕಂಠ, ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಆರ್.ಟಿ.ಓ.ಮಲ್ಲಿಕಾರ್ಜುನ್ ಆಪ್ತ ಸಹಾ ಯಕ ಗಂಜಿಗೆರೆ ಮಹೇಶ್, ರಂಗಭೂಮಿ ಕಲಾವಿದ ಹೊಸಹೊಳಲು ರಘು, ಕಾಮನಹಳ್ಳಿ ಮಂಜುನಾಥ್ ,ಮಾಕವಳ್ಳಿ ಮನು ಹಾಗೂ ಮಲ್ಲಿಕಾರ್ಜುನ್ ಚಾರಿಟೇ ಬಲ್ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪತ್ನಿಯ ಸಂಚಿನಿಂದ ಹಲ್ಲೆ: ಪತಿ ಸಾವು

ನಂಜನಗೂಡು: ನಗರದ ಹಂಡುವಿನಹಳ್ಳಿ ಬಡಾವಣೆ ಯಲ್ಲಿ ಅ.26 ರಂದು ತನ್ನ ಗಂಡನ ಕೊಲೆಗೆ ಸಂಚು ರೂಪಿಸಿ ಕೊಲೆಗೆ ಯತ್ನಿಸಿದ ಪ್ರಕರಣದಲ್ಲಿ ಚಾಕುವಿ ನಿಂದ ಗಂಭೀರ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾರೆ. ಡ್ರಾಗರ್‌ಹಾಗೂ ಲಾಂಗ್ ನಿಂದ ಹಲ್ಲೆಗೆ ಒಳಗಾಗಿದ್ದ ರಾಜೇಂದ್ರ , 20 ದಿನಗಳ ಕಾಲ ಸಾವು ಬದುಕಿನ ನಡುವೆ ಹೋರಾಟ ನಡೆಸಿ ಸಾವಿಗೆ ಶರಣಾಗಿದ್ದಾರೆ. ಹದಿನಾರು ಗ್ರಾಮದ ರಾಜೇಂದ್ರ ತನ್ನ ಪತ್ನಿ ಸಂಗೀತಾ ನಡೆಸಿದ ಸಂಚಿಗೆ ಬಲಿಯಾಗಿದ್ದಾರೆ, ಪತಿಯ ಕೊಲೆಗೆ ದರೋಡೆ ಸ್ಕೆಚ್ ರೂಪಿಸಿದ್ದ ಪತ್ನಿ ಸಂಗೀತಾ ಹಾಗೂ ಇತರ ಮೂವರು ನ್ಯಾಯಂಗ ಬಂಧನದಲ್ಲಿದ್ದಾರೆ. ಅ. 26 ರಂದು ನಗರದ ಹಂಡುವಿ ನಹಳ್ಳಿ ಬಡಾವಣೆಯಲ್ಲಿ ರಾಜೇಂದ್ರ ತಮ್ಮ ಪತ್ನಿ ಸಂಗೀತಾ ಜೊತೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ವೇಳೆ ಕಾರ್‌ನಲ್ಲಿ ಬಂದ ಮೂವರು ದರೋಡೆಕೋರರಂತೆ ದಾಳಿ ನಡೆಸಿ ರಾಜೇಂದ್ರನ ಮೇಲೆ ಮಾರಕಾಸ್ತ್ರಗಳಿಂದ ಗಂಭೀರ ಹಲ್ಲೆನಡೆಸಿ ಪರಾರಿಯಾಗಿದ್ದರು. ನಗರ ಠಾಣೆ ಪೊಲೀಸರು ವಿಶೇಷ ತಂಡ ರಚಿಸಿ ತನಿಖೆಕೈಗೊಂಡ ವೇಳೆ ಸಿಸಿ ಟಿವಿ ಫುಟೇಜ್ ಪರಿಶೀಲಿಸಿದ ಪೊಲೀಸರಿಗೆ ಪತ್ನಿಯೇ ಪತಿಯ ಕೊಲೆಗೆ ಸ್ಕೆಚ್ ಮಾಡಿರುವ ಬಗ್ಗೆ ಸುಳಿವು ದೊರೆಯಿತು, ಆಕೆಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ದರೋಡೆ ಬಣ್ಣ ಕಟ್ಟಿ ಪತಿಯ ಹತ್ಯೆಗೆ ಯತ್ನಿಸಿದ ಸಂಚು ಬಯಲಾಗಿತ್ತು. ಗಂಭೀರ ಹಲ್ಲೆಗೆ ಒಳಗಾಗಿದ್ದ ರಾಜೇಂದ್ರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯು ತ್ತಿದ್ದರು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

{ಆರ್. ಅಶೋಕ್ } ವಿಪಕ್ಷ ನಾಯಕ

ರಾಹುಲ್ ಗಾಂಧಿ ಪಾರ್ಟ್ ಟೈಂ ರಾಜಕಾರಣಿ. ಚುನಾವಣೆ ಕಾಲಕ್ಕೂ ಫಾರೀನ್‌ಗೆ ಹೋಗ್ತಾರೆ, ಬರಿ ದೇಶ ವಿದೇಶ ಸುತ್ತೋದೆ ಇವರ ಕೆಲಸ. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಇವಿಎಂ ಸರಿಯಾಗಿರುತ್ತೆ. ಬಿಜೆಪಿ ಅಥವ ಬೇರೆ ಪಕ್ಷ ಗೆದ್ದರೆ ಇವಿಎಂನಲ್ಲಿ ಮೋಸ ಆಗಿರುತ್ತಂತೆ. ಇವರ ಮತ ಚೋರಿ ಸುಳ್ಳಿನ ಕತೆಯನ್ನು ದೇಶದ ಜನ ಒಪ್ಪುತ್ತಿಲ್ಲ, ಗಾಂಧಿ ಕುಟುಂಬದ ಆಟ ಇನ್ನು ಮುಂದೆ ನಡೆಯುವುದಿಲ್ಲ.

ನಾಯಕ ಸಮಾಜದ ಬೃಹತ್ ಪ್ರತಿಭಟನೆ

ಅಮಾಯಕರ ಮೇಲೆ ಹಲ್ಲೆ | ಪೊಲೀಸರ ಅಮಾನತಿಗೆ ಆಗ್ರಹ | ಡಿಸಿ ಕಚೇರಿವರೆಗೆ ಮೆರವಣಿಗೆ

ಚಾಮರಾಜನಗರ: ತಾಲೂಕಿ ನಜ್ಯೋತಿಗೌಡನಪುರ ಗ್ರಾಮದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಫ್ಲೆಕ್ಸ್ ಹರಿದ ಹಾಗೂ ಬುದ್ದನ ಪ್ರತಿಮೆ ಧ್ವಂಸಗೊಳಿಸಿರುವ ನೈಜ ಅಪರಾಧಿಗಳನ್ನು ಬಂಧಿಸಬೇಕು, ಅಮಾಯಕರ ಮೇಲೆ ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಪಡಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ನಾಯಕ ಸಮಾಜದ ಹೋರಾಟ ಸಮಿತಿ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಮಾರಿಗುಡಿ ಮುಂಭಾಗದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಪು. ಶ್ರೀನಿವಾಸನಾಯಕರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ರಸ್ತೆತಡೆ ನಡೆಸಿ, ಪೊಲೀಸ್ ದೌರ್ಜನ್ಯ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾ ಡಳಿತ ಭವನಕ್ಕೆ ತೆರಳಿ ಧರಣೆ ಆರಂಭಿಸಿದರು. ನಂತರ ಜಿಲ್ಲಾಡಳಿತ ಭವನ ತಲುಪಿದ ಪ್ರತಿಭಟನಾ ಕಾರರು, ಧರಣಿ ನಡೆಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಮುಖಾ ಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಇತ್ತೀಚೆಗೆ ಜ್ಯೋತಿಗೌಡನಪುರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಫ್ಲೆಕ್ಸ್ ಹರಿದು ಮತ್ತು ಬುದ್ದ ಪ್ರತಿಮೆಯನ್ನು ಧ್ವಂಸಗೊಳಿಸಿರುವುದನ್ನು ಅತ್ಯಂತ ಉಗ್ರವಾಗಿ ಖಂಡಿಸುವುದರ ಜೊತೆಗೆ ಉಗ್ರ ಶಿಕ್ಷೆಗೆ ಒಳಪಡಿಸಲು ಸೂಕ್ತ ಕಾನೂನು ಕೈಗೊಳ್ಳಬೇಕು. ಈ ವಿಷಯದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಒತ್ತಡಕ್ಕೆ ಒಳಗಾಗಿದ್ದು, ಪ್ರಾಮಾಣಿಕವಾಗಿ ತನಿಖೆಯನ್ನು ಮಾಡುತ್ತಿಲ್ಲ. ನಿರಪರಾಧಿಗಳನ್ನು ವಿಚಾರಣೆಗೆ ಕರೆದು ದೈಹಿಕವಾಗಿ ಹಲ್ಲೆ ಮಾಡಿದ್ದಾರೆ.

ಮಾರಿಗುಡಿಯಿಂದ ಡಿಸಿ ಕಚೇರಿವರೆಗೆ ನಾಯಕ ಸಮಾಜದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಅಂತಹ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಸ್ಥಳೀಯ ಅಧಿಕಾರಿಗಳಿಂದ ತನಿಖೆಯನ್ನು ವಾಪಸ್ ಪಡೆದು ವಿಶೇಷ ತನಿಖಾ ತಂಡ ಅಥವಾ ಹಾಲಿ ನ್ಯಾಯಾಧೀಶರಿಂದ ತನಿಖೆಗೆ ಆದೇಶಿಸಿ, ಈ ಕೃತ್ಯದಲ್ಲಿ ನಿರಪರಾಧಿಗಳ ಮೇಲೆ ಹಲ್ಲೆ ಮಾಡಿರುವ ಸರ್ಕಲ್ ಇನ್‌ಸ್ಪೆಕ್ಟರ್‌ಸಾಗರ್‌ಹಾಗೂ ಅವರ ತಂಡದವರ ಮೇಲೆ ಸೂಕ್ತ ಕ್ರಮವಹಿಸಬೇಕು ಹಾಗೂ ಸೇವೆಯಿಂದ ಅಮಾನತ್ತುಗೊಳಿಸಬೇಕು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಕವಿತಾ, ತನಿಖಾ ತಂಡದಲ್ಲಿರುವ ಸರ್ಕಲ್ ಇನ್‌ಸ್ಪೆಕ್ಟರ್‌ಶ್ರೀಕಾಂತ್, ತನಿಖಾಧಿಕಾರಿ ನವೀನ್, ಎ.ಎಸ್.ಐ. ಮಹದೇವು ಅವರನ್ನು ಅಮಾನತು ಪಡಿಸಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು. ಹೊಂಗನೂರು ಗ್ರಾಮ ಪಂಚಾಯಿತಿಯಲ್ಲಿ ವಾಟರ್‌ಮ್ಯಾನ್ ಆಗಿರುವ ಚಿಕ್ಕೂಸನಾಯಕ ತನಗೆ 27 ತಿಂಗಳಿಂದ ಗ್ರಾಮ ಪಂಚಾಯಿತಿ ಸಂಬಳ ನೀಡಿರುವುದಿಲ್ಲ.

ಇದಕ್ಕೆ ಕಾರಣರು ಗ್ರಾಪಂ ಪಿಡಿಒ ರಾಮೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷರ ಪತಿಯಾದ ಮೋಹನ್ ಕುಮಾರ್‌ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೂಪ ಮೋಹನ್ ಕುಮಾರ್‌ಅವರ ಬೇಜಾಬ್ದಾರಿಯಿಂದ ನನ್ನ ಮನಸ್ಸಿಗೆ ತೀರಾನೋವಾಗಿದ್ದು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಡೆತ್ ನೋಟ್ ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಆದರೆ ಇದುವರೆಗೆ ಆರೋಪಿಗಳು ರಾಜರೋಷವಾಗಿ ತಿರುಗಾಡುತ್ತಿದ್ದಾರೆ.

ಈ ಕೂಡಲೇ ಬಂಧಿಸಿ, ಬಡ ಕುಟುಂಬಕ್ಕೆ ಆಧಾರವಾಗಿದ್ದ ಚಿಕ್ಕೂಸನಾಯಕರು ಆತ್ಮಹತ್ಯೆ ಮಾಡಿಕೊಂಡಿದ್ದು ಕೂಡಲೇ ವಿಶೇಷ ಆರ್ಥಿಕ ಪರಿಹಾರ ನೀಡಿ, ಕುಟುಂಬದ ಒಬ್ಬರಿಗೆ ಉದ್ಯೋಗ ನೀಡಬೇಕೆಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ, ಪು.ಶ್ರೀನಿವಾಸನಾಯಕ, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರ ಸಮಿತಿ ಅಧ್ಯಕ್ಷ ಎಚ್ .ವಿ.ಚಂದ್ರು, ಯಳಂದೂರು ಉಮಾಶಂಕರ್ ,ಜಯಸುಂದರ್‌ಮಾತನಾಡಿದರು.

ಪ್ರತಿಭಟನೆಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್,ಜಿ.ಪಂ.ಮಾಜಿ ಸದಸ್ಯ ಸೋಮನಾಯಕ, ಯ.ರಾಜುನಾಯಕ, ಕಪಿನಿ ನಾಯಕ, ಕೃಷ್ಣನಾಯಕ, ಚೆಂಗುಮಣಿ, ಶಿವುವಿರಾಟ್, ಬುಲೆಟ್ ಚಂದ್ರು, ರಾಜೇಶ್, ನಾಗೇಂದ್ರ, ಚಂದ್ರ ಶೇಖರ್, ಸೋಮೇಶ್, ರಾಮನಾಯಕ, ಚಾ.ಸಿ. ಸೋಮನಾಯಕ, ಅಜಯ್ ಗೌಸ್, ಶಿವರಾಜ್, ಶಿವರಾ ಮು, ವರದನಾಯಕ, ಮಹೇಂದ್ರ, ಗಣೇಶ್, ಚಂದ್ರ ಶೇಖರ್, ವೆಂಕಟೇಶ್, ಸುರೇಶ್ ನಾಗ್, ರಾಮಚಂದ್ರ ನಾಯಕ, ಅಗರರಾಜು , ಶಕುಂತಲಾ, ಗೀತಾ ಸಿದ್ದರಾಜು, ರೇಖಾ, ನಾರಾಯಣ್ ಭಾಗವಹಿಸಿದ್ದರು.

ಪ್ರತಿಮೆ ಧ್ವಂಸ ಪ್ರಕರಣ, ಆರೋಪಿಗಳ ಬಂಧಿಸಿ

ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ಪ್ರತಿಮೆ ಧ್ವಂಸ ಪ್ರಕರಣದಲ್ಲಿ ನಿರಪರಾಧಿ ಮೇಲೆ ಹಲ್ಲೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತುಪಡಿಸುವ ತನಕ ನಮ್ಮ ಹೋರಾಟ ಮುಂದುವರಿಯುತ್ತದೆ ಎಂದು ನಾಯಕ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು. ಶ್ರೀನಿವಾಸನಾಯಕ ಎಚ್ಚರಿಸಿದರು.

ಮನೆಗೊಂದು ಗಿಡ ನೆಟ್ಟು ತಿಮ್ಮಕ್ಕನ ಹೆಸರುಳಿಸಿ

ಮದ್ದೂರು: ಸಾಲುಮರದ ತಿಮ್ಮಕ್ಕ ರವರ ನೆನಪಿ ನಲ್ಲಿ ಮನೆಗೊಂದು ಗಿಡನೆಟ್ಟು ಪೋಷಿಸುವ ಜತೆಗೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡುವುದರ ಮೂಲಕ ತಿಮ್ಮಕ್ಕನವರ ಹೆಸರು ಶಾಶ್ವತವಾಗಿ ಉಳಿಸಬೇಕೆಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ವಿ.ಸಿ. ಉಮಾಶಂಕರ್‌ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಪತ್ರಕರ್ತರ ಸಂಘ ಹಾಗೂ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ವತಿಯಿಂದ ಆಯೋಜಿಸಿದ್ದ ಸಾಲುಮರದ ತಿಮ್ಮಕ್ಕನವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದ ವೇಳೆ ಮಾತನಾಡಿದರು.

ಸಾಲುಮರದ ತಿಮ್ಮಕ್ಕ 114 ವರ್ಷಗಳು ಬದುಕಿ ಬಾಳಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ತೆರಳಿದ್ದು ಅವರಂತೆಯೇ ನಾವುಗಳು ಸಹ ಅವರ ಹೆಸರಿನಲ್ಲಿ ಮನೆಗೊಂದು ಗಿಡನೆಟ್ಟು ಪೋಷಿಸುವಂತೆ ಜತೆಗೆ ತಿಮ್ಮಕ್ಕನವರು ಭೌತಿಕವಾಗಿ ನಮ್ಮೊಟ್ಟಿಗೆ ಇಲ್ಲದಿದ್ದರೂ ಅವರು ಸಾಕಿ ಸಲುಹಿದ ಸಾವಿರಾರು ವೃಕ್ಷಗಳು ಜೀವಂತವಾಗಿ ಹಸಿರಾಗಿರುವುದೇ ಸಾಕ್ಷಿಯಾಗಿದೆ ಎಂದರು. ಸುಮಾರು ಎಂಟು ಸಾವಿರ ಗಿಡಗಳನ್ನು ನೆಟ್ಟು ಪೋಷಿಸಿರುವ ವೃಕ್ಷಮಾತೆ ದೇಶದೆಲ್ಲೆಡೆ ತಮ್ಮದೇ ಆದ ಛಾಪು ಮೂಡಿಸಿದ್ದು ಇಂತಹ ವೃಕ್ಷಮಾ ತೆಯನ್ನು ನೀಡಿದ ಪುಣ್ಯಭೂಮಿ ನಮ್ಮದಾಗಿದ್ದು ಅವರು ನಮ್ಮನ್ನು ಅಗಲಿದ್ದರೂ ಅವರ ಹೆಸರು ನೂರಾರು ವರ್ಷಗಳ ಕಾಲ ಶಾಶ್ವತವಾಗಿ ಉಳಿಯಲು ಕೈಗೊಂಡಿರುವ ಕಾರ್ಯಗಳೇ ನಮಗೆ ಸ್ಫೂರ್ತಿಯಾಗಿವೆ ಎಂದರು.

ಪತ್ರಕರ್ತರ ಸಂಘ ಹಾಗೂ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ವತಿಯಿಂದ ಸಾಲುಮರದ ತಿಮ್ಮಕ್ಕನವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯಿತು.

ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕ ಎಸ್.ಪುಟ್ಟಸ್ವಾಮಿ, ತಾಲೂಕು ಕಾರ್ಯದರ್ಶಿ ಎಂ.ಪಿ.ವೆಂಕಟೇಶ್, ಎ.ಪಿ.ಎಂ.ಸಿ ವರ್ತಕರ ಸಂಘದ ಅಧ್ಯಕ್ಷ ರವಿಚನ್ನಸಂದ್ರ, ಸಂಘಟನೆಯ ಪದಾಧಿಕಾರಿಗಳಾದ ಎಂ.ಸಿ.ಲಿಂಗರಾಜು, ಆಲೂರು ಚನ್ನಪ್ಪ, ನಾರಾಯಣ, ಶಿವಲಿಂಗಯ್ಯ, ಶ್ರೀನಿವಾಸ್, ನಾಗರಾಜು, ಕೀಳಘಟ್ಟ ನಂಜುಂಡಯ್ಯ, ಜಗದೀಶ್, ವಿ.ಪಿ.ವರದರಾಜು, ಸುರೇಶ್, ಕೃಷ್ಣಪ್ಪ, ಕುಮಾರ್‌ಇತರರಿದ್ದರು.

ರಸ್ತೆ ಕಾಮಗಾರಿಗೆ ಶಾಸಕ ಭೂಮಿ ಪೂಜೆ

ಚಾಮರಾಜನಗರ: ತಾಲೂಕಿನ ಮುತ್ತಿಗೆ ಗ್ರಾಮದ ಸಮೀಪ ನಂಜನಗೋಡಿಗೆ ಹೋಗುವ ಮುಖ್ಯ ರಸ್ತೆ ಕ್ರಾಸ್ ನಿಂದ ಬೀರೇಶ್ವರ ದೇವಸ್ಥನದ ಮಾರ್ಗವಾಗಿ ಮೇಗಲಹುಂಡಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ದಿಗೆ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸುಗಮವಾಗಿ ತೆರಳಲು ಉತ್ತಮ ರಸ್ತೆಗಳ ಅವಶ್ಯಕತೆಯಿದೆ.

ಎರಡು ಗ್ರಾಮಗಳ ಸಂಪರ್ಕ ರಸ್ತೆ ಹದಗೆಟ್ಟಿದ್ದು, ಅವುಗಳ ನಿರ್ಮಾಣಮಾಡಿ ಕೊಡಬೇಕು ಎಂಬುದು ಈ ಭಾಗದ ಗ್ರಾಮಸ್ಥರ ಬೇಡಿಕೆಯಾಗಿತ್ತು.

ಇದೀಗ ಅದು ಸಾಕಾರಗೊಂಡಿದೆ. ಜಿಲ್ಲಾ ಖನಿಜ ಪ್ರತಿಸ್ಠಾನ್ ಟ್ರಸ್ಟಿನ ನಿಧಿಯಿಂದ 2,ಕೋಟಿ ರೂ, ವೆಚ್ಚದ ಡಾಂಬರೀಕರಣ ರಸ್ತೆಗೆ ಚಾಲನೆ ನೀಡಲಾಗಿದೆ, ಗುತ್ತಿಗೆದಾರರು ನಿಗದಿತ ಕಾಲಕ್ಕೆ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಎ,ಪಿ,ಎಂ,ಸಿ ಅಧ್ಯಕ್ಷ ಎಂ,ಬಿ, ಗುರುಸ್ವಾಮಿ, ಬದನಗುಪ್ಪೆ ನಾಗರಾಜುಮೂರ್ತಿ, ಎಸ್,ಪಿ,ಕೆ ಉಮೇಶ್, ಮುತ್ತಿಗೆದೊರೆ, ಇಂಜೀನಿಯರ್‌ಅರುಣ್ ಕುಮಾರ್, ಸೇರಿದಂತೆ ಗ್ರಾವಜಿದ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

ಮುತ್ತಿಗೆ ಗ್ರಾಮದಲ್ಲಿ ರಸ್ತೆ ಅಭಿವೃದ್ದಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಭೂಮಿ ಪೂಜೆ ನೆರವೇರಿಸಿದರು.

ಪರಿಸರ ಕಾಳಜಿಗೆ ತಿಮ್ಮಕ್ಕ ದೊಡ್ಡ ಪ್ರೇರಣೆ

ಮೈಸೂರು: ಪರಿಸರ ಉಳಿಸುವ ಅಥವಾ ಸಮಾಜಕ್ಕೆ ಪೂರಕವಾಗುವ ಯಾವುದೇ ಕೆಲಸದಲ್ಲಿ ತೊಡಗಿಸಿಕೊಳ್ಳಲು ಆಸಕ್ತಿಯೇ ಇಲ್ಲದಷ್ಟು ಮನುಷ್ಯ ಸ್ವಾರ್ಥಿ ಆಗಿದ್ದಾನೆ ಕೆಪಿಸಿಸಿ ಸದಸ್ಯ ಎಚ್.ವಿ.ರಾಜೀವ್ ಕಳವಳ ವ್ಯಕ್ತಪಡಿಸಿದರು.

ಪರಿಸರ ಬಳಗದ ವತಿಯಿಂದ ಬಂಡೀಪಾಳ್ಯ ಸಮೀಪದ ಹಸಿರು ಮೈಸೂರು ನರ್ಸರಿ ಫಾರಂನಲ್ಲಿ ಭಾನುವಾರ ಆಯೋಜಿಸಿದ್ದ ವೃಕ್ಷ ಮಾತೆ, ಪರಿಸರ ರಾಯಭಾರಿ ಮತ್ತು ಶತಾಯುಷಿ ಸಾಲು ಮರದ ತಿಮ್ಮಕ್ಕ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಮನುಷ್ಯನ ಸ್ವಾರ್ಥ,ದುರಾಸೆ, ಕೊಂಕುತನಗಳಿಗೆ ಪರಿಹಾರವೇ ಇಲ್ಲವಾಗಿದೆ. ತಾನು ಚನ್ನಾಗಿ ಇರಬೇಕು ಎಂಬುದನ್ನು ಬಿಟ್ಟು ಮನುಷ್ಯನಿಗೆ ಬೇರಾವುದೂ ಮುಖ್ಯ ಆಗುತ್ತಿಲ್ಲ. ಆದ್ದರಿಂದಲೇ ನಿವೃತ್ತಿ ನಂತರವೂ ಸಾಕಷ್ಟು ಜನರು ವಾಕಿಂಗ್ನಂತಹ ಚಟುವಟಿಕೆಗಳ ಆಚೆಗೆ ಯಾವುದರಲ್ಲೂ ತೊಡಗಿಸಿಕೊಳ್ಳುತ್ತಿಲ್ಲ. ಕನಿಷ್ಠ ನಾಲ್ಕೈದು ಗಿಡ ನೆಟ್ಟು ಪೋಷಣೆ ಮಾಡುವಲ್ಲಿ ಸಾಲುಮರದ ತಿಮ್ಮಕ್ಕ ನಮಗೆಲ್ಲ ಸ್ಫೂರ್ತಿ ಆಗಬೇಕು ಎಂದು ಸಲಹೆ ನೀಡಿದರು.

ಅಭಿವೃದ್ಧಿ ಜತೆಗೆ ಪರಿಸರ ಉಳಿಸುವ ಸಮತೋಲನದ ಮಾರ್ಗದಲ್ಲಿ ನಡೆಯಬೇಕಿದೆ. ಹೀಗಾಗಿ ಎಚ್.ವಿ.ರಾಜೀವ್ ಸ್ನೇಹ ಬಳಗದಿಂದ ನಮ್ಮ ಬಡಾವಣೆಯಲ್ಲಿ 25 ಸಾವಿರ ಮರಗಳನ್ನು ಬಲ್ಲಹಳ್ಳಿಯ ಬಡಾವಣೆಯಲ್ಲಿ ಬೆಳೆಸಿದ್ದೇವೆ ಎಂದು ತಿಳಿಸಿದರು.

ಪರಿಸರ ಬಳಗದ ಪುಟ್ಟಸ್ವಾಮಿಗೌಡ ಮಾತನಾಡಿ, ಗಿಡ ನೆಟ್ಟು ಪೋಷಣೆ ಮಾಡುವುದು ಮಾತ್ರ ನಿಜಾರ್ಥದಲ್ಲಿ ಸಾಲುಮರದ ತಿಮ್ಮಕ್ಕನಿಗೆ ಶ್ರದ್ಧಾಂಜಲಿ ಸಲ್ಲಿಸಿದಂತೆ ಆಗುತ್ತದೆ. ಹುಟ್ಟುಹಬ್ಬಗಳಲ್ಲಿ ಕೇಕ್ ಕತ್ತರಿಸುವ ಜತೆ ಗಿಡ ನೆಡುವ ಪರಿಪಾಠ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿವಿನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚನ್ನೇಗೌಡ ಮಾತನಾಡಿ, ಸಾಲು ಮರದ ತಿಮ್ಮಕ್ಕ ದಲಿತ ಕುಟುಂಬದಲ್ಲಿ ಹುಟ್ಟಿದವರು. ಹಣ, ಶಿಕ್ಷಣ ಇಲ್ಲದಿದ್ದರೂ ಮರ ನೆಡುವ ದಾರಿ ಆಯ್ಕೆ ಮಾಡಿಕೊಂಡರು. ಪರಿಸರ ಕಾಳಜಿ ಮೂಲಕ ಈಗ ಸಾವಿರಾರು ಜನರಿಗೆ ಪ್ರೇರಣಾಶಕ್ತಿಯಾಗಿದ್ದಾರೆ ಎಂದು ಸ್ಮರಿಸಿದರು.

ಮಾಜಿಮೇಯರ್ ಬಿ.ಎಲ್.ಭೈರಪ್ಪ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಪರಿಸರ ಬಳಗದ ಪರಶುರಾಮೇಗೌಡ, ಲೀಲಾ ವೆಂಕಟೇಶ್, ಲೀಲಾ ಶಿವಕುಮಾರ್,ಹಾಸ್ಯ ಕಲಾವಿದ ಜಗ್ಗ(ಜೆಕೆ), ಸುಬ್ರಹ್ಮಣ್ಯ ಇದ್ದರು.

15 ಸಾವಿರ ಗಿಡಗಳ ನೆಟ್ಟು ಪೋಷಿಸಿರುವೆ !

ಪರಿಸರ ಪ್ರೇಮಿ ವೆಂಕಟೇಶ್ ಮಾತನಾಡಿ, ನಾನು ಸಾಲುಮರದ ತಿಮ್ಮಕ್ಕನಿಂದ ಪ್ರೇರಣೆಗೊಂಡು ಚಾಮರಾಜನಗರ ಜಿಲ್ಲೆಯಲ್ಲಿ 10 ವರ್ಷದಿಂದ ಗಿಡ ನೆಟ್ಟು ಬೆಳೆಸುತ್ತಿದ್ದೇನೆ. ಇದುವರೆಗೆ 15 ಸಾವಿರ ಗಿಡಗಳನ್ನು ಮಲೆಮಹದೇಶ್ವರ ಬೆಟ್ಟದ ರಸ್ತೆ, ಕೊಳ್ಳೇಗಾಲ ಭಾಗದಲ್ಲಿ ನೆಟ್ಟು ಪೋಷಿಸುತ್ತಿದ್ದೇನೆ ಎಂದು ತಿಳಿಸಿದರು.

ಪರಿಸರ ಬಳಗದ ವತಿಯಿಂದ ಮೈಸೂರು ನರ್ಸರಿ ಫಾರಂನಲ್ಲಿ ಪರಿಸರ ರಾಯಭಾರಿ ಸಾಲು ಮರದ ತಿಮ್ಮಕ್ಕ ಅವರ ಶ್ರದ್ಧಾಂಜಲಿ ಸಭೆ ನಡೆಯಿತು.

ಬಿರ್ಸಾ ಮುಂಡಾ ಆದಿವಾಸಿಗರ ಅಸ್ಮಿತೆ

ಬುಡಕಟ್ಟು ನಾಯಕ ಭಗವಾನ್ ಶ್ರೀ ಬಿರ್ಸಾ ಮುಂಡಾ ಅವರ 150ನೇ ಜಯಂತಿ ಕಾರ್ಯಕ್ರಮ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಉದ್ಘಾಟಿಸಿದರು.

ಚಾಮರಾಜನಗರ: ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯಗಳನ್ನು ಮೆಟ್ಟಿನಿಂತು ಅರಣ್ಯ ಸಂಪತ್ತು ರಕ್ಷಣೆಯ ಹಕ್ಕುಗಳಿಗಾಗಿ ಬುಡಕಟ್ಟು ಜನರನ್ನು ಸಂಘಟಿಸಿದ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರು ಆದಿವಾಸಿಗಳ ಅಸ್ಮಿತೆಯಾಗಿದ್ದಾರೆ ಎಂದು ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಅವರು ಹೇಳಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಮೈಸೂರಿನ ಕೇಂದ್ರ ಸಂವಹನ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಕ್ರಾಂತಿಕಾರಿ ಬುಡಕಟ್ಟು ನಾಯಕ ಭಗವಾನ್ ಶ್ರೀ ಬಿರ್ಸಾ ಮುಂಡಾ ಅವರ 150ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದ ಸ್ವಾತಂತ್ರ್ಯಕ್ಕಾಗಿ ಹಲವಾರು ಸಾಲು-ಸಾಲು ನಾಯಕರು ಹೋರಾಟ ನಡೆಸಿದ್ದಾರೆ. ಕಾಡನ್ನು ದಿಡೀರ್‌ಪ್ರವೇಶಿಸಿ ಆದಿವಾಸಿಗಳನ್ನು ಮತಾಂತರ ಮಾಡಿ ದೌರ್ಜನ್ಯ ನಡೆಸಿ ಕಾಡಿನ ಸಂಪತ್ತನ್ನು ದೋಚುತ್ತಿದ್ದ ಬಿರ್ಸಾ ಮುಂಡ ಬ್ರಿಟಿಷರಿಗೆ ಸಿಂಹಸ್ವಪ್ನರಾಗಿ ಕಾಡಿದರು. ಬಿರ್ಸಾ ಮುಂಡಾ ಅವರು ದೇಶದ ಹಲವು ಭಾಗಗಳಲ್ಲಿದ್ದ ಬುಡಕಟ್ಟು ಜನರಿಗೆ ಸ್ವಾತಂತ್ರ್ಯದ ಜನಜಾಗೃತಿ ಮೂಡಿಸಿ ಗೆರಿಲ್ಲಾ ಯುದ್ಧತಂತ್ರದ ಮೂಲಕ ಬ್ರಿಟಿಷರನ್ನು ಹಿಮ್ಮೆಟ್ಟಿಸಿದರು. ಆದರೂ ಫಿರಂಗಿಗಳ ಆಧುನಿಕ ಯುದ್ಧೋಪಕರಣಗಳ ಮುಂದೆ ತಲೆಬಾಗಿ ಸೆರೆಯಾದ ಬಿರ್ಸಾ ಮುಂಡಾ ಅವರು ಆದಿವಾಸಿ ಸಂಸ್ಕೃತಿಗೆ ಮರುಹುಟ್ಟು ನೀಡಿದರು.

ಬುಡಕಟ್ಟು ಜನರ ಹಕ್ಕುಗಳಿಗಾಗಿ ಹೋರಾಡಿದ ಬಿರ್ಸಾ ಮುಂಡಾ ಅವರು ಕಾಡಿನ ಜನರ ಅಸ್ಮಿತೆಯಾಗಿದ್ದಾರೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಉದ್ಘಾಟಿಸಿ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ಶೇ. 50ಕ್ಕೂ ಅರಣ್ಯ ಪ್ರದೇಶವಿದ್ದು, ಆದಿವಾಸಿಗಳ ದಿನನಿತ್ಯದ ಜೀವನ ಕಾಡಿನೊಂದಿಗೆ ಆರಂಭವಾಗಲಿದೆ. ಕಾಡಿನ ನಿಜವಾದ ರಕ್ಷಕರು ನೀವು, ಅರಣ್ಯ ಸಂಪತ್ತು, ವನ್ಯಜೀವಿ ಸಂರಕ್ಷಣೆ ನಿಮ್ಮ ಕಾಯಕವಾಗಿದೆ. ಪ್ರತಿಯೊಬ್ಬರಿಗೂ ಆರೋಗ್ಯವೇ ಭಾಗ್ಯ. ಆದಿವಾಸಿಗಳು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹೇಳಿದರು. ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್‌ಅವರು ಮಾತನಾಡಿ, ಪೊಲೀಸರ ಬೆದರಿಕೆ, ತೆರಿಗೆ ಹೆಚ್ಚಳದ ಹಿಂಸೆ ಸೇರಿದಂತೆ ಬ್ರಿಟಿಷರ ಅನ್ಯಾಯವನ್ನು ಸಹಿಸದ ಬಿರ್ಸಾ ಮುಂಡಾ ಆದಿವಾಸಿಗಳ ಆಶಾಕಿರಣವಾಗಿ ಮೂಡಿಬಂದರು ಎಂದರು.

ಆದಿವಾಸಿ ವಿದ್ಯಾರ್ಥಿಗಳನ್ನು ಕಾರ್ಯಕ್ರಮದಲ್ಲಿ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಮುಂಡಾ ಅವರ ಭಾವಚಿತ್ರ ಮೆರವಣಿಗೆಗೆ ಎಂ.ಎಸ್.ಐ.ಎಲ್ ಅಧ್ಯಕ್ಷ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಚಾಲನೆ ನೀಡಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ,ಚುಡಾ ಅಧ್ಯಕ್ಷ ಮಹಮದ್ ಅಸ್ಗರ್‌ಮುನ್ನಾ, ವಾರ್ತಾ ಇಲಾಖೆಯ ಕ್ಷೇತ್ರ ಪ್ರಚಾರಾಧಿಕಾರಿ ಶ್ರುತಿ, ಜಿಪಂ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಬುಡಕಟ್ಟು ಸಮಾಜದ ಮುಖಂಡರಾದ ರಂಗೇಗೌಡ, ಜಡೇಗೌಡ, ಕೋಣೂರೇಗೌಡ, ಮುದ್ದಯ್ಯ, ಕೇತಮ್ಮ, ರತ್ನಮ್ಮ, ಪುಟ್ಟಮ್ಮ, ದೊಡ್ಡಸಿದ್ದಯ್ಯ ಉಪಸ್ಥಿತರಿದ್ದರು.

ರೈತರ ತಂಟೆಗೆ ಬಂದರೆ ತಕ್ಕ ಪಾಠ

ಮೈಸೂರು: ಗಣಕೀಕರಣ ಪಹಣಿ ಜಾರಿ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡು ತ್ತಿದ್ದ ರೈತರ ಭೂಮಿ ಕಿತ್ತುಕೊಂಡು ಒಕ್ಕಲಪಿ ಸುವ ಕಾರ್ಯ ತಡೆಯಲು ರೈತರ ಸಂಘಟಿತ ಹೋರಾಟ ಅವಶ್ಯಕ ಎಂದು ರೈತಮುಖಂಡ ಕುರುಬೂರ ಶಾಂತಕುಮಾರ್‌ಹೇಳಿದರು.

ಮೈಸೂರು ತಾಲೂಕು ಮದ್ದೂರು-ಗ್ರಾಮದಲ್ಲಿ ಸಂಘದ ಗ್ರಾಮ ಘಟಕ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕೃಷಿಯಲ್ಲಿ ರೈತರು ಮಳೆ ಹಾನಿ, ಬರಗಾಲ, ಬೆಲೆ ಕುಸಿತ ಎಲ್ಲವನ್ನೂ ಮೆಟ್ಟಿ ನಿಂತು ಜೂಜಾಟ ರೀತಿ ಆಡುತ್ತ ಸತತ ಸೋಲು ಅನುಭವಿಸುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಸರ್ಕಾರಿ ಕರಾಬು ಭೂಮಿಗಳಲ್ಲಿ ವ್ಯವಸಾಯ ಚಟುವಟಿಕೆ ನಡೆಸುತ್ತಿದ್ದ ರೈತರ ಭೂಮಿ ಕಿತ್ತುಕೊಂಡು ಒಕ್ಕಲಬಿಸುವ ಕಾರ್ಯಕ್ಕೆ ಕೆಲವು ಭೂಮಾಫಿಯಾ ಮಾಲೀಕರು ಮುಂದಾಗು ತ್ತಿದ್ದಾರೆ ಎಂದು ಆರೋಪಿಸಿದರು.

2002ರಲ್ಲಿ ಗಣಕೀಕರಣ ಪಹಣಿ ಜಾರಿ ಬಂದ ಮೇಲೆ ವಾಮಮಾರ್ಗದ ಮೂಲಕ ಪಹಣಿಯಲ್ಲಿ ಹೆಸರು ಸೇರಿಸಿ ಹೊಸ ಪಹಣಿ ಸೃಷ್ಟಿ ಮಾಡಿಕೊಂಡು ನಾವೇ ಭೂ ಮಾಲೀಕರೆಂದು ಹೇಳಿಕೊಂಡು, ಸಾಗುವಳಿ ಮಾಡುತ್ತಿದ್ದ ರೈತರ ಜಮೀನು ನಮ್ಮದು ಎಂದು ನಗರದಲ್ಲಿ ವಾಸ ಮಾಡುತ್ತಿರುವ ಭೂಮಾಫಿಯಾದವರು ಒಕ್ಕಲಬ್ಬಿಸಲು ಒತ್ತಡ ಹೇರುತ್ತಿದ್ದಾರೆ. ರೈತರ ತಂಟೆಗೆ ಬಂದರೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸುತಿದ್ದೇವೆ ಎಂದರು.

ರಾಜ್ಯ ಸರ್ಕಾರ ನಿಗದಿಗೊಳಿಸಿರುವ ಟನ್ ಕಬ್ಬಿಗೆ 100 ರು. ಹೆಚ್ಚುವರಿ ದರ ಬಣ್ಣಾರಿ ಸಕ್ಕರೆ ಕಾರ್ಖಾನೆ ಕೂಡ ರೈತರ ಖಾತೆಗೆ ಜಮಾ ಮಾಡುವ ಬಗ್ಗೆ ಕೂಡಲೇ ನಿರ್ಧಾರ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ತಾಲ್ಲೂಕು ಅಧ್ಯಕ್ಷ ವೆಂಕಟೇಶ್, ಗ್ರಾಮ ಘಟಕ ಗೌರವಾಧ್ಯಕ್ಷ ನಂಜುಂಡಪ್ಪ, ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷ ರಾಚಯ್ಯ, ಕಾರ್ಯದರ್ಶಿ ರಾಚಪ್ಪ ಇನ್ನಿತರರು ಇದ್ದರು.

ರೈತ ಮುಖಂಡ ಕುರುಬೂರ ಶಾಂತಕುಮಾರ್ ಮೈಸೂರು ತಾಲೂಕು ಮದ್ದೂರು-ಗ್ರಾಮದಲ್ಲಿ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಿದರು.

ಕಾಲೇಜಿಗೆ ಹಳೇ ವಿದ್ಯಾರ್ಥಿಗಳು ಕೈ ಜೋಡಿಸಲಿ

ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಅತ್ಯುತ್ತಮ ವಿದ್ಯಾ ಸಂಸ್ಥೆಯಾಗಿದ್ದು, ಸಾಕಷ್ಟು ಸಾಧಕರನ್ನು ನೀಡಿದೆ. ಈ ಕಾಲೇಜಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹಳೇ ವಿದ್ಯಾರ್ಥಿ ಸಂಘ ಆಂದೋಲನದ ರೂಪದಲ್ಲಿ ಶ್ರಮ ವಹಿಸ ಬೇಕು ಎಂದು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಸಲಹೆ ನೀಡಿದ್ದಾರೆ.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ನಡೆದ ಸಂಘದ ವಾರ್ಷಿಕ ಮಹಾಸಭೆ ಹಾಗೂ ಸಂತೋಷ ಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೊಡಗು ಪ್ರಾಕೃತಿಕವಾಗಿ ಅತ್ಯಂತ ಶ್ರೀ ಮಂತ ಮತ್ತು ಮನೋಹರವಾದ ಜಿಲ್ಲೆಯಾಗಿದ್ದು, ಇಲ್ಲಿನ ಜನರ ಸೃಜನಶೀಲತೆ ರಕ್ತಗತ ವಾಗಿ ಬಂದಿದೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು ದೇಶಕ್ಕೆ ಕೊಡುಗೆ ನೀಡಿದ್ದಾರೆ. ಈ ಕಾಲೇಜ್ ನ ಅಭಿವೃದ್ಧಿಗೆ ಹಳೇ ವಿದ್ಯಾರ್ಥಿಗಳು ಕೈಜೋಡಿಸಬೇಕು, ಇದು ನಮ್ಮ ಅಸ್ತಿತ್ವದ ಪ್ರಶ್ನೆ ಎಂದರು.

ಕಾಲೇಜ್ ನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ. ಪ್ರತಿಯೊಬ್ಬರು ತಾವು ಕಲಿತ ಶಿಕ್ಷಣ ಸಂಸ್ಥೆ ಮತ್ತು ಶಿಕ್ಷಕರನ್ನು ಪ್ರೀತಿಸಬೇಕು, ಗೌರವಿಸಬೇಕು. ಎಲ್ಲಾ ಕ್ಷೇತ್ರದಲ್ಲೂ ಗುರುತಿಸಿಕೊಂಡಿರುವ ಕೊಡಗು ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲೂ ಮುಂದೆ ಬರಬೇಕು ಎಂದರು. ಕೊಡಗು ವಿವಿಯ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರು ಮಾತನಾಡಿ, ಹಳೇ ವಿದ್ಯಾರ್ಥಿ ಸಂಘದ ಈ ಸಭೆ ಕೇವಲ ನೆನಪುಗಳ ವಿನಿಮಯದ ಕಾರ್ಯಕ್ರಮ ವಾಗದೆ ಅನುಭವಗಳನ್ನು ವಿನಿಮಯ ಮಾಡಿಕೊಳ್ಳುವ ಮತ್ತು ತಾವು ಕಲಿತ ಮಾತೃ ಸಂಸ್ಥೆಗೆ ಕೊಡುಗೆ ನೀಡುವ ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು.

ಕಾಲೇಜ್ ನ ಪ್ರಾಂಶುಪಾಲ ಮೇಜರ್ ಪ್ರೊ.ರಾಘವ ಬಿ. ಅವರು ಮಾತನಾಡಿ, ಎರಡು ವಿಶ್ವವಿದ್ಯಾಲಯದ ನಡುವೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರ ಅನುದಾನ ಕೊರತೆ ಇದ್ದರೂ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘ ಬೆನ್ನೆಲುಬಾಗಿ ನಿಂತಿದೆ ಎಂದು ತಿಳಿಸಿದರು. .

ಕಾರ್ಯಕ್ರದಲ್ಲಿ ಸಂಘದ ಕಾರ್ಯದರ್ಶಿ ಚಂದನ್ ನಂದರಬೆಟ್ಟು, ನಿರ್ದೇಶಕರಾದ ಲೋಹಿತ್ ಮಾಗಲು, ದಿಶಾಂತ್ ಗಾಳಿಬೀಡು, ಕೇಲೆಟ್ಟಿರ ದೇವಯ್ಯ, ಆದರ್ಶ್ ಅದ್ಕಲೆಗಾರ್,ಚೀಯಕಪೂವಂಡ ಸಚಿನ್ ಪೂವಯ್ಯ, ಚರಣ್ ಬಲ್ಯದ, ಬಿ.ಜಿ. ಹರ್ಷಿತ್, ಎಸ್.ಆರ್.ವತ್ಸಲ ಹಾಜರಿದ್ದರು.

ಮಡಿಕೇರಿ ಕೆ.ಎಂ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘದ ಮಹಾಸಭೆ ಹಾಗೂ ಸಂತೋಷ ಕೂಟ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

• ವಿಶ್ವೇಶ್ವರ ಭಟ್
ಬದುಕುಳಿದವರು ಕಂಡಂತೆ!

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 103ನೇ ಕೃತಿ ಬದುಕುಳಿದವರು ಕಂಡಂತೆ ಲೋಕಾರ್ಪಣೆ

ಜಿಹಾದಿ ಮಾನಸಿಕತೆಯನ್ನು ಇಸ್ರೇಲ್ ಎದುರಿಸಿದ ಬಗೆ ನಮಗೆ ಪಾಠವಾಗುವಂತೆ ಭಟ್ಟರ ಪುಸ್ತಕವಿದೆ: ಜೋಶಿ

ಹಮಾಸ್ ಹತ್ಯಾಕಾಂಡ ಚಿತ್ರಣ; ಕಣ್ಣೀರಾದ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶ್ರೀ ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್ ಹಾಗೂ ವಿಶ್ವವಾಣಿ ಪುಸ್ತಕ ವತಿಯಿಂದ ಭಾನುವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರ 103ನೇ ಕೃತಿ 'ಬದುಕುಳಿದವರು ಕಂಡಂತೆ' ಪುಸ್ತಕವನ್ನು ಕೇಂದ್ರ ಸರಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಲ್ಹಾದ್ ಜೋಶಿ ಅವರು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಇಸ್ರೇಲ್‌ನ ಭಾರತ ಕೌನ್ಸಿಲ್ ಜನರಲ್ ಒರ್ಲಿ ವೆಯಿಟ್ಸನ್ ಆನ್‌ಲೈನ್ ಮೂಲಕ ಭಾಗವಹಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಶ್ರೀನಿವಾಸ್, ಲೇಖಕರಾದ ಷಡಕ್ಷರಿ, ಸಂಸದ ತೇಜಸ್ವಿ ಸೂರ್ಯ ಹಾಗೂ ಅವರ ಪತ್ನಿ ಶಿವಶ್ರೀ ಸ್ಕಂದಪ್ರಸಾದ್, ವಿಶ್ವವಾಣಿ ಪುಸ್ತಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕಿ ಸುಷ್ಮಾ ಭಟ್, ಅಡಿಗಾಸ್ ಸಂಸ್ಥೆಯ ಸಂಸ್ಥಾಪಕ ನಾಗರಾಜ್ ಅಡಿಗ, ಇಸ್ರೇಲ್ ಕಾನ್ಸುಲೇಟ್ ಜನರಲ್‌ನ ಡೆಪ್ಯುಟಿ ಕಾನ್ಸುಲ್ ಜನರಲ್ ಇನ್ಬಾಲ್ ಸ್ಟೋನ್ ಭಾಗವಹಿಸಿದರು.

'ಬದುಕುಳಿದವರು ಕಂಡಂತೆ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಇಸ್ರೇಲ್ ಕಾನ್ಸುಲೇಟ್ ಜನರಲ್‌ನ ಡೆಪ್ಯುಟಿ ಕಾನ್ಸುಲ್ ಜನರಲ್ ಇನ್ಬಾಲ್ ಸ್ಟೋನ್, ಸಂಸದ ತೇಜಸ್ವಿ ಸೂರ್ಯ, ಲೇಖಕರಾದ ವಿಶ್ವೇಶ್ವರ ಭಟ್ ಅವರು ದೀಪ ಬೆಳಗುವ ಮೂಲಕ ಚಾಲನೆ ನೀಡಿದರು.

ವನ ಕೆಚ್ಚು, ಹೋರಾಟದ ಭಾವನೆಯನ್ನು ಗುರುತಿಸದು. ತನ್ನ ಹಿಂದಿನ ಘೋರ ಇತಿಹಾಸದ ಜ್ಞಾನವನ್ನು ಹೊಂದಿರದವನು ಸುಂದರ ಭವಿಷ್ಯ ಕಟ್ಟಿ ಕೊಳ್ಳಲು ಸಾಧ್ಯವಿಲ್ಲ. ವಿಶ್ವದ ಜನಸಂಖ್ಯೆಯ ಕೇವಲ 0.22 ಜನಸಂಖ್ಯೆ ಹೊಂದಿರುವ ಇಸ್ರೇಲ್, 20ಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿಗಳನ್ನು ಪಡೆದಿದೆ ಎಂದು ಹೇಳಿದರು.

ದೃಶ್ಯದಲ್ಲಿ ಕಂಡ ನೈಜ ದರ್ಶನಕ್ಕೆ ಸಭೆ ಅಕ್ಷರಶಃ ಸ್ತಬ್ಧ: ಸಮಾರಂಭದಲ್ಲಿ ಇಸ್ರೇಲ್‌ನಲ್ಲಿ ಹಮಾಸ್ ಉಗ್ರರು ನಡೆಸಿದ ಭೀಕರ ನರಮೇಧದ ಏಳೂವರೆ ನಿಮಿಷಗಳ ವಿಡಿಯೊ ಪ್ರದರ್ಶಿಸಲಾಯಿತು.

ಈ ಘೋರ ದೃಶ್ಯ ವನ್ನು ಕಂಡು ಇಡೀ ಸಭೆ ಅಕ್ಷರಶಃ ಸ್ತಬ್ಧವಾಯಿತು. ಎಲ್ಲರ ಕಣ್ಣಲ್ಲೂ ನೀರು, ದುಃಖ, ನೀರವ ಮೌನ ಆವರಿಸಿತು. ಕಾರ್ಯಕ್ರಮದ ನಡುವೆ ಮತ್ತೊಂದು ವಿಡಿಯೊ ಪ್ರಸಾರ ಮಾಡಲಾಯಿತು. ಆ ವಿಡಿಯೊ ದಲ್ಲಿ ಹಮಾಸ್ ಉಗ್ರರು ಅಪಹರಣ ಮಾಡಿದ್ದ ಇಸ್ರೇಲ್ ಜನರನ್ನು ಬಿಡುಗಡೆ ಮಾಡಿದಾಗ ಜನತೆಯಲ್ಲಿ ಸಂತಸ ಕಂಡು ಬಂತು. ಇಸ್ರೇಲ್‌ನಲ್ಲಿ ನಡೆದಂತಹ ನರಮೇಧ ಹತ್ಯೆಯ ಕುರಿತು ಎಲ್ಲ ಚಿತ್ರಣಗಳು ಪರದೆಯಲ್ಲಿ ಕಂಡು ಬಂತು.



ನಮ್ಮದೂ ಇಸ್ರೇಲ್‌ನಂತೆಯೇ ಗೆದ್ದ ಇತಿಹಾಸವೇ ಹೊರತು ಸೋತ ಇತಿಹಾಸವಲ್ಲ. ಆದರೆ ಪಾಠದಲ್ಲಿ ಇದನ್ನೆಲ್ಲ ಹೇಳಿ ಕೊಡುತ್ತಿಲ್ಲ.

ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ ಅವರಿಗೆ ಬದುಕುಳಿದವರು ಕಂಡಂತೆ ಪುಸ್ತಕವನ್ನು ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಅರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಇಸ್ರೇಲ್‌ನ ಹಮಾಸ್ ಉಗ್ರರು ನಡೆಸಿದ ಭೀಕರ ನರಮೇಧದ ಏಳೂವರೆ ನಿಮಿಷಗಳ ವಿಡಿಯೊ ಪ್ರದರ್ಶಿಸಲಾಯಿತು. ಈ ಘೋರ ದೃಶ್ಯವನ್ನು ಕಂಡು ಇಡೀ ಸಭೆ ಅಕ್ಷರಶಃ ಸ್ತಬ್ಧವಾಯಿತು. ಎಲ್ಲರ ಕಣ್ಣಲ್ಲೂ ನೀರು, ದುಃಖ, ನೀರವ ಮೌನ ಆವರಿಸಿತು.

ಹತ್ಯಾಕಾಂಡದ ಕಥನ

2023ರ ಅಕ್ಟೋಬರ್ 7ರಂದು ಹಮಾಸ್ ಉಗ್ರರು ಇಸ್ರೇಲ್ ಮೇಲೆ ನಡೆಸಿದ ಭಯಾನಕ ದಾಳಿ ಮತ್ತು ಹತ್ಯಾಕಾಂಡದಲ್ಲಿ ಬದುಕಿ ಉಳಿದ ವರು ಹೇಳಿದ ಮನ ಮಿಡಿಯುವ ರೋಚಕ ಕಥನವನ್ನು ಪುಸ್ತಕ ಒಳಗೊಂಡಿದೆ. ಮೂಲ ಕೃತಿಯನ್ನು ಯೇನ್ ಅಗಮೋನ್, ಒರಿಯಾ ಮೇವೊರೊಚ್ ರಚಿಸಿದ್ದಾರೆ. ಹಮಾಸ್ ಉಗ್ರರು ದಾಳಿ ನಡೆಸಿದ್ದ ಸ್ಥಳವನ್ನು ಸಂದರ್ಶಿಸಿ ರುವ ವಿಶ್ವೇಶ್ವರ ಭಟ್ ಅವರು, ಅಲ್ಲಿಯೇ ಕೃತಿಯನ್ನು ಅನುವಾದಿಸಲು ನಿರ್ಧರಿಸಿದ್ದರು. ಹಮಾಸ್ ಉಗ್ರರು ನಡೆಸಿದ ದಾಳಿಯಲ್ಲಿ 251 ಜನರನ್ನು ಅಪಹರಿಸಿದ್ದರು. ಸಾವಿರದ ಇನ್ನೂರಕ್ಕೂ ಹೆಚ್ಚು ಮಂದಿ ಹತರಾದರು. ಈ ಘೋರ ನರಮೇಧದ ಬಗ್ಗೆ ಯೇನ್ ಅಗಮೋನ್ ಮತ್ತು ಒರಿಯಾ ಮೇವೊರೊಚ್ ಅವರು ಬರೆದ 'ಒನ್ ಡೇ ಇನ್ ಅಕ್ಟೋಬರ್' ಎಂಬ ಕೃತಿಯನ್ನು ವಿಶ್ವೇಶ್ವರ ಭಟ್ ಅವರು ಅನುವಾದಿಸಿದ್ದಾರೆ. ಹತ್ಯಾಕಾಂಡದಲ್ಲಿ ಬದುಕಿ ಉಳಿದವರು ಹೇಳಿರುವ, ಮನಮಿಡಿಯುವ, ಹೃದಯವಿದ್ರಾವಕ, ರೋಚಕ ಕಥನ ಒಳಗೊಂಡಿದೆ. ಭೀಕರ ಘಟನೆಗಳ ಬಗ್ಗೆ 34 ಮಂದಿ ತಮ್ಮ ಅನುಭವ ವನ್ನು ಹಂಚಿಕೊಂಡಿದ್ದು, ಈ ಅಪರೂಪದ ಧೈರ್ಯಶಾಲಿ ಕಥೆ ಪುಸ್ತಕದಲ್ಲಿ ನೀವು ಓದಬಹುದಾಗಿದೆ.

ಕೇಂದ್ರ ಸರಕಾರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಲ್ಹಾದ್ ಜೋಶಿ ಅವರು ಮಾತನಾಡಿ, ಇಸ್ಲಾಮಿಕ್ ಭಯೋತ್ಪಾದಕರ ಕ್ರೂರ ಬರ್ಬರ ದಾಳಿಯನ್ನು ಇಸ್ರೇಲಿನ ಯೋಧರು ಹಾಗೂ ನಾಗರಿಕರು ಎದುರಿಸಿದ ಬಗೆಯನ್ನು ಕನ್ನಡದ ಜನತೆಗೆ ಕೃತಿ ರೂಪದಲ್ಲಿ ನೀಡುವ ಮೂಲಕ ವಿಶ್ವೇಶ್ವರ ಭಟ್ ಅವರು ದೊಡ್ಡ ಸೇವೆ ಸಲ್ಲಿಸಿದ್ದಾರೆ. ಅವರು ಮಾಡಿರುವುದು ಕೇವಲ ಭಾಷಾನುವಾದವಲ್ಲ, ಅದು ಭಾವಾನುವಾದ ಎಂದರು.

ಇಸ್ರೇಲ್‌ಗೆ ಹೋಗಿ, ಅಲ್ಲಿನ ಜನತೆಯ ಭಾವನೆಗಳನ್ನು ಅರ್ಥ ಮಾಡಿಕೊಂಡು ಬರೆದಿದ್ದಾರೆ. ಭಾರತಕ್ಕೆ ಕನಿಷ್ಠ 5 ಸಾವಿರ ವರ್ಷಗಳ ಇತಿಹಾಸವಿದೆ. ಆದರೆ ಇಸ್ರೇಲ್ ರಚನೆ ಆಗಿರುವುದು 1948ರಲ್ಲಿ. ಆದರೆ ಇದು ನಮ್ಮ ಭೂಮಿ ಮಾತ್ರವಲ್ಲ, ಮಾತೃಭೂಮಿ ಎಂಬ ಭಾವನೆ ಅವರಲ್ಲಿದೆ. ಇಂಥ ಭಾವನೆ ಇಲ್ಲದೆ



ಹೋದಲ್ಲಿ ದೇಶವನ್ನು ಉಳಿಸಿಕೊಳ್ಳಲು ಹೋರಾಟ ಸಾಧ್ಯವಾಗುವುದಿಲ್ಲ. ಇಸ್ರೇಲ್ ಬಹಳ ಸಣ್ಣ ದೇಶ. ಅದರ ಭೌಗೋಳಿಕತೆ, ಇತಿಹಾಸವನ್ನು ವಿಶ್ವೇಶ್ವರ ಭಟ್ ಅವರು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ ಎಂದರು.

ಯಹೂದಿಗಳನ್ನು ತಾವಿದ್ದಲ್ಲಿಂದ ಹಲವು ಬಾರಿ ಓಡಿಸಲಾಗಿದೆ. ಆದರೆ 1948ರಲ್ಲಿ ಅವರು ಇಸ್ರೇಲ್ ರಚಿಸಿಕೊಂಡು ಒಂದೆಡೆ ಗಟ್ಟಿಯಾಗಿ ನೆಲೆ ನಿಂತರು. ಹಲವು ಯುದ್ಧಗಳನ್ನು ಎದುರಿಸಿದರು. ಅದರ ಸುತ್ತಲಿನ 8 ಅರಬ್ ದೇಶಗಳು ನಿರಂತರ ಇಸ್ರೇಲ್ ಅನ್ನು ತುಳಿಯಲು ಯತ್ನಿಸಿದವು. ಅಷ್ಟೂ ದೇಶಗಳ ಮಿಲಿಟರಿ ಹಾಗೂ ಇಸ್ರೇಲ್‌ನ ಮಿಲಿಟರಿ ಶಕ್ತಿ ಎರಡನ್ನೂ ಕಂಪ್ಯೂಟರ್‌ಗೆ ಫೀಡ್ ಮಾಡಿ, ಯಾವುದು ಸೋಲುತ್ತದೆ ಎಂದು ಕೇಳಿದಾಗ ನಿಸ್ಸಂಶಯವಾಗಿ ಇಸ್ರೇಲ್ ಎಂದಿತ್ತು ಕಂಪ್ಯೂಟರ್. ಆದರೆ ಅದು ಇಂದಿಗೂ ಆಗಿಲ್ಲ. ಯಾಕೆಂದರೆ ಕಂಪ್ಯೂಟರ್ ಮಾನ

ಭೈರಪ್ಪ ಬಳಿಕ ಅಧ್ಯಯನಶೀಲ ಬರಹಗಾರ ವಿಶ್ವೇಶ್ವರ ಭಟ್: ಇತ್ತೀಚೆಗೆ ಅಗಲಿದ ಸಾಹಿತಿ ಎಸ್.ಎಲ್.ಭೈರಪ್ಪನವರ ನಂತರ ಅಧ್ಯಯನಶೀಲ ಬರಹಗಾರರೆಂದರೆ ವಿಶ್ವೇಶ್ವರ ಭಟ್. ಅವರು ವಿದೇಶ ಪ್ರವೇಶ ಮಾಡಿ ತಮ್ಮ ಅನುಭವ ಹಾಗೂ ಅಲ್ಲಿನ ಸಾಂಗತ್ಯಗಳನ್ನು ಅರಿತು ವಿವರಣಾತ್ಮಕವಾಗಿ ಪುಸ್ತಕ ರೂಪದಲ್ಲಿ ತರುವ ಕಾಯಕದಲ್ಲಿ ತೊಡಗಿರುವುದು ತುಂಬಾ ಸಂತಸ. ವಿಶ್ವೇಶ್ವರ ಭಟ್ ಅವರು ಭೈರಪ್ಪನವರ ಸಾಮಿಪ್ಯ ಇದ್ದುದ್ದರಿಂದ ಅಧ್ಯಯನ, ಬರವಣಿಗೆಗೆ ಅನುಕೂಲವಾಗಿದೆ. ಅವರ ಸೃಜನಶೀಲ ಬರವಣಿಗೆ ಜನರ ಭಾವನೆಗಳನ್ನು ಕೆರಳಿಸುವುದಕ್ಕಿಂತ, ಅರಳಿಸುತ್ತದೆ. ಭಾರತೀಯ ಸಮ ಸಮಾಜ ನಿರ್ಮಾಣ ಮಾಡುವಲ್ಲಿ ವಿಶ್ವೇಶ್ವರ ಭಟ್ ಅವರು ಪಾತ್ರ ವಹಿಸಿದ್ದಾರೆ. ಇಂದಿನ ಯುವಕ ರಿಗೆ ಅವರ ಲೇಖನ ಪ್ರೇರಣೆ ನೀಡಲಿದೆ ಎಂದು ಜೋಶಿ ನುಡಿದಿದ್ದಾರೆ.

ಇಸ್ರೇಲ್‌ನ ದಿಟ್ಟತನ ನಮಗೆ ಪಾಠವಾಗಲಿ

ಇಸ್ರೇಲ್ ತನ್ನ ಮೇಲೆ ನಡೆದ ದಾಳಿಗಳನ್ನು ಸಾಮೂಹಿಕವಾಗಿ ಎದುರಿಸಿ ಮೆಟ್ಟಿ ನಿಂತಿದೆ. ಇಸ್ರೇಲ್‌ನಂತೆಯೇ ಭಾರತದ ಮೇಲೂ ಮುಸ್ಲಿಮರಿಂದ ಸಾಂಸ್ಕೃತಿಕ ದಾಳಿಗಳು ಆಗಿವೆ. ಅದನ್ನು ಎದುರಿಸುವ ಹೀರೋತನವನ್ನು ಬೆಳೆಸಿಕೊಳ್ಳಲು ವಿಶ್ವೇಶ್ವರ ಭಟ್ ಅವರ ಕೃತಿ ನಮಗೆ ಪ್ರೇರೇಪಣೆ ನೀಡುತ್ತದೆ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ನುಡಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶ್ವೇಶ್ವರ ಭಟ್ ಅವರ ಜೀವನೋತ್ಸಾಹ ಹಾಗೂ ಪ್ರತಿಭೆಯಿಂದ ಪ್ರೇರಣೆ ಪಡೆದವನು ನಾನು. ಅವರು ಈ ಕೃತಿಯನ್ನು ನನಗೆ ಅರ್ಪಿಸಿದ್ದಾರೆ. ಅದಕ್ಕಾಗಿ ಧನ್ಯವಾದ. ಇಸ್ರೇಲಿನ ಮೇಲಿನ ದಾಳಿ ಕುರಿತು ವಿಶ್ವೇಶ್ವರ ಭಟ್ ಅವರು ಬರೆದ ಕೃತಿ ಭಾರತಕ್ಕೆ ಯಾಕೆ ಪ್ರಸ್ತುತ ಎಂಬುದನ್ನು ನಾವು ಗಮನಿಸಬೇಕು. ಭಾರತದಲ್ಲೂ ದೆಹಲಿ, ಕಾಶ್ಮೀರದ ಮೇಲೆ ಉಗ್ರರ ದಾಳಿಗಳಾಗಿವೆ. ಇಸ್ರೇಲ್ ಮೇಲೆ ಹಾಗೂ ಭಾರತದ ಮೇಲೆ ದಾಳಿ ಎಸಗಿದವರ ಗುಂಪುಗಳು ಬೇರೆಯಾಗಿರಬಹುದು. ಆದರೆ ಅವರ ಮಾನಸಿಕತೆಯಲ್ಲಿ ವ್ಯತ್ಯಾಸ ಇಲ್ಲ. ಇಂಥ ದಾಳಿಗಳನ್ನು ಎದುರಿಸುವಲ್ಲಿ ಇಸ್ರೇಲ್ ಹಾಗೂ ನಮ್ಮ ಮಾನಸಿಕತೆಯಲ್ಲಿ ವ್ಯತ್ಯಾಸ ಇದೆ. ನಾವು ಇಸ್ರೇಲ್‌ನಿಂದ ಕಲಿಯಬೇಕಾದ ಪಾಠ ಬಹಳವಿದೆ ಎಂದರು.

ಇಸ್ರೇಲ್ ಮೇಲೆ ಹಾಗೂ ಭಾರತದ ಮೇಲೆ ದಾಳಿ ಎಸಗಿದವರ ಗುಂಪುಗಳು ಬೇರೆ ಆಗಿರಬಹುದು. ಆದರೆ ಅವರ ಮಾನಸಿಕತೆಯಲ್ಲಿ ವ್ಯತ್ಯಾಸ ಇಲ್ಲ.

ಇಸ್ರೇಲ್ ದೇಶ ಹುಟ್ಟಿದ ಕಾಲದಲ್ಲಿಯೇ 7 ದಿನಗಳ ಯುದ್ಧವನ್ನು ಎದುರಿಸಬೇಕಾಯಿತು. ಸುತ್ತಲಿನ ಅರಬ್ ದೇಶಗಳೆಲ್ಲ ಸೇರಿ ಮುಗಿಬಿದ್ದವು. ಅದನ್ನು ಅಂದಿನಿಂದ ಇಂದಿನವರೆಗೂ ಒಂದೇ ರೀತಿಯಲ್ಲಿ ಎದುರಿಸುತ್ತ ಬಂದಿದೆ. ಅಂದಿನಿಂದ ಇಂದಿಗೂ ಶಕ್ತಿ, ದಿಟ್ಟತನ ಉಳಿದಿದೆ. ಅದಕ್ಕೆ ಕಾರಣ, ಬಾಲ್ಯದಿಂದಲೇ ಅಲ್ಲಿ ಮಿಲಿಟರಿ ಹಾಗೂ ಸಾಂಸ್ಕೃತಿಕ ಪಾಠ ನೀಡಲಾಗುತ್ತದೆ. ಅಲ್ಲಿ ಜರ್ಮನಿಯ ಹಿಟ್ಲರ್ ನಡೆಸಿದ ಹಾಲೋಕಾಸ್ಟ್ ಚಿತ್ರಣ ನೀಡುವ ಮ್ಯೂಸಿಯಂಗಳಿವೆ. ಅಲ್ಲಿನ ಜನತೆ ಸಾಂಸ್ಕೃತಿಕ ದಿಟ್ಟತನ ಪ್ರದರ್ಶಿಸುತ್ತಾರೆ. ಆ ವಿವರಗಳನ್ನು ಶಾಲೆ ಹಾಗೂ ಕಾಲೇಜಿನ ಮಕ್ಕಳಿಗೆ ಕಡ್ಡಾಯವಾಗಿ ತೋರಿಸಿ, ಪಾಠ ಮಾಡುತ್ತಾರೆ. ಅವರು ಅನುಭವಿಸಿದ ದೌರ್ಜನ್ಯ, ಎದುರಿಸಿದ ದಿಟ್ಟತನದ ರೀತಿಯ ಬಗ್ಗೆ ನೂರಾರು ಫಿಲಂಗಳಿವೆ. ಒಂದು ಕಾಲದಲ್ಲಿ ಸತ್ತೇ ಹೋಗಿದ್ದ ಹೀಬ್ರೂ ಭಾಷೆಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಹದಿನೆಂಟು ವರ್ಷದ ಬಳಿಕ ಎಲ್ಲರಿಗೂ ಸೇನೆಯಲ್ಲಿ ಮೂರು ವರ್ಷ ತರಬೇತಿ ಕಡ್ಡಾಯ ಮಾಡಿದ್ದಾರೆ. ನಾವಿಲ್ಲಿ ರೀಲ್ಸ್ ನೋಡುತ್ತ ಕುಳಿತಿದ್ದೇವೆ ಎಂದರು.

ಇಸ್ರೇಲಿಗರಿಗಿಂತ ಕರ್ನಾಟಕದ ಜನತೆ ಓದಬೇಕಾದ ಕೃತಿ

'ಬದುಕುಳಿದವರು ಕಂಡಂತೆ' ಪುಸ್ತಕವನ್ನು ಅತ್ಯಂತ ಭಾರವಾದ ಹೃದಯದಿಂದ ಬರೆದಿದ್ದೇನೆ. ಬಹುಶಃ ಬೇರಾವ ಪುಸ್ತಕವನ್ನೂ ಬರೆಯಲು ಇಷ್ಟೊಂದು ಸಮಸ್ಯೆ ಆಗಿರಲಿಲ್ಲ. ನನ್ನ ಎಲ್ಲ ಕೃತಿಗಳಿಗಿಂತ ಇದು ವಿಭಿನ್ನ. ನಾನು ಸಾಮಾನ್ಯವಾಗಿ ಎರಡು-ಮೂರು ದಿನಗಳಲ್ಲಿ ಪ್ರೂಫ್ ರೀಡಿಂಗ್ ಮಾಡುತ್ತೇನೆ. ಆದರೆ ಈ ಪುಸ್ತಕ ಬರೆದ ಬಳಿಕ ಪ್ರೂಫ್ ರೋಡಿಂಗ್ ಮಾಡಲು 25 ದಿನಗಳೇ ಬೇಕಾಯಿತು. ಕೇವಲ ಪ್ರೂಫ್ ರೀಡರ್ ಆಗಿ ಬರೆದು, ಓದಲು ನನಗೆ ಸಾಧ್ಯವಾಗಲಿಲ್ಲ. ಇಸ್ರೇಲಿಗೆ ಹೋಗದಿದ್ದರೆ ಬಹುಶಃ ನಾನು ಇದನ್ನು ಬರೆಯುತ್ತಿರಲಿಲ್ಲ. ಎಷ್ಟೋ ಸಲ ಒಂದು ಅಧ್ಯಾಯ ಬರೆದ ಬಳಿಕ ಮತ್ತೊಂದನ್ನು ಬರೆಯಲು ಸಾಧ್ಯವಾಗದೆ ವಾರಗಟ್ಟಲೇ ಮುಚ್ಚಿಟ್ಟು ಮತ್ತೆ ಆರಂಭಿಸಿದ್ದೆ. ಈ ಪುಸ್ತಕವನ್ನು ಇಸ್ರೇಲಿಗರು ಓದುವುದಕ್ಕಿಂತ ಹೆಚ್ಚು ಕರ್ನಾಟಕದ ಜನತೆ, ಕನ್ನಡಿಗರು ಓದಬೇಕು ಎಂದು ವಿಶ್ವವಾಣಿಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಹೇಳಿದರು.

ನಮ್ಮದೂ ಇಸ್ರೇಲ್‌ನಂತೆಯೇ ಗೆದ್ದ ಇತಿಹಾಸವೇ ಹೊರತು ಸೋತ ಇತಿಹಾಸವಲ್ಲ. ಆದರೆ ಪಾಠದಲ್ಲಿ ಇದನ್ನೆಲ್ಲ ಹೇಳಿ ಕೊಡುತ್ತಿಲ್ಲ. ನಮ್ಮಲ್ಲಿ ಮೊದಲಿನಿಂದ ಮಾನಸಿಕ ಗುಲಾಮಿತನ ಬೆಳೆಸಿದ್ದಾರೆ. ನಮ್ಮ ದೇಶದೊಳಗೆ ಉಗ್ರರು ಹೇಗೆ ಬಂದರು, ಇದು ಭದ್ರತಾ ವೈಫಲ್ಯ ಎಂದು ಟೀಕೆ ಮಾಡುತ್ತಾರೆ. ಆಪರೇಷನ್ ಸಿಂದೂರ ನಲ್ಲಿ ನಮ್ಮ ವಿಮಾನ ಎಷ್ಟು ಉರುಳಿದವು ಎಂದು ಪ್ರಶ್ನಿಸುತ್ತಾರೆ. ಈ ಮಾನಸಿಕತೆ ಹೋಗಬೇಕು. ಇಸ್ರೇಲ್, ಜಿಹಾದಿ ಮಾನಸಿಕತೆಯನ್ನು ಎದುರಿಸಿದ ಬಗೆ ನಮಗೆ ಪಾಠವಾಗುವಂತೆ ಭಟ್ಟರ ಪುಸ್ತಕವಿದೆ.
- ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ಇತಿಹಾಸಕಾರ ವಿಲ್ ಡ್ಯುರಾಂಟ್ ಭಾರತದ ಮೇಲಿನ ಮುಸ್ಲಿಮರ ಶತಮಾನಗಳ ದಾಳಿ, ಮತಾಂತರ, ದೌರ್ಜನ್ಯವನ್ನು ಅತ್ಯಂತ ಬರ್ಬರ ಎಂದು ಬಣ್ಣಿಸುತ್ತಾನೆ. ಆದರೆ ನಮ್ಮ ಇತಿಹಾಸಕಾರರು ಅದನ್ನು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ. ಆ ದಾಳಿಯನ್ನು ನೆನಪಿಸುವ ಪ್ರಯತ್ನ ನಮ್ಮಲ್ಲಿ ಆಗುತ್ತಿಲ್ಲ. ನಮ್ಮಲ್ಲಿ ಇತಿಹಾಸವನ್ನು ತಿರುಚಲಾಗಿದೆ. ಕಾಶಿ, ಅಯೋಧ್ಯೆಗಳ ಮೇಲೆ ನಡೆದ ಇಸ್ಲಾಮಿಕ್ ದಾಳಿಕೋರರ ದಾಳಿಗಳ ಬಗ್ಗೆ ಸಾಕಷ್ಟು ಎಎಸ್‌ಐ ಉತ್ಖನನ ಸಾಕ್ಷಿಗಳು ಇದ್ದರೂ ನಮ್ಮಲ್ಲಿ ಎಚ್ಚರ ಮೂಡಿಲ್ಲ. ನಮ್ಮಲ್ಲಿ ಎಚ್ಚರ ಬರುವುದು ಯಾವಾಗ?
-ತೇಜಸ್ವಿ ಸೂರ್ಯ, ಸಂಸದ

ಅರಬ್ ರಾಷ್ಟ್ರಗಳು ಯಹೂದಿಗಳು ಭೂಮಿಯ ಮೇಲೆ ಇರಲೇಕೂಡದು ಎಂಬಂತೆ ದ್ವೇಷ ಸಾಧಿಸುತ್ತಾರೆ. ಜೆರುಸಲೆಂ ಕ್ರೈಸ್ತ, ಮುಸ್ಲಿಂ, ಯಹೂದಿಗಳ ಪವಿತ್ರ ಸ್ಥಳ. ಜೆರುಸಲೆಂಗಾಗಿ ಸಾವಿರಾರು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಗಾಜಾದ ಹಮಾಸ್ ಉಗ್ರರು, ಲೆಬನಾನ್‌ನ ಹಿಜ್ಬುಲ್ಲಾ ಭಯೋತ್ಪಾದಕರು, ಯೆಮೆನ್‌ನ ಹೌತಿಯಾ ಟೆರರಿಸ್ಟ್‌ಗಳು ಇಸ್ರೇಲ್ ಮುಗಿಸಿಬಿಡಬೇಕು ಎಂದು ಸದಾ ಯತ್ನಿಸುತ್ತಾರೆ. ನಾವೆಲ್ಲರೂ ಭಯೋತ್ಪಾದನೆ ಎದುರಿಸುತ್ತಿರುವ ಕಾಲಘಟ್ಟವಿದು.
- ವಿಶ್ವೇಶ್ವರ ಭಟ್
ವಿಶ್ವವಾಣಿ ಪ್ರಧಾನ ಸಂಪಾದಕ

ಇಸ್ರೇಲ್‌ನಲ್ಲಿ ಹಮಾಸ್ ಉಗ್ರರು ದಾಳಿ ನಡೆಸಿದ್ದನ್ನು ಸ್ಮರಿಸಿಕೊಂಡರೆ ನಿಜಕ್ಕೂ ಬೇಸರವಾಗುತ್ತದೆ. ಇಸ್ರೇಲ್‌ನಲ್ಲಿ ಭಯೋತ್ಪಾದಕರ ದಾಳಿ ನಡೆಯುತ್ತಲೇ ಇರುತ್ತವೆ. ಆದರೂ ನಮ್ಮಲ್ಲಿನ ಜನತೆಯ ಒಗ್ಗಟ್ಟಿನಿಂದ ಎಲ್ಲವೂ ಎದುರಿಸಲು ಸಾಧ್ಯವಾಗುತ್ತಿದೆ. ಹಮಾಸ್ ಉಗ್ರರು ನಡೆಸಿದ ದಾಳಿಯಲ್ಲಿ 251 ಜನರನ್ನು ಅಪಹರಿಸಿದ್ದರು. ಸಾವಿರದ ಇನ್ನೂರಕ್ಕೂ ಹೆಚ್ಚು ಮಂದಿ ಹತರಾದರು. ಇಂತಹ ಘಟನೆಗಳ ಕುರಿತು ಕನ್ನಡದಲ್ಲಿ ಪುಸ್ತಕ ಬೆಳಕಿಗೆ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ.
-ಇನ್ಬಾಲ್ ಸ್ಟೋನ್
ಇಸ್ರೇಲ್ ಡೆಪ್ಯುಟಿ ಕಾನ್ಸುಲ್ ಜನರಲ್

ಇಸ್ರೇಲ್ ಜನತೆಯ ದೇಶಪ್ರೇಮ ಅನುಕರಣೀಯ: ವಿಶ್ವೇಶ್ವರ ಭಟ್

ಬದುಕುಳಿದವರು ಕಂಡಂತೆ ಪುಸ್ತಕದಷ್ಟು ಬೇರಾವ ಪುಸ್ತಕವೂ ನನ್ನನ್ನು ಇಷ್ಟು ತಟ್ಟಿಲ್ಲ. ಧೈರ್ಯವಾಗಿ ಈ ಪುಸ್ತಕವನ್ನು ಓದಿ. ಆ ದಿನ ಇಸ್ರೇಲಿನಲ್ಲಿ ಯಾವ ರೀತಿ ಘಟನೆ ಸಂಭವಿಸಿರಬಹುದು ಎಂಬುದು ಮನವರಿಕೆಯಾಗುತ್ತದೆ. ಇಸ್ರೇಲಿಗರು ಎರಡು ವರ್ಷಗಳ ಕಾಲ ಬ್ರಿಂಗ್ ದೆಮ್ ಹೋಮ್ ಎಂಬ ಅಭಿಯಾನ ನಡೆಸಿದ್ದರು. 2 ವರ್ಷ ಕಾಲ ಎಲ್ಲ ಇಸ್ರೇಲಿಗರು ಒತ್ತೆಯಾಳುಗಳ ಬಿಡುಗಡೆಗೆ ಪ್ರಾರ್ಥನೆ ಮಾಡಿದ್ದರು. ಅಂಗಿಯ ಮೇಲೆ ಘೋಷಣೆ ಬರೆದಿದ್ದರು. ಅಂಥ ದೇಶಪ್ರೇಮ, ಮಾನವೀಯತೆ ಅವರದ್ದು ಎಂದು ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಹೇಳಿದರು.

ಪುಸ್ತಕ ಬರೆಯುತ್ತಿದ್ದಾಗ ಇಸ್ರೇಲಿನಲ್ಲಿ ಭೀಕರ ನರಮೇಧಕ್ಕೆ ಬಲಿಯಾದವರ ಆಕ್ರಂದನ ನೆನಪಾಗಿ ಮುಂದೆ ಬರೆಯಲು ಸಾಧ್ಯವೇ ಆಗುತ್ತಿರಲಿಲ್ಲ. ಇಸ್ರೇಲಿನಲ್ಲಿ ಶನಿವಾರ ಶಬ್ಬಾತ್ ಎಂಬ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಇಡೀ ದಿವಸ ದೇವರ ಧ್ಯಾನದಲ್ಲಿ ಇರುತ್ತಾರೆ. ದಿನವಿಡೀ ಉಪವಾಸ ನಡೆಸುತ್ತಾರೆ. 2023ರ ಅಕ್ಟೋಬರ್ 7ರಂದು ಶನಿವಾರ ಇಸ್ರೇಲಿನಲ್ಲಿ ಹಮಾಸ್ ಭಯೋತ್ಪಾದಕರು ದಾಳಿ ನಡೆಸಿದರು. ಇಸ್ರೇಲಿಗರು ಎಷ್ಟು ಧೈರ್ಯಶಾಲಿಗಳೆಂದರೆ ಐರನ್ ಡೋಮ್ ಎಂಬ ವ್ಯವಸ್ಥೆ ಮಾಡಿದ್ದಾರೆ. ಶತ್ರು ದೇಶಗಳ ಕ್ಷಿಪಣಿಗಳು ಇಸ್ರೇಲ್ ನೆಲವನ್ನು ಮುಟ್ಟುವ ಮೊದಲೇ ಆಕಾಶದಲ್ಲಿಯೇ ಛಿದ್ರವಾಗುತ್ತದೆ. ದುರದೃಷ್ಟವಶಾತ್ 2023ರ ಅಕ್ಟೋಬರ್ 7ರಂದು ಶಬ್ಬಾತ್ ಪ್ರಯುಕ್ತ ಸೇನೆ ಕೂಡ ವಿರಾಮದಲ್ಲಿ ಇತ್ತು. ಇದೇ ಸಂದರ್ಭ ಸಾವಿರಾರು ಮಂದಿ ಹಮಾಸ್ ಭಯೋತ್ಪಾದಕರು ಪ್ಯಾರಾಚೂಟ್ ಬಳಸಿಕೊಂಡು ಇಸ್ರೇಲ್‌ನಲ್ಲಿ ಇಳಿದು ಭೀಕರ ನರಮೇಧ ನಡೆಸಿದರು. ಕಂಡಕಂಡವರಿಗೆ ಗುಂಡಿಕ್ಕಿದರು. ಗ್ರೆನೇಡ್ ಎಸೆದು ಮನೆಗಳನ್ನು ಸ್ಫೋಟಿಸಿದರು. ಜನರನ್ನು ಒಂದೇ ಕಡೆ ಸೇರಿಸಿ ಪೆಟ್ರೋಲ್ ಬಾಂಬ್ ಮೂಲಕ ಸ್ಫೋಟಿಸಿದರು. ಸಜೀವ ದಹನಕ್ಕೆ ಗುರಿಪಡಿಸಿದರು. ಮಹಿಳೆಯರ ಮಾನಭಂಗ ಮಾಡಿದರು. ಮಕ್ಕಳು, ವೃದ್ಧರು ಎಲ್ಲರನ್ನೂ ಕೊಂದು ಹಾಕಿದರು ಎಂದು ಹಮಾಸ್ ಉಗ್ರರ ದಾಳಿ ಬಗ್ಗೆ ವಿವರಿಸಿದರು.

ಎರಡನೇ ಜಾಗತಿಕ ಯುದ್ಧದ ಸಂದರ್ಭ ಹಿಟ್ಲರ್ ಲಕ್ಷಾಂತರ ಯಹೂದಿಗಳ ನರಮೇಧ ನಡೆಸಿದ್ದ. ಹೋಲೋಕಾಸ್ಟ್ ಎಂದು ಅದನ್ನು ಕರೆಯುತ್ತಾರೆ. ಇದಾದ ನಂತರ 2023ರ ಅಕ್ಟೋಬರ್ 7ರಂದು ನಡೆದಿರುವುದು ಎರಡನೇ ಭೀಕರ ನರಮೇಧವಾಗಿದೆ. ಇಲ್ಲೂ ಯಹೂದಿಯರನ್ನು ಕೊಲ್ಲಲಾಯಿತು. ಇಸ್ರೇಲಿನಲ್ಲಿ ನೋವಾ ಫೆಸ್ಟಿವಲ್‌ನಲ್ಲಿ 4-5 ಸಾವಿರ ಮಂದಿ ಯುವಕ-ಯುವತಿಯರು ಸಂಭ್ರಮದಿಂದ ಭಾಗವಹಿಸಿದ್ದರು. ಸಂಗೀತಗೋಷ್ಠಿ ಆರಂಭವಾಗಿ ಎರಡು-ಮೂರು ತಾಸುಗಳ ಬಳಿಕ ಹಮಾಸ್ ಉಗ್ರರು ದಾಳಿ ನಡೆಸಿದರು. ಇಸ್ರೇಲ್-ಗಾಜಾ ಗಡಿಯಲ್ಲಿ ಸಣ್ಣ ಹುಳ ಕೂಡ ಹೋಗಲು ಸಾಧ್ಯವಿಲ್ಲ. ಇದು ಹಮಾಸ್ ಉಗ್ರರಿಗೆ ಗೊತ್ತಿತ್ತು. ಹೀಗಾಗಿ ಭಯೋತ್ಪಾದಕರು ಗಡಿಯಿಂದ ಒಂದು ಕಿಲೋ



ಬದುಕುಳಿದವರು ಕಂಡಂತೆ ಪುಸ್ತಕದಷ್ಟು ಬೇರಾವ ಪುಸ್ತಕವೂ ನನ್ನನ್ನು ಇಷ್ಟು ತಟ್ಟಿಲ್ಲ. ಧೈರ್ಯವಾಗಿ ಈ ಪುಸ್ತಕವನ್ನು ಓದಿ.

ಮೀಟರ್ ದೂರದಿಂದ ಪ್ಯಾರಾಚೂಟ್‌ನಲ್ಲಿ 3 ಸಾವಿರ ಉಗ್ರರು ಟೇಕಾಫ್ ಆಗಿ ನೋವಾ ಫೆಸ್ಟಿವಲ್ ನಡೆಯುತ್ತಿದ್ದ ಜಾಗದಲ್ಲಿ ಎಲ್ಲರ ಮೇಲೆ ನಿರಂತರ ಗುಂಡು ಹಾರಿಸಿದರು. ಬೆಳಗ್ಗೆ ನಾಲ್ಕೂವರೆಗೆ ರಾಕೆಟ್ ದಾಳಿಯಾಗುತ್ತದೆ. ಕ್ಷಿಪಣಿಗಳು ಉಡಾವಣೆಯಾಗುತ್ತವೆ. ಆದರೆ ಆವತ್ತು ಐರನ್ ಡೋಮ್‌ಗಳು ಸಕ್ರಿಯವಾಗಿರಲಿಲ್ಲ. ಹಮಾಸ್ ಭಯೋತ್ಪಾದಕರು ಕಂಡ ಕಂಡವರ ಮೇಲೆ ಗುಂಡು ಸಿಡಿಸುತ್ತಾರೆ. ಜನರೆಲ್ಲ ದಿಕ್ಕಾಪಾಲಾಗಿ ಓಡುತ್ತಾರೆ. ಇಸ್ರೇಲಿನ ಸಮುದಾಯ ಅಥವಾ ಗೇಟೆಡ್ ಕಮ್ಯುನಿಟಿ ಕಿಬೂತ್‌ನಲ್ಲಿದ್ದ ಅಮಾಯಕ ಪ್ರಜೆಗಳನ್ನೂ ಸಾಯಿಸುತ್ತಾರೆ. ಹತ್ತು ತಾಸಿನಲ್ಲಿ ಸಾವಿರದ ಇನ್ನೂರಕ್ಕೂ ಹೆಚ್ಚು ಮಂದಿ ಬರ್ಬರವಾಗಿ ಬಲಿಯಾದರು. ಇನ್ನೂರೈವತ್ತಕ್ಕೂ ಹೆಚ್ಚು ಮಂದಿಯನ್ನು ಹಮಾಸ್ ಉಗ್ರರು ಅಪಹರಿಸಿದರು ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತ್ಯಾಸಕ್ತರಿಂದ ಕಿಕ್ಕಿರಿದು ತುಂಬಿದ್ದ ಸಭಾಂಗಣ.

ಯಾರ್‍ಯಾರು ಭಾಗವಹಿಸಿದ್ದರು?

- ವಿಶ್ವೇಶ್ವರ ಭಟ್ ಅವರ ತಾಯಿ ಗಿರಿಜಾ ಭಟ್, ಪತ್ನಿ ಸುಷ್ಮಾ ಭಟ್, ಪುತ್ರ ವಿಶ್ವಾತ್ಮ ಭಟ್, ಸಹೋದರಿ ಸವಿತಾ ಉಮೇಶ್ ಭಟ್, ಸಹೋದರ ಅಮೆರಿಕ ನಿವಾಸಿ ಸದಾನಂದ ಭಟ್.
- ಇನ್ಬಾಲ್ ಸ್ಟೋನ್, ಡೆಪ್ಯೂಟಿ ಕಾನ್ಸೂಲ್ ಜನರಲ್ ಆಫ್ ಇಸ್ರೇಲ್
- ರವಿಕಿರಣ್, ಬೆಂಗಳೂರಿನಲ್ಲಿರುವ ಇಸ್ರೇಲ್ ಕಾನ್ಸುಲ್ ಜನರಲ್ ಕಚೇರಿಯ ಪಾಲಿಟಿಕಲ್ ಆ್ಯಂಡ್ ಪ್ರೆಸ್ ಆಫೀಸರ್
- ಚಿದಾನಂದ ಕಡಲಾಸ್ಕರ್, ವಿಶ್ವವಾಣಿ ಸಿಇಒ
- ಷಡಾಕ್ಷರಿ, ರಮಣಶ್ರೀ ಗ್ರೂಪ್‌ನ ರೂವಾರಿ ಮತ್ತು ಜನಪ್ರಿಯ ಲೇಖಕ
- ಎಂ.ಶ್ರೀನಿವಾಸ್, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಮಗದ ಅಧ್ಯಕ್ಷ
- ಗೋಪಾಲ್ ಹೊಸೂರ್, ಡಿ ವಿ ಗುರುಪ್ರಸಾದ್, ನಿವೃತ್ತ ಪೊಲೀಸ್ ಅಧಿಕಾರಿಗಳು
- ಬಸಂತ್ ಕುಮಾರ್ ಪಾಟೀಲ್, ನಿರ್ಮಾಪಕ
- ನಾಗರಾಜ್ ಅಡಿಗ, ಅಡಿಗಾಸ್ ಗ್ರೂಪ್
- ಹರೀಶ್ ಎಂಡಿ ಹಳ್ಳಿ, ನಿರ್ದೇಶಕ
- ಗಣಪತಿ ಭಟ್, ನಿವೃತ್ತ ಐಆರ್‌ಎಸ್ ಅಧಿಕಾರಿ
- ಗಿರಿಧರ ಕಜೆ, ಆರ್ಯುವೇದ ತಜ್ಞ
- ಡಾ.ಯೋಗಣ್ಣ, ಹಿರಿಯ ವೈದ್ಯ
- ಹಿರಿಯ ಗಾಯಕ ಅಜಯ್ ವಾರಿಯರ್
- ಶ್ರೀನಿವಾಸ್ ಕಪ್ಪಣ್ಣ, ರಂಗಕರ್ಮಿ
- ವಾಸುದೇವ ಅಡಿಗ, ಹೋಟೆಲ್ ಉದ್ಯಮಿ
- ಅರುಣ್ ಶ್ಯಾಮ್, ಹಿರಿಯ ನ್ಯಾಯವಾದಿ
- ಶಿವಶ್ರೀ ಸ್ಕಂದಪ್ರಸಾದ್, ಖ್ಯಾತ ಗಾಯಕಿ
- ರಾಜು ಅಡಕಳ್ಳಿ, ಹಿರಿಯ ಪತ್ರಕರ್ತ
- ರೂಪಾ ಗುರುರಾಜ್, ನಿರೂಪಕಿ



ಪ್ರಲ್ಹಾದ್ ಜೋಶಿ ಅವರಿಗೆ ಗೌರವ ಅರ್ಪಣೆ.

ಬಸವರಾಜ ಹೊರಟ್ಟಿ ಅವರಿಗೆ ಗೌರವ ಅರ್ಪಣೆ.



ತೇಜಸ್ವಿ ಸೂರ್ಯ ಅವರನ್ನು ಗೌರವಿಸಿದ ವಿಶ್ವೇಶ್ವರ ಭಟ್.

ವಿಶ್ವೇಶ್ವರ ಭಟ್ಟರ ಹಸ್ತಾಕ್ಷರಕ್ಕೆ ಮುಗಿಬಿದ್ದ ಸಾಹಿತ್ಯಾಸಕ್ತರು.

ಸಂಸದ ತೇಜಸ್ವಿ ಸೂರ್ಯ ಅವರ ಜನ್ಮದಿನ ಆಚರಣೆ.

ಸಮಾಚಾರ ಸಣ್ಣದಲ್ಲ

ಉಪ್ಪಾರಪೇಟೆಯಲ್ಲಿ ಗಂಧೋತ್ಸವ ಆಚರಣೆ

ಚಿಂತಾಮಣಿ : ಅಂಬಾಜಿದುರ್ಗ ಹೋಬಳಿಯ ಉಪ್ಪರಪೇಟೆ ಗ್ರಾಮದ ಹಜರತ್ ಸೈಯದ್ ಜಿಂದೆ ಮದರ್‌ಶಾವಲಿ ಮತ್ತು ಹಜರತ್ ಬಡ್ತೇ ಪೀರ್‌ಬಾಬಾ ದರ್ಗಾ ಗಂಧೋತ್ಸವ ರಾತ್ರಿ ಸಡಗರದಿಂದ ಆಚರಿಸಲಾಯಿತು. ದರ್ಗಾದ ಒಳಗೆ ಮತ್ತು ಹೊರಗಡೆ ವಿಶೇಷ ಪುಷ್ಪಗಳಿಂದ ಹಾಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.ರಾತ್ರಿಯಲ್ಲಿ ದರ್ಗಾ ವಿದ್ಯುತ್ ದೀಪಗಳಿಂದ ಬಹು ದೂರದವರೆಗೂ ಝುಗಮಗಿಸುತ್ತಿತ್ತು. ಪ್ರತಿವರ್ಷ ಗಂಧೋತ್ಸವನ್ನು ಹಿಂದು-ಮುಸ್ಲಿಮರು ಸೇರಿ ಒಟ್ಟಾಗಿ ಮಾಡುತ್ತೇವೆ.ಪುರಾತನ ಕಾಲದಿಂದಲೂ ಈ ಪದ್ಧತಿ ಮುಂದುವರೆಯುತ್ತಾ ಬರುತ್ತಿದೆ,ಭಕ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ದರ್ಗಾ ಕಮಿಟಿಯ ಅಧ್ಯಕ್ಷರಾದ ಸೈಯದ್ ಅಫ್ಸರ್,ಸೈಯದ್ ರಫೀಕ್, ಹೇಳಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಸೈಯದ್ ಜಿಯಉಲ್ಲಾ,ಆಸೀಫ್,ಸೈಯದ್ ರಿಜ್ವಾನ್ ,ಜಬೀ, ಸೈಯದ್ ಸಾಫ್ದರ್,ಸೈಯದ್ ಶಾಕೀಲ,ಸೈಯದ್ ಶಬ್ಬೀರ್,ಶಫಿ,ಸೈಯದ್ ಚಾಂದ್ ಪಾಷಾ,ತನ್ವೀರ್,ಸೈಯದ್ ಅಲ್ತಾಫ್,ಸೈಯದ್ ಅಫ್ರೋಜ್,ಸೈಯದ್ ಪ್ಯಾರೂ,ಸೈಯದ್ ನಜೀರ್ ,ಸೇರಿದಂತೆ ದರ್ಗಾ ಕಮಿಟಿಯ ಎಲ್ಲಾ ಪದಾಧಿಕಾರಿಗಳು,ಗ್ರಾಮದ ಎಲ್ಲಾ ಮುಖಂಡರುಗಳು,ಗ್ರಾಮಸ್ಥರು ಉಪಸ್ಥಿತರಿದ್ದರು.

ಶಾಲಾಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ಕೊಡುಗೆ

ತುಮಕೂರು : ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸರಕಾರದ ಜತೆ ಸಮಾಜದ ಸಹಕಾರ ಮುಖ್ಯ. ಅದರಲ್ಲೂ ಹಳೆಯ ವಿದ್ಯಾರ್ಥಿಗಳ ಪಾತ್ರ ದೊಡ್ಡದಿದೆ ಎಂದು ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್.ಬಿ.ಪ್ರದೀಪ್ ಕುಮಾರ್ ಕರೆನೀಡಿದರು.ನನ್ನ ಶಾಲೆ-ನನ್ನ ಕಾರ್ಯಕ್ರಮದ ಭಾಗವಾಗಿ ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆಯವತಿಯಿಂದ ಕ್ಯಾತ್ಸಂದ್ರ ಸರಕಾರಿ ಪ್ರಾಥಮಿಕ ಶಾಲೆಗೆ ಸ್ಮಾರ್ಟ್ ಕ್ಲಾಸ್ ರೂಂ ಕೊಡುಗೆ ನೀಡಿ ಮಾತನಾಡಿದರು.ಹಳೆಯ ವಿದ್ಯಾರ್ಥಿಗಳು ಶಾಲೆಯ ಅಭಿವೃದ್ಧಿಗೆ ತಮ್ಮ ಕೈಲಾದ ಬೆಂಬಲ ನೀಡಬೇಕೆಂದರು. ಸರಕಾರಿ ಶಾಲೆಗಳು ನಮ್ಮ ಗ್ರಾಮ ಮತ್ತು ನಮ್ಮ ಸಮಾಜದ ಬೆನ್ನೆಲುಬು. ಸರಕಾರ ಸಾಕಷ್ಟು ಯೋಜನೆಗಳನ್ನು ನೀಡುತ್ತಿದೆ. ಆದರೆ ಪರಿಣಾಮಕಾರಿ ಬದಲಾವಣೆಗೆ ಸಮಾಜ, ಪೋಷಕರು, ಹಳೆಯ ವಿದ್ಯಾರ್ಥಿಗಳು, ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಮುಖ್ಯವೆಂದರು. ಕಾರ್ಯಕ್ರಮದಲ್ಲಿ ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ.ಬಿ.ಜಯಣ್ಣ, ಅವರ ಪತ್ನಿ ಪೂರ್ಣಿಮಾ ಜಯಣ್ಣ, ಪುತ್ರಿ, ಸಂಸ್ಥೆಯ ನಿರ್ದೇಶಕಿ ಕೆ.ಜೆ.ನಾಗಪ್ರಿಯ , ಕ್ಯಾತ್ಸಂದ್ರ ಸರಕಾರಿ ಶಾಲೆಯ ಮುಖ್ಯ ಶಿಕ್ಷಕಿ ಆರ್.ಕೋಮಲಾ, ಬಿಆರ್‌ಸಿ ಚೇತನಾ, ಬಿಆರ್‌ಪಿ ಶುಭಾಮಣಿ ಮತ್ತಿತರರಿದ್ದರು.

ಪೋಷಕರ-ಉಪನ್ಯಾಸಕರ ಮಹಾಸಭೆ

ಗೌರಿಬಿದನೂರು: ಸರಕಾರ ಶಾಲಾ-ಕಾಲೇಜುಗಳಲ್ಲಿ ಪೋಷಕರ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿಯೊಬ್ಬ ಪೋಷಕರು ಇಂತಹ ಸಭೆಗಳಿಗೆ ಹಾಜರಾಗಿ ಚರ್ಚಿಸುವುದು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಆರ್. ಆಧಿಶೇಷರಾವ್ ತಿಳಿಸಿದರು. ತಾಲೂಕಿನ ಕೋಟಾಲದಿನ್ನೆ ಸರಕಾರಿ ಸ್ವತಂತ್ರ್ಯ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮಹಾಸಭೆ ಮತ್ತು ದಾಖಲಾತಿ ಆಂದೋಲನ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ಬೆಳವಣಿಗೆ ಪರಿಶೀಲಿಸಲು ಹಾಗು ಚರ್ಚಿಸಲು ಹೆಚ್ಚು ಸಹಕಾರಿ ಹಾಗೂ ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು. ಪೋಷಕರು ತಮ್ಮ ಮಕ್ಕಳೊಂದಿಗೆ ಆರೋಗ್ಯ ಪೂರ್ಣ ಚರ್ಚೆ ನಡೆಸಿ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಪೋಷಕರು ಆಗಿದ್ದಾಗ್ಗೆ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ತಮ್ಮ ಮಕ್ಕಳ ಹಾಜರಾತಿಯ ಬಗ್ಗೆ ವಿಚಾರಿಸುವ ಕೆಲಸವನ್ನು ಮಾಡಬೇಕು. ತಮ್ಮ ಮಕ್ಕಳಿಗೆ ಅಗತ್ಯಕ್ಕೆ ತಕ್ಕಂತೆ ಮೊಬೈಲ್ ಬಳಕೆ ಮಾಡುವಂತೆ ಸೂಚಿಸಬೇಕು ಎಂದು ಕಿವಿಮಾತು ಹೇಳಿದರು.ಸಭೆಯಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಹೆಚ್.ವಿ.ವೆಂಕಟೇಶ್, ನಾಗರಾಜಪ್ಪ, ಉಪನ್ಯಾಸಕರಾದ ಶಾಂತಾ, ಚಿನ್ನಪ್ಪರೆಡ್ಡಿ, ಶಿವಾನಂದ್, ವೆಂಕಟೇಶ್,ರವಿ ಭಾಗವಹಿಸಿದ್ದರು.

ಅಕ್ರಮ ಸೇಂದಿ ಮಾರಾಟ: ಡಿಐಎಸ್ಪಿ ತಂಡ ದಾಳಿ

ಗೌರಿಬಿದನೂರು: ತಾಲೂಕಿನ ನಗರಗೆರೆ ಹೋಬಳಿಯ ನಗರಗೆರೆ ಮತ್ತು ವಾಟದ ಹೊಸಹಳ್ಳಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮವಾಗಿ ಸೇಂದಿ ಸಾಗಾಣಿಕೆ ಸಂಗ್ರಹಣೆ ಮಾರಾಟದ ಸ್ಥಳಗಳ ಮೇಲೆ ಚಿಕ್ಕಬಳ್ಳಾಪುರ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರಾದ ಅರುಣ್ ಪ್ರಸಾದ್.ಎಂ ನೇತೃತ್ವದ ತಂಡ ದಾಳಿ ನಡೆಸಿತು. ಈ ವೇಳೆ ಮಾತನಾಡಿದ ಡಿವೈಎಸ್ಪಿ ಅರುಣ್‌ಕುಮಾರ್‌ಸದರಿ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಅಕ್ರಮ ಸೇಂದಿ ಕುಡಿದರೆ ಆರೋಗ್ಯದ ಮೇಲೆ ಉಂಟಾಗುವ ಪಣಾಮಗಳ ಕುರಿತು ಜಾಗೃತಿಯನ್ನು ಮೂಡಿಸಲಾಯಿತು.

{ಗೋವಿಂದ ಕಾರಜೋಳ} ಸಂಸದರು

ಉಕ್ಕಿನ ಮನುಷ್ಯ ಎಂದೇ ಖ್ಯಾತರಾಗಿದ್ದ ಸರ್ದಾರ್‌ವಲ್ಲಭಭಾಯ್ ಪಟೇಲ್ ಸ್ವತಂತ್ರ ಭಾರತದ ನಕ್ಷೆಯನ್ನು ಒಂದುಗೂಡಿಸಿದ್ದಾರೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಸುಮಾರು 565 ಸಂಸ್ಥಾನಗಳಲ್ಲಿ ಹಂಚಿ ಹೋಗಿದ್ದ ಭಾರತವನ್ನು ಒಗ್ಗೂಡಿಸುವುದು ದೊಡ್ಡ ಸವಾಲಾಗಿತ್ತು. ಆಗ ಎಲ್ಲ ಸಂಸ್ಥಾನಗಳ ಅರಸರ ಮನವೊಲಿಸಿದ ಪಟೇಲರು, ಭಾರತದ ಏಕೀಕರಣಕ್ಕೆ ಮಹತ್ವದ ಪಾತ್ರ ವಹಿಸಿದರು.

ಹೋರಾಟಕ್ಕೆ ಹತ್ತು ದಿನ ಮೊದಲೇ ಅನುಮತಿ ಕಡ್ಡಾಯ | ಜಿಲ್ಲಾಧಿಕಾರಿ ಆದೇಶಕ್ಕೆ ಸಂಘಟನೆಗಳಿಂದ ಆಕ್ರೋಶ

ಆದೇಶ ಹಿಂಪಡೆಯದಿದ್ದರೆ ಬೃಹತ್ ಪ್ರತಿಭಟನೆ

ಮುನಿರಾಜು ಅರಿಕೆರೆ,

ಚಿಕ್ಕಬಳ್ಳಾಪುರ: ಚಳವಳಿಗಳ ನಾಡೆಂದೇ ಹೆಸರಾದ ಚಿಕ್ಕಬಳ್ಳಾಪುರದಲ್ಲಿ ಇನ್ನು ಮುಂದೆ ಹೋರಾಟಕ್ಕೆ ಹತ್ತು ದಿನ ಮೊದಲೇ ಅನುಮತಿ ಪಡೆಯುವುದು ಕಡ್ಡಾಯ ಎಂದು ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶ ಚಳವಳಿಗಾರರಲ್ಲಿ ತೀವ್ರ ಸಂಚಲನ ಉಂಟು ಮಾಡಿದೆ. ಆದೇಶ ಹಿಂಪಡೆಯದಿದ್ದರೆ ಶೀಘ್ರವೇ ಬೃಹತ್ ಮಟ್ಟದ ತೀವ್ರ ಪ್ರತಿಭಟನಾ ಚಳವಳಿ ನಡೆಸುವುದು ಅನಿವಾರ್ಯ ಎಂಬ ಸಂದೇಶವನ್ನು ಜಿಲ್ಲಾಧಿಕಾರಿಗಳಿಗೆ ರವಾನಿಸಿದ್ದಾರೆ.

ಹೌದು. ಪ್ರಜಾಸೌಧವೆಂದೇ ಕರೆಯುವ ಜಿಲ್ಲಾಡಳಿತ ಭವನದ ಹೊರಾವರಣದಲ್ಲಿ ಜನತೆ, ಸಂಘಸಂಸ್ಥೆಗಳು, ಚಳವಳಿಗಾರರು ಹೋರಾಟ ಮಾಡುವ ಮೂಲಕ ಜಿಲ್ಲಾಡಳಿತಕ್ಕೆ ತಮ್ಮ ಸಮಸ್ಯೆಗಳ ಗಂಭೀರತೆ ಅರ್ಥ ಮಾಡಿಸಿ ಪರಿಹಾರ ಕಂಡುಕೊಳ್ಳುತ್ತಿದ್ದವು. ಇದಕ್ಕೆ ಜಿಲ್ಲಾಧಿಕಾರಿ ಅಂಕುಶ ಹಾಕಿ ಆದೇಶ ಹೊರಡಿಸಿರುವುದು ಚಳವಳಿಗಾರರಿಂದ ತೀವ್ರ ಹೋರಾಟ ವಿರೋಧ ವ್ಯಕ್ತವಾಗಿದೆ.

ಅದೇಶದಲ್ಲೇನಿದೆ? : ಚಳವಳಿಗಳನ್ನು ಹತ್ತಿಕ್ಕಲು ನ.12ರಂದು ಜಿಲ್ಲಾಧಿಕಾರಿಗಳೇ ಸ್ವತಃ ಸಹಿ ಮಾಡಿ ಹೊರಡಿಸಿರುವ ಆದೇಶದ ಸಾರಾಂಶ ಹೀಗಿದೆ. ಪ್ರಜಾಸೌಧದ ಆವರಣದ ಹೊರಭಾಗದಲ್ಲಿ ಅನುಮತಿ ಪಡೆಯದೆ ಚಳವಳಿಗಳನ್ನು ನಡೆಸುತ್ತಿರುವುದು ಕಂಡು ಬಂದಿರುತ್ತದೆ. ಇನ್ನು ಮುಂದೆ ಯಾವುದೇ ಚಳವಳಿ ಮಾಡಬೇಕಾದಲ್ಲಿ 10 ದಿನ ಮುಂಚಿತವಾಗಿ ಅನುಮತಿ ಪಡೆಯಲು ತಿಳಿಸಿದೆ. ತಾವು ಸಲ್ಲಿಸಿದ ಕೋರಿಕೆಯನ್ನು ಪೊಲೀಸ್ ಇಲಾಖೆಗೆ ಸಲ್ಲಿಸಿ, ಪರಿಶೀಲಿಸಿ ಅನುಮತಿ ನೀಡುವ ಕುರಿತು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಚಳವಳಿ ನಡೆಸಲು ಅನುಮತಿ ನೀಡಲಾಗುವುದು ಎಂದು ತಿಳಿಸಿದೆ.

> ಜಿಲ್ಲಾಧಿಕಾರಿಗಳು ಹೋರಾಟಗಾರರನ್ನು ಆದೇಶದ ಮೂಲಕ ಕಟ್ಟಿಹಾಕಲು ಸಾಧ್ಯವಿಲ್ಲ. ಸಂವಿಧಾನದತ್ತವಾಗಿ ಹಕ್ಕುಗಳ ಉಲ್ಲಂಘನೆಯಾದಾಗ ಹೋರಾಟದ ಹಾದಿ ತುಳಿಯುವುದು ವಾಡಿಕೆ. ಇಂತಹ ಆದೇಶಕ್ಕೆ ನಾವು ಸೊಪ್ಪು ಹಾಕುವುದಿಲ್ಲ . ಕೂಡಲೇ ಆದೇಶ ಹಿಂಪಡೆಯಬೇಕು.
>
> -ಮುನಿಕೃಷ್ಣಪ್ಪ ಬಿ.ಎನ್.
> ಪ್ರಾಂತ ರೈತಸಂಘದ ಜಿಲ್ಲಾ ಸಹ ಸಂಚಾಲಕ

> ಈ ಆದೇಶ ಪ್ರಜಾಪ್ರಭುತ್ವದ ಕಗ್ಗೊಲೆ.ನಮ್ಮದು ರಾಜ್ಯ ಮಟ್ಟದ ರೈತಸಂಘ. ರೈತರಿಗೆ ಎಲ್ಲೋ ಯಾವ ಗಳಿಗೆಯಲ್ಲೋ ಏನಾದರೂ ಅವಘಡ, ಸಮಸ್ಯೆ ಆಗುತ್ತದೆ ಎಂದು ಭಾವಿಸೋಣ.ಆಗ ನಾವು ಜಿಲ್ಲಾಧಿಕಾರಿಗಳ ಅನುಮತಿ ಕೇಳಿಕೊಂಡುಕೂರಬೇಕಾ? ಇಲ್ಲಾ ಅನ್ಯಾಯದ ವಿರುದ್ಧ ಹೋರಾಟ ಮಾಡಬೇಕಾ? ಡಿಸಿ ಆದೇಶದಂತೆ ನಾವು ಹೋರಾಟ ಮಾಡಲು ಸಾಧ್ಯವೆ ? ಮಂತ್ರಿಗಳ ಒತ್ತಡಕ್ಕೆ ಮಣಿದು ಮಾಡಿರುವ ಆದೇಶವನ್ನು ಜಿಲ್ಲಾಧಿಕಾರಿ ಕೂಡಲೇ ವಾಪಸ್ಸು ಪಡೆಯಬೇಕು.
>
> - ಭಕ್ತರಹಳ್ಳಿ ಬೈರೇಗೌಡ,
> ರಾಜ್ಯ ಕಾಯಾಧ್ಯಕ್ಷರು, ರೈತಸಂಘ

ಅನುಮತಿ ಕಡ್ಡಾಯ: ಹೋರಾಟಕ್ಕೆ ಮೊದಲೇ ಅನುಮತಿ ಕಡ್ಡಾಯ ಎಂಬ ಆದೇಶದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯರೆಡ್ಡಿ ಪ್ರಜಾಸೌಧದ ಎದುರು ಹೋರಾಟ ಮಾಡಬೇಕಾದರೆ 10 ದಿನಗಳ ಮೊದಲೇ ಅನುಮತಿ ಪಡೆಯಲು ಅರ್ಜಿ ಹಾಕಿಕೊಳ್ಳಬೇಕು ಎಂಬುದು ಸರ್ವಾಧಿಕಾರಿ ಧೋರಣೆಯ ಪ್ರತೀಕವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದೇ ಹೋರಾಟದ ಮೂಲಕ ಎಂಬುದನ್ನು ಜಿಲ್ಲಾಧಿಕಾರಿ ಮನವರಿಕೆ ಮಾಡಿಕೊಳ್ಳಬೇಕು. ಅಧಿಕಾರಿಗಳು ವಿವೇಚನೆ ಬಳಸಿ ಹೋರಾಟಕ್ಕೆ ಅನುಮತಿ ನೀಡಬೇಕು ಎಂದಿರುವುದು ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವಾ? ಅಥವಾ ಬ್ರಿಟೀಷ್ ಆಡಳಿತದಲ್ಲಿದ್ದೇವಾ? ಎಂಬುದನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು ಎಂದಿದ್ದಾರೆ.ಹೋರಾಟಕ್ಕೆ ಸ್ಪಂದಿಸಿ,ಅದನ್ನು ಸರಕಾರಕ್ಕೆ ಮುಟ್ಟಿಸಿ ಪರಿಹಾರಗಳನ್ನು ಕೊಡುವ ಜವಾಬ್ದಾರಿ ಜಿಲ್ಲಾಡಳಿತದ ಮೇಲಿದೆ.ಇದನ್ನು ಬಿಟ್ಟು 10 ದಿನದ ಒಳಗಡೆ ಅರ್ಜಿ ಹಾಕಿ ಎನ್ನುವುದೆಲ್ಲಾ ನಡೆಯುವುದಿಲ್ಲ. ಹಾಗಾಗಿ ಹೋರಾಟ ನಮ್ಮ ಜನ್ಮಸಿದ್ಧ ಹಕ್ಕು.ಈ ಆದೇಶವನ್ನು ಜಿಲ್ಲಾಧಿಕಾರಿಗಳು ಕೂಡಲೇ ಹಿಂಪಡೆಯಬೇಕು. ಹಿಂಪಡೆಯದಿದ್ದರೆ ಈ ಜಿಲ್ಲೆ ಮಾತ್ರವಲ್ಲ, ರಾಜ್ಯದ ಎಲ್ಲಾ ಸಂಘಟನೆಗಳ ರಾಜ್ಯಾಧ್ಯಕ್ಷರು, ಜಿಲ್ಲೆಗಳ ಜಿಲ್ಲಾಧ್ಯಕ್ಷರು ಮುಖಂಡರ ನೇತೃತ್ವದಲ್ಲಿ ಬೃಹತ್ ಹೋರಾಟವನ್ನು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಒಟ್ಟಾರೆ ಚಳವಳಿಗಳನ್ನು ಹತ್ತಿಕ್ಕಲು ಅನುಮತಿ ಕಡ್ಡಾಯದ ಆದೇಶ ಬಿಸಿಬಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದು ಮುಂದೆ ಇದು ಯಾವ ಹಂತ ತಲುಪುವುದೋ ಕಾದು ನೋಡಬೇಕಿದೆ.

ಕೊರಟಗೆರೆ ಗುಡ್ಡಗಳ ಮೇಲೆ ಭೂ ಮಾಫೀಯಾ ಕಣ್ಣು

ಎಚ್.ಎನ್.ನಾಗರಾಜು

ಕೊರಟಗೆರೆ : ತಾಲೂಕಿನಲ್ಲಿ ಎಗ್ಗಿಲ್ಲದೇ ಸಾಗುತ್ತಿದೆ. ಅಕ್ರಮ ಮಣ್ಣು ಸಾಗಾಟ. ರಾತ್ರಿ 11 ನಂತರ ರಸ್ತೆಗೆ ಬರುತವೆ. ಲಾರಿ ಇಟಾಚಿಗಳು. ತಾಲೂಕಿನ ಸಣ್ಣ ಸಣ್ಣ ಗುಡ್ಡಗಳು ಮಾಯಾವಾಗುತ್ತಿದ್ದರೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಮೌನಕ್ಕೆ ಶರಣಾಗಿರುವುದು ಹಲವು ಅನುಮಾನಕ್ಕೆಕಾರಣವಾಗಿದೆ.

ತಾಲೂಕಿನ ವಡ್ಡಗೆರೆ ಗ್ರಾಪಂ ವ್ಯಾಪ್ತಿಯ ಏತ್ತಗಾನಹಳ್ಳಿ ದಾಸರಹಳ್ಳಿ ಮಧ್ಯೆಇರುವ ಮದ್ದಮ್ಮನ ಬೆಟ್ಟಕ್ಕೆ ಭೂ ಮಾಫೀಯ ಕಣ್ಣು ಬಿದ್ದು, ಮಧುಗಿರಿ ತಾಲೂಕಿನಿಂದ ಇಟಾಚಿ ಲಾರಿಗಳು ರಾತ್ರಿ 11 ಗಂಟೆಯ ನಂತರ ಮದ್ದಮ್ಮ ಬೆಟ್ಟಕ್ಕೆ ಕನ್ನ ಹಾಕಲು ಬರುತ್ತಿದ್ದಾರೆ. ಗರಗದೊಡ್ಡಿ ಸಮೀಪ ಇರುವಜಮೀನಿನ್ನ ಮಟ್ಟ ಮಾಡಿ ಹೆಚ್ಚಿನ ಲಾಭ ಪಡೆಯುವ ಸಲುವಾಗಿ ತಾಲೂಕಿನ ಸಣ್ಣ ಸಣ್ಣ ಬೆಟ್ಟಗಳನ್ನ ನೆಲಸಮ ಮಾಡಲು ಹೊರಟಿದ್ದಾರೆ. ಭೂ ಮಾಫೀಯ ವ್ಯಕ್ತಿಗಳು ಎಂದು ಸ್ಥಳೀಯರ ಆರೋಪವಾಗಿದೆ.

ಭೂ ಮಾಫೀಯ ವ್ಯಕ್ತಿಗಳು ಕಲ್ಲು, ಉಬ್ಬುತಗ್ಗುಇರುವಜಮೀನನ್ನ ಕಡಿಮೆ ದರಕ್ಕೆ ಪಡೆದು ಜಮೀನಿನ ಅಕ್ಕಪಕ್ಕದಲ್ಲಿರುವ ಸಣ್ಣ ಸಣ್ಣ ಗುಡ್ಡಗಳನ್ನ ಕರಗಿಸಿ ಭೂಮಿಯನ್ನ ಸಮ ಮಾಡಿ ಕೋಟಿಗೆ ಮಾರಿ ಲಕ್ಷ ಲಕ್ಷ ಲಾಭ ಮಾಡುತ್ತಿದ್ದು,ಅಕ್ರಮ ಮಣ್ಣು ಸಾಗಣೆಗೆ ಲಾರಿ ಜೆಸಿಬಿ ಗಳು ಸದ್ದು ಮಾಡುತ್ತಿದ್ದರೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಕೂಡ ಇವರ ಜೊತೆ ಶಾಮೀಲು ಆಗಿರಬಹುದೇ ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಅಕ್ರಮ ಮಣ್ಣುದಂಧೆ : ಮಧುಗಿರಿ ಹಾಗೂ ತುಮಕೂರು ನಗರದ ಇಟಾಚಿ ಮತ್ತು ಲಾರಿ ಮಾಲೀಕರು ಕೊರಟಗೆರೆ ತಾಲೂಕಿನಲ್ಲಿಅಕ್ರಮವಾಗಿ ಮಣ್ಣುದಂಧೆಗೆ ದುಮಿಕಿದ್ದು, ರಾತ್ರಿ 11 ನಂತರ ತಾಲೂಕಿನಲ್ಲಿ ಸದ್ದಿಲ್ಲದೆ ಹತ್ತಕ್ಕೂ ಹೆಚ್ಚು ಲಾರಿಗಳು ಸಣ್ಣ ಸಣ್ಣ ಗುಡ್ಡಗಳನ್ನು ಬಗೆದು ಮಾಯ ಮಾಡುತ್ತಿವೆ. ಇದನ್ನು ತಡೆಯಬೇಕಾದ ಸಂಬಂಧ ಪಟ್ಟ ಇಲಾಖೆಗಳು ಕಣ್ಣು ಮುಚ್ಚಿಕುಳಿತಿವೆ...!

ದೇಗುಲ ಉಳಿಸಿ : ವಡ್ಡಗೆರೆ ಸಮೀಪ ಇರುವ ಮಧ್ಯಮ್ಮದೇವಸ್ಥಾನ ಬೆಟ್ಟದಲ್ಲಿ ನಲೆಸಿದ್ದು, ಸಾವಿರಾರು ವರ್ಷಗಳ ಪುರಾತನ ದೇವಸ್ಥಾನವಾಗಿದ್ದು ಕಳೆದ ಕೆಲವು ದಿನಗಳ ಹಿಂದೆ ಭೂ ಮಾಫೀಯ ಅವರ ಕಣ್ಣು ಈ ಬೆಟ್ಟದ ಮೇಲೆ ಬಿದ್ದಿದ್ದು, ದೇವಸ್ಥಾನವನ್ನ ಉಳಿಸಬೇಕಾದ ಅಧಿಕಾರಿಗಳು ಮೌನವಾಗಿದ್ದಾರೆ ಎನ್ನುತ್ತಾರೆ ಸ್ಥಳಿಯರು.

> ತಾಲೂಕಿನಲ್ಲಿಅಕ್ರಮ ಮಣ್ಣು ಸಾಗಣೆ ಮಾಡಲು ಅಕ್ಕಪಕ್ಕದ ತಾಲೂಕಿನ ಭೂಗಳ್ಳರು ನಮ್ಮ ಗ್ರಾಮದ ಸುತ್ತಮುತ್ತಇರುವ ಬೆಟ್ಟ ಗುಡ್ಡಗಳನ್ನ ಕರಗಿಸೋಕೆ ಬರುತ್ತಿದ್ದಾರೆ. ಗ್ರಾಮೀಣ ಗುಡ್ಡಗಳಲ್ಲಿ ನಮ್ಮ ದನ ಕರುಗಳು ಮೇವು ಮೇಯಿಸಲು ನಮ್ಮ ಪೂರ್ವಜರು ಬೆಟ್ಟಗಳನ್ನ ಕಾಪಾಡಿಕೊಂಡು ಬರುತ್ತಿದ್ದರು. ಆದರೆ ಇವತ್ತು ಬೆಟ್ಟಗಳೇ ಮಾಯವಾಗುತ್ತಿವೆ. ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಳ್ಳಬೇಕು
>
> -ನರಸಿಂಹಮೂರ್ತಿ,ಸ್ಥಳೀಯ.

ಸೀತಿ ಶ್ರೀನಿವಾಸ ಕಲ್ಯಾಣೋತ್ಸವ ಅದ್ಧೂರಿ

ಕೋಲಾರ: ಮುರಳಿಗೌಡ ಅಭಿಮಾನಿಗಳ ಬಳಗ, ಎಂಜಿ ಯುವ ಬ್ರಿಗೇಡ್, ಡಿಕೆ ರವಿ ಅಭಿಮಾನಿಗಳ ಬಳಗ ಮತ್ತು ಶ್ರೀವಾರಿ ಫೌಂಡೇಷನ್ ತಂಡದಿಂದ ಸೀತಿಯಲ್ಲಿ ಶನಿವಾರ ರಾತ್ರಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಭಕ್ತರು ಮಿಂದೆದ್ದರು.

ಸಂಜೆ 4 ಗಂಟೆಗೆ ಆರಂಭವಾದ ಕಲ್ಯಾಣ ರಾತ್ರಿ 10.30ರಲ್ಲಿ ಏಕಾಂತ ಸೇವೆಯೊಂದಿಗೆ ಮುಕ್ತಾಯ ಆಯಿತು. ಸಾವಿರಾರು ನಾರಿಯರಿಗೆ ಸೀರೆ ಬಾಗಿನದ ಮೂಲಕ ಕಾರ್ಯಕ್ರಮಕ್ಕೆ ಮಂಗಳ ಹಾಡಲಾಯಿತು. ಶ್ರೀವಾರಿ ಫೌಂಡೇಷನ್ ಮುಖಂಡ ವೆಂಕಟೇಶಮೂರ್ತಿ ಅವರ ಸಮ್ಮುಖದಲ್ಲಿ ಲೋಕ ಕಲ್ಯಾಣಾರ್ಥವಾಗಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಪಕ್ಷಾತೀತವಾಗಿ ಭಾಗವಹಿಸಿದ್ದ ಮುಖಂ ಡರು ಧಾರ್ಮಿಕ ಕೈಂಕರ್ಯವನ್ನು ಸಾಕ್ಷೀಕರಿಸಿದರು.ಐದು ಸಾವಿರ ಮಂದಿ ಭಕ್ತರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ತಿರುಪತಿಯ ಉತ್ಸವಮೂರ್ತಿಯನ್ನು ಟಿಟಿಡಿಯ 25 ಪುರೋಹಿತರು ತಂದು ಉತ್ಸವ ನಡೆಸಿದರು. ಸಚಿವ ಕೆ.ಎಚ್. ಮುನಿಯಪ್ಪ, ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ದಳಪತಿ ಸಿಎಂಆರ್ ಶ್ರೀನಾಥ್, ಸಮಾಜಸೇವಕಿ ಕುರ್ಕಿರಾಜೇಶ್ವರಿ, ಕರವೇ ಜಿಲ್ಲಾಧ್ಯಕ್ಷ ಮೇಡಿಹಾಳ ರಾಘವೇಂದ್ರ, ಎಲ್ಜಿ ಫೌಂಡೇಷನ್ ಮುಖ್ಯಸ್ಥ ಲಕ್ಷ್ಮಣಗೌಡ ಪೂಜೆಯಲ್ಲಿ ಭಾಗವಹಿಸಿದ್ದರು. ಕೋಲಾರ ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ನಡೆದ ಶ್ರೀನಿವಾಸ ಕಲ್ಯಾಣೋತ್ಸವಕ್ಕೆ ನಿರೀಕ್ಷೆಗೂ ಮೀರಿದ ಸ್ಪಂದನೆ ದೊರೆಯಿತು. ಭಕ್ತರಿಗೆ ಲಡ್ಡು, ಬಿಸಿಬೇಳೆಬಾತ್ ,ಮೊಸರನ್ನದ ವ್ಯವಸ್ಥೆ ಮಾಡಲಾಗಿದ್ದು ಕಾರ್ಯಕ್ರಮದ ಆಯೋಜಕರಾದ ಅಮ್ಮನಲ್ಲೂರು ಎಂ.ಅಮರೇಶ್ ಮತ್ತು ಚಿಕ್ಕೊಂಡಹಳ್ಳಿ ಸಿಕೆ ಮಂಜುನಾಥ್ ಇದ್ದರು.

ಕೋಲಾರದ ಸೀತಿಯಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಿತು.

ತಾಂತ್ರಿಕ ಶಿಕ್ಷಣ ಇಲಾಖೆಯ ವೇತನ ವಸೂಲಿ ಕ್ರಮಕ್ಕೆ ಅಧ್ಯಾಪಕರು ಶಾಕ್

ಪಿಎಚ್.ಡಿ., ಮುಗಿಸಿದ 40 ಬೋಧಕರು ಕಂಗಾಲು !

ರಂಗನಾಥ ಕೆ. ಹೊನ್ನಮರಡಿ

ತುಮಕೂರು: ಪಿಎಚ್ ಡಿ ಪದವಿ ಮುಗಿಸಿ ಸೇವೆಯಲ್ಲಿ ವೇತನ ಬಡ್ತಿ ಪಡೆಯುವ ಕನಸು ಹೊಂದಿದ್ದ ಸರಕಾರಿ ಇಂಜಿನಿಯರಿಂಗ್ ಕಾಲೇಜಿನ ಹಾಗೂ ಸರಕಾರಿ ಪಾಲಿಟೆಕ್ನಿಕ್ ಗಳ ರಾಜ್ಯದ ಸುಮಾರು 40 ಬೋಧಕರಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವೇತನ ವಸೂಲಾತಿ ನಿರ್ಧಾರ ಭಾರಿ ನಿರಾಸೆ, ಆತಂಕವನ್ನುಂಟು ಮಾಡಿದೆ.

ಸರಕಾರ ನೀಡುವ 3 ವರ್ಷಗಳ ಅಧ್ಯಯನ ರಜೆಯನ್ನು ಉಪಯೋಗಿಸಿಕೊಂಡು ಸೇವಾನಿರತ ಬೋಧಕರು ವಿವಿಧ ವಿಶ್ವ ವಿದ್ಯಾನಿಲಯಗಳಿಗೆ ಪೂರ್ಣಕಾಲಿಕ ಸಂಶೋಧನೆಗಾಗಿ ನಿಯೋಜನೆಗೊಂಡು ಅಧ್ಯಯನ ಮುಗಿಸಿ ರಜಾ ಅವಧಿಯ ನಂತರ ತಕ್ಷಣವೇ ತಮ್ಮ ಮಾತೃ ಸಂಸ್ಥೆಗಳಿಗೆ ವಾಪ್ಪಸ್ಸು ಕಾರ್ಯ ವರದಿ ಮಾಡಿಕೊಂಡು ದೈನಂದಿನ ಪಾಠ ಪ್ರವಚನಗಳಲ್ಲಿ ತೊಡಗಿರುತ್ತಾರೆ.

ನಂತರ ಬಾಕಿ ಉಳಿದ ಸಂಶೋಧನಾ ಕಾರ್ಯವನ್ನು ತಮ್ಮ ಸ್ವಂತ ರಜೆಗಳನ್ನು ಉಪಯೋಗಿಸಿಕೊಂಡು ಆಯಾ ವಿಶ್ವ ವಿದ್ಯಾನಿಲಯಗಳ ನಿಯಮಗಳಂತೆ ಪಿ ಎಚ್ ಡಿ ಪದವಿ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ.

ಕರ್ನಾಟಕ ನಾಗರೀಕ ಸೇವಾ ನಿಯಮ 61(3)ರ ಅಪ್ಪೆಂಡಿಕ್ಸ್ 2ಎ ಸೆಕ್ಷನ್ 10ರಂತೆ ಸಂಶೋಧನಾ ನಿರತ ಬೋಧಕರು ಸರಿಯಾದ ಪ್ರಗತಿಯನ್ನು ತೋರದೆ ನಿಗದಿತ ಕಾಲಾವಧಿಯಲ್ಲಿ ಅಧ್ಯಯನ ಪೂರ್ಣಗೊಳಿಸಲು ವಿಫಲರಾಗಿದ್ದಾರೆ ಎಂದು ನಿಯೋಜನೆ ಅವಧಿ ಮುಗಿಯುವ ಮೊದಲೇ ಸರಕಾರವು ನಿರ್ಣಯಿಸಿದಾಗ ಮಾತ್ರ ನಿಯೋಜನೆಯನ್ನು ತಕ್ಷಣವೇ ರದ್ದುಗೊಳಿಸಿ ವಾಪಸ್ಸು ಮಾತೃ ಸಂಸ್ಥೆಗಳಿಗೆ ಮರಳಲು ಸೂಚಿಸಿ ಅವರು ನಿಯೋಜನ ಅವಧಿಯಲ್ಲಿ ಪಡೆದುಕೊಂಡ ವೇತನ ಹಾಗೂ ಇತರ ಭತ್ಯೆಗಳನ್ನು ವಾಪಸ್ಸು ಸರಕಾರಕ್ಕೆ ಕಟ್ಟುವಂತೆ ನಿರ್ದೇಶಿಸಲು ಅವಕಾಶವಿರುತ್ತದೆ.

ತಮ್ಮ ಪ್ರಾಮಾಣಿಕ ಪ್ರಯತ್ನದ ಹೊರತಾಗಿಯೂ ಬೋಧಕರು ಪದವಿ ಪಡೆಯಲು ವಿಫಲರಾದರೆ ಸರ್ಕಾರವು ಅದನ್ನು ಪರಿಗಣಿಸಿ ವೇತನ ವಸೂಲಾತಿಯನ್ನು ಶೇಕಡಾ 50 ಕ್ಕೆ ಸೀಮಿತಗೊಳಿಸಬಹುದು ಎಂದು ಸೆಕ್ಷನ್ 10 ರ ಉಪನಿಯಮ(ಎಂ) ರಲ್ಲೇ ಮತ್ತೆ ಅವಕಾಶ ಕಲ್ಪಿಸಿರುತ್ತದೆ. ಇದಕ್ಕೆ ಪೂರಕವಾಗಿ ಎಐಸಿಟಿಇ ನವದೆಹಲಿಯು ಸಹ ಮಾರ್ಗಸೂಚಿಯನ್ನು ನೀಡಿರುತ್ತದೆ. ಆದರೂ ಸಹ ಈ ಹಿಂದೆ ಸರ್ಕಾರವು ವೇತನ ವಸೂಲಿ ಮಾಡಲು ಮುಂದಾದಾಗ ಅದನ್ನು ಹಲವು ಬೋಧಕರು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ ವಿವಿಧ ಪ್ರಕರಣಗಳಲ್ಲಿ ನ್ಯಾಯಾಲಯ ತಡವಾಗಿಯಾದರೂ ವಿಶ್ವವಿದ್ಯಾನಿಲಯಗಳ ನಿಯಮಗಳಂತೆ ಪದವಿ ಪಡೆದ ಬೋಧಕರ ಪರವಾಗಿ ಆದೇಶ ನೀಡಿದ್ದು, ನಂತರ ಸರಕಾರ ಇದರ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿ ಪ್ರಕರಣದಲ್ಲೂ ಬೋಧಕರ ಪರವಾಗಿಯೇ ಆದೇಶ ಬಂದಿರುತ್ತದೆ.

ಈ ಮೇಲ್ಮನವಿ ಪ್ರಕರಣದ (ನಂ. 1754/2014) ಆದೇಶದ ವಿರುದ್ಧ ಸರ್ಕಾರವಾಗಲಿ ಅಥವಾ ಇಲಾಖೆಯಾಗಲೀ ರಿವ್ಯೂ ಪಿಟಿಷನ್ ಸಲ್ಲಿಸಲು ವಿಫಲವಾಗಿ ಕಾಲಾವಕಾಶ ಮುಗಿದಿದ್ದರೂ ಹಿಂದಿನ ಪ್ರಕರಣಗಳ ಉಚ್ಚನ್ಯಾಯಾಲಯದ ಅಂತಿಮ ಆದೇಶವನ್ನು ಪರಿಗಣಿಸದೇ, ಕೆಸಿಎಸ್ ನಿಯಮ 61(3) ಅಪ್ಪೆಂಡಿಕ್ಸ್ 2ಎ ರ ಸೆಕ್ಷನ್ 10 ರ ಉಪನಿಯಮ(ಎಲ್) ಮತ್ತು ಉಪನಿಯಮ(ಎಂ)ಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆ ನಿಯೋಜನೆ ಅವಧಿಯಲ್ಲಿ ನೀಡಿದ ಪೂರ್ತಿ ವೇತನ, ಭತ್ಯೆ ವಸೂಲಾತಿ ಕೈಗೊಳ್ಳಲು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರು ಹಾಗೂ ನಿರ್ದೇಶಕರು ಇತ್ತೀಚೆಗೆ ತೆಗೆದುಕೊಂಡಿರುವ ಸಭಾ ನಿರ್ಣಯವು ವೇತನ ಬಡ್ತಿಯ ನಿರೀಕ್ಷೆಯಲ್ಲಿದ್ದ ಸುಮಾರು 40 ಬೋಧಕರಿಗೆ ಆಘಾತ ಉಂಟು ಮಾಡಿದೆ.

ಇಂತಹದೇ ಇತ್ತೀಚಿನ ಪ್ರಕರಣದಲ್ಲೂ 12/02/2021 ರಲ್ಲಿ ಬೋಧಕರ ಪರವಾಗಿ ಬಂದಿರುವ ಆದೇಶ ಇಲಾಖೆಯ ಗಮನಕ್ಕೆ ಬಂದಿದ್ದರೂ ಸಹ ಈ ಆದೇಶದ ವಿರುದ್ಧ ಇದುವರೆಗೂ ಇಲಾಖೆಯೂ ಮೇಲ್ಮನವಿ ಸಲ್ಲಿಸದೇ,

ತಡೆಯಾಜ್ಞೆ ಪಡೆಯದೇ ಪದವಿ ಪೂರ್ಣಗೊಳಿಸಿದ ಪ್ರಾಮಾಣಿಕ ಸೇವಾನಿರತ ಬೋಧಕರ ಪೂರ್ತಿ ವೇತನ ವಸೂಲಿ ಹಾಗೂ ಪದವಿ ಪೂರ್ಣಗೊಳಿಸದೇ ನಿವೃತ್ತಿಯಾಗುತ್ತಿರುವ ಬೋಧಕರ ಶೇ. 50 ರಷ್ಟು ವೇತನ ವಸೂಲಿ ಮಾಡಲು ಕೈಗೊಂಡಿರುವ ತಾರತಮ್ಯದ ನಿರ್ಣಯವನ್ನು ಮರು ಪರಿಶೀಲಿಸಿ ಸೇವಾನಿರತ ಪದವಿ ಪೂರ್ಣಗೊಳಿಸಿದ ಬೋಧಕರಿಗೆ ಆಗುತ್ತಿರುವ ಆತಂಕ ಹಾಗೂ ಅನ್ಯಾಯವನ್ನು ನಿವಾರಿಸಲು ಉನ್ನತ ಶಿಕ್ಷಣ ಇಲಾಖೆ, ಸಚಿವರು ಸೂಕ್ತ ಕ್ರಮಕ್ಕೆಗೊಳ್ಳಬೇಕೆಂದು ನೊಂದ ಬೋಧಕರು ಆಗ್ರಹಿಸಿದ್ದಾರೆ.

ಬಾಲ್ಯ ವಿವಾಹದ ಕುರಿತು ಜಾಗೃತಿ ಅಗತ್ಯ

ಗುಡಿಬಂಡೆ ತಾಲೂಕು ಬೊಮ್ಮಗಾನಹಳ್ಳಿ ಅಂಬೇಡ್ಕರ್‌ವಸತಿ ಶಾಲೆಯಯಲ್ಲಿ ಮಕ್ಕಳ ದಿನಾಚರಣೆ, ಬಾಲ್ಯ ವಿವಾಹ, ಕಾನೂನು ಜಾಗೃತಿ ಕಾರ್ಯಕ್ರಮ ನಡೆಯಿತು.

ಗುಡಿಬಂಡೆ: ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಬಾಲ್ಯ ವಿವಾಹ ಸಮಾಜಕ್ಕೆ ಮಾರಕವಾಗಿದೆ. ಬಾಲ್ಯ ವಿವಾಹದ ದುಷ್ಪರಿಣಾಮಗಳ ಕುರಿತು ಎಲ್ಲರೂ ಜಾಗೃತಗೊಂಡು, ಅದರ ನಿರ್ಮೂಲನೆಗೆ ಎಲ್ಲರೂ ಸಹಕರಿ ಸಬೇಕು ಎಂದು ಸಹಾಯಕ ಕಾನೂನು ಅಭಿರಕ್ಷಕಿ ನಸೀಮಾ ತಬಸೂಮ್ ತಿಳಿಸಿದರು.

ಗುಡಿಬಂಡೆ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಬೊಮ್ಮಗಾನಹಳ್ಳಿ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್‌ವಸತಿ ಶಾಲೆಯ ಸಹಯೋಗದಲ್ಲಿ ಮಕ್ಕಳ ದಿನಾಚರಣೆ ಹಾಗೂ ಬಾಲ್ಯ ವಿವಾಹ, ಕಾನೂನು ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಬಾಲ್ಯ ವಿವಾಹದಿಂದ ಅನೇಕ ದುಷ್ಪರಿಣಾಮಗಳು ಸಂಭವಿಸುತ್ತವೆ. ಇದರಿಂದ ಅನೇಕ ಕುಟುಂಬಗಳು ನಾಶವಾಗುತ್ತದೆ. ಜೊತೆಗೆ ಬಾಲ್ಯ ವಿವಾಹ ಎಂಬುದು ಕಾನೂನು ರೀತ್ಯ ಅಪರಾಧವಾಗಿದೆ. ಬಾಲ್ಯವಿವಾಹ ನಿರ್ಮೂಲನೆ ಕುರಿತು ಎಲ್ಲರೂ ಜಾಗೃತರಾಗಬೇಕು ಎಂದರು.

ಕಾನೂನು ಸೇವಾ ಸಮಿತಿಯ ಕಾರ್ಯನಿರ್ವಹಣಾ ಸದಸ್ಯ ಕಾರ್ಯದರ್ಶಿ ಕೆ.ಆರ್.ನಾಗಭೂಷಣ ಚಾಲನೆ ಕೊಟ್ಟರು.

ವಕೀಲರ ಸಂಘದ ಅಧ್ಯಕ್ಷ ಟಿ.ಸಿ.ಅಶ್ವತ್ಥರೆಡ್ಡಿ ಮಾತನಾ ಡಿದರು. ವಕೀಲರಾದ ನರೇಂದ್ರ, ನರಸಿಂಹ ಮೂರ್ತಿ,ಅಂಬೇಡ್ಕರ್‌ವಸತಿ ಶಾಲೆಯ ಪ್ರಾಂಶುಪಾಲೆ ಭಾಗ್ಯಮ್ಮ, ನ್ಯಾಯಾಲಯದ ಸಿಬ್ಬಂದಿಯಾದ ಸುರೇಶ್ ಇದ್ದರು..

ನಿವೃತ್ತ ತಹಸೀಲ್ದಾರ್‌ಹೆಸರಿನಲ್ಲಿ ವಂಚನೆ, ನಕಲಿ ಸಾಗುವಳಿ ಚೀಟಿ !

ಧನಂಜಯ್,ಚಿಕ್ಕನಾಯಕನಹಳ್ಳಿ

ರಾಜ್ಯದ ಕಂದಾಯ ಇಲಾಖೆಯ ವಿಶ್ವಾಸರ್ಹತೆಗೆ ಸವಾಲೆಸೆಯುವಂತಹ ಒಂದು ಬೃಹತ್ ವಂಚನೆ ಪ್ರಕರಣ ಚಿಕ್ಕನಾಯಕನಹಳ್ಳಿ ತಾಲೂನಲ್ಲಿ ಬೆಳಕಿಗೆ ಬಂದಿದೆ. ನಿವೃತ್ತ ತಹಸೀಲ್ದಾರ್‌ಅವರ ನಕಲಿ ಸಹಿ ಮತ್ತು ಕಚೇರಿ ಸೀಲ್ ಬಳಸಿ ನೂರಾರು ನಕಲಿ ಸಾಗುವಳಿ ಚೀಟಿಗಳನ್ನು ವಿತರಿಸಿರುವ ಆಘಾತಕಾರಿ ಹಗರಣ ನಡೆದಿದೆ. ಇದರ ಹಿಂದೆ ಸಂಘಟಿತ ಅಫರಾಧ ಜಾಲದ ಕೈವಾಡ ಇರುವ ಶಂಕೆ ವ್ಯಕ್ತವಾಗಿದ್ದು, ತಾಲ್ಲೂಕು ಕಚೇರಿಯ ಕೆಲ ಸಿಬ್ಬಂದಿ ಶಾಮೀಲಾಗಿರುವ ಬಲವಾದ ಆರೋಪ ಕೇಳಿಬಂದಿದೆ.

ಹಗರಣ ಬಯಲು: ಸಾಗುವಳಿ ಪತ್ರಗಳನ್ನು ಸಾರ್ವಜನಿಕವಾಗಿ ರೈತರಿಗೆ ವಿತರಿಸದೆ, ಒಂದು ಗುಂಪಿಗೆ ಮಾತ್ರ ನೀಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಹುಳಿಯಾರು ಹೋಬಳಿಯ ದಸೂಡಿ, ಮರೆನಡು ಗ್ರಾಮದವರು ದಸೂಡಿ ಗ್ರಾಮದ ರ್ವೆ ನಂ 6 ರ ಸರಕಾರಿ ಜಾಗಕ್ಕೆ ಸಾಗುವಳಿ ಚೀಟಿ ಪಡೆದು ಆ ಜಮೀನಿನ ಮಾಲಿಕತ್ವಕ್ಕಾಗಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ದಾಖಲೆಗಳ ಪರಿಶೀಲನೆ ವೇಳೆ ವಿತರಣೆಯಾಗಿರುವ ಚೀಟಿಗಳ ನಮೂನೆ, ಸೀರಿಯಲ್ ಸಂಖ್ಯೆ ಮತ್ತು ವಿಶೇಷವಾಗಿ ತಹಸೀಲ್ದಾರ್‌ಅವರ ಸಹಿ ಮತ್ತು ಸೀಲ್ ಪೂರ್ತಿ ನಕಲಿಯಾಗಿರುವುದು ಧೃಡಪಟ್ಟಿದೆ.

ಅರ್ಜಿದಾರರೇ ಟಾರ್ಗೇಟ್ : ಕಂದಾಯ ಇಲಾಖೆಯ ಯಾವುದೇ ಮೂಲ ದಾಖಲೆ ಅಥವಾ ರಿಜಿಸ್ಟರ್ನಲ್ಲಿ ಅವುಗಳ ನಮೂದು ಇಲ್ಲದಿರುವುದು ಧೃಡಪಟ್ಟಿದೆ. ನಮೂನೆ 50 ಮತ್ತು 53 ರ ಅಡಿಯಲ್ಲಿ ಬಗರ್‌ಹುಕುಂಗೆ ಅರ್ಜಿ ಸಲ್ಲಿಸಿದ ರೈತರನ್ನು ಗುರಿಯಾಗಿಸಲಾಗಿದೆ. ಆದರೆ ಈ ರೈತರು ನಿಜವಾಗಿ ವಂಚನೆಯ ಜಾಲಕ್ಕೆ ಬಿದ್ದಿದ್ದಾರೆಯೇ ಅಥವಾ ಅವರೇ ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆಯೇ ಎಂಬುದು ತನಿಖೆಯಿಂದ ಬಯಲಾಗಬೇಕಿದೆ.

ಅಧಿಕಾರಿಗಳ ಶಾಮಿಲು ?: ನಕಲಿ ಸಾಗುವಳಿ ಚೀಟಿಗಳ ಸೃಷ್ಟಿಗಾಗಿ 2018 ರಲ್ಲಿ ತಹಸೀಲ್ದಾರ್ ಆಗಿದ್ದ ಶಿವಲಿಂಗಮೂರ್ತಿ ಅವರ ನಕಲಿ ಸಹಿ ಮತ್ತು ಕಚೇರಿ ಸೀಲ್ ಬಳಸಲಾಗಿದೆ. ಈ ಕೃತ್ಯದಲ್ಲಿ ನೇರವಾಗಿ ರಿಯಲ್ ಎಸ್ಟೇಟ್ ಏಜೆಂಟರು, ಕೆಲವು ಮಾಜಿ ಕಂದಾಯ ಇಲಾಖೆ ತಾತ್ಕಾಲಿಕ ಸಿಬ್ಬಂದಿ ಮತ್ತು ಅವರ ಜೊತೆ ಪ್ರಸ್ತುತ ಕಚೇರಿಯಲ್ಲಿರುವ ಕೆಲವೇ ಕೆಲವು ಸರಕಾರಿ ನೌಕರರು ಶಾಮೀಲಾಗಿರುವ ಬಲವಾದ ಶಂಕೆ ವ್ಯಕ್ತವಾಗಿದೆ. ಸಾಮಾಜಿಕ ಹೋರಾಟಗಾರರಾದ ನಿರುವಗಲ್ ಗೋಪಿಕೃಷ್ಣ ಪ್ರತಿಕ್ರಿಯಿಸಿ, ತಹಸೀಲ್ದಾರ್‌ಕಚೇರಿಯೊಳಗಿನವರ ನೆರವಿಲ್ಲದೆ ಈ ಹಗರಣ ಮಾಡಲು ಸಾಧ್ಯವಿಲ್ಲ. ನಕಲಿ ಸಾಗುವಳಿ ಚೀಟಿ ಪಡೆದವರು ಸಹ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಈಗಾಗಲೇ ಹಲವು ದಾಖಲೆಗಳನ್ನು ಚಿಕ್ಕನಾಯಕನಹಳ್ಳಿ ಪೋಲೀಸರು ಪರಿಶೀಲಿಸಿದ್ದು ಅಂತರಿಕ ತನಿಖೆ ನಡೆಯುತ್ತಿದೆ. ಈ ಗಂಭೀರ ಪ್ರಕರಣ ಕಂದಾಯ ಇಲಾಖೆಯಲ್ಲಿನ ವಿಶ್ವಾಸರ್ಹತೆ ಕುಗ್ಗಿಸಿ ದೊಡ್ಡ ಆತಂಕವನ್ನು ಸೃಷ್ಟಿಸಿದೆ.

ನಕಲಿ ಪತ್ರಗಳ ಜಾಲವನ್ನು ಭೇದಿಸಿ ಫಲಾನುಭವಿಗಳಿಗೆ ನ್ಯಾಯ ಒದಗಿಸಲು ಮತ್ತು ಸರಕಾರಿ ಭೂಮಿಯನ್ನು ರಕ್ಷಿಸಲು ಸಮಗ್ರ ತನಿಖೆ, ಪರಿಶೀಲನೆ ನಡೆಯಲೇಬೇಕಿದೆ..

ಮತಗಳ್ಳತನ ಮತದಾನದ ಹಕ್ಕಿಗೆ ಮಾರಕ

ಶಿಡ್ಲಘಟ್ಟ : ದೇಶದ ಜನತೆ ಇವಿಎಂ ಮತಯಂತ್ರ ವ್ಯವಸ್ಥೆಯ ಚುನಾವಣೆ ಮೇಲೆ ವಿಶ್ವಾಸವಿಟ್ಟಿದ್ದಾರೆ. ಆದರೆ ಬಿಜೆಪಿ ತನ್ನ ಗೆಲುವಿಗೆ ಅನುಕೂಲವಾಗುವಂತೆ ಮತದಾರರ ಪಟ್ಟಿಯನ್ನು ರೂಪಿಸಿ ಮತಗಳ್ಳತನ ಮಾಡುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಹಾಗೂ ಕೆಪಿಸಿಸಿ ಸಂಯೋಜಕ ರಾಜೀವ್ ಗೌಡ ಆರೋಪಿಸಿದರು.ನಗರದ ಕಾಂಗ್ರೆಸ್ ಭವನದಲ್ಲಿ ಮತಗಳ್ಳತನದ ವಿರುದ್ಧ ರಾಹುಲ್ ಗಾಂಧಿ ನಡೆಸುತ್ತಿರುವ ಜನಜಾಗೃತಿ ಅಭಿಯಾನದ ಸಹಿ ಸಂಗ್ರಹ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.ಮತ ಕಳ್ಳತನವನ್ನು ತಡೆಯಬೇಕಿದ್ದ ಚುನಾವಣಾ ಆಯೋಗ ಕಾಂಗ್ರೆಸ್ ಪಕ್ಷವನ್ನು ಸಾಕ್ಷಿ ಕೇಳುತ್ತಿರುವುದು ವಿಪರ್ಯಾಸ.ಕೇಂದ್ರದ ಬಿಜೆಪಿ ಸರಕಾರ ಚುನಾವಣೆ ಆಯೋಗದ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಹಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯನ್ನು ಪಕ್ಷದ ಪರವಾಗಿ ತಿರುಗಿಸುವ ಪ್ರಯತ್ನ ನಡೆಯುತ್ತಿರುವುದು ಪ್ರಜಾತಂತ್ರದ ಮೂಲತತ್ವಗಳ ಮೇಲಿನ ನೇರ ದಾಳಿಯಾಗಿದೆ' ಎಂದು ಕಿಡಿಕಾರಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ ಮಾತನಾಡಿದರು.ಕೆಪಿಸಿಸಿ ಉಪಾಧ್ಯಕ್ಷ ಕೃಷ್ಣಂರಾಜು, ಜಿಲ್ಲಾ ಉಸ್ತುವಾರಿ ಉದಯ್ ಶಂಕರ್,ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಎನ್.ಕೇಶವರೆಡ್ಡಿ, ಚಿಲಕಲನೆರ್ಪು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ,ಅನಂಪಲ್ಲಿ ಕೃಷ್ಣಾರೆಡ್ಡಿ , ಮುಖಂಡರಾದ ಬೆಳ್ಳೂಟಿ ವೆಂಕಟೇಶ್ ,ಕೆ.ಗುಡಿಯಪ್ಪ,ಬ್ಯಾಟರಾಯಶೆಟ್ಟಿ, ಮುತ್ತೂರು ವೆಂಕಟೇಶ್, ನಾಗನರಸಿಂಹ, ಗಾಯತ್ರಿ,ಯಾಸ್ಮಿನ್ ತಾಜ್, ಇದ್ದರು.

ಸಮಾಚಾರ ಸಣ್ಣದಲ್ಲ

ಕಾಲೇಜು ವಿದ್ಯಾರ್ಥಿ ನಾಪತ್ತೆ: ಪ್ರಕರಣ ದಾಖಲು

ಮಂಗಳೂರು: ದೇರಳಕಟ್ಟೆಯ ಖಾಸಗಿ ಕಾಲೇಜಿನ ವಿದ್ಯಾರ್ಥಿಯೊಬ್ಬ ನಾಪತ್ತೆಯಾಗಿರುವ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾಪತ್ತೆಯಾದ ವಿದ್ಯಾರ್ಥಿಯು ಕೇರಳದ ಪಾಲಕ್ಕಾಡ್ ಮೂಲದ ರಬಿಯಾ ಮತ್ತು ಅಬೂಬಕರ್‌ಅವರ ಪುತ್ರ ಮಲಿಕ್ ಅಬೂಬಕರ್‌ಎಂದು ಗುರುತಿಸಲಾಗಿದೆ. ಈತ ದೇರಳಕಟ್ಟೆಯಲ್ಲಿರುವ ಖಾಸಗಿ ಕಾಲೇಜಿನಲ್ಲಿ ಬಿಎನ್ವೈಎಸ್ ಅಧ್ಯಯನ ಮಾಡುತ್ತಿದ್ದು, ಅಬ್ದುಲ್ ಷರೀಫ್ ಅವರಿಗೆ ಸೇರಿದ ಪಿಜಿ ವಸತಿಯಲ್ಲಿ ವಾಸಿಸುತ್ತಿದ್ದನು. ವರದಿಗಳ ಪ್ರಕಾರ, ನವೆಂಬರ್13ರ ರಾತ್ರಿ ಮಲಿಕ್ ಊಟಕ್ಕೆ ಹೊರಗೆ ಹೋಗುವುದಾಗಿ ತನ್ನ ಪಿಜಿಯಿಂದ ಹೋಗಿದ್ದಾನೆ. ಆದರೆ ನಂತರ ಹಿಂತಿರುಗದೆ ನಾಪತ್ತೆಯಾಗಿದ್ದಾನೆ. ಮಲಿಕ್ನ ಸೋದರಮಾವ ಹಾಗೂ ಫಿಸಿಯೋಥೆರಪಿ ವೈದ್ಯರಾದ ಅಜ್ಮಲ್ ಟಿ.ಎ. ಅವರು ನೀಡಿದ ದೂರಿನ ಮೇರೆಗೆ ಉಳ್ಳಾಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಧರ್ಮಸ್ಥಳದಲ್ಲಿ ಹೊಸ ಕಟ್ಟೆ ಉತ್ಸವ

ಉಜಿರೆ: ಧರ್ಮಸ್ಥಳದಲ್ಲಿ ಲಕ್ಷ ದೀಪೋತ್ಸವದ ಸಂದರ್ಭ ಶನಿವಾರ ರಾತ್ರಿ ಹೊಸಕಟ್ಟೆ ಉತ್ಸವ ಕೂಡ ನಡೆಯಿತು. ಶ್ರೀಕ್ಷೇತ್ರದಲ್ಲಿ ಸಾವಿರಾರು ಭಕ್ತರು ಶ್ರದ್ಧಾ-ಭಕ್ತಿಯಿಂದ ಉತ್ಸವ ವೀಕ್ಷಿಸಿ ಧನ್ಯತೆ ಪಡೆದು ಪುನೀತರಾದರು.

ಶ್ರೀ ಕಂಠೀರವ ಸುಡಿಯೋಸ್ ಅಧ್ಯಕ್ಷರ ಜಿಲ್ಲಾ ಪ್ರವಾಸ

ಶಿವಮೊಗ್ಗ,: ಬೆಂಗಳೂರು ಶ್ರೀ ಕಂಠೀರವ ಸ್ಟುಡಿಯೋಸ್ ಅಧ್ಯಕ್ಷ ಮಹಬೂಬ್ ಪಾಷರವರು ನ.22 ಮತ್ತು 23 ರಂದು ಶಿವಮೊಗ್ಗ ಜಿಲ್ಲೆ ಪ್ರವಾಸ ಕೈಗೊಳ್ಳಲಿದ್ದಾರೆ. ನ.22 ರಂದು ಮಧ್ಯಾಹ್ನ 1 ಗಂಟೆಗೆ ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ನ. 23 ರಂದು ಸಂಜೆ 4.30ಕ್ಕೆ ಬೆಂಗಳೂರಿಗೆ ವಾಪಾಸ್ ತೆರಳಲಿದ್ದಾರೆ ಎಂದು ಅಧ್ಯಕ್ಷರ ಆಪ್ತ ಸಹಾಯಕರು ತಿಳಿಸಿದ್ದಾರೆ.

ಕಾಣೆಯಾದ ವಿದ್ಯಾರ್ಥಿನಿ: ಮಾಹಿತಿ ನೀಡಲು ಮನವಿ

ಶಿವಮೊಗ್ಗ: ಆಗುಂಬೆ ಪೊಲೀಸ್ ಠಾಣಾ ವ್ಯಾಪ್ತಿಯ ಬಗ್ಗೊಡಿಗೆ ಗ್ರಾಮದ ಕೊರೊಡಿ ಆನಂದ್ ಹೆಚ್. ಎಸ್. ಎಂಬುವವರ ಮಗಳು ಈಶಾನ್ಯ ಎಂಬ 19 ವರ್ಷದ ಯುವತಿ ಶಿವಮೊಗ್ಗದ ವಸುಂಧರ ಹಾಸ್ಟೆಲ್ನಲ್ಲಿದ್ದುಕೊಂಡು ಸ.ಪ್ರ.ದ.ಕಾಲೇಜಿನಲ್ಲಿ 2ನೇ ವರ್ಷದ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದಳು. ಮನೆಯಿಂದ ಕಾಲೇಜ್ಗೆ ಹೋಗುವುದಾಗಿ ನ. 10 ರಂದು ಹೊರಟವಳು ಕಾಣೆಯಾಗಿದ್ದಾಳೆ. ಈಕೆಯ ಚಹರೆ 5 ಅಡಿ ಎತ್ತರ, ದೃಢವಾದ ಮೈಕಟ್ಟು, ದುಂಡುಮುಖ,ಎಣ್ಣೆಗಪ್ಪು ಮೈ ಬಣ್ಣ, ಎಡ ತುಟಿಯ ಮೇಲ್ಭಾಗ ರಾಗಿ ಕಾಳು ಗಾತ್ರದ ಕಪ್ಪುಮಚ್ಚೆ ಇರುತ್ತದೆ. ಕನ್ನಡ ಮಾತನಾಡಲು, ಓದಲು ಬರೆಯಲು ತಿಳಿದಿದ್ದು, ಮನೆಯಿಂದ ಹೋಗುವಾಗ ಕೆಂಪು ಬಣ್ಣದ ಚೂಡಿದಾರ್‌ಬಿಳಿ ಬಣ್ಣದ ವೇಲ್ ಧರಿಸಿರುತ್ತಾಳೆ. ಈ ಯುವತಿಯ ಪತ್ತೆಯಾದಲ್ಲಿ ಎಸ್.ಪಿ. ಶಿವಮೊಗ್ಗ -08182-261400, ಡಿವೈಎಸ್ಪಿ ತೀರ್ಥಹಳ್ಳಿ - 08181 ೨೨೦ 220388, ಸಿಪಿಐ ಮಾಳೂರು- 9480803333/ಪಿಎಸ್ಐ ಆಗುಂಬೆ - 9480803314, ಸಂಪರ್ಕಿಸಿ ಮಾಹಿತಿ ನೀಡುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿವೇತನ ಅವಧಿ ವಿಸ್ತರಣೆ

ಶಿವಮೊಗ್ಗ: ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಅಲೆಮಾರಿ/ಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯ ನೀಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಕಡೆಯ ದಿನಾಂಕವನ್ನು ನ.25ರವರೆಗೆ ವಿಸ್ತರಿಸಲಾಗಿದೆ. ಆಸಕ್ತರು ವೆಬ್ಸೈಟ್ https://ssp.postmatric.karnataka.gov.in ಮೂಲಕ ನ.25 ರೊಳಗಾಗಿ ಆನ್ಲೈನ್ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ https://bcwd.karnataka.gov.in ವೆಬ್ಸೈಟ್ಗೆ ಭೇಟಿ ನೀಡಬಹುದು.

{ಯು.ಟಿ.ಖಾದರ್} ವಿಧಾನಸಭೆ ಸಭಾಪತಿ

ಗ್ರಾಮೀಣ ಭಾಗದ ಜನರ, ಮಹಿಳೆಯರ ಸ್ವಾವಲಂಬನೆ ಗೆ ದೇಶಾದ್ಯಂತ ವ್ಯಾಪಿಸಿರುವ ಸಹಕಾರ ಸಂಸ್ಥೆಗಳು ಕೊಡುಗೆ ನೀಡಿವೆ. ಧ್ವನಿ ಇಲ್ಲದವರಿಗೆ, ದುರ್ಬಲರಿಗೆ ಶಕ್ತಿ ನೀಡಿವೆ. ಕರಾವಳಿಯ ಮಹಿಳೆಯರ ಸ್ವಾಭಿಮಾನದ ಬದುಕಿಗೆ ಸಹಕಾರ ಕ್ಷೇತ್ರ ಮಹತ್ವದ ಕೊಡುಗೆ ನೀಡಿದೆ. ರಾಷ್ಟ್ರೀಕೃತ ಬ್ಯಾಂಕ್ ಗಳು ಸಾಲ ನೀಡಲು ಹಿಂದೇಟು ಹಾಕುತ್ತದ್ದ ಸಂದರ್ಭದಲ್ಲಿ ಸಹಕಾರಿ ಬ್ಯಾಂಕ್ ಸುಲಭವಾಗಿ ಸಾಲ ನೀಡಿ ಸಹಕರಿಸಿವೆ.

72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭ | ಸ್ಪೀಕರ್‌ಯು.ಟಿ.ಖಾದರ್‌ಚಾಲನೆ

ಗ್ರಾಮೀಣ ಜನತೆಗೆ ಶಕ್ತಿ ನೀಡಿದ ಸಹಕಾರ ಕ್ಷೇತ್ರ

ಮಂಗಳೂರು: ಸಹಕಾರರಂಗ ದೇಶದ ಗ್ರಾಮೀಣ ಜನರ ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡುವ ಮೂಲಕ ಗ್ರಾಮೀಣ ಜನರಿಗೆ ಶಕ್ತಿ ನೀಡಿದೆ. ದೇಶದ ಅಭಿವೃದ್ಧಿಗೆ ಸಹಕಾರರಂಗ ಅಪಾರ ಕೊಡುಗೆ ನೀಡುತ್ತಿದೆ ಎಂದು ವಿಧಾನ ಸಭಾ ಸ್ಪೀಕರ್‌ಯು.ಟಿ.ಖಾದರ್‌ಶ್ಲಾಘಿಸಿದರು.

ಅವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 'ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು' ಎಂಬ ಧ್ಯೇಯ ವಾಕ್ಯ ದೊಂದಿಗೆ ಕರಾವಳಿ ಉತ್ಸವ ಮೈದಾನದಲ್ಲಿ ಭಾನುವಾರ ಆಯೋಜಿಸಿದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ 2025ನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಜನರ, ಮಹಿಳೆಯರ ಸ್ವಾವಲಂಬನೆ ಗೆ ದೇಶಾದ್ಯಂತ ವ್ಯಾಪಿಸಿರುವ ಸಹಕಾರ ಸಂಸ್ಥೆಗಳು ಕೊಡುಗೆ ನೀಡಿದೆ. ಧ್ವನಿ ಇಲ್ಲದವರಿಗೆ, ದುರ್ಬಲರಿಗೆ ಶಕ್ತಿ ನೀಡಿದೆ. ಕರಾವಳಿಯಲ್ಲಿ ಮಹಳೆಯರ ಸ್ವಾಭಿಮಾನದ ಬದುಕಿಗೆ ಸಹಕಾರ ಕ್ಷೇತ್ರ ಮಹತ್ವದ ಕೊಡುಗೆ ನೀಡಿದೆ. ರಾಷ್ಟ್ರೀಕೃತ ಬ್ಯಾಂಕ್ ಗಳು ಸಾಲ ನೀಡಲು ಹಿಂದೇಟು ಹಾಕಿದ ಸಂದರ್ಭದಲ್ಲಿ ರಾಜೇಂದ್ರ ಕುಮಾರ್‌ಅವರ ನೇತೃತ್ವದ ಸಹಕಾರಿ ಬ್ಯಾಂಕ್ ಸಾಲ ನೀಡಿ ಹಲವು ಸಂಸ್ಥೆಗಳ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಈ ಸಹಕಾರ ರಂಗ ಮುಂದಿನ ದಿನಗಳಲ್ಲಿ ದೇಶದ ಅಭಿವೃದ್ಧಿಗೆ ಇನ್ನಷ್ಟು ಕೊಡುಗೆಯನ್ನು ನೀಡುವಂತಾಗಲಿ ಎಂದು ಶುಭ ಹಾರೈಸಿದರು.

ಎಸ್ ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ಸಹಕಾರ ಬ್ಯಾಂಕ್ ಜಿಲ್ಲೆಯ ಜನರ ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುತ್ತಾ ಬಂದಿದೆ. ರಾಷ್ಟ್ರೀಕೃತ ಬ್ಯಾಂಕ್ ಗಳಿಗೆ ಸರಿಸಾಟಿಯಾಗಿ ರೈತರ ಆರ್ಥಿಕ ಅಗತ್ಯ ಗಳಿಗೆ ಶಿಕ್ಷಣ, ಮದುವೆ ಸೇರಿದಂತೆ ತುರ್ತು ಅಗತ್ಯ ಗಳಿಗೆ ಸ್ಪಂದಿಸಿದೆ. 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು 'ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು' ಎಂಬ ಧ್ಯೆಯವಾಕ್ಯದೊಂದಿಗೆ ಈ ಬಾರಿ ಆಚರಿಸಲಾಗುತ್ತಿದೆ. ಸಪ್ತಾಹದ ಆಚರಣೆಯ ಸಂದರ್ಭದಲ್ಲಿ 'ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯನ್ನು ಬಲಪಡಿ ಸುವುದು' ಎಂಬ ವಿಷಯದ ಬಗ್ಗೆ ಕಾರ್ಯಕ್ರಮ ನಡೆಯಲಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಮಂಜುನಾಥ ಭಂಡಾರಿ ಮಾತನಾಡಿ, ದೇಶದಲ್ಲಿಎಂಟೂವರೆ ಲಕ್ಷ ಸಹಕಾರ ಸಂಘಗಳು ದೇಶ ಕಟ್ಟುವ ಕೆಲಸದಲ್ಲಿ ತೊಡಗಿದೆ. ರಾಜ್ಯದಲ್ಲಿ ಸಿದ್ದರಾಮಯ್ಯರ ನೇತೃತ್ವದಲ್ಲಿ ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಹಕಾರ ಸಂಘಗಳ ಮೂಲಕ ಸಾಲ ನೀಡಿ ರೈತರನ್ನು ಬೆಂಬಲಿಸಿದೆ. ಸಹಕಾರ ಕ್ಷೇತ್ರದಲ್ಲಿಯೂ ಮಹಿಳಾ ಮೀಸಲಾತಿ ನೀಡುವ ಅಗತ್ಯವಿದೆ ಎಂದರು.

ಸಮಾರಂಭದಲ್ಲಿ ಶಾಸಕರಾದ ವೇದವ್ಯಾಸ ಕಾಮತ್, ಐವನ್ ಡಿ ಸೋಜ, ಡಾ.ಮಂಜುನಾಥ ಭಂಡಾರಿ, ಕಿಶೋರ್‌ಕುಮಾರ್‌ಬೊಟ್ಯಾಡಿ, ಶಾಸಕ ಯಶ್ ಪಾಲ್ ಎ.ಸುವರ್ಣ,ನಬಾರ್ಡ್ ಮುಖ್ಯ ಪ್ರಬಂಧಕ ಡಾ. ಸುರೇಂದ್ರ ಬಾಬು, ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷ ರವಿರಾಜ ಹೆಗ್ಡೆ, ಎಸ್ ಸಿಡಿಸಿಸಿ ಬ್ಯಾಂಕ್ ನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ನಿರ್ದೇಶಕ ರಾದ ಐಕಳ ದೇವಿ ಪ್ರಸಾದ್ ಶೆಟ್ಟಿ, ಜಯರಾಜ ರೈ, ಮೋನಪ್ಪ ಶೆಟ್ಟಿ ಎಕ್ಕಾರ್,ಭಾಸ್ಕರ ಎಸ್ ಕೋಟ್ಯಾನ್, ಟಿ.ಜಿ.ರಾಜರಾಮಭಟ್ ಸದಾಶಿವ ಉಳ್ಳಾಲ್, ಶಶಿ ಕುಮಾರ್‌ರೈ ಬಾಲ್ಯೋಟ್ಟು, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ರಾಜ್ಯ ಸಹಕಾರ ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ನವೀನ್, ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ಕರ್ನಾಟಕ ಸಹಕಾರ ಸಂಘಗಳ ರಾಜ್ಯ ನಿಬಂಧಕ ಟಿ.ಎಚ್.ಎಂ.ಕುಮಾರ್,ಸ್ಕ್ಯಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ, ಸಹಕಾರಿ ಇಲಾಖೆಯ ಉಪ ರಿಜಿಸ್ಟ್ರಾರ್‌ರಮೇಶ್ ಮೊದಲಾದ ವರು ಉಪಸ್ಥಿತರಿದ್ದರು.

ವಿಧಾನ ಸಭಾ ಸ್ಪೀಕರ್‌ಯು.ಟಿ.ಖಾದರ್ ಅವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕರಾವಳಿ ಉತ್ಸವ ಮೈದಾನದಲ್ಲಿ ಭಾನುವಾರ ಆಯೋಜಿಸಿದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ 2025ನ್ನು ಉದ್ಘಾಟಿಸಿ ಮಾತನಾಡಿದರು.

ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ

ರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ ಮಾತನಾಡಿ, ಸಹಕಾರ ರಂಗದ ಮೂಲಕ ಮಹಿಳೆಯರ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವುದು ಶ್ಲಾಘನೀಯ. ಸಹಕಾರ ಕ್ಷೇತ್ರ ಸರ್ವರ ಅಭಿವೃದ್ಧಿಗೆ ಪಕ್ಷಾತೀತವಾಗಿ, ಜಾತ್ಯತೀತ ವಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಸಹಕಾರ ಕ್ಷೇತ್ರದ ಮೂಲಕ ಅಭಿವೃದ್ಧಿ ಸಾಧಿಸಬೇಕಾಗಿದೆ. ರಾಜ್ಯದಲ್ಲಿ ಒಂದು ಕೋಟಿ ಲೀಟರ್‌ಹಾಲು ಉತ್ಪಾದನೆಯಾಗುತ್ತಿದೆ. ಸಹಕಾರ ಕ್ಷೇತ್ರ ಉತ್ತಮ ನಾಯಕತ್ವವನ್ನು ನೀಡಿದೆ ಎಂದರು.

ವರ್ಣ ರಂಜಿತ ಮೆರವಣಿಗೆ:

ಸಹಕಾರ ಸಪ್ತಾಹದ ಸಮಾರಂಭದ ಅಂಗವಾಗಿ ವರ್ಣ ರಂಜಿತ ಮೆರವಣಿಗೆ ನಡೆಯಿತು ಭುವನೇಶ್ವರಿ ದೇವಿಯ ಸ್ತಬ್ಧಚಿತ್ರ, ಪುರುಷರ ಹಾಗೂ ಮಹಿಳೆಯರ ಡೊಳ್ಳು ಕುಣಿತ, ಮೊಳಹಳ್ಳಿ ಶಿವರಾವ್ ಸ್ತಬ್ಧಚಿತ್ರ, ಮಹಿಳೆಯರ ವೀರಗಾಸೆ, ವಿಭಿನ್ನ ಕಾಯಕ ವೃತ್ತಿ ಬಿಂಬಿಸುವ 50ಕ್ಕೂ ಅಧಿಕ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ವಿಶೇಷ ಆಕರ್ಷಣೆಯಾಗಿತ್ತು.

ಸಹಕಾರ ಮಾಣಿಕ್ಯ ಪ್ರಶಸ್ತಿ:

ಈ ವೇಳೆ 'ಸಹಕಾರ ಮಾಣಿಕ್ಯ ಪ್ರಶಸ್ತಿ'ಯನ್ನು 3 ಸಹಕಾರ ಸಂಸ್ಥೆಗಳಿಗೆ ನೀಡಲಾಯಿತು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಲಾ 1 ಉತ್ತಮ ಕೃಷಿಪತ್ತಿನ ಸಹಕಾರಿ ಸಂಘಗಳನ್ನು ಹಾಗೂ 1 ಪತ್ತಿನ ಸಹಕಾರಿ ಸಂಘವನ್ನು 2025ನೇ ಸಾಲಿನ 'ಸಹಕಾರ ಮಾಣಿಕ್ಯ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯ ಜೊತೆಗೆ 5 ಗ್ರಾಂ ಚಿನ್ನದ ಪದಕ. 10.000 ರೂ. ನಗದು ಹಾಗೂ ಪಾರಿತೋಷಕವನ್ನು ನೀಡಲಾಗುವುದು. ಎಸ್ ಸಿ ಡಿ ಸಿ ಸಿ ಬ್ಯಾಂಕ್ ವತಿಯಿಂದ ರಾಜ್ಯ ಸಹಕಾರ ಮಹಾಮಂಡಳ ಶಿಕ್ಷಣ ನಿಧಿಗೆ 1.62 ಕೋಟಿ ರು. ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡರ ಮೂಲಕ ಎಸ್ ಸಿ ಡಿ ಸಿ ಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್‌ಹಸ್ತಾಂತರಿಸಿದರು.

ಮೂಲಸೌಕರ್ಯ ಅಭಿವೃದ್ಧಿಗೆ ಮೊದಲ ಆದ್ಯತೆ

ರಾಮನಗರ: ತಾಲೂಕಿನ ಮೂಲಸೌಕರ್ಯ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದೆ. ಯಾವುದೇ ಗ್ರಾಮ ಸೌಲಭ್ಯದಿಂದ ವಂಚಿತವಾಗದಂತೆ ನೋಡಿಕೊಳ್ಳಲು ಹಲವು ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಬಿನ್ನಿಕುಪ್ಪೆ ಗ್ರಾಮ ಪಂಚಾಯಿತಿ ಭಾಗದಲ್ಲಿ ಶನಿವಾರ ಶಾಸಕ ಇಕ್ಬಾಲ್ ಹುಸೇನ್ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿನ್ನಿಕುಪ್ಪೆ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕಿದೆ. ವಿಶೇಷವಾಗಿ ರಸ್ತೆ, ಚರಂಡಿ ಕುಡಿಯುವ ನೀರು, ಆಸ್ಪತ್ರೆ, ಶಾಲೆಗಳು ನಿರ್ಮಾಣ ವಾಗಬೇಕಿದೆ. 4.5 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದೆ ಎಂದರು.

ಕಳೆದ 20 ವರ್ಷಗಳಿಂದ ಬನ್ನಿಕುಪ್ಪೆ ಭಾಗದಲ್ಲಿ ರಸ್ತೆ ಹಾಗೂ ಚರಂಡಿ ಕೆಲಸಕ್ಕೆ ಆದ್ಯತೆ ನೀಡಿರಲಿಲ್ಲ. ಹಾಗಾಗಿ ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಗ್ಯಾರಂಟಿ ಯೋಜನೆ ಜೊತೆಗೆ ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತಿದ್ದು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದೆ ಎಂದು ಹೇಳಿದರು.

ಅರ್ಹರಿದ್ದು, ರೇಷನ್ ಕಾರ್ಡ್ ಕಡಿತವಾಗಿರುವುದು ಗಮನಕ್ಕೆ ಬಂದಿದೆ. ಈ ಸಮಸ್ಯೆ ಬಗೆಹರಿಸಲು ಪ್ರಯತ್ನಮಾಡಲಾಗುತ್ತದೆ. ಬಗರ್ಹುಕುಂ ಸಾಗುವಳಿ ಚೀಟಿ ಬಾಕಿ ಇರುವ ಅರ್ಜಿಗಳನ್ನು ಶೀಘ್ರದಲ್ಲಿಯೇ ವಿಲೇ ಮಾಡಲಾಗುತ್ತದೆ. ನಮೂನೆ 53ರ ಅರ್ಜಿಗಳನ್ನು ಶೀಘ್ರದಲ್ಲಿಯೆ ವಿಲೇ ಮಾಡಲಾಗುತ್ತದೆ. ಈ ಹಿಂದೆ ಬಗರ್ಹುಕುಂ ಸಾಗುವಳಿ ಸಾಕಷ್ಟು ರಾಜಕಾರಣ ನಡೆದಿದೆ. ಸರಿಯಾದ ರೀತಿಯಲ್ಲಿ ಅದರಲ್ಲೂಜಾತ್ಯಾತೀತವಾಗಿ, ಪಕ್ಷಾತೀತವಾಗಿ ಅರ್ಜಿಗಳನ್ನು ಈ ಹಿಂದೆ ವಿಲೇ ಮಾಡಲಾಗಿಲ್ಲ. ಅವರಿಗೆ ಬೇಕಾದವರಿಗೆ ವಿಲೇ ಮಾಡಿದ್ದಾರೆ. ಇನ್ನು ಕೆಲವನ್ನು ವಜಾಗೊಳಿಸಲಾಗಿದೆ. ಈ ರೀತಿಯ ಎಲ್ಲವನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕ್ಷೇತ್ರಕ್ಕೆ 5ರಿಂದ 6 ಕರ್ನಾಟಕ ಪಬ್ಲಿಕ್ ಶಾಲೆ ಮಂಜೂರಾಗಿದೆ. ಅಲ್ಲದೇ ಈ ಹಿಂದೆ ಡಿಸಿಎಂ ಡಿ.ಕೆ.ಶಿವಕುಮಾರ್‌ಹಾಗೂ ಮಾಜಿ ಸಂಸದ, ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಹಲ ಕಂಪನಿಗಳ ಮನವೊಲಿಸಿ ಸಿಎಸ್‌ಆರ್ ಅನುದಾನದಲ್ಲಿ ಬನ್ನಿಕುಪ್ಪೆ, ಬನವಾಸಿ, ಪಾದರಹಳ್ಳಿ, ಚೀಲೂರು, ಅವ್ವೇರಹಳ್ಳಿ ಸೇರಿದಂತೆ ಐದಕ್ಕೂ ಹೆಚ್ಚು ಸ್ಥಳಗಳಲ್ಲಿ ಹೈಟೆಕ್ ಶಾಲೆ ನಿರ್ಮಾಣವಾಗುತ್ತಿದೆ. ಮೂಲ ಸೌಕರ್ಯದ ಜತೆಗೆ ಶಿಕ್ಷಣಕ್ಕೂ ಆದ್ಯತೆ ನೀಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ. ರಾಜು, ಬನ್ನಿಕುಪ್ಪೆ ಗ್ರಾಪಂ ಅಧ್ಯಕ್ಷ ಆರ್. ರವಿಕುಮಾರ್ ,ಉಪಾಧ್ಯಕ್ಷೆ ಜ್ಯೋತಿ, ಪ್ರಾಧಿಕಾರ ಅಧ್ಯಕ್ಷ ಚೇತನ್ಕುಮಾರ್,ಗ್ಯಾರಂಟಿ ಯೋಜನೆ ತಾಲ್ಲೂಕು ಅಧ್ಯಕ್ಷ ವಿ.ಹೆಚ್.ರಾಜು ಪಿಡಿಒ ಜೈಸಿಂಹ, ಕಾರ್ಯದರ್ಶಿ ಜಯರಾಮಯ್ಯ, ಸದಸ್ಯರಾದ ಬಿ.ಸಿ.ಹೇಮಂ ತ್ಕುಮಾರ್ ,ಚಂದ್ರಗಿರಿ, ಪೂರ್ಣಿಮಾ ಶಿವಮೂರ್ತಿ,ಕುಮಾರ್,ಮುಖಂಡರುಗಳಾದ ಜಯಣ್ಣ, ಶಿವಣ್ಣ, ಕೋಟಿ ಶಿವಣ್ಣ, ವಿಷಕಂಠಯ್ಯ, ಆನಂದಗಿರಿಯಪ್ಪ, ಶಂಕರ್ ,ರಾಜು, ಪ್ರತಾಪ್, ಶ್ರೀನಿವಾಸಮೂರ್ತಿ,ನಾಗೇಶ್, ಕರಿಯಪ್ಪ, ಸ್ವಾಮಿ, ಪುಟ್ಟಸಿದ್ದಯ್ಯ, ಶಿವಲಿಂಗಯ್ಯ, ಸಿದ್ದರಾಜು, ಸದಾಶಿವಯ್ಯ, ಚಂದ್ರಯ್ಯ, ರವಿ, ಗುತ್ತಿಗೆದಾರ ಸುಂದರ್,ಎಇಇ ಪಳನಿಸ್ವಾಮಿ ಇತರರು ಇದ್ದರು.

ರಾಮನಗರ ತಾಲೂಕಿನ ಬಿನ್ನಿಕುಪ್ಪೆ ಗ್ರಾಮ ಪಂಚಾಯಿತಿ ಭಾಗದಲ್ಲಿ ಶಾಸಕ ಇಕ್ಬಾಲ್ ಹುಸೇನ್ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಜಿಲ್ಲಾ ತ್ರೈಮಾಸಿಕ ಕೆಡಿಪಿ ಸಭೆ | ಸಚಿವ ದಿನೇಶ್ ಗುಂಡೂರಾವ್ ಸೂಚನೆ

ಬೀದಿ ನಾಯಿಗಳ ಪುನರ್ವಸತಿಗೆ ಜಾಗ ನಿಗದಿಪಡಿಸಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು, ಅರಣ್ಯ, ಆರೋಗ್ಯ, ಆಯುಷ್ ಔಷಧಿಗಳು ಮತ್ತು ಕೆಂಪು ಗ್ರಾನೈಟ್ ಗಣಿಗಾರಿಕೆ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ, ನಿಗದಿತ ಪ್ರದೇಶಗಳಲ್ಲಿ ಬೀದಿ ನಾಯಿಗಳ ಸರಿಯಾದ ಪುನರ್ವಸತಿಗೆ ಕ್ರಮಕೈಗೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ಸಮಗ್ರ ಪರಿಶೀಲನಾ ಸಭೆಯಲ್ಲಿ ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ನ ನೇತ್ರಾವತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಗುಂಡೂರಾವ್, ಸುಪ್ರೀಂ ಕೋರ್ಟ್ ನಿರ್ದೇಶನಗಳಿಗೆ ಅನುಗುಣವಾಗಿ ಬೀದಿ ನಾಯಿಗಳನ್ನು ಸೂಕ್ತ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಒತ್ತಿ ಹೇಳಿದರು. ನಾವು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ಸ್ಥಳಗಳನ್ನು ಗುರುತಿಸಬೇಕು ಮತ್ತು ಅವುಗಳ ಶಾಶ್ವತ ವಸತಿಗಾಗಿ ವ್ಯವಸ್ಥೆ ಮಾಡಬೇಕು ಎಂದು ಅವರು ಹೇಳಿದರು.

ಕುಂಪಲದಲ್ಲಿ ಇತ್ತೀಚೆಗೆ ಬೀದಿ ನಾಯಿಯೊಂದು ಸ್ಥಳೀಯ ನಿವಾಸಿಯ ಮೇಲೆ ದಾಳಿ ಮಾಡಿ ಹಲ್ಲೆ ನಡೆಸಿ ಸಾವಿಗೆ ಕಾರಣವಾದ ಘಟನೆಯನ್ನು ವಿಧಾನ ಪರಿಷತ್ ಸದಸ್ಯ ಇವಾನ್ ಡಿ''ಸೋಜಾ ಪ್ರಸ್ತಾಪಿಸಿ ಸಂತ್ರಸ್ತೆಯ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಅವರು ಒತ್ತಾಯಿಸಿದರು.

ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ. ಅರುಣ್ ಕುಮಾರ್‌ಶೆಟ್ಟಿ ವಿವರಿಸಿ, ಸ್ಥಳಾಂತರ ಸಂಸ್ಥೆಗಳಿಗೆ ಟೆಂಡರ್ಗಳನ್ನು ನೀಡಲಾಗಿದೆಯಾದರೂ, ಸೂಕ್ತ ಸ್ಥಳಗಳು ಇನ್ನೂ ಲಭ್ಯವಿಲ್ಲ, ಶಾಲೆಗಳು ಮತ್ತು ಸಾರ್ವಜನಿಕ ಸ್ಥಳಗಳ ಬಳಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚುತ್ತಿದ್ದು, ಮಕ್ಕಳು ಮತ್ತು ಪೋಷಕರಲ್ಲಿ ಭಯ ಹುಟ್ಟಿಸುತ್ತಿದೆ ಎಂದು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. 'ಗ್ರಾಮೀಣಾಭಿವೃದ್ಧಿ ಮಾನದಂಡಗಳ ಅಡಿಯಲ್ಲಿ, ನಾಯಿ ಕಡಿತಕ್ಕೆ 5,000 ರೂ. ಮತ್ತು ಸಾವಿನ ಸಂದರ್ಭದಲ್ಲಿ 5 ಲಕ್ಷ ರೂ. ವರೆಗೆ ಪರಿಹಾರ ನೀಡುವ ಅವಕಾಶವಿದೆ' ಎಂದು ಡಾ. ಶೆಟ್ಟಿ ಹೇಳಿದರು.

ಆರ್ಟಿಒ ಟ್ರ್ಯಾಕ್ ನಿರ್ಮಾಣಕ್ಕಾಗಿ ಮರಗಳನ್ನು ತೆಗೆಯುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಪುತ್ತೂರು ಶಾಸಕ ಅಶೋಕ್ ರೈ ಕಳವಳ ವ್ಯಕ್ತಪಡಿಸಿದರು. ಒಂದು ವರ್ಷದ ಹಿಂದೆ 9 ಕೋಟಿ ರೂ. ಹಂಚಿಕೆ ಮಾಡಲಾಗಿತ್ತು. ಅಕೇಶಿಯಾ ಮತ್ತು ನೀಲಗಿರಿ ಮರಗಳಿಗೆ ತೆರವು ಆದೇಶಗಳನ್ನು ನೀಡಲಾಗಿದ್ದರೂ, ಕೆಲಸ ಸ್ಥಗಿತಗೊಂಡಿದೆ.2017೨೦18 ರಿಂದ ಈ ಜಾತಿಯ ಯಾವುದೇ ಹೊಸ ಮರಗಳನ್ನು ನೆಡಲಾಗಿಲ್ಲ ಮತ್ತು ಈ ವರ್ಷ 470 ಹೆಕ್ಟೇರ್‌ಪ್ರದೇಶವನ್ನು ತೆರವುಗೊಳಿಸಲಾಗಿದೆ ಎಂದು ಅರಣ್ಯ ಸಂರಕ್ಷಣಾಧಿಕಾರಿ ಆಂಥೋನಿ ಮರಿಯಪ್ಪ ಹೇಳಿದ್ದಾರೆ. ಶಾಸಕ ಭೋಜೇಗೌಡ ಅವರು ರಸ್ತೆಬದಿಗಳಲ್ಲಿ ಹಣ್ಣಿನ ಮರಗಳನ್ನು ನೆಡಲು ಅವಕಾಶ ನೀಡಬೇಕೆಂದು ಒತ್ತಾಯಿಸಿದರು.

ಚಿಕ್ಕಮಗಳೂರು ಮತ್ತು ಹಾಸನದ ರೋಗಿಗಳಿಗೆ ಮಧ್ಯವರ್ತಿಗಳ ಮೂಲಕ ಅವಧಿ ಮೀರಿದ ಆಯುಷ್ ಔಷಧಿಗಳನ್ನು ಪೂರೈಸುತ್ತಿರುವ ಬಗ್ಗೆ ಶಾಸಕ ವೇದವ್ಯಾಸ್ ಕಾಮತ್ ಕಳವಳ ವ್ಯಕ್ತಪಡಿಸಿದರು. ಗುಂಡೂರಾವ್ ಸಂಪೂರ್ಣ ತನಿಖೆಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಶಾಸಕರಾದ ಡಾ.ಭರತ್ ಶೆಟ್ಟಿ, ಹರೀಶ್, ಭಾಗೀರಥಿ ಮುರಳ್ಯ ಪ್ರತಾಪ್ ಸಿಂಗ್ ನಾಯ್ಕ್, ಸಿಇಒ ಜಿ.ಪಿ.ವಿನಾಯಕ ನರ್ವಾಡೆ, ಪೊಲೀಸ್ ಆಯುಕ್ತ ಸುಧೀರ್‌ಕುಮಾರ್‌ರೆಡ್ಡಿ, ಎಸ್ಪಿ ಅರುಣ್ ಕುಮಾರ್‌ಮತ್ತು ನಾಮನಿರ್ದೇಶಿತ ಸದಸ್ಯರು ಉಪಸ್ಥಿತರಿದ್ದರು.

ಜಿಲ್ಲೆಯ ವಿವಿಧ ಕೆರೆಗಳ ಅಭಿವೃದ್ಧಿಗೆ ನೆರವು

ಚಾಮರಾಜನಗರ: ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಅವರ ನೇತೃತ್ವದಲ್ಲಿ ನಡೆಯುತ್ತಿರುವ ಸಮ್ಮಿಲನ್ ವೇದಿಕೆ, ಜಿಲ್ಲೆಯಲ್ಲಿ ಸುಸ್ಥಿರ ಅಭಿವೃದ್ಧಿಗಾಗಿ ಸಿಎಸ್‌ಆರ್‌ಸಂಸ್ಥೆಗಳೊಂದಿಗೆ ಬಲವಾದ ಪಾಲುದಾರಿಕೆಗಳನ್ನು ನಿರ್ಮಿಸುತ್ತಿದೆ.

ಇದರ ಅಂಗವಾಗಿ, ಜೆಕೆ ಟೈರ್‌ಮತ್ತು ಇಂಡಸ್ಟ್ರೀಸ್ ಲಿಮಿಟೆಡ್ನ ಹಿರಿಯ ತಂಡ ಶುಕ್ರವಾರ ಜಿಲ್ಲೆಗೆ ಭೇಟಿ ನೀಡಿ, ಕೆರೆಗಳ ಪುನರುಜ್ಜೀವನ, ಶಿಕ್ಷಣ ಮತ್ತು ಜೀವನೋಪಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಹಕಾರ ನೀಡಲು ಆಸಕ್ತಿ ವ್ಯಕ್ತಪಡಿಸಿದೆ.

ಜೆಕೆ ಟೈರ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ನಿಯೋಗ ಆಸಕ್ತಿಯಿಂದ ಜಿಲ್ಲೆಗೆ ಭೇಟಿ ನೀಡಿದ್ದು ನಿಯೋಗದ ಉಪಾಧ್ಯಕ್ಷ ಈಶ್ವರರಾವ್, ಹಿರಿಯ ಜನರಲ್ ಮ್ಯಾನೇಜರ್ ಆರ್. ಜಗದೀಶ್, ರೋಟರಿ ಸಿಎಸ್‌ಆರ್‌ಅಧ್ಯಕ್ಷ ಕಿರಣ್ ರಾಬರ್ಟ್ ಮತ್ತು ಸಿ.ಐ.ಐ ಮೈಸೂರು ವಿಭಾಗದ ಅಧ್ಯಕ್ಷ ಕ್ಷಣ ಸ್ವಾಮಿ ತಂಡವು ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯ ದೊಡ್ಡ ಕೆರೆ, ಚಾಮರಾಜನಗರ ತಾಲೂಕಿನ ನಾಗವಳ್ಳಿ ಕೆರೆ ಹಾಗೂ ಬದನಗುಪ್ಪೆ ಕೆರೆಯಲ್ಲಿ ಯೋಜನಾ ಸಾಮರ್ಥ್ಯ ಪರಿಶೀಲನೆ ಮಾಡಿ, ಬದನಗುಪ್ಪೆ ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶಕ್ಕೂ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಕೈಗಾರಿಕೆ ಇಲಾಖೆ ಉಪನಿರ್ದೇಶಕ ದೊರೆ ರಾಜ್, ಸಹಾಯಕ ನಿರ್ದೇಶಕ ವಿಜಯಕುಮಾರ್,ಜಿಲ್ಲಾ ಸಿಎಸ್ ಆರ್‌ಸಂಯೋಜಕಿ ರಕ್ಷಿತಾ ನಾಯಕ್, ಜಿಲ್ಲಾ ಇ-ಆಡಳಿತ ಸಮಾಲೋಚಕ ಮಧುಕೇಶ್ ಹಾಗೂ ವಿವಿಧ ಅಧಿಕಾರಿಗಳು ಇದ್ದರು.

ಜೆಕೆ ಟೈರ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ನಿಯೋಗ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರನ್ನು ಭೇಟಿ ಮಾಡಿ ಅಭಿವೃದ್ಧಿ ಕುರಿತ ಒಪ್ಪಂದ ಪತ್ರ ಸಲ್ಲಿಸಿದರು.

ಬ್ರಿಲಿಯನ್ಸ್ ಡೈಮಂಡ್ ಜ್ಯುವೆಲ್ಲರಿ ಪ್ರದರ್ಶನ

ಮಂಗಳೂರು: ಜ್ಯುವೆಲ್ಲರ್‌ಜೋಯಾಲುಕ್ಕಾಸ್, ನ. 30ರ ವರೆಗೆ ಮಂಗಳೂರಿನ ತನ್ನ ಐಕಾನಿಕ್ ಫಳ್ನೀರ್‌ರಸ್ತೆಯ ತನ್ನ ಆಭರಣ ಮಳಿಗೆಯಲ್ಲಿ ಬ್ರಿಲಿಯನ್ಸ್ ಡೈಮಂಡ್ ಜ್ಯುವೆಲ್ಲರಿ ಶೋ ಆರಂಭಿಸಿದೆ. ಹಬ್ಬದ ಋತುವಿನಲ್ಲಿ ನಡೆಯುವ ಈ ಪ್ರದರ್ಶನವು ಗ್ರಾಹಕರಿಗೆ ಸೌಂದರ್ಯ,ಪ್ರತ್ಯೇಕತೆ ಮತ್ತು ಕರಕುಶಲತೆಯನ್ನು ಅತ್ಯುತ್ತಮವಾಗಿ ಪ್ರತಿಬಿಂಬಿಸುವ ವಿನ್ಯಾಸಗಳನ್ನು ಅನ್ವೇಷಿಸಲು ವಿಶೇಷ ಅವಕಾಶವನ್ನು ನೀಡುತ್ತದೆ' ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಡಾ. ಜೋಯ್ ಆಲುಕ್ಕಾಸ್ ಅಭಿಪ್ರಾಯಪಟ್ಟರು. ಈ ಅವಧಿಯಲ್ಲಿ ಗ್ರಾಹಕರು 1 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ವಜ್ರಾಭರಣಗಳ ಪ್ರತಿ ಖರೀದಿಯೊಂದಿಗೆ ಉಚಿತ ಚಿನ್ನದ ನಾಣ್ಯ ಸಿಗಲಿದೆ.

ವಿವಿ ಭ್ರಷ್ಟಾಚಾರ ಸಮಗ್ರ ತನಿಖೆಗೆ ಎಬಿವಿಪಿ ಆಗ್ರಹ

ಮಂಗಳೂರು: ವಿವಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಪ್ರಕರಣಗಳ ಸಮಗ್ರ ತನಿಖೆಗೆ ಸರಕಾರ ಕೂಡಲೇ ವಿಶೇಷ ಸಮಿತಿ, ನಿಯೋಗ ರಚಿಸಬೇಕು ಎಂದು ಎಬಿವಿಪಿ ಆಗ್ರಹಿಸಿದೆ. ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ಮಂಗಳೂರು ವಿಭಾಗ ಸಂಚಾಲಕ್ ಸುವಿತ್ ಶೆಟ್ಟಿ, ವಿ.ವಿ.ಯಲ್ಲಿ ನಡೆದಿರುವ ಭ್ರಷ್ಟಾಚಾರವೇ ವಿವಿಯ ವೈಫಲ್ಯಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಉಚ್ಚತರ್‌ಶಿಕ್ಷಾ ಅಭಿಯಾನ (ರೂಸಾ) ಯೋಜನೆಯಡಿ 2013 ರಿಂದ 2017ರವರೆಗೆ ಮಂಗಳೂರು ವಿವಿ 20 ಕೋಟಿ ಅನುದಾನ ಪಡೆದಿತ್ತು. ಇದರಲ್ಲಿ 7 ಕೋಟಿ ರು. ವಿದ್ಯಾರ್ಥಿಗಳ ಹಾಸ್ಟೆಲ್ ನಿರ್ಮಾಣಕ್ಕೆ ಮೀಸಲಿಟ್ಟಿದ್ದರೂ, ಅಲ್ಲಿ ಯಾವುದೇ ಹಾಸ್ಟೆಲ್ ಆಗಿಲ್ಲ. ಅದರ ಬಳಕೆಯ ಪ್ರಮಾಣ ಪತ್ರಕ್ಕಾಗಿ ಸುಳ್ಳು ದಾಖಲೆಗಳನ್ನು ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿರುವುದು ಈಗ ವಿಶ್ವವಿದ್ಯಾಲಯದ ಸ್ವಯಂ ಒಪ್ಪಿಗೆಯಿಂದಲೇ ಬೆಳಕಿಗೆ ಬಂದಿದೆ. ಇದಕ್ಕೆ ಮುನ್ನ ಸೋಲಾರ್‌ಹಗರಣ, ನಕಲಿ ಬಿಲ್ಲು ಹಗರಣ, ಸಿಸಿ ಕೆಮರಾ ಹಗರಣ, ಲೆಕ್ಚರ್‌ಕಾಂಪ್ಲೆಕ್ಸ್ ಹಗರಣ, ಹಾಸ್ಟೆಲ್ ಹಗರಣ, ಬೆಳಪು ಕ್ಯಾಂಪಸ್ ಹಗರಣ ನಡೆದಿದೆ. ಹತ್ತು ವರ್ಷಗಳ ಹಿಂದೆ 60 ಕೋಟಿ ಮೊತ್ತದಲ್ಲಿ ಆರಂಭವಾದ ಅಂತಾರಾಷ್ಟ್ರೀಯ ಹಾಸ್ಟೆಲ್ ಕಟ್ಟಡ ನಿರ್ಮಾಣ ಕೇವಲ ಹಣ ಲೂಟಿ ಮಾಡಲು ಸೃಷ್ಟಿಸಿದ ಹುನ್ನಾರವಾಗಿದೆ ಎಂದು ಅವರು ಆರೋಪಿಸಿದರು. ಈ ವೇಳೆ ರವಿಚಂದ್ರ, ಎಬಿವಿಪಿ ಜಿಲ್ಲಾ ಸಂಚಾಲಕ್ ಶ್ರೀಜಿತ್ ರೈ ಮಂಗಳೂರು ಮಂಗಳೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯರಾದ ರಮೇಶ್ ಕೆ. ಮಹಾನಗರ ಕಾರ್ಯದರ್ಶಿ ಶ್ರೀಲಕ್ಷ್ಮೀ ಉಪಸ್ಥಿತರಿದ್ದರು.

ಇಸ್ರೋ- ಸಿಪಿಸಿಆರ್‌ಐ ತಂಡದಿಂದ ಸುಳ್ಯದಲ್ಲಿ ಸರ್ವೆ: ಸಂಸದ ಕ್ಯಾ. ಚೌಟ

ಅಡಕೆಗೆ ಹಳದಿ ರೋಗ: ಡ್ರೋನ್ ಸಮೀಕ್ಷೆ

ಮಂಗಳೂರು: ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ಅಡಕೆ ಬೆಳೆಗಾರರ ಬೇಡಿಕೆಗಳಿಗೆ ಸ್ಪಂದಿಸಿರುವ ಕೇಂದ್ರ ಸರಕಾರ ಅಡಕೆ ಬೆಳೆ ಹಳದಿ ರೋಗ ಬಾಧಿತ ಸುಳ್ಯ ತಾಲೂಕಿನಲ್ಲಿ ಹಳದಿ ರೋಗದ ಲಕ್ಷಣ, ಪ್ರಸರಣ ಹಾಗೂ ವ್ಯಾಪ್ತಿ ಮುಂತಾದವಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದಕ್ಕೆ ಸುಧಾರಿತ ಡ್ರೋನ್ ಆಧಾರಿತ ವೈಮಾನಿಕ ಸಮೀಕ್ಷಾ ಕಾರ್ಯವನ್ನು ಆರಂಭಿಸಿದೆ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಕಳೆದ ಆಗಸ್ಟ್ನಲ್ಲಿ ಕರ್ನಾಟಕದ ಅಡಿಕೆ ಬೆಳೆಯುವ ಜಿಲ್ಲೆಗಳ ಸಂಸದರು, ರಾಜ್ಯದ ಸಚಿವರು, ಅಡಿಕೆ ಬೆಳೆಗಾರರ ಸಂಸ್ಥೆಗಳನ್ನು ಒಳಗೊಂಡ ಜಂಟಿ ನಿಯೋಗವು ದೆಹಲಿಯಲ್ಲಿ ಕೃಷಿ ಸಚಿವ ಶಿವರಾಜ್ ಚೌಹಾಣ್ ಅವರನ್ನು ಭೇಟಿ ಮಾಡಿ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮನವರಿಕೆ ಮಾಡಿತ್ತು. ಈ ವೇಳೆ ಸಂಸದ ಕ್ಯಾ. ಚೌಟ ಅವರು ಕೂಡ ಎಲೆ ಚುಕ್ಕೆ ಹಾಗೂ ಹಳದಿ ರೋಗ ಸೇರಿದಂತೆ ಅಡಿಕೆ ಬೆಳೆಗೆ ಕಾಡುತ್ತಿರುವ ಹಲವು ಸಮಸ್ಯೆಗಳಿಂದ ರೈತರು ತೀವ್ರ ನಷ್ಟ ಅನುಭವಿಸುತ್ತಿದ್ದು, ಅವರ ಸಂಕಷ್ಟಕ್ಕೆ ಸ್ಪಂದಿಸುವಂತೆ ಮಾನವಿ ಮಾಡಿದ್ದರು. ಈ ವೇಳೆ ಜಂಟಿ ನಿಯೋಗವು ಅಡಿಕೆ ಹಳದಿ ಎಲೆ ಶಿಲೀಂಧ್ರ ಮತ್ತು ಇತರ ರೋಗಗಳಿಂದ ದೀರ್ಘಾವಧಿಯ ಅಧ್ಯಯನ ಮಾಡಲು ಮತ್ತು ಪರಿಹಾರ ಕಂಡುಹಿಡಿಯಲು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯಿಂದ ಸಮಗ್ರ ಅಧ್ಯಯ ನಡೆಸಬೇಕೆಂದು ಸಚಿವರ ಮುಂದಿಟ್ಟಿತ್ತು. ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ, ನಿಯೋಗವನ್ನು ಕಳುಹಿಸಿದೆ. ಕಾಸರಗೋಡಿನ ಸಂಶೋಧನಾ ಸಂಸ್ಥೆ(ಸಿಪಿಸಿಆರ್‌ಐ), ಬೆಂಗಳೂರಿನ ಇಸ್ರೋ ಸಂಶೋಧನಾ ವಿಭಾಗ ಹಾಗೂ ಹೈದರಾಬಾದ್ನ ಇಸ್ರೋ ಜಂಟಿಯಾಗಿ ಈ ಸರ್ವೆ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಆರಂ ತೋಡು ಮತ್ತು ಪೆರಾಜೆ ಗ್ರಾಮದಲ್ಲಿ ಡ್ರೋನ್ ಸಮೀಕ್ಷೆ ನಡೆಸುತ್ತಿದೆ. ಸುಧಾರಿತ ಡ್ರೋನ್ ಮೂಲಕ ಅಡಿಕೆ ಮರಗಳ ಎಲೆಗಳ ಫೋಟೊ ಮತ್ತು ವಿಡಿಯೋ ಸೆರೆಹಿಡಿಯಲಾಗುತ್ತದೆ. ಇಲ್ಲಿನ ಚಿತ್ರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗುತ್ತದೆ. ಈ ಮೂಲ ಚಿತ್ರಗಳನ್ನು ಬೇಸ್ ಆಗಿ ಪರಿಗಣಿಸಿ ಅದನ್ನು ಇಸ್ರೋದ ಉಪಗ್ರಹಕ್ಕೆ(ಸೆಟಲೈಟ್) ದತ್ತಾಂಶವಾಗಿ ನೀಡಿ, ಆ ಮೂಲಕ ಕೇವಲ ಪ್ರಾಯೋಗಿಕ ಪ್ರದೇಶವಲ್ಲದೆ, ದೊಡ್ಡ ವ್ಯಾಪ್ತಿಯಲ್ಲಿ ಒಟ್ಟು ಅಡಿಕೆ ಎಲೆ ಹಳದಿ ರೋಗ ಪೀಡಿತ ಪ್ರದೇಶಗಳ ಸಮಗ್ರ ಸಮೀಕ್ಷೆ ನಡೆಯಲಿದೆ ಎಂದು ಕ್ಯಾ. ಚೌಟ ಹೇಳಿದ್ದಾರೆ.

ಅಡಿಕೆ ಬೆಳೆಗೆ ಬಾಧಿಸಿರುವ ಎಲೆ ಹಳದಿ ರೋಗ ಸಮಸ್ಯೆ ಪರಿಹಾರಕ್ಕೆ ಇದೊಂದು ಮಹತ್ವದ ಹೆಜ್ಜೆಯಾಗಿದ್ದು, ಈ ಸಮೀಕ್ಷೆಯಲ್ಲಿ ವೈಜ್ಞಾನಿಕ ಹಾಗೂ ನಿಖರ ಅಂಕಿ-ಅಂಶಗಳು ದೊರೆಯಲಿದೆ. ಅಲ್ಲದೆ, ಎಲೆ ಹಳದಿ ರೋಗ ಪೀಡಿತ ಅಡಿಕೆ ಮರಗಳಲ್ಲಿ ಆಗುವ ಬದಲಾವಣೆಗಳ ಬಗ್ಗೆಯೂ ನಿರಂತರ ನಿಗಾ ವಹಿಸಲಾಗುತ್ತದೆ. ಅಡಿಕೆ ಬೆಳೆ ವ್ಯಾಪ್ತಿ ಬಗ್ಗೆಯೂ ಮಾಹಿತಿ ಲಭ್ಯವಾಗಲಿದೆ ಎಂದು ಸಂಸದ ಕ್ಯಾ. ಚೌಟ ತಿಳಿಸಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮೂಲಮೃತ್ತಿಕಾ ಪ್ರಸಾದ

ಸುಬ್ರಹ್ಮಣ್ಯ: ನಾಗಾರಾಧನೆಯ ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಶ್ರೀ ಕ್ಷೇತ್ರದ ಪವಿತ್ರ ಮಹಾಪ್ರಸಾದ ಮೂಲಮೃತ್ತಿಕೆ (ಹುತ್ತದ ಮಣ್ಣು)ನ್ನು ತೆಗೆಯಲಾಯಿತು. ಶ್ರೀ ದೇವಳದ ಗರ್ಭ ಗುಡಿಯಿಂದ ದೇವಳದ ಪ್ರಧಾನ ಅರ್ಚಕರು ವಿವಿಧ ವೈದಿಕ ವಿದಿವಿಧಾನಗಳೊಂದಿಗೆ ಮುಂಜಾನೆಯ ಶುಭ ಮುಹೂರ್ತದಲ್ಲಿ ಮೂಲ ಪ್ರಸಾದ ತೆಗೆದರು. ಕ್ಷೇತ್ರದ ಮೂಲಸ್ಥಾನವಾದ ಗರ್ಭಗುಡಿಯಿಂದ ಈ ಮೃತ್ತಿಕಾ ಪ್ರಸಾದವನ್ನು ದೇವಳದ ಪ್ರಧಾನ ಅರ್ಚಕರು ತೆಗೆದು ಭಕ್ತಾದಿಗಳಿಗೆ ನೀಡಿದರು. ಇದು ಮೂಲಸ್ಥಾನವಾದ ಕುಕ್ಕೆ ಸುಬ್ರಹ್ಮಣ್ಯ ದೇವಳದ ಗರ್ಭಗುಡಿಯಿಂದ ತೆಗೆಯುವ ಕ್ಷೇತ್ರದ ಅತ್ಯಂತ ಪವಿತ್ರ ಮಹಾಪ್ರಸಾದ. ಯಾವುದೇ ದೇವಳದಲ್ಲಿ ಕೂಡಾ ಇಂತಹ ಪ್ರಸಾದ ದೊರಕುವುದಿಲ್ಲ. ಇದು ಕುಕ್ಕೆ ಕ್ಷೇತ್ರದಲ್ಲಿ ಮಾತ್ರ ಭಕ್ತರಿಗೆ ದೊರಕುವುದು ವಿಶೇಷ. ಮೂಲಮೃತ್ತಿಕಾ ಪ್ರಸಾದವನ್ನು ವರ್ಷದಲ್ಲಿ ಒಂದೇ ಬಾರಿ ತೆಗೆಯಲಾಗುವುದು.ಈ ಮೃತ್ತಿಕಾ ಪ್ರಸಾದ ರೋಗ ನಿರೋಧಕ, ಸಂತಾನ ಕಾರಕ ಮತ್ತು ಚರ್ಮರೋಗಗಳ ಪರಿಹಾರಕ್ಕೆ ದಿವ್ಯ ಔಷಧ. ಕ್ಷೇತ್ರದ ಈ ಮುಖ್ಯ ಪ್ರಸಾದವನ್ನು ಶುಭ ಕಾರ್ಯಗಳ ಒಳಿತಿಗೂ, ವ್ಯಾದಿಗಳ ನಿವಾರಣೆಗೂ ಭಕ್ತ ಜನರು ಕೊಂಡೊಯ್ಯುತ್ತಾರೆ. ಇದನ್ನು ತೀರ್ಥದಲ್ಲಿ ಸೇವಿಸುವುದರ ಮೂಲಕ ಅಥವಾ ಶರೀರಕ್ಕೆ ರಕ್ಷೆಯಾಗಿ ಕಟ್ಟಿಕೊಳ್ಳುವುದರ ಮೂಲಕ ಧಾರಣೆ ಮಾಡುತ್ತಾರೆ. ಆದರೆ ಇದನ್ನು ಅಪವಿತ್ರವಾಗದಂತೆ ತಡೆಯುವುದು ಕೂಡ ಮುಖ್ಯ ಎನ್ನಲಾಗುತ್ತದೆ.

ವಿಶ್ವವಾಣಿ

ಸಂಪಾದಕೀಯ

ಆತ್ಮಾವಲೋಕನಕ್ಕೆ ಇದು ಸಕಾಲ

ಬಿಹಾರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಹೀನಾಯ ಸೋಲನ್ನು ಕಂಡಿರುವುದು ಈಗಾಗಲೇ ಜಗಜ್ಜಾಹೀರು. 'ಮತಗಳ್ಳತನ'ದ ಚರ್ಚಾವಿಷಯವನ್ನು ಮುನ್ನೆಲೆಗೆ ತಂದು ಇನ್ನಿಲ್ಲದ ಉತ್ಸಾಹದಿಂದ ಪ್ರಚಾರ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿಯವರಿಗೆ ಈ ಬೆಳವಣಿಗೆಯಿಂದ ಸಾಕಷ್ಟು ನಿರಾಶೆಯಾಗಿರುವುದಂತೂ ಖರೆ. ಮತ್ತೊಂದೆಡೆ, ಒಂದು ಕಾಲಕ್ಕೆ 'ಚುನಾವಣಾ ತಂತ್ರಗಾರ' ಎಂಬ ಹಣೆಪಟ್ಟಿಯನ್ನು ನೇತುಹಾಕಿಕೊಂಡಿದ್ದ ಪ್ರಶಾಂತ್ ಕಿಶೋರ್ ಅವರಂತೂ ತೀವ್ರ ಮುಖಭಂಗವನ್ನು ಅನುಭವಿಸಿದ್ದಾರೆ; ಕಾರಣ ಅವರು ಹುಟ್ಟುಹಾಕಿದ್ದ 'ಜನ ಸುರಾಜ್ ಪಕ್ಷ'ಕ್ಕೆ ಬಿಹಾರದಲ್ಲಿ ಬೋಣಿ ಆಗಿಲ್ಲ. ಈ ಚುನಾವಣೆಯಲ್ಲಿ ತಂತಮ್ಮ ಪಕ್ಷಗಳು ಸೋತು, ಎನ್‌ಡಿಎ ಪಾಳಯವು ಗೆದ್ದಿರುವುದಕ್ಕೆ ಈ ಇಬ್ಬರು ನಾಯಕರು ತಮ್ಮದೇ ಆದ ಕಾರಣಗಳನ್ನು ಹೇಳಬಹುದು; ಆದರೆ ಈ ಇಬ್ಬರೂ ನಾಯಕರು ತಮ್ಮದೇ ನೆಲೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವುದಕ್ಕೆ ಇದು ಸಕಾಲ ಎಂಬುದಂತೂ ನಿಜ. ಈ ಪೈಕಿ ರಾಹುಲ್ ಗಾಂಧಿಯವರು, ಕಾಂಗ್ರೆಸ್‌ನಂಥ 'ಐತಿಹಾಸಿಕ' ಪಕ್ಷದ ಮುಂಚೂಣಿಯಲ್ಲಿ ತಾವು ನಿಂತಾಗಿನಿಂದ ದೇಶದ ವಿವಿಧೆಡೆ ಪಕ್ಷವನ್ನು ದಡ ಮುಟ್ಟಿಸಲು/ಗಟ್ಟಿಗೊಳಿಸಲು ಆಗಿಲ್ಲವೇಕೆ? ಎಂಬ ನೆಲೆಯಲ್ಲಿ ಆತ್ಮಾವಲೋಕನಕ್ಕೆ ಇಳಿಯಬೇಕು. ಮತ್ತೊಂದೆಡೆ ಪ್ರಶಾಂತ್ ಕಿಶೋರರು, ಅನ್ಯ ಪಕ್ಷಗಳಿಗೆ ತಾವು ಹೇಳಿಕೊಡುತ್ತಿದ್ದ ಗೆಲುವಿನ ತಂತ್ರಗಳು ಸ್ವತಃ ತಮ್ಮದೇ ಪಕ್ಷದ ಕೈಹಿಡಿಯಲಿಲ್ಲವೇಕೆ? ಎಂದು ಪ್ರಶ್ನಿಸಿಕೊಳ್ಳಬೇಕು. ಆಗ ಮಾತ್ರವೇ, 'ನಿರ್ದಿಷ್ಟ ರಾಜಕಾರಣೆಯಲ್ಲಿ ಮತ್ತು ರಾಜಕೀಯ ಪಕ್ಷದಲ್ಲಿ' ಜನರು ಏಕೆ ನಂಬಿಕೆಯನ್ನು ಇಡುತ್ತಾರೆ ಅಥವಾ ಇಡುವುದಿಲ್ಲ? ಎಂಬ ಪ್ರಶ್ನೆಗಿರುವ ಉತ್ತರಗಳು ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ. ಅಂಥ ಒಳನೋಟಗಳಿಗೆ ಈ ಇಬ್ಬರೂ ನಾಯಕರು ಒಡ್ಡಿಕೊಳ್ಳುವಂತಾಗಲಿ...

ಸೊಂಪಾದಕೀಯ

ಸೋತಿದ್ದು 'ಪಿಚ್ಚೆನ್ನಿಸಿತು'

ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಆಫ್ರಿಕಾ ಗೆದ್ದು ಬೀಗಿದರೆ, ಭಾರತ ಸೋತು ಬಾಗಿದೆ. ಆದರೆ ಈ ಸೋಲಿಗೆ ಸೌತ್ ಆಫ್ರಿಕಾದ ಆಟಗಾರರಿಗಿಂತ ಕೊಲ್ಕೊತ್ತಾದ ಪಿಚ್ ಕಾರಣ ಅನ್ನೋದು ಎಲ್ಲರಿಗೂ ವೇದ್ಯವಾಗುವ ಸಂಗತಿ. ಸಾಮಾನ್ಯವಾಗಿ ಎಲ್ಲ ಹೋಮ್ ಪಿಚ್‌ಗಳಲ್ಲಿ 'ನಮ್ಮ ಕ್ಯಾಪ್ಟನ್ ಮಾತೇ ವೇದವಾಕ್ಯ' ಅಂತ ಹೋಮ್ ಟೀಮ್‌ಗೆ ಅನುಕೂಲ ಆಗೋ ಥರ ಪಿಚ್ ಮಾಡ್ತಾರೆ. ಇಲ್ಲಿ ಕೂಡ ಅದೇ ರೀತಿಯಲ್ಲಿ ಮಾಡೋಕೆ ಹೋಗಿ, 'ಏನೋ ಮಾಡಲು ಹೋಗಿ ಏನು

ಮಾಡಿದೆ ನಾನು?' ಅನ್ನೋ ಪರಿಸ್ಥಿತಿಯಾಗಿದೆ ಪಿಚ್ ಕ್ಯೂರೇಟರ್‌ನದ್ದು. ಹಾಗಾಗಿ 'ಸೋತ ನಂತರ ಏನನ್ನಿಸಿತು?' ಅಂತ ಕೇಳಿದ್ರೆ 'ಪಿಚ್ಚೆನ್ನಿಸಿತು' ಅಂತ ಹೇಳೋ ಸರದಿ ಭಾರತೀಯ ಆಟಗಾರರದ್ದು. ಮೊದಲ ಇನ್ನಿಂಗ್ಸ್‌ನಲ್ಲಿ ಆಫ್ರಿಕಾ ಚೀಪ್ ಆಗಿ ಔಟ್ ಆದಾಗಲೇ ಎಲ್ಲರಿಗೂ ಈ ಪಿಚ್‌ನ ಹಳೆಯ ವಾಸನೆ ಬಡಿದಿತ್ತು. ಅದಕ್ಕೆ ತಕ್ಕಂತೆ ಭಾರತ ತಂಡ ಕೂಡಾ ಕಡಿಮೆ ಮೊತ್ತಕ್ಕೆ ಔಟ್ ಆಗಿತ್ತು. ನಂತರ ಎರಡನೇ ಇನ್ನಿಂಗ್ಸ್‌ನಲ್ಲಿ ಮತ್ತೆ ಅದೇ ಕತೆ ರಿಪೀಟ್ ಆಗಿ ಆಫ್ರಿಕಾ ಇನ್ನೂ ಕಡಿಮೆ ಮೊತ್ತಕ್ಕೆ ಔಟಾಗಿ, ಭಾರತದ ಎರಡನೇ ಇನ್ನಿಂಗ್ಸ್‌ನಲ್ಲಿ ಎರಡು ವಿಕೆಟ್ ಬೇಗನೇ ಹೋದ ಮೇಲೆ ಎಲ್ಲರಿಗೂ ಫಲಿತಾಂಶ ಗೊತ್ತಾಗಿತ್ತು. ಆದರೆ ಈ ಕೊಲ್ಕೊತ್ತಾ ಪಿಚ್‌ಗೆ ದೊಡ್ಡ ಇತಿಹಾಸವೇ ಇದೆ. ಇದು ಪಿಚ್ ಅಲ್ಲ, ಆಟಗಾರರನ್ನು ಹಳ್ಳಕ್ಕೆ ದೂಡುವ ಪಿಚ್ ಅಂದ್ರೆ ಮಾಟಗಾತಿಯ ಎಫೆಕ್ಟ್ ಅಂತ ಅನಿಸಿದರೆ ತಪ್ಪಿಲ್ಲ. ಸಾಮಾನ್ಯವಾಗಿ ಸರಿಯಾಗಿ ಆಟ ಆಡದೇ ಸೋತಾಗ ನೆಪ ಹೇಳಿದರೆ 'ಕುಣಿಯಲಾರದವಳು ನೆಲ ಡೊಂಕು ಅಂದ್ಲಂತೆ' ಅನ್ನೋ ಮಾತು ಹೇಳ್ತಾರೆ. ಆದರೆ ಈ ವಿಷಯದಲ್ಲಿ ಮಾತ್ರ ಒಂದು ಕೆಟ್ಟ ಸೋಲಿಗೆ ಕೊಲ್ಕೊತ್ತಾ ಮೈದಾನದ ನೆಲ ಡೊಂಕು ಅಂತ ಹೇಳಿದರೆ ಅದು ಅಕ್ಷರಶಃ ಸತ್ಯವೇ ಬಿಡಿ. ಒಟ್ಟಿನಲ್ಲಿ ಈ ಸೋಲು ಕ್ಯಾಪ್ಟನ್ ಮತ್ತು ಕೋಚ್ ಪಾಲಿಗೆ ದೊಡ್ಡ ಹಿನ್ನಡೆಯಂತೂ ಹೌದು. ಸುಲಭವಾಗಿ ಕೈಗೆ ಬಂದ ತುತ್ತು, ಬಾಯಿಗೆ ಬರಲಿಲ್ಲ, ಬದಲಾಗಿ ಜೀವ ಬಾಯಿಗೆ ಬಂತು ಅನ್ನೋ ಅನುಭವ...

ಸಂಪಾದಕರ ಸದ್ಯಶೋಧನೆ

ಜಪಾನಿನಲ್ಲಿ ಫ್ಯಾಕ್ಸ್ ಇನ್ನೂ ಜೀವಂತ

ಎಲ್ಲರಿಗೂ ಶಿಷ್ಟಾಚಾರ ಗೊತ್ತು. ಆದರೆ ಇಲೆಕ್ಟ್ರಾನಿಕ್ ಶಿಷ್ಟಾಚಾರ (Electronic Etiquettes) ಗೊತ್ತಿರುವ ಸಾಧ್ಯತೆ ಕಮ್ಮಿ. ಆದರೆ ಜಪಾನಿನಲ್ಲಿ ಇಲೆಕ್ಟ್ರಾನಿಕ್ ಶಿಷ್ಟಾಚಾರ ತಿಳಿದಿರಲೇಬೇಕು. ಜಪಾನ್ ಪ್ರಪಂಚದ ಅತ್ಯಂತ connected ದೇಶಗಳಲ್ಲಿ ಒಂದು. ರೈಲಿನಲ್ಲಿ ಪ್ರಯಾಣಿಸುವಾಗ ಬಹುತೇಕ ಮಂದಿ ಫೋನ್, ಟ್ಯಾಬ್ಲೆಟ್ ಅಥವಾ ಇ-ರೀಡರ್‌ಗಳ ಪರದೆಗಳಿಗೆ ಅಂಟಿಕೊಂಡಿರುವುದನ್ನು ಗಮನಿಸಬಹುದು. ಯಾರೂ ಮತ್ತೊಬ್ಬರ ಹತ್ತಿರ ಮಾತಾಡುವುದಿಲ್ಲ. ತಮ್ಮ ಪಾಡಿಗೆ ತಾವು ಗ್ಯಾಜೆಟ್‌ನಲ್ಲಿ ಮಗ್ನರಾಗಿರುವುದನ್ನು ಕಾಣಬಹುದು. ಆ್ಯಪಲ್ ಐಫೋನ್ ಮಾರುಕಟ್ಟೆಗೆ ಬಂದ ಸ್ವಲ್ಪ ಸಮಯದ ನಂತರ, ಜಪಾನ್‌ನಲ್ಲಿ ಸ್ಮಾರ್ಟ್ ಫೋನ್‌ಗಳು ಪ್ರಸರಣಗೊಂಡವು, ಸೋಷಿಯಲ್ ನೆಟ್‌ವರ್ಕ್ ಸರ್ವೀಸ್ (SNS) ಹರಡುವಿಕೆಯೊಂದಿಗೆ ಜನರ ಸಾರ್ವಜನಿಕ ಮತ್ತು ಖಾಸಗಿ ವರ್ತನೆಗಳೇ ಬದಲಾಗಿ ಹೋದವು. ಆದರೆ ಜಪಾನ್ ತನ್ನ ಸ್ವಂತ 'ಮೊಬೈಲ್ ಸಂಸ್ಕೃತಿ'ಯನ್ನು ವರ್ಷಗಳ ಹಿಂದೆಯೇ ಸದ್ದಿಲ್ಲದೆ ಅಭಿವೃದ್ಧಿಪಡಿಸಿತ್ತು. 'ಐ-ಮೋಡ್' ಎಂಬ ತಂತ್ರಜ್ಞಾನದೊಂದಿಗೆ ವೆಬ್‌ನೊಂದಿಗೆ, ಸೆಲ್ ಫೋನ್‌ಗಳ ಸಮ್ಮಿಲನದೊಂದಿಗೆ ವಾಣಿಜ್ಯ ಯಶಸ್ಸನ್ನು ಕಂಡ ಮೊದಲನೆಯ ದೇಶ ಎಂಬ ಅಗ್ಗಳಿಕೆಗೆ ಪಾತ್ರವಾಗಿತ್ತು. ಜಪಾನ್‌ನಲ್ಲಿ, ಮಕ್ಕಳು ತಮ್ಮ ಹ್ಯಾಂಡ್‌ಸೆಟ್‌ಗಳೊಂದಿಗೆ ವಿಡಿಯೋಗಳನ್ನು ವೀಕ್ಷಿಸುವ ಅಥವಾ ಕ್ಷಿಪ್ರ-ಫೈರ್ ಸಂದೇಶ ಕಳುಹಿಸುವ ದೃಶ್ಯವು ಇಪ್ಪತ್ತೊಂದನೇ ಶತಮಾನದಲ್ಲಿ ಅಲ್ಲ, ಇಪ್ಪತ್ತನೇ ಶತಮಾನದಲ್ಲಿ ಹುಟ್ಟಿಕೊಂಡ ವಿದ್ಯಮಾನವಾಗಿತ್ತು. ಹೊರಗಿನ ಪ್ರಪಂಚವು ಅದರ ಬಗ್ಗೆ ಹೆಚ್ಚು ಕೇಳಿರಲಿಲ್ಲ. ಜಪಾನ್ ಹೊರಗಿನ ಪ್ರಪಂಚಕ್ಕೆ ಗೊತ್ತಾಗದಂತೆ, ತನ್ನ ಅಗತ್ಯಕ್ಕೆ ತಕ್ಕುದಾದ ತಂತ್ರಜ್ಞಾನವನ್ನು ನಿರ್ಮಿಸಿಕೊಳ್ಳುವುದರಲ್ಲಿ ನಿಸ್ಸೀಮ. ಇದನ್ನು 'ಗ್ಯಾಲಪಗೋಸ್ ಸಿಂಡ್ರೋಮ್' ಅಂತಾರೆ. ಜಗತ್ತಿಗೆಲ್ಲ ಒಂದು ಮಾದರಿ ತಂತ್ರಜ್ಞಾನವಿದ್ದರೆ, ಜಪಾನ್ ತನಗೆ ಸೀಮಿತವಾದ ತಂತ್ರಜ್ಞಾನವನ್ನು ನಿರ್ಮಿಸಿಕೊಳ್ಳುತ್ತದೆ. ಜಪಾನಿನ ಮೊಬೈಲ್ ಸಂಸ್ಕೃತಿಯನ್ನು ಐಫೋನ್ ಮತ್ತು ನಂತರ ಆಂಡ್ರಾಯ್ಡ್ ಹ್ಯಾಂಡ್‌ಸೆಟ್‌ಗಳು ಪುನರ್ ವಿನ್ಯಾಸಗೊಳಿಸಿದ್ದು ಇತಿಹಾಸ. ಜಪಾನಿನಲ್ಲಿ ಕಿರು ಸಂದೇಶ ಕಳಿಸುವಾಗಲೂ ಎಸ್ಸೆಮ್ಮೆಸ್ ಬದಲು ಇ-ಮೇಲ್ ಬಳಸುವುದು ಸಾಮಾನ್ಯ. ಒಮ್ಮೊಮ್ಮೆ ಎಸ್ಸೆಮ್ಮೆಸ್‌ಗಿಂತ ಇ-ಮೇಲ್ ಐಡಿಯೇ ಉದ್ದವಾಗಿದ್ದರೂ, ಇ-ಮೇಲ್ ಅನ್ನೇ ಅವರು ನೆಚ್ಚಿಕೊಳ್ಳುತ್ತಾರೆ. ಬೇರೆ ದೇಶಗಳಿಗಿಂತ ಜಪಾನಿನಲ್ಲಿ ಇಲೆಕ್ಟ್ರಾನಿಕ್ ಶಿಷ್ಟಾಚಾರವನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಟ್ರೇನ್ ಮತ್ತು ಬಸ್ಸುಗಳಲ್ಲಿ ಓಡಾಡುವಾಗ ಯಾರ ಮೊಬೈಲೂ ಕಿರುಚಿಕೊಳ್ಳುವುದಿಲ್ಲ. ಕಾರಣ, ಸಾಮಾನ್ಯವಾಗಿ ಎಲ್ಲರೂ ಆಗ ತಮ್ಮ ತಮ್ಮ ಮೊಬೈಲ್‌ಗಳನ್ನು ಸೈಲೆಂಟ್ ಮೋಡ್‌ನಲ್ಲಿಟ್ಟಿರುತ್ತಾರೆ. ಆ ಸಮಯದಲ್ಲಿ ಕರೆ ಬಂದರೂ, ತಾವು ಟ್ರೇನ್ ಅಥವಾ ಬಸ್ಸಿನಲ್ಲಿ ಇರುವುದಾಗಿಯೂ, ನಂತರ ಮಾತಾಡುವುದಾಗಿಯೂ ತಿಳಿಸುತ್ತಾರೆ. ತುರ್ತು ಸಂದರ್ಭದಲ್ಲಿ ಪಕ್ಕದವರ ಅನುಮತಿ ಪಡೆದು ಮಾತಾಡುತ್ತಾರೆ. ಇಲ್ಲದಿದ್ದರೆ, ಅತ್ತ ಕಡೆಯವರು ಮಾತಾಡುತ್ತಾರೆ ಮತ್ತು ಇವರು ಮಾತಾಡದೇ ಬರೀ ಕೇಳಿಸಿಕೊಳ್ಳುತ್ತಿರುತ್ತಾರೆ. ಹೀಗಾಗಿ ಟ್ರೇನುಗಳಲ್ಲಿ ಯಾರ ಮೊಬೈಲ್‌ಗಳೂ ವಿವಿಧ ರಿಂಗ್ ಟೋನ್‌ಗಳಿಂದ ಒದರುವುದಿಲ್ಲ. ಒಂದು ವೇಳೆ ಮೊಬೈಲ್ ಕಿರುಚಿಕೊಂಡರೆ, ಅಕ್ಕ-ಪಕ್ಕದಲ್ಲಿದ್ದವರು ದುರುಗುಟ್ಟಿ ನೋಡದೇ ಹೋಗುವುದಿಲ್ಲ. ವೃದ್ಧರು, ಗರ್ಭಿಣಿಯರು, ಮಕ್ಕಳನ್ನು ಎತ್ತಿಕೊಂಡ ಮಹಿಳೆಯರು, ವಿಕಲಚೇತನರು ಕುಳಿತುಕೊಂಡ 'ಪ್ರಯಾರಿಟಿ ಸೀಟು'ಗಳ ಸನಿಹದಲ್ಲಿದ್ದವರಂತೂ ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿರುತ್ತಾರೆ. ಆದರೆ ಈ ದಿನಗಳಲ್ಲಿ ಜಪಾನಿನ ರಸ್ತೆಗಳಲ್ಲಿ ಓಡಾಡುವವರು ಸ್ಮಾರ್ಟ್ ಫೋನ್ ಸ್ಕ್ರೀನ್ ನೋಡುತ್ತಾ ಹೋಗುವುದು ಹೆಚ್ಚಾಗಿದೆ. ಇದಕ್ಕೆ ಕಾರಣ ನೇವಿಗೇಶನ್ ಆ್ಯಪ್ ನೋಡುವುದು ಅನಿವಾರ್ಯವಾಗಿರುವುದು. ಜಪಾನಿನಲ್ಲಿ ಎಲ್ಲ ರಸ್ತೆಗಳಿಗೆ ಹೆಸರಿಲ್ಲದಿರುವುದರಿಂದ ತಕ್ಷಣ ಪತ್ತೆ ಹಚ್ಚುವುದು ಕಷ್ಟ. ಹೀಗಾಗಿ ಪದೇ ಪದೆ ಸ್ಮಾರ್ಟ್ ಫೋನ್ ನೋಡುವುದು ಅನಿವಾರ್ಯ. ಜಗತ್ತಿನ ಬಹು ತೇಕ ದೇಶಗಳಲ್ಲಿ ಫ್ಯಾಕ್ಸ್ ಮಷೀನುಗಳು ಕಾಲಗರ್ಭವನ್ನು ಸೇರಿದ್ದರೂ, ತಾಂತ್ರಿಕವಾಗಿ ಮುಂದುವರಿದಿರುವ ಜಪಾನಿನಲ್ಲಿ ಅವು ಇನ್ನೂ ಜೀವಂತವಾಗಿವೆ.

ಸಿದ್ದು ಸೇಫ್ ಆಗಿದ್ದೇ ಬಿಜೆಪಿಗೆ ಚಿಂತೆ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಬಿಹಾರ ವಿಧಾನಸಭಾ ಚುನಾವಣೆಯ ಫಲಿತಾಂಶವು ರಾಜ್ಯ ಬಿಜೆಪಿಯ ಹಲವು ನಾಯಕರಿಗೆ ನಿರಾಸೆ ಉಂಟುಮಾಡಿದೆ. ಹಾಗಂತ ಈ ಫಲಿತಾಂಶ ಪಕ್ಷಕ್ಕೆ ವ್ಯತಿರಿಕ್ತವಾಗಿರಲಿ ಅಂತೇನೂ ಅವರು ಬಯಸಿರಲಿಲ್ಲ. ಆದರೆ ಬಿಹಾರ ವಿಧಾನಸಭೆ ಚುನಾವಣೆಯ ನಂತರ ಕಾಂಗ್ರೆಸ್ ಪಕ್ಷ ಒಂದಷ್ಟು ಬಲಿಷ್ಠವಾಗಲಿ ಅಂತ ಅವರು ನಿರೀಕ್ಷಿಸುತ್ತಿದ್ದರು. ಕಾರಣ? ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸಾಧನೆ ಉತ್ತಮವಾದರೆ, ಆ ಮೂಲಕ ಅದಕ್ಕೆ ಶಕ್ತಿ ಬಂದರೆ, ಕರ್ನಾಟಕದ ರಾಜಕಾರಣದಲ್ಲಿ ಪಲ್ಲಟಗಳಾಗಲಿವೆ. ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಹುದ್ದೆಯ ಮೇಲೆ ಕೂರಿಸಲು ಅದು ಸಜ್ಜಾಗುತ್ತದೆ ಎಂದು ಅವರು ಭಾವಿಸಿದ್ದರು.

ಅವರ ಈ ಲೆಕ್ಕಾಚಾರಕ್ಕೆ ಕೆಲವು ನಂಬಿಕೆಗಳೂ ಕಾರಣವಾಗಿದ್ದವು. ಇಂಥ ನಂಬಿಕೆಗಳ ಪೈಕಿ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ವರಿಷ್ಠರು ಎಷ್ಟು ಇಷ್ಟಪಡುತ್ತಾರೆ ಎಂಬ ಬಗೆಗಿನ ಮಾಹಿತಿಯೂ ಒಂದು. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀಮತಿ ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ, ರಾಜ್ಯ ಕಾಂಗ್ರೆಸ್‌ನ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೆಲ್ಲ ಹೆಜ್ಜೆ ಹೆಜ್ಜೆಗೂ ಡಿ.ಕೆ.ಶಿವಕುಮಾರ್ ಅವರನ್ನು ಬೆಂಬಲಿಸುವುದರಿಂದ, ಸಹಜವಾಗಿಯೇ ರಾಹುಲ್ ಗಾಂಧಿ ಅವರ ಮೇಲೆ ಒತ್ತಡ ಹೇರುತ್ತಾರೆ. ಅವರ ಮೂಲಕವೇ ಸಿದ್ದರಾಮಯ್ಯ ಅವರಿಗೆ ಪದತ್ಯಾಗ ಮಾಡುವಂತೆ ಸೂಚನೆ ಕೊಡಿಸುತ್ತಾರೆ ಎಂಬುದು ಬಿಜೆಪಿ ನಾಯಕರ ಲೆಕ್ಕಾಚಾರವಾಗಿತ್ತು.

ಇದಕ್ಕೆ ಪೂರಕವಾಗಿ ಇತ್ತೀಚೆಗೆ ಕೈ ಪಾಳಯದಿಂದ ತೇಲಿ ಬಂದ ಸುದ್ದಿಯೊಂದು ಬಿಜೆಪಿ ನಾಯಕರ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು. ಅದೆಂದರೆ, ಇವತ್ತು ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸುವ ಪ್ರಬಲ ನಾಯಕರೆಂದರೆ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್. ಇಂಥ ವೇಣುಗೋಪಾಲ್ ಅವರ ಮಾತನ್ನು ರಾಹುಲ್ ಗಾಂಧಿ ಯಾವ ಕಾರಣಕ್ಕೂ ಮೀರುವುದಿಲ್ಲ. ಇದೇ ಕಾರಣಕ್ಕಾಗಿ ಡಿ.ಕೆ. ಶಿವಕುಮಾರ್ ಅವರು ಎಷ್ಟೇ ಪ್ರಯತ್ನ ಮಾಡಿದರೂ ಅಂತಿಮ ಹಂತದಲ್ಲಿ ವೇಣುಗೋಪಾಲ್ ಅದಕ್ಕೆ ಅಡ್ಡಿಯಾಗುತ್ತಿದ್ದರು. ಆದರೆ ಅಂಥ ಕೆ.ಸಿ.ವೇಣುಗೋಪಾಲ್ ಅವರ ಮೇಲೆ ಈಗ ಪ್ರಿಯಾಂಕ ಗಾಂಧಿಯವರ ವಕ್ರದೃಷ್ಟಿ ಬಿದ್ದಿದೆ. ಹೀಗಾಗಿ ರಾಹುಲ್ ಗಾಂಧಿಯವರ ಕಣ್ಣು, ಕಿವಿಯಾಗಿರುವ ಅವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಎತ್ತಂಗಡಿ ಮಾಡಿಸಿ, ಆ ಜಾಗಕ್ಕೆ ರಾಜಸ್ಥಾನದ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರನ್ನು ತಂದು ಕೂರಿಸಲು ಅವರು ಬಯಸಿದ್ದಾರೆ ಎಂಬುದು. ಹೀಗೆ ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಡಿ.ಕೆ.ಶಿವಕುಮಾರ್ ಅವರ ಶಕ್ತಿ ಹೆಚ್ಚಾಗುತ್ತಿರುವುದರಿಂದ ನವೆಂಬರ್ ಇಪ್ಪತ್ತರ ಹೊತ್ತಿಗೆ ಕರ್ನಾಟಕದಲ್ಲಿ ಸಿಎಂ ಬದಲಾವಣೆಯ ಆಟ ಆರಂಭವಾಗುತ್ತದೆ. ಈ ಆಟ ಶುರುವಾಗಿ ಸಿದ್ದರಾಮಯ್ಯ ಅವರು ಕೆಳಗಿಳಿದಾಗ ಸಹಜವಾಗಿಯೇ ರಾಜ್ಯ ಕಾಂಗ್ರೆಸ್‌ನಲ್ಲಿ ಘಟಸ್ಫೋಟ ಸಂಭವಿಸುತ್ತದೆ.

ಸಿದ್ದರಾಮಯ್ಯ ಅವರು ಕೆಳಗಿಳಿದು ಡಿ.ಕೆ.ಶಿವಕುಮಾರ್ ಪಟ್ಟಕ್ಕೇರಿದ ಮೇಲೆ ಸಿದ್ದರಾಮಯ್ಯ ಅವರ ಬಣ ಕ್ರಾಂತಿಗೆ ಮುಂದಾಗುತ್ತದೆ. ಈ ಸಂದರ್ಭದಲ್ಲಿ ಅರವತ್ತರಷ್ಟು ಶಾಸಕರು ಸತೀಶ್ ಜಾರಕಿಹೊಳಿ ಅವರ ನೇತೃತ್ವದಲ್ಲಿ ಕಾಂಗ್ರೆಸ್‌ನಿಂದ ಹೊರಬರುತ್ತಾರೆ. ಪರಿಣಾಮ? ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಉರುಳುತ್ತದೆ. ಆ ಮೂಲಕ ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆ ಅನಿವಾರ್ಯವಾಗುತ್ತದೆ. ಹೀಗೆ ಮಧ್ಯಂತರ ಚುನಾವಣೆ ನಡೆದರೆ ಅನುಮಾನವೇ ಬೇಡ, ಬಿಜೆಪಿ-ಜೆಡಿಎಸ್ ಮೈತ್ರಿಕೂಟ ನೂರೈವತ್ತು ಕ್ಷೇತ್ರಗಳಲ್ಲಿ ನಿರಾಯಾಸವಾಗಿ ಗೆಲ್ಲುತ್ತದೆ ಎಂಬುದು ರಾಜ್ಯ ಬಿಜೆಪಿಯ ಹಲವು ನಾಯಕರ ಲೆಕ್ಕಾಚಾರವಾಗಿತ್ತು.

ಆದರೆ ಇತ್ತೀಚೆಗೆ ಹೊರಬಂದ ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಬಂಪರ್ ಕೊಡುಗೆ ದಕ್ಕಿದ್ದರೆ ಮಹಾಘಟಬಂಧನ್ ಹೀನಾಯ ಸೋಲನುಭವಿಸಿದೆ. ಇನ್ನು ಬಿಹಾರದ ರಾಜಕಾರಣದಲ್ಲಿ ದೊಡ್ಡ ಮಟ್ಟದ ಆಟ ಆಡುವ ಕನಸು ಕಂಡಿದ್ದ ಕಾಂಗ್ರೆಸ್ ಯಗಾದಿಗಾ ಹೊಡೆತ ತಿಂದು ಮೂಲೆ ಸೇರಿದೆ. ಯಾವಾಗ ಅದು ಇಂಥ ದಯನೀಯ ಸ್ಥಿತಿಗೆ ತಲುಪಿತೋ, ಆಗ ಕಾಂಗ್ರೆಸ್ ವರಿಷ್ಠರು ಕಂಗಾಲಾಗಿದ್ದಾರೆ. ಅಷ್ಟೇ ಅಲ್ಲ, ಕರ್ನಾಟಕದಲ್ಲಿ ಸಿಎಂ ಬದಲಾವಣೆಗೆ ಕೈ ಹಾಕುವ ಆಟದಿಂದ ಗಪ್ಪನೆ ಹಿಂದೆ ಸರಿದಿದ್ದಾರೆ.

ಹೀಗೆ ಅವರು ಹಿಂದೆ ಸರಿದಿರುವುದು ಸ್ಪಷ್ಟವಾಗುತ್ತಿದ್ದಂತೆಯೇ ಮಧ್ಯಂತರ ಚುನಾವಣೆಯ ಕನಸು ಕಂಡ ರಾಜ್ಯ ಬಿಜೆಪಿಯ ಹಲವು ನಾಯಕರು ತಣ್ಣಗಾಗಿದ್ದಾರೆ. ಅಷ್ಟೇ ಅಲ್ಲ, 'ಸಿದ್ದರಾಮಯ್ಯ ಕೆಳಗಿಳಿಯುವುದು ಗ್ಯಾರಂಟಿ' ಅಂತ ಮೊನ್ನೆ ಮೊನ್ನೆಯ ತನಕ ಶಾಸ್ತ್ರ ಹೇಳುತ್ತಿದ್ದವರು ಈಗ, 'ರಾಜ್ಯ ಕಾಂಗ್ರೆಸ್ ಅನ್ನು ಸಿದ್ದರಾಮಯ್ಯ ಫಿನಿಷ್ ಮಾಡುತ್ತಾರೆ' ಅಂತ ಪ್ಲೇಟು ತಿರುಗಿಸುತ್ತಿದ್ದಾರೆ.

ವಿಜಯೇಂದ್ರ ಅವರೇ ಇರಲಪ್ಪೋ..: ಇದೇ ರೀತಿ ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶವು ಕರ್ನಾಟಕದಲ್ಲಿನ ಮಧ್ಯಂತರ ಚುನಾವಣೆಯ ಕನಸನ್ನು ಭಗ್ನಗೊಳಿಸುತ್ತಿದ್ದಂತೆಯೇ ರಾಜ್ಯ ಬಿಜೆಪಿ ಪಾಳಯದಲ್ಲಿ ಹೊಸ ವರಸೆ ಶುರುವಾಗಿದೆ. ಅದೆಂದರೆ ಪಕ್ಷದ ಹಾಲಿ ಅಧ್ಯಕ್ಷ ವಿಜಯೇಂದ್ರ ಅವರು ಮುಂದುವರಿಯಲಿ ಅಂತ ಅವರ ವಿರೋಧಿಗಳೇ ಹೇಳುತ್ತಿರುವುದು.

ಮೊನ್ನೆ ಮೊನ್ನೆಯ ತನಕ 'ವಿಜಯೇಂದ್ರ ಹಟಾವೋ' ಯೋಜನೆಗೆ ಬಲ ತುಂಬುತ್ತಿದ್ದ ಈ ವಿರೋಧಿಗಳು ಈಗ, 'ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾಗಿ

ನವೆಂಬರ್ 15ಕ್ಕೆ ಎರಡು ವರ್ಷ ಪೂರ್ತಿಯಾಗಿದೆ. ಹೇಗಿದ್ದರೂ ಅವರ ಅಧಿಕಾರಾವಧಿ ಇನ್ನೂ ಒಂದು ವರ್ಷ ಇರುವುದರಿಂದ ಅವರೇ ಅಲ್ಲಿಯ ತನಕ ಮುಂದುವರಿಯಲಿ. ಆದರೆ ವರಿಷ್ಠರು ಕರ್ನಾಟಕಕ್ಕೆ ಬಂದು ಪುನಃ ಅವರ ಹೆಸರನ್ನು ಘೋಷಿಸಬಾರದು' ಎಂದು ಒತ್ತಾಯಿಸುತ್ತಿದ್ದಾರೆ. ಮೂಲಗಳ ಪ್ರಕಾರ, ಇದನ್ನೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಜಗತ್ ಪ್ರಕಾಶ್ ನಡ್ಡಾ ಅವರಿಗೆ ವಿವರಿಸಲು ರಾಜ್ಯ ಬಿಜೆಪಿಯ ಕೆಲ ನಾಯಕರು ದಿಲ್ಲಿಗೆ ಹೋಗಲಿದ್ದಾರೆ.

ಅಂದ ಹಾಗೆ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದು, ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯುವ ಕನಸು ಮೊಳೆತಿದ್ದರೆ, ಈ ವಿರೋಧಿ ಪಡೆ ವಿಜಯೇಂದ್ರ ಹಟಾವೋ ಯೋಜನೆಗೆ ಬಲ ತುಂಬುತ್ತಿತ್ತು. ಆದರೆ ಯಾವಾಗ ಈ ಕನಸು ಕಮರಿತೋ, ಆಗ ಅಧ್ಯಕ್ಷ ಸ್ಥಾನದ ಹೊರೆ ತಕ್ಷಣ ಬೇಡ. ಹೀಗಾಗಿ ಅದು ವಿಜಯೇಂದ್ರ ಹೆಗಲ ಮೇಲೇ ಇರಲಿ ಎಂಬ ಲೆಕ್ಕಾಚಾರಕ್ಕೆ ಬಂದಿದೆ.

ಕರ್ನಾಟಕದಲ್ಲೂ ಬಿಹಾರ ಮಾಡೆಲ್: ಅಂದ ಹಾಗೆ, ಬಿಹಾರ ಚುನಾವಣೆಯ ಫಲಿತಾಂಶ ಎನ್‌ಡಿಎ ಮೈತ್ರಿಕೂಟದ ಪರವಾಗಿರಲು ಏನು ಕಾರಣ ಎಂಬ ಬಗ್ಗೆ ಕುತೂಹಲಕಾರಿ ಚರ್ಚೆ ಆಗುತ್ತಿದೆ. ಅದರ ಪ್ರಕಾರ, ಬಿಹಾರದಲ್ಲಿ ಅತಿ ಹಿಂದುಳಿದ ಜಾತಿಗಳನ್ನು ಗುರುತಿಸಿದ ಮುಖ್ಯಮಂತ್ರಿ ನಿತೀಶ್ ಕುಮಾರ್, ಅವುಗಳನ್ನು ಸಂಘಟಿಸಿದರು. ಇದರ ಲಾಭ ಎನ್‌ಡಿಎ ಮೈತ್ರಿಕೂಟಕ್ಕೆ ದೊಡ್ಡ ಮಟ್ಟದಲ್ಲಿ ದೊರೆಯಿತು ಎಂಬುದು ಒಂದು. ಕುತೂಹಲದ ಸಂಗತಿ ಎಂದರೆ ಬಿಹಾರದಲ್ಲಿ ನಿತೀಶ್ ಕುಮಾರ್ ಮಾಡಿದ ಕೆಲಸವನ್ನು ಕರ್ನಾಟಕದಲ್ಲಿ ಬಿಜೆಪಿ ಕೂಡ ಮಾಡುತ್ತಿದೆ. ಮೂಲಗಳ ಪ್ರಕಾರ, ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಈ ಕಾರ್ಯಕ್ಕೆ ಚಾಲನೆ ನೀಡಿ ಹಲವು ತಿಂಗಳುಗಳೇ ಆಗಿವೆ. ಅದರನ್ವಯ ಹಿಂದುಳಿದ ಜಾತಿಗಳಿಂದ ಬಂದ ಹಲವು ನಾಯಕರನ್ನು ಗುರುತಿಸಿ, ಅವರಿಗೆ ಜವಾಬ್ದಾರಿ ಕೊಟ್ಟು ಅತಿ ಹಿಂದುಳಿದ ಜಾತಿಗಳ ಮತಬ್ಯಾಂಕನ್ನು ಬಲಪಡಿಸುವ ಜವಾಬ್ದಾರಿ ವಹಿಸಲಾಗಿದೆ. ಕುತೂಹಲದ ಸಂಗತಿ ಎಂದರೆ ಈ ಹೊಣೆಗಾರಿಕೆ ಹೊತ್ತ ಹಲವರು ಬಿಜೆಪಿಯವರಲ್ಲ. ಹೀಗೆ ಇಂಥವರನ್ನು ನೇಮಿಸುವಾಗ ಸಿದ್ದರಾಮಯ್ಯ ಸರಕಾರದಲ್ಲಿ ಲಾಭ ಪಡೆಯುತ್ತಿರುವ ಹಿಂದುಳಿದ ಜಾತಿಗಳು ಯಾವುವು? ವಂಚಿತವಾಗುತ್ತಿರುವ ಜಾತಿಗಳು ಯಾವುವು? ಎಂಬ ದಾಖಲೆಗಳನ್ನು ಸಂಗ್ರಹಿಸುವ ಹೊಣೆಗಾರಿಕೆಯನ್ನು ಅವರಿಗೆ ವಹಿಸಲಾಗಿದೆ. ಇವತ್ತು ರಾಜ್ಯದಲ್ಲಿ 197-198 ಹಿಂದುಳಿದ ಜಾತಿಗಳಿವೆ. ಇವುಗಳಲ್ಲಿ ಅತಿ ಹಿಂದುಳಿದವರ ಪಟ್ಟಿಯಲ್ಲಿ 95 ಜಾತಿಗಳಿವೆ. ಈ ಜಾತಿಗಳನ್ನು ಸಂಘಟಿಸಿದರೆ ಬಹುತೇಕ ಕ್ಷೇತ್ರಗಳಲ್ಲಿ ವಿನ್ನಿಂಗ್ ಮಾರ್ಜಿನ್‌ಗೆ ಅಗತ್ಯವಾದಷ್ಟು ಮತಗಳು ದಕ್ಕುತ್ತವೆ ಎಂಬುದು ಸಂತೋಷ್ ಲೆಕ್ಕಾಚಾರ.

ಸಂಪುಟ ಪುನಾರಚನೆ ನಿಜಕ್ಕೂ ಕಷ್ಟ: ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ವಾರ ದಿಲ್ಲಿ ಪ್ರವಾಸ ಮಾಡಿದರಲ್ಲ? ಈ ಸಂದರ್ಭದಲ್ಲಿ ಅವರು ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಬಂದಿದ್ದೇ ತಡ, ಕರ್ನಾಟಕದಲ್ಲಿ ಸಂಪುಟ ಪುನಾರಚನೆ ಗ್ಯಾರಂಟಿ ಎಂಬ ಮಾತು ಕೇಳಿಬರುತ್ತಿದೆ. ಆದರೆ ದಿಲ್ಲಿಯ ಕಾಂಗ್ರೆಸ್ ಮೂಲಗಳ ಪ್ರಕಾರ, ಸಂಪುಟ ಪುನಾರಚನೆ ನಿಜಕ್ಕೂ ಕಷ್ಟ, ಕಾರಣ? ಸಂಪುಟ ಪುನಾರಚನೆಗೆ ಕೈ ಹಾಕಿ ಹತ್ತೋ ಹನ್ನೆರಡು ಮಂದಿಯನ್ನು ಕಿತ್ತುಹಾಕಿದರೆ ಮೊದಲ ಕಂತಿನ ಭಿನ್ನಮತೀಯರ ಪಡೆ ಮೇಲೆದ್ದು ನಿಲ್ಲುತ್ತದೆ. ಇದೇ ರೀತಿ ಮಂತ್ರಿ ಮಂಡಲಕ್ಕೆ ಸೇರಲಾಗದವರು ಎರಡನೇ ಕಂತಿನ ಭಿನ್ನಮತೀಯರಾಗುತ್ತಾರೆ.

ಇವತ್ತು ಬಿಹಾರದ ಫಲಿತಾಂಶ ಕಾಂಗ್ರೆಸ್ ಪಕ್ಷದ ಸೊಂಟಕ್ಕೆ ಬಕಾಬರಲೆ ಬಾರಿಸಿರುವುದರಿಂದ ಕರ್ನಾಟಕದಲ್ಲಿ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವುದು ವರಿಷ್ಠರಿಗೆ ಇಷ್ಟವಿಲ್ಲ. ಇದೇ ರೀತಿ ಮಂತ್ರಿಮಂಡಲ ಪುನಾರಚನೆಗೆ ಕೈ ಹಾಕಿದರೆ ಹಲವು ಬಣಗಳು ಬಡಿದಾಟಕ್ಕಿಳಿಯುತ್ತವೆ. ಇಂಥ ಬಡಿದಾಟ ಬಿಜೆಪಿಯ ಆಸೆಗೆ ಬೆಂಬಲ ನೀಡಬಹುದು ಎಂಬುದು ವರಿಷ್ಠರ ಆತಂಕ.

ಸದ್ಯಕ್ಕಿರುವ ಮಾಹಿತಿಗಳ ಪ್ರಕಾರ ಹಾಲಿ ಸಂಪುಟದ 17ರಿಂದ 19 ಮಂತ್ರಿಗಳನ್ನು ತೆಗೆದುಹಾಕಬೇಕು ಅಂತ ಪಕ್ಷದ ರಣತಂತ್ರಜ್ಞರು ಕಳಿಸಿರುವ ರಿಪೋರ್ಟು ವರಿಷ್ಠರ ಕೈಲಿದೆ. ಆದರೆ ಬಿಹಾರದಲ್ಲಿ ಬಿದ್ದ ಹೊಡೆತದಿಂದ ಸುಸ್ತಾಗಿರುವ ವರಿಷ್ಠರು ಈ ವರದಿಯನ್ನು ಜಾರಿಗೊಳಿಸಲು ಹಿಂಜರಿಯುತ್ತಿದ್ದಾರೆ. ಮೂಲಗಳ ಪ್ರಕಾರ, ಸಂಪುಟ ಪುನಾರಚನೆ ಈ ವರ್ಷ ನಡೆಯುವುದು ಡೌಟು. ಒಂದು ವೇಳೆ ಎಲ್ಲವನ್ನೂ ಮೀರಿ ರಿಸ್ಕ್ ತೆಗೆದುಕೊಳ್ಳಲು ವರಿಷ್ಠರು ಮುಂದಾದರೆ ಅದು ಪವಾಡ.

ಲಾಸ್ಟ್ ಸಿಪ್: ಅಂದ ಹಾಗೆ, ಬಿಹಾರ ವಿಧಾನಸಭೆ ಚುನಾವಣೆಯ ಫಲಿತಾಂಶ ಸಿಎಂ ಸಿದ್ದರಾಮಯ್ಯ ಅವರನ್ನು ಗಟ್ಟಿಗೊಳಿಸಿದೆ ಎಂಬ ಮಾತೇನಿದೆ, ಇದನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಪಾಳಯ ಒಪ್ಪುವುದಿಲ್ಲ, ಕೇಳಿದರೆ, 'ನೋಡ್ತಾ ಇರಿ. ಡಿಕೆಶಿ ಸಾಹೇಬ್ರು ರಿಯಲ್ ಫೈಟರ್. ನಿರ್ಣಾಯಕ ಸಂದರ್ಭದಲ್ಲಿ ಒಂದು ಬಾಂಬು ಸಿಡಿಸಿ ಪರಿಸ್ಥಿತಿಯನ್ನು ತಮ್ಮ ಕಂಟ್ರೋಲಿಗೆ ತೆಗೆದುಕೊಳ್ಳುತ್ತಾರೆ, ಮುಖ್ಯಮಂತ್ರಿ ಆಗುತ್ತಾರೆ' ಅಂತ ವಿಶ್ವಾಸ ವ್ಯಕ್ತಪಡಿಸುತ್ತದೆ. ಅದು ಹೇಳುವ ಬಾಂಬು ಯಾವುದು? ಅನ್ನುವುದೇ ಸದ್ಯದ ಕುತೂಹಲ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿದ್ಯಾವಂತ ಅನ್ನಲಾಗದು

ಮೋಹನ್ ವಿಶ್ವ ಅವರ ಅಂಕಣವು (ನ.15) 'ವಿದ್ಯಾವಂತರು ಭಯೋತ್ಪಾದಕರಾದರೆ ಕಥೆ ಏನು?' ಎಂದು ಪ್ರಶ್ನಿಸಿದೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ, ಶಾಲಾ-ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಓದಿ ಉದ್ದುದ್ದ ಪದವಿ ಹೊಂದಿದವರೆಲ್ಲರೂ 'ವಿದ್ಯಾವಂತರೆ'? ಎಂಬುದು. ಅಂಕಣಕಾರರು ಒಂದಿಷ್ಟು ಉದಾಹರಣೆಗಳನ್ನು ಕೊಡುತ್ತ, ಎಂಜಿನಿಯರಿಂಗ್, ವೈದ್ಯಕೀಯ, ಪಿಎಚ್‌ಡಿ ಪದವಿಗಳನ್ನು ಪಡೆದವರಲ್ಲಿ ಅನೇಕರು ಭಯೋತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದನ್ನು ಉಲ್ಲೇಖಿಸಿದ್ದಾರೆ. ನಿಜ, ಇತ್ತೀಚೆಗೆ ನಡೆದ ದೆಹಲಿ ಬಾಂಬ್ ಸ್ಫೋಟ ಪ್ರಕರಣದಲ್ಲಂತೂ ಶಾಮೀಲಿದ್ದವರೆಲ್ಲ ಎಂಬಿಬಿಎಸ್ ಪದವೀಧರರೇ. ಹೀಗಾಗಿ ಇವರನ್ನು ವಿದ್ಯಾವಂತರು/ಸುಶಿಕ್ಷಿತರು ಎನ್ನುವ ಬದಲು 'ಪದವೀಧರರು' ಎಂದಷ್ಟೇ ಕರೆಯುವುದು ಹೆಚ್ಚು ಸೂಕ್ತ, ಅಲ್ಲವೇ?

'ವಿದ್ಯಾವಂತ' ಅಥವಾ 'ಸುಶಿಕ್ಷಿತ' ಎಂಬ ಪದಗಳು ಕೆಲವರು ಅಂದುಕೊಂಡಷ್ಟು ಹಗುರವಲ್ಲ; ಅವಕ್ಕೆ ಅವುಗಳದ್ದೇ ಆದ ತೂಕ, ಗೌರವ, ಗುರುತು ಇವೆ. ಹೀಗಾಗಿ ಪದವೀಧರರು/ಓದಿದವರು ಎನ್ನಲಾಗುವ ಎಲ್ಲರನ್ನೂ 'ಸುಶಿಕ್ಷಿತರು' ಅಥವಾ 'ವಿದ್ಯಾವಂತರು' ಎನ್ನಲಾಗದು. ಹಾಗೆ ನೋಡಿದರೆ, ಪ್ರಾಥಮಿಕ ಶಾಲೆಯ ಮೆಟ್ಟಿಲನ್ನೂ ಹತ್ತದವನು ತನ್ನ ಕಸುಬಿನಲ್ಲಿ ಅತ್ಯಂತ ಪರಿಣತನಾಗಿದ್ದರೆ ಆತ 'ವಿದ್ಯಾವಂತ'ನೇ. ಅಂದರೆ ತಾನು ಆಯ್ದುಕೊಂಡ ಕಾರ್ಯಕ್ಷೇತ್ರದಲ್ಲಿ ಆತನಿಗೆ ಜ್ಞಾನ, ಆತ್ಮವಿಶ್ವಾಸಗಳಿದ್ದಲ್ಲಿ ಅದುವೇ ವಿದ್ಯೆ; ಅದನ್ನು ಬಿಟ್ಟು, ಕೇವಲ ಸರ್ಟಿಫಿಕೇಟ್ ಇಟ್ಟುಕೊಂಡ ಮಾತ್ರಕ್ಕೆ ಅಂಥವರನ್ನು ವಿದ್ಯಾವಂತ/ಸುಶಿಕ್ಷಿತ ಎನ್ನಲಾಗದು. ಮತ್ತೊಂದೆಡೆ, ಪ್ರತಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ದಕ್ಕಿಸಿಕೊಂಡು, ಪದವಿ ಮತ್ತು ಪ್ರಮಾಣಪತ್ರಗಳು ಎಲ್ಲವೂ ಇದ್ದೂ ವ್ಯಕ್ತಿಯೊಬ್ಬ ತನ್ನ ಕಾಲ ಮೇಲೆ ತಾನು ನಿಲ್ಲುವಲ್ಲಿ ಅಶಕ್ತ ಅಂತಾದರೆ, ಅಂಥವರನ್ನೂ 'ವಿದ್ಯಾವಂತ' ಎನ್ನಲಾಗದು.

ಒಟ್ಟಿನಲ್ಲಿ, ಅಂಕಣ ಉತ್ತಮವಾಗಿ ಮೂಡಿಬಂದಿದೆ.

- ಶಂಕರನಾರಾಯಣ ಭಟ್, ಮಾಡಗೇರಿ

ಸಂಗತಿ ಸಾಬೀತಾಯಿತು

ನಮ್ಮ ಊರ ಕಡೆ ಪ್ರಚಲಿತವಾಗಿರುವ ಒಂದು ಅಸ್ತ್ರವಿದು. ಇಬ್ಬರು ಜೋರಾಗಿ ವಾದಿಸುತ್ತಾ ಜಗಳವಾಡುತ್ತಿದ್ದರೆ, ಅದರಲ್ಲಿ ಒಬ್ಬ ತನ್ನ ಎದುರಾಳಿಗೆ, ''ಏನ್ರೀ? ನೀವು ಎಜುಕೇಟೆಡ್ ಆಗಿ ಹಿಂಗ ಮಾತಾಡ್ತೀರಿ?'' ಅಂತ ಅಂದುಬಿಟ್ಟರೆ ಮುಗೀತು, ಎದುರಾಳಿಯ ಬಾಯಿ ಕಟ್ಟಿಹಾಕಿದಂತೆ! ಜಗಳ ಅಲ್ಲಿಗೆ ಖತಂ! ಅಂದರೆ ಎಜುಕೇಟೆಡ್ ಅಥವಾ ವಿದ್ಯಾವಂತರು, ಅಲ್ಪ ಸ್ವಲ್ಪ ಶಾಲೆ ಕಲಿತವರು, ಪದವೀಧರರು ಅಪಸವ್ಯ ಶಬ್ದ ಬಳಸಬಾರದು, ಬೀದಿಜಗಳ ಮಾಡಬಾರದು ಅಂತ ಒಂದು ಅಲಿಖಿತ ನಂಬಿಕೆ ಇದೆ. ನಿಜಾರ್ಥದಲ್ಲಿ, ನಾಗರಿಕ ಪ್ರಜ್ಞೆ ಅಥವಾ ನೀತಿನಿಯಮ/ಸಂಹಿತೆಗೆ ನಮ್ಮ ಪಠ್ಯಕ್ರಮದಲ್ಲಿ ಅವಕಾಶವೇ ಇಲ್ಲ, ಅಲ್ಲಿ ಕಲಿಸುವುದು ಜೀವನಶಿಕ್ಷಣ ಅಲ್ಲ; ಹಲವಾರು ವಿಷಯಗಳನ್ನು ಬಾಯಿಪಾಠ ಮಾಡಿಸಿ, ಪರೀಕ್ಷೆಯಲ್ಲಿ ಅದನ್ನು 'ವಾಂತಿ' ಮಾಡಿಸುವುದು. ಉದಾಹರಣೆಗೆ, ಮಾರಿಷಸ್‌ನ ರಾಜಧಾನಿಯ ಜನಸಂಖ್ಯೆ ಎಷ್ಟು ಅಂತ ನಿಖರವಾಗಿ ಹೇಳುವ ಬಾಲಕನಿಗೆ, ರಾಷ್ಟ್ರಪ್ರೇಮ, ದೇಶಾಭಿಮಾನ ಅಂದರೇನು ಅಂತ ಯಾರೂ ಹೇಳಿಕೊಡುವುದಿಲ್ಲ. ಇಂಥ ವೇಳೆ, ಎಜುಕೇಟೆಡ್ ಅಂದರೆ ಶುಷ್ಕಜ್ಞಾನಿ, ಸುಶಿಕ್ಷಿತನಂತೂ ಅಲ್ಲವೇ ಅಲ್ಲ ಎಂಬ ಗ್ರಹಿಕೆ ದೃಢವಾಗುತ್ತದೆ. ಆದ್ದರಿಂದ ಕೆಲ ವಿದ್ಯಾವಂತರೂ 'ಭಯೋತ್ಪಾದಕರು' ಆಗುವುದರಲ್ಲಿ ಸಂದೇಹವಿಲ್ಲ, ಶಿಕ್ಷಣವು ಅವರ ನಂಬಿಕೆಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಮೋಹನ್ ವಿಶ್ವ ಅವರ ಅಂಕಣಬರಹವು (ನ.15) ಈ ಸಂಗತಿಯನ್ನು ಸಾಬೀತುಪಡಿಸಿದೆ.

- ಶರದ್ ದೇಶಪಾಂಡೆ, ಹುಬ್ಬಳ್ಳಿ

ಪ್ರಶಸ್ತಿ ಘೋಷಿಸಲಿ

ಪದ್ಮಶ್ರೀ' ಸೇರಿದಂತೆ ಹತ್ತು ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಮತ್ತು ಇತ್ತೀಚೆಗೆ ನಮ್ಮನ್ನು ಅಗಲಿದ 'ವೃಕ್ಷಮಾತೆ' ಸಾಲುಮರದ ತಿಮ್ಮಕ್ಕನವರು ಸಾವಿರಾರು ಸಸಿಗಳನ್ನು ನೆಟ್ಟು ಪೋಷಿಸಿ ಮರಗಳಾಗಿ ಬೆಳೆಸಿ, ಪರಿಸರವನ್ನು ಉಳಿಸಲು ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದವರು. ಪರಿಸರ ಸಂರಕ್ಷಣೆಗೆ ತಿಮ್ಮಕ್ಕ ಅವರು ನೀಡಿರುವ ಅನುಪಮ ಕೊಡುಗೆಯನ್ನು ಗುರುತಿಸಿ ರಾಜ್ಯ ಸರಕಾರವು ಅವರ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನು ಸ್ಥಾಪಿಸಿ, ಪರಿಸರ ಸಂರಕ್ಷಣೆಗೆ ಸ್ಪಂದಿಸುವವರನ್ನು ಗುರುತಿಸಿ ವಿತರಿಸುವಂತಾಗಲಿ.

- ಶಿವರಾಜ್ ನಡಗೇರಿ, ಕಲಬುರಗಿ

ಉಚಿತ ಭಾಗ್ಯಗಳ ಮೋಹದಿಂದ ಕುಸಿದ ರಾಷ್ಟ್ರಗಳ ಕಥೆ

ವಿಶ್ಲೇಷಣೆ

ಡಾ. ನಿರಂಜನ ಪೂಜಾರ
vveditoped@gmail.com

ಸಮಾಜವಾದದ ಮೋಹಕ ಆಕರ್ಷಣೆಯಿಂದಾಗಿ ದಿವಾಳಿಯಾದ ಅನೇಕ ರಾಷ್ಟ್ರಗಳ ಕಥೆಯನ್ನು ಆರ್ಥಿಕ ಇತಿಹಾಸದ ಪುಟಗಳು ಸ್ಪಷ್ಟವಾಗಿ ತೆರೆದಿಡುತ್ತವೆ. ಜನರಿಗೆ ಸಮಾನತೆಯ ಕನಸನ್ನು ಬಿತ್ತಿದ ಸರಕಾರಗಳು, ಅಂತಿಮವಾಗಿ ತಮ್ಮದೇ ರಾಷ್ಟ್ರಗಳನ್ನು ದಾರಿದ್ರ್ಯ, ಅಪಾರ ಸಾಲ ಮತ್ತು ಆರ್ಥಿಕ ಕುಸಿತದ ಆಳಕ್ಕೆ ತಳ್ಳಿವೆ. ಉಚಿತ ಭಾಗ್ಯಗಳು, ಆರ್ಥಿಕ ಸಮತೆಯ ಘೋಷಣೆಗಳು ಮತಪೆಟ್ಟಿಗೆಯಲ್ಲಿ ಮಧುರವಾಗಿ ಪ್ರತಿಧ್ವನಿಸುತ್ತವೆ; ಆದರೆ ಅಧಿಕಾರಕ್ಕೆ ಬಂದಾಗ ಅವು ರಾಷ್ಟ್ರದ ಉತ್ಪಾದಕ ಶಕ್ತಿಯನ್ನು ಸಂಪೂರ್ಣವಾಗಿ ಕುಗ್ಗಿಸುತ್ತವೆ. ಸಮಾಜವಾದದ ಸಿದ್ಧಾಂತಗಳು ಮಾನವ ಪ್ರಗತಿಯ ಶಕ್ತಿಯನ್ನೇ ನಾಶಮಾಡುವಂಥ ಅಗಾಧ ಸಾಮರ್ಥ್ಯವನ್ನು ಹೊಂದಿವೆ. ಶ್ರಮಕ್ಕೆ ಪ್ರೇರಣೆ ಇಲ್ಲದ ಸಮಾಜ, ಕೇಂದ್ರೀಕೃತ ನಿಯಂತ್ರಣದಲ್ಲಿ ಸಿಲುಕಿದ ಆರ್ಥಿಕತೆ, ಮಿತಿಮೀರಿದ ಸಾಲ ಮತ್ತು ಉತ್ಪಾದನೆಗಿಂತ ಹೆಚ್ಚು ಖರ್ಚು ಈ ಅಂಶಗಳು ಸಂಪೂರ್ಣ ಆಡಳಿತ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತವೆ. ಆಧುನಿಕ ಇತಿಹಾಸದಲ್ಲಿ ಈ ಮಾದರಿ ಅನೇಕ ಬಾರಿ ದೃಢಪಟ್ಟಿದೆ; ಇದು ಕೇವಲ ಷಡ್ಯಂತ್ರ ಸಿದ್ಧಾಂತವಲ್ಲ (Conspiracy Theory). ಸೋವಿಯತ್ ಯುಗದಿಂದ ವೆನೆಜುವೆಲಾದವರೆಗೂ, ಸಮಾಜವಾದದ ಭರವಸೆಗಳು ಪ್ರಾರಂಭದಲ್ಲಿ ಜನರಿಗೆ ಆಶಾದಾಯಕವಾಗಿ ಕಂಡರೂ, ಅಂತಿಮವಾಗಿ ಅವುಗಳೇ ಭಾರವಾದ ಆರ್ಥಿಕ ಬಾಧ್ಯತೆಯಾಗಿ ದೇಶವನ್ನು ದಿವಾಳಿ ಮಾಡಿದವು. ಈ ಕಥೆಗಳು ಕೇವಲ ರಾಜಕೀಯ ವಿಚಾರವಲ್ಲ, ಕಠೋರ ಅನುಭವದ ಸತ್ಯವೂ ಹೌದು.

ಸೋವಿಯತ್ ಒಕ್ಕೂಟದ ಪತನ (1991): ಸೋವಿಯತ್ ಒಕ್ಕೂಟವು ಈ ಕಥೆಯ ಮೊದಲ ಮತ್ತು ಅತ್ಯಂತ ದೊಡ್ಡ ಚಾರಿತ್ರಿಕ ಅಧ್ಯಾಯ. ಕೈಗಾರಿಕಾ ಅಭಿವೃದ್ಧಿ, ತಂತ್ರಜ್ಞಾನ ಮತ್ತು ಸಾಮಾಜಿಕ ಸಮಾನತೆಯ ಹೆಸರಿನಲ್ಲಿ ಕೇಂದ್ರೀಯ ನಿಯಂತ್ರಣವನ್ನು ಬಲವಾಗಿ ಅಳವಡಿಸಿಕೊಂಡ ಸೋವಿಯತ್ ವ್ಯವಸ್ಥೆ ಪ್ರಾರಂಭದಲ್ಲಿ ಪ್ರಗತಿಯ ಸಂಕೇತದಂತೆ ಭಾಸವಾಯಿತು. ಆದರೆ ಅದು ವೈಯಕ್ತಿಕ ಉತ್ಪಾದಕತೆಯಿಂದ ಪ್ರೇರಿತರಾದ ಪ್ರಜೆಗಳ ಬದಲಿಗೆ, ಕೇವಲ ನಿಯಮಗಳಿಗೆ ಬದ್ಧರಾದ ಉದ್ಯೋಗಿಗಳನ್ನು ಸೃಷ್ಟಿಸಿತು. ವೈಯಕ್ತಿಕ ಪ್ರೇರಣೆ ಇಲ್ಲದ ಸಮಾಜವು ನಿಧಾನವಾಗಿ ತನ್ನ ಆರ್ಥಿಕ ಚೈತನ್ಯವನ್ನು ಕಳೆದುಕೊಂಡಿತು.

1970ರ ದಶಕದ ವೇಳೆಗೆ ಕೈಗಾರಿಕಾ ಬೆಳವಣಿಗೆ ಶೇ.1ಕ್ಕಿಂತ ಕಡಿಮೆ ಮಟ್ಟಕ್ಕೆ ಕುಸಿಯಿತು. ಆಹಾರ ಹಾಗೂ ದಿನಬಳಕೆಯ ವಸ್ತುಗಳ ಕೊರತೆ ಪ್ರತಿ ಮನೆಯ ದೈನಂದಿನ ಕಥೆಯಾಯಿತು. ಅದೇ ಸಮಯದಲ್ಲಿ, ದೇಶದ ಸೈನಿಕ ಖರ್ಚು ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಕಾಲುಭಾಗಕ್ಕೆ ಏರಿತು. ಇದರ ಪರಿಣಾಮವಾಗಿ, 1989ರ ಹೊತ್ತಿಗೆ ವಿದೇಶಿ ಸಾಲಗಳು 60 ಬಿಲಿಯನ್ ಡಾಲರ್‌ಗೆ ತಲುಪಿದವು. ಇದು ಸಮಾಜವಾದ ವ್ಯವಸ್ಥೆಯ ನಿಜವಾದ ಆರ್ಥಿಕ ದುರ್ಬಲತೆಯನ್ನು ಬಯಲುಮಾಡಿತು. 1991ರಲ್ಲಿ, ಜಗತ್ತಿನ ಅತಿದೊಡ್ಡ ಸಮಾಜವಾದಿ ರಾಜ್ಯವು ಪತನಗೊಂಡಿತು. ಅದು ಕೇವಲ ರಾಜಕೀಯ ಪತನವಲ್ಲ, ವಿಫಲ ಸಿದ್ಧಾಂತದ ದರ್ಶನವೂ ಆಗಿತ್ತು. ಜನರನ್ನು ಸಮಾನವಾದ ಜೀವನದೆಡೆಗೆ ನಡೆಸಬೇಕೆಂಬ ಆಶಯದಲ್ಲಿದ್ದ ವ್ಯವಸ್ಥೆಯು, ಕೊನೆಗೆ ಅನಿಯಂತ್ರಿತ ಕೇಂದ್ರೀಕರಣದ ಭಾರದಿಂದಾಗಿ ಕುಸಿಯಿತು ಮತ್ತು ಅತಿ ದೊಡ್ಡ ಸಾಮ್ರಾಜ್ಯ ತುಂಡುತುಂಡಾಯಿತು.

ಚೀನಾದ ಪಲ್ಲಟ (1978): ಇದಾದ ಬಳಿಕ, ಚೀನಾದ ಪ್ರಯೋಗವೂ ಇದೇ ಪಾಠವನ್ನು ಸಾರಿತು. ಮಾವೋವಾದಿ ಸಮಾಜವಾದವು ದೇಶವನ್ನು ಹಸಿವಿನ ನಾಡಾಗಿಸಿತು, ಕಠಿಣ ನಿಯಂತ್ರಣವು ರೈತರ ಪ್ರೇರಣೆ ಮತ್ತು ಸ್ವಾತಂತ್ರ್ಯವನ್ನು ನಾಶಮಾಡಿತು. 1958ರಿಂದ 1962ರ ಗ್ರೇಟ್ ಲೀಪ್ ಫಾರ್ವರ್ಡ್ ಸಮಯದಲ್ಲಿ, ಲಕ್ಷಾಂತರ ಜನರು ಆಹಾರ ಕೊರತೆಯಿಂದ ಸಾವನ್ನಪ್ಪಿದರು; ಇದು ಮಾನವ ಇತಿಹಾಸದ ಅತ್ಯಂತ ಕರಾಳ ಅಧ್ಯಾಯಗಳಲ್ಲಿ ಒಂದು. ನಂತರ 1978ರಲ್ಲಿ ಡೆಂಗ್ ಕ್ಸಿಯಾಪಿಂಗ್ ಅಧಿಕಾರಕ್ಕೆ ಬಂದ ನಂತರ, ಚೀನಾದಲ್ಲಿ ಮಹತ್ತರ ಬದಲಾವಣೆಗಳು ಆರಂಭವಾದವು. ಕೇಂದ್ರ ನಿಯಂತ್ರಣದ ಅಡ್ಡಿಗಳನ್ನು ನಿಧಾನವಾಗಿ ತೆಗೆದುಹಾಕಿ, ಮುಕ್ತ ಮಾರುಕಟ್ಟೆಗೆ ಅವಕಾಶ ನೀಡಿದಾಗ, ಚೀನಾ ತನ್ನ ಅಭೂತಪೂರ್ವ ಆರ್ಥಿಕ ಪುನರುತ್ಥಾನವನ್ನು ಕಂಡಿತು.

ಭಾರತದ ಪಾಠ (1991): ಭಾರತದ ಕಥೆಯೂ ಇದೇ ಪಾಠವನ್ನು ಪುನರುಚ್ಚರಿಸುತ್ತದೆ. ಸ್ವತಂತ್ರ ಭಾರತವು ಅಳವಡಿಸಿಕೊಂಡ ಮಿಶ್ರ ಆರ್ಥಿಕತೆ ಎಂಬ ಹೆಸರಿನ ಸಮಾಜವಾದಿ ಮಾದರಿಯಲ್ಲಿ ಸರಕಾರದ ನಿಯಂತ್ರಣ ಮತ್ತು ಭಾರಿ ಸಬ್ಸಿಡಿಗಳು ಪ್ರಧಾನವಾಗಿದ್ದವು. 'ಲೈಸೆನ್ಸ್ ರಾಜ್' ವ್ಯವಸ್ಥೆ ಖಾಸಗಿ ಉದ್ಯಮವನ್ನು ಬಿಗಿಯಾಗಿ ಕಟ್ಟಿಹಾಕಿತು. 1991ರ ವೇಳೆಗೆ, ದೇಶದ ಆರ್ಥಿಕತೆ ಬಿಕ್ಕಟ್ಟಿನ ಅಂಚಿನಲ್ಲಿ ನಿಂತಿತ್ತು. ವಿದೇಶಿ ವಿನಿಮಯ ನಿಧಿ (Forex Reserve) 1.2 ಬಿಲಿಯನ್ ಡಾಲರ್ ಮಾತ್ರ ಉಳಿದಿತ್ತು, ಇದು ಮೂರು ವಾರಗಳ ಆಮದುಗಳಿಗೆ ಸಾಕಾಗುವಷ್ಟು ಮಾತ್ರ. ಈ ಆರ್ಥಿಕ ತುರ್ತು ಪರಿಸ್ಥಿತಿಯಲ್ಲಿ, ಭಾರತವು ತನ್ನ ಚಿನ್ನವನ್ನು ವಿಮಾನದಲ್ಲಿ Bank of England ಮತ್ತು IMF ಗೆ ಸಾಗಿಸಬೇಕಾಯಿತು. ಭಾರತದ ಒಟ್ಟು ಉತ್ಪಾದನೆ (ಜಿಡಿಪಿ) ಬೆಳವಣಿಗೆ ಶೇ.1.1ಕ್ಕೆ ಕುಸಿಯಿತು, ಹಣದುಬ್ಬರ (Inflation) ಶೇ.15ರ ಗಡಿಯನ್ನು ದಾಟಿತ್ತು, ಮತ್ತು ಸುಮಾರು ಶೇ.45ರಷ್ಟು ಜನರು ಬಡತನದ ರೇಖೆಯಲ್ಲಿದ್ದರು. ಇದು ಸರಕಾರಿ ನಿಯಂತ್ರಣದ, ಸರಕಾರದ ಮೇಲಿನ ಅವಲಂಬನೆಯ ಫಲಿತಾಂಶವಾಗಿತ್ತು.

ಪೂರ್ವ ಯುರೋಪಿನ ಪತನ (1989): ಪೂರ್ವ ಜರ್ಮನಿ, ಪೋಲೆಂಡ್, ಜೆಕೊಸ್ಲೊವಾಕಿಯಾ, ರೊಮೇನಿಯಾ, ಬಲ್ಗೇರಿಯಾ, ಹಂಗೇರಿ ಈ ಎಲ್ಲಾ ರಾಷ್ಟ್ರಗಳು ಸೋವಿಯತ್ ಮಾದರಿಯ ಕೇಂದ್ರ ನಿಯಂತ್ರಣಕ್ಕೆ ಶರಣಾಗಿದ್ದವು. 1980ರ ಅಂತ್ಯದ ಹೊತ್ತಿಗೆ ಜಿಡಿಪಿ ಬೆಳವಣಿಗೆ ಶೇ.1ಕ್ಕಿಂತ ಕಡಿಮೆ. ಪೋಲೆಂಡ್‌ನಲ್ಲಿ ಹಣದುಬ್ಬರ ಶೇ.300ನ್ನು ಮೀರಿತು, ಮತ್ತು ಬಾಹ್ಯ ಸಾಲವು 100 ಬಿಲಿಯನ್ ಡಾಲರ್‌ಗೆ ತಲುಪಿತು. ಸಮಾಜವಾದ ಕುಸಿದಾಗ, ಆರ್ಥಿಕ ವ್ಯವಸ್ಥೆಗಳ ನಿಜಸ್ವರೂಪ ಹೊರಬಂತು. ಅವೆಂದರೆ- ಖಾಲಿ ಖಜಾನೆಗಳು, ನಿಷ್ಕ್ರಿಯ ಕಾರ್ಖಾನೆಗಳು ಮತ್ತು ಭಾರಿ ಸಾಲ. ನಂತರ ಈ ದೇಶಗಳು ಐಎಂಎಫ್‌ನ ನೀತಿಯ ನಿಯಂತ್ರಣದಲ್ಲಿ ನೋವಿನಿಂದ ಮುಕ್ತ ಮಾರುಕಟ್ಟೆಯ ಮಾರ್ಗವನ್ನು ಹಿಡಿದವು.

ಕಾರ್ಮಿಕರ ಸ್ವರ್ಗ ಎಂದು ಕರೆಯಲಾಗುತ್ತಿದ್ದ ಯುಗೋಸ್ಲಾವಿಯಾದ ಕಥೆ ಮಾನವೀಯ ದೃಷ್ಟಿಯಿಂದ ಅತ್ಯಂತ ದುಃಖಕರ. ಕಾರ್ಮಿಕರ ಸ್ವ-ನಿರ್ವಹಣೆಯ ಮಾದರಿ ಎನ್ನಲ್ಪಟ್ಟ ಈ ರಾಷ್ಟ್ರವು 1991ರ ಬಳಿಕ ಛಿದ್ರವಾಯಿತು. ಅತಿವಿಸ್ತಾರವಾದ ಸಬ್ಸಿಡಿ ಮತ್ತು ಕೋಶೀಯ ಸಾಲಗಳು (Fiscal Debts) ಅತಿ ಹಣದುಬ್ಬರಕ್ಕೆ ಕಾರಣವಾದವು. ಜನವರಿ 1994ರಲ್ಲಿ, ಹಣದುಬ್ಬರ 313 ಮಿಲಿಯನ್ ಪ್ರತಿಶತ ತಲುಪಿತು, ಬೆಲೆಗಳು ಪ್ರತಿ 34 ಗಂಟೆಗಳಿಗೆ ದ್ವಿಗುಣವಾಗುತ್ತಿದ್ದವು. ದೇಶದ ಕರೆನ್ಸಿ ದಿನಾರ್ ಸಂಪೂರ್ಣ ನಿರರ್ಥಕವಾಯಿತು.

ಸೋವಿಯತ್ ಅವಲಂಬಿತವಾಗಿದ್ದ ಕ್ಯೂಬಾ, 1990ರ ದಶಕದಲ್ಲಿ ತನ್ನ ವ್ಯಾಪಾರದ ಶೇ.80ರಷ್ಟನ್ನು ಕಳೆದುಕೊಂಡಿತು. ಅಡುಗೆ ಎಣ್ಣೆ ಮತ್ತು ಆಹಾರದ ಕೊರತೆ, ಅಸ್ಥಿರ ಜೀವನ ಇದು ಕ್ಯೂಬಾ ದೇಶವು ಸಮಾಜವಾದಕ್ಕೆ ಕಟ್ಟಿದ ನಿಜವಾದ ಬೆಲೆಯಾಗಿತ್ತು. ಎಷ್ಟೇ ಕ್ರಾಂತಿಯ ಘೋಷಣೆಗಳು ಇರಲಿ, ಆರ್ಥಿಕ ಸತ್ಯದಿಂದ ಯಾರೂ ತಪ್ಪಿಸಿಕೊಳ್ಳಲಾರರು, ಸಮಾಜವಾದದ ಸಿದ್ಧಾಂತಕ್ಕೆ ಸಿಲುಕಿದ ಕ್ಯೂಬಾ, ಉತ್ತರ ಕೊರಿಯಾ, ಮತ್ತು ಅರ್ಜೆಂಟೀನಾದಂಥ ದೇಶಗಳು ತಮ್ಮ ಆರ್ಥಿಕ ಅಸ್ತಿತ್ವವನ್ನೇ ಕಳೆದುಕೊಂಡವು.

ವೆನೆಜುವೆಲಾದ ಭೀಕರ ಪತನ: 2014ರ ತರುವಾಯದ ವೆನೆಜುವೆಲಾದ ಪತನ ಇನ್ನೂ ಸ್ಪಷ್ಟ ಮತ್ತು ಇತ್ತೀಚಿನ ಪಾಠ. ಒಮ್ಮೆ ಲ್ಯಾಟಿನ್ ಅಮೆರಿಕದ ಅತ್ಯಂತ ಶ್ರೀಮಂತ ರಾಷ್ಟ್ರವಾಗಿದ್ದ ವೆನೆಜುವೆಲಾ, ಸಮಾಜವಾದಿ ಆಡಳಿತಕ್ಕೆ ಸಿಲುಕಿ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಿತು, ಬೆಲೆಗಳನ್ನು ನಿಗದಿಪಡಿಸಿತು ಮತ್ತು ಉಚಿತ ಭಾಗ್ಯಗಳ ಮೂಲಕ ತೈಲ ಸಂಪತ್ತನ್ನು ವಿತರಿಸಿತು. ತೈಲದ ಬೆಲೆ ಕುಸಿಯಲು ಆರಂಭಿಸಿದಾಗ ಸರಕಾರದ ಆದಾಯವೂ ದೊಡ್ಡಮಟ್ಟದಲ್ಲಿ ಕುಸಿಯಿತು. ಸುಧಾರಣೆಯ ಬದಲಿಗೆ, ಆಡಳಿತವು ಅನಿಯಮಿತವಾಗಿ ಹಣವನ್ನು ಮುದ್ರಿಸಿತು. 2018ರ ಹೊತ್ತಿಗೆ ಹಣದುಬ್ಬರ ಶೇ.1,000,000ದಷ್ಟು ಮೀರಿತು, ಜಿಡಿಪಿ ಶೇ.25ರಷ್ಟು ಕುಸಿಯಿತು, ಮತ್ತು ಬಡತನದ ಪ್ರಮಾಣ ಶೇ.90ಕ್ಕೆ ಏರಿತು. ದೇಶದ ಅರ್ಧದಷ್ಟು ನಾಗರಿಕರು ವಿದೇಶಗಳಿಗೆ ಪಲಾಯನ ಮಾಡಿದರು. ವಿಶ್ವದ ಅತಿದೊಡ್ಡ ತೈಲ ಸಂಚಿತ ನಿಧಿಯನ್ನು ಹೊಂದಿದ್ದ ದೇಶವು ಸಮಾಜವಾದಿ ನೀತಿಗಳಿಂದಾಗಿ ಸಂಪೂರ್ಣ ಆರ್ಥಿಕ ನಾಶಕ್ಕೆ ಒಳಗಾಯಿತು.

ದಕ್ಷಿಣ ಏಷ್ಯಾದ ಪಾಠ: ಶ್ರೀಲಂಕಾ ಮತ್ತು ಪಾಕಿಸ್ತಾನ ವರ್ಷಗಳ ಕಾಲ ಜನಪರ ಕಲ್ಯಾಣ ಎಂಬ ಹೆಸರಿನಲ್ಲಿ ಜಾರಿಯಾದ ಅತಿಯಾದ ಸರಕಾರಿ ಖರ್ಚುಗಳು ಮತ್ತು ಸುಸ್ಥಿರವಲ್ಲದ ಯೋಜನೆಗಳು ದೇಶದ ಹಣಕಾಸು ಶಿಸ್ತನ್ನು ಸಂಪೂರ್ಣವಾಗಿ ಹಾಳುಮಾಡಿದವು. ಶ್ರೀಲಂಕಾ 2019ರಲ್ಲಿ ಜಾರಿಗೆ ತಂದ ತೆರಿಗೆ ಕಡಿತಗಳು ರಾಜ್ಯದ ಆದಾಯವನ್ನು ಸುಮಾರು ಶೇ.25ರಷ್ಟು ಕುಸಿಯುವಂತೆ ಮಾಡಿದವು. 2021ರ ವೇಳೆಗೆ ಸಾರ್ವಜನಿಕ ಸಾಲವು ಜಿಡಿಪಿಯ ಶೇ.119ರಷ್ಟು ಮಟ್ಟಕ್ಕೆ ಏರಿತು, ಮತ್ತು ವಿದೇಶಿ ವಿನಿಮಯ ನಿಧಿ ಕೇವಲ 400 ಕೋಟಿ ರೂ. ಮಟ್ಟಕ್ಕೆ ಇಳಿಯಿತು. 2022ರ ಆರಂಭದಲ್ಲಿ ಇಂಧನ ಮತ್ತು ಆಹಾರ ಆಮದು ನಿಂತುಹೋದಾಗ ರಾಷ್ಟ್ರವ್ಯಾಪಿ ಜನಪ್ರತಿಭಟನೆಗಳು ಸ್ಫೋಟಿಸಿದವು. ಏಪ್ರಿಲ್ 2022ರಲ್ಲಿ, ಶ್ರೀಲಂಕಾ ತನ್ನ 4.2 ಲಕ್ಷ ಕೋಟಿ ರು. ವಿದೇಶಿ ಸಾಲದ ಪಾವತಿಯನ್ನು ನಿಲ್ಲಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ ಸಾವರಿನ್ ಡಿಫಾಲ್ಟ್ (Sovereign Default) ಘೋಷಿಸಿತು. ಆರ್ಥಿಕ ಅಚಲ ಸ್ಥಿತಿಯ ನಂತರ, ಐಎಂಎಫ್ ಬಲವಂತವಾಗಿ ಹಸ್ತಕ್ಷೇಪ ಮಾಡಬೇಕಾಯಿತು.

ಉತ್ಪಾದಕತೆಗಿಂತ ಉಪಭೋಗಕ್ಕೆ ಆದ್ಯತೆ ಕೊಟ್ಟ ಪಾಕಿಸ್ತಾನದ ಆಮದು-ಆಧಾರಿತ ಮಾದರಿಯು ಸಮಾಜವಾದಿ ಮನೋಭಾವವನ್ನು ಪ್ರತಿಬಿಂಬಿಸುತ್ತದೆ, ವಿದ್ಯುತ್, ಇಂಧನ ಮತ್ತು ಆಹಾರ ಸಬ್ಸಿಡಿಗಳು ದೊಡ್ಡ ಮಟ್ಟದಲ್ಲಿ ಆರ್ಥಿಕ ಭಾಗವನ್ನು ಆಕ್ರಮಿಸಿಕೊಂಡವು. 2023ರ ವೇಳೆಗೆ ಪರಿಸ್ಥಿತಿ ಕೈಮೀರಿ ಹೋಯಿತು, ಹಣದುಬ್ಬರ ಶೇ.38ಕ್ಕೆ ತಲುಪಿತು. ವಿದೇಶಿ ವಿನಿಮಯ ನಿಧಿ ಕೇವಲ 25,000 ಕೋಟಿ ರು.ನಷ್ಟು ಉಳಿಯಿತು, ರುಪಾಯಿಯು ಇತಿಹಾಸದಲ್ಲೇ ಅತಿ ಕಡಿಮೆ ಮೌಲ್ಯವನ್ನು ತಲುಪಿತು. ಸಮಗ್ರ ಆರ್ಥಿಕ ವ್ಯವಸ್ಥೆ ಕುಸಿಯುತ್ತಿದ್ದಂತೆಯೇ, ಸರಕಾರವು ಐಎಂಎಫ್‌ನಿಂದ 25,000 ಕೋಟಿ ರು. ತುರ್ತು ಸಾಲ (Bailout) ಪಡೆಯಬೇಕಾದ ಹೀನಾಯ ಸ್ಥಿತಿಗೆ ತಲುಪಿತು.

ಇತಿಹಾಸದ ಪಾಠ ಸ್ಪಷ್ಟವಾಗಿದೆ: ಸರಕಾರಿ ನಿಯಂತ್ರಿತ ಆರ್ಥಿಕತೆ ಮತ್ತು ಉಚಿತ ಭಾಗ್ಯಗಳ ನೀತಿಗಳು ಅಲ್ಪಾವಧಿಯ ರಾಜಕೀಯ ಲಾಭವನ್ನು ನೀಡಬಹುದು, ಆದರೆ ದೀರ್ಘಾವಧಿಯಲ್ಲಿ ಅವು ಆರ್ಥಿಕ ದಾರಿದ್ರ್ಯ, ಹಣದುಬ್ಬರ ಮತ್ತು ನಾಗರಿಕರ ಸ್ವಾತಂತ್ರ್ಯದ ನಾಶಕ್ಕೆ ಕಾರಣವಾಗುತ್ತವೆ. ನಿಜವಾದ ಕಲ್ಯಾಣ ಮತ್ತು ಪ್ರಗತಿಯು ಉಚಿತ ದಾನಗಳಿಂದಲ್ಲ, ಬದಲಾಗಿ ಸ್ವಾಯತ್ತತೆ, ಸ್ವರಾಜ್ಯ, ಉದ್ಯಮಶೀಲತೆ, ಸ್ವಾವಲಂಬನೆ, ಸ್ವದೇಶಿ ಮತ್ತು ಮುಕ್ತ ಮಾರುಕಟ್ಟೆ ಆರ್ಥಿಕತೆಯಿಂದ ಬರುತ್ತದೆ. ನಾವು ಈ ಇತಿಹಾಸದಿಂದ ಪಾಠ ಕಲಿಯದಿದ್ದರೆ ಇತಿಹಾಸ ಪುಟಗಳನ್ನು ಸೇರಿಕೊಳ್ಳಬೇಕಾಗುತ್ತದೆ.

(ಲೇಖಕರು ಪ್ರಾಧ್ಯಾಪಕರು, ಕೇಂದ್ರೀಯ ವಿಶ್ವವಿದ್ಯಾಲಯ)

ಭಟ್ಟರ್ ಸ್ಕಾಚ್

- **ಗಣೇಶ ಮೂಲಿಮನಿ, ಶಿವಮೊಗ್ಗ**
ಭಟ್ರೇ, ಊರಿಗೆ ಬಂದಳು, ಆದರೆ ನೀರಿಗೆ ಬರಲಿಲ್ಲವಲ್ಲ?
– **ಊರಿಗೆ ಬಂದವಳು ಬಿಯರಿಗೆ ಬರದೇ ಇರ್ತಾಳಾ ಅಂತ ಗಾದೆ ಬದಲಾಗಿ ಎಷ್ಟೋ ವರ್ಷಗಳಾಗಿವೆ, ಗಣೇಶ!**

- **ಸುರೇಶ ದೊಡ್ಡವಾದ, ಧಾರವಾಡ**
ಭಟ್ರೇ, ಬೆಂಗಳೂರಿನ ಜನರಿಗೆ ಸರಿಯಾಗಿ ಕನ್ನಡ ಬರುವುದಿಲ್ಲವಲ್ಲ?
– **'ಕನ್ನಡವ ಕಾಪಾಡು ಕನ್ನಡಿಗರಿಂದ' ಎಂದು ಹೇಳಿದ್ದು ಸುಮ್ಮನೆ ಅಲ್ಲ!**

- **ರಾಮು ಮಲ್ಲಿಕಟ್ಟಿ, ಕೋಣಂದೂರು**
ಭಟ್ರೇ, ಈ ಸ್ಕ್ರಾಚ್ ಕಾರ್ಡುಗಳು ಯಾವಾಗಲೂ 'ಬೆಟರ್ ಲಕ್ ನೆಕ್ಸ್ಟ್ ಟೈಮ್' ಅಂತ ಹೇಳ್ತಾವಲ್ಲ?
– **ಬಹಳ ಸ್ಕ್ರಾಚ್ ಮಾಡಿಕೊಳ್ಳದಿರಲಿ ಎಂಬುದು ಆಶಯ!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಪತ್ರಿಕೆ ಓದುವವರು ಪತ್ರಿಕಾಲಯದ ಉದ್ಯೋಗಿಗಳ ಮೇಲೆ ಏಕೆ ಒಂದು ತರಹ ಅಸೂಯೆ ಪಡ್ತಾರಲ್ಲ ಏಕೆ?
– **ನಮಗಿಂತ ಮೊದಲೇ ಪೇಪರ್ ಓದಿ ಬಿಟ್ಟುರುತ್ತರಲ್ಲ ಅಂತ!**

- **ಅಲಮೇಲು, ಮೇಲುಕೋಟೆ**
ಭಟ್ರೇ, ಗಾಂಧಿ ಕುಟುಂಬದಲ್ಲಿ ಅಮ್ಮ ರಾಜ್ಯಸಭೆ ಮೆಂಬರು ಮಕ್ಕಳು ಲೋಕಸಭೆ. ಹಾಗಾದ್ರೆ ಮನೇಲಿ ಅಡುಗೆ ಮಾಡೋರು ಯಾರು?
– **ಸುಮ್ನಿರು, ಅಡುಗೆ ಮಾಡೋರೂ ಪಾಳಿಯಲ್ಲಿ ನಿಂತಿದ್ದಾರಂತೆ!**

- **ಮನಗೂಳಿ ಭೀಮು, ಬೆಂಗಳೂರು**
ಭಟ್ರೇ, ಈ ಶತಮಾನದ ಮಾದರಿ ಹೆಣ್ಣಿನ ಮುಖಪರಿಚಯ ಮಾಡಿಕೊಡುತ್ತೀರಾ?
– **ನಗುತ್ತಿದ್ದರೆ ಹಸನ್ಮುಖಿ, ಚಾರುಮುಖಿ, ಚಂದ್ರಮುಖಿ, ಬಾಡಿದ್ದರೆ ಅಧೋಮುಖಿ, ಮ್ಲಾನಮುಖಿ, ಕಟ್ಟಕಡೆಗೆ ಜ್ವಾಲಾಮುಖಿ!**

- **ಸೀಮಾ, ಡಾಲರ್ಸ್ ಕಾಲೋನಿ**
ಭಟ್ರೇ, ನಾನು ಅಪ್ಪ-ಅಮ್ಮನ ಮಾತನ್ನು ಉಲ್ಲಂಘಿಸಿ ಮದುವೆಯಾದರೆ ನನಗೆ ಬರುವ ಅಪವಾದ?
– **ಸೀಮೋಲ್ಲಂಘನ!**

- **ರಂಗರಾಮಾನುಜ, ಮೇಲುಕೋಟೆ**
ಶಿಖರಪ್ರಾಯ ಅಂತ ಅಂದ್ರೆ ಏನು ಭಟ್ರೇ?
– **ಪ್ರಾಯದ ಹುಡುಗರು ತಲೆಯಲ್ಲಿ ಬಿಡುವ ಜುಟ್ಟು(ಶಿಖೆ)!**

- **ರಾಜಲಕ್ಷ್ಮಿ ಹೆಗಡೆ, (ಇಮೇಲ್ ಮೂಲಕ)**
ಭಟ್ರೇ, ಹೆಂಡತಿ ಮತ್ತು ತಾಯಿ ಇಬ್ಬರೂ ಸೇರಿ ಸರಕಾರ ರಚಿಸಿದರೆ?
– **ಅದು ನಿಜವಾದ ಸಮ್ಮಿಶ್ರ ಸರಕಾರ!**

- **ರೇಖಾ ಬಿರಾದಾರ, ಬೆಳಗಾವಿ**
ಭಟ್ರೇ, ಗಂಡಂದಿರನ್ನು ಹೆಂಡತಿಯರೇ ನಿಯಂತ್ರಿಸಬೇಕು ಎಂಬ ಕಾನೂನು ತಂದರೆ?
– **ನೀನು ರೇಖಾನೋ, ಅತಿರೇಕಾನೋ ?!**

ಇದು ಪಾಸ್‌ಪೋರ್ಟ್ ಸ್ಥಾನ ಪುರಾಣ..

ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆಯ ದೇಶಗಳ ಪಟ್ಟಿಯಲ್ಲಿ ಬ್ರಿಟನ್, ಫ್ರಾನ್ಸ್‌ನಂಥ ದೇಶಗಳನ್ನೆಲ್ಲ ಹಿಂದಿಕ್ಕಿ 5ನೇ ಸ್ಥಾನಕ್ಕೇರಿದೆ. ಹೀಗೆಯೇ ಮುಂದುವರಿದರೆ ಕೆಲವೇ ವರ್ಷಗಳಲ್ಲಿ ಜಪಾನ್, ಜರ್ಮನಿಯನ್ನೂ ಹಿಂದಿಕ್ಕುತ್ತದೆ ಎಂಬ ವರದಿಯಿದೆ. ಹಾಗಿರುವಾಗ ಶಕ್ತಿಯುತ ಪಾಸ್‌ಪೋರ್ಟ್ ಹೊಂದುವುದರಲ್ಲಿ ಭಾರತ ಏಕೆ ವಿಫಲವಾಗುತ್ತಿದೆ ಎನ್ನುವ ಪ್ರಶ್ನೆ ಕಾಡುವುದು ಸಹಜ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಾನು ಪಾಸ್‌ಪೋರ್ಟ್ ಮಾಡಿಸಿದ್ದೇನೆ. ಇನ್ನು ಯಾವ ದೇಶಕ್ಕಾದರೂ ಹೋಗಬಹುದು'' ಎಂದು ಕೆಲವರು ಹೇಳುವುದಿದೆ. ಅಂಥವರು ಪಾಸ್‌ಪೋರ್ಟ್ ಇದ್ದರೆ ತಾವು ಎಲ್ಲಿ ಬೇಕಾದರೂ ಹೋಗಬಹುದು ಎಂದು ತಿಳಿದಿರುತ್ತಾರೆ. ಕೇವಲ ಪಾಸ್‌ಪೋರ್ಟ್ ಇದ್ದರೆ ಸಾಲದು, ಯಾವುದೇ ಒಂದು ದೇಶಕ್ಕೆ ಹೋಗಬೇಕು ಎಂದಾದರೆ ಆ ದೇಶದ ವೀಸಾ ಕೂಡ ಬೇಕಾಗುತ್ತದೆ ಎಂದು ಅವರಿಗೆ ತಿಳಿದಿರುವುದಿಲ್ಲ. ಈ ವಿಷಯದಲ್ಲಿ ನಮ್ಮ ಶಾಲೆಗಳಲ್ಲಿಯೂ ಯಾವುದೇ ಪಾಠ ಇದ್ದಂತಿಲ್ಲ. ಇದೊಂದು ರೀತಿಯಲ್ಲಿ 'ನಿಮ್ಮ ಬಳಿ ಡ್ರೈವಿಂಗ್ ಲೈಸೆನ್ಸ್ ಇದೆಯೇ?' ಎಂದು ಕೇಳಿದಾಗ, 'ಲರ್ನರ್ಸ್ ಲೈಸೆನ್ಸ್ ಇದೆ' ಎಂದಹಾಗೆಯೇ. ವೀಸಾ ಇಲ್ಲದೆ, ಖಾಲಿ ಪಾಸ್‌ಪೋರ್ಟ್ ಮಾತ್ರ ಇದ್ದರೆ ಯಾವ ದೇಶವೂ ಇನ್ನೊಂದು ದೇಶದ ಪ್ರಜೆಯನ್ನು ತನ್ನೊಳಗೆ ಬಿಟ್ಟುಕೊಳ್ಳುವುದಿಲ್ಲ. ಹಾಗಂತ ಪಾಸ್‌ಪೋರ್ಟ್ ಇಲ್ಲದೆ ವೀಸಾ ಪಡೆಯಲೂ ಸಾಧ್ಯವಿಲ್ಲ. ವೀಸಾ ಬೇಕು ಎಂದಾದರೆ ಒಬ್ಬ ವ್ಯಕ್ತಿ ಮಾಡಬೇಕಾದ ಕನಿಷ್ಠ ಮತ್ತು ಮತ್ತು ಮೊದಲ ಕೆಲಸ ಎಂದರೆ, ಪಾಸ್‌ಪೋರ್ಟ್ ಮಾಡಿಸುವುದು.

ಇರಲಿ, ವಿದೇಶ ಪ್ರಯಾಣಕ್ಕೆ ಅವಶ್ಯವಾಗಿರುವ ಪಾಸ್‌ಪೋರ್ಟ್ ಮಾಡಿಕೊಡಲೂ ಇಂದು ಏಜೆನ್ಸಿಗಳಿವೆ. ಪ್ರತಿಯೊಂದು ದೇಶದ ಪಾಸ್‌ಪೋರ್ಟ್‌ಗೂ ಒಂದು ವ್ಯಾಲ್ಯೂ ಇದೆ, ಒಂದು ಸ್ಥಾನವಿದೆ. ಅದನ್ನು ಹೇಳುವುದಕ್ಕೆ ಒಂದು ಸಂಸ್ಥೆಯೂ ಇದೆ.

ಒಂದು ದೇಶದ ಪಾಸ್‌ಪೋರ್ಟ್‌ನ ಮೌಲ್ಯ ಅಥವಾ ಘನತೆ ಎಷ್ಟು ಎಂದು ಅಳೆದು ಹೇಳುವ ಸಂಸ್ಥೆ ಹೆನ್ಲಿ. ಜಾಗತಿಕ ಪೌರತ್ವ ಮತ್ತು ನಿವಾಸ ಸಲಹೆಯ ಸಮೀಕ್ಷೆ ನಡೆಸುವ ಹೆನ್ಲಿ ಸಂಸ್ಥೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವಲಸೆ ಹೋಗಿ ಅಲ್ಲಿಯ ಪೌರತ್ವ ಪಡೆಯಲು ಸಹಕರಿಸುತ್ತದೆ. ಒಂದು ಅರ್ಥದಲ್ಲಿ, ಇದು ವಿಶ್ವದ ನೂರ ತೊಂಬತ್ತೊಂಬತ್ತು ದೇಶಗಳ ಪಾಸ್‌ಪೋರ್ಟ್‌ನ ಟಿಆರ್‌ಪಿ ಎಷ್ಟು ಎಂದು ಹೇಳುತ್ತದೆ ಎಂದರೂ ಅಡ್ಡಿಯಿಲ್ಲ. ಲಂಡನ್ ಮೂಲದ ಈ ಸಂಸ್ಥೆ ಇಂಟರ್‌ನ್ಯಾಷನಲ್ ಏರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (ಐಎಟಿಎ) ಸಂಸ್ಥೆಯೊಂದಿಗೆ ಸೇರಿ 2023ರ ಪಾಸ್‌ಪೋರ್ಟ್ ಸೂಚ್ಯಂಕವನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಆ ಸೂಚ್ಯಂಕದ ಪ್ರಕಾರ, ಭಾರತದ ಪಾಸ್‌ಪೋರ್ಟ್ ವಿಶ್ವದಾದ್ಯಂತ ಇರುವ ಪಾಸ್‌ಪೋರ್ಟ್‌ಗಳ ಪಟ್ಟಿಯಲ್ಲಿ ಎಂಬತ್ತೈದನೆಯ ಸ್ಥಾನದಲ್ಲಿದೆ. ಕಳೆದ ವರ್ಷ ಭಾರತ ಎಂಬತ್ತೇಳನೆಯ ಸ್ಥಾನದಲ್ಲಿತ್ತು. ಅಂದರೆ ಈ ವರ್ಷ ಎರಡು ಸ್ಥಾನ ಮೇಲಕ್ಕೇರಿದೆ.

ಮುಂದುವರಿಯುವುದಕ್ಕಿಂತ ಮೊದಲು ಪಾಸ್‌ಪೋರ್ಟ್ ಮತ್ತು ವೀಸಾ ನಡುವಿನ ಅಂತರ ತಿಳಿಯೋಣ. ಹೆಚ್ಚಿನ ಜನರಿಗೆ ತಿಳಿವಳಿಕೆ ಇದೆಯಾದರೂ, ಪಾಸ್‌ಪೋರ್ಟ್ ಇದ್ದರೆ ಬೇರೆ ದೇಶಕ್ಕೆ ಹೋಗಬಹುದು ಎಂದು ತಿಳಿದ ಕೆಲವು ಜನ ಇನ್ನೂ ನಮ್ಮ ನಡುವೆ ಇದ್ದಾರೆ. ಪಾಸ್‌ಪೋರ್ಟ್ ವ್ಯಕ್ತಿಯ ಹೆಸರು, ವಿಳಾಸ, ವಯಸ್ಸು, ಪೌರತ್ವ ಇತ್ಯಾದಿಗಳನ್ನು ತಿಳಿಸುವ ಅಧಿಕೃತ ದಾಖಲೆ. ವೀಸಾ ಒಂದು ದೇಶದೊಳಗೆ ಪ್ರವೇಶ ಮಾಡಲು ಆ ದೇಶ ನೀಡುವ ಪರವಾನಗಿ. ಪ್ರವಾಸಕ್ಕೆ, ನೌಕರಿಗೆ, ಭೇಟಿಗೆ ಅಥವಾ ಇನ್ಯಾವುದೇ ಕಾರಣಕ್ಕೆ ಒಂದು ದೇಶದ ಒಳಗೆ ಹೋಗಲು ಕೇವಲ ಪಾಸ್‌ಪೋರ್ಟ್ ಇದ್ದರೆ ಸಾಲದು, ಆ ದೇಶದ ವೀಸಾ ಕೂಡ ಅವಶ್ಯಕವಾಗುತ್ತದೆ. ಎರಡು ದೇಶಗಳ ನಡುವಿನ ಒಪ್ಪಂದದಿಂದ ಕೆಲವೊಮ್ಮೆ ಕೆಲವು ದೇಶಗಳಿಗೆ ಹೋಗಲು ಮುಂಚಿತವಾಗಿ ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ಉದಾಹರಣೆಗೆ, ಭಾರತದಿಂದ ನೇಪಾಳ ಅಥವಾ ಥಾಯ್ಲೆಂಡ್‌ಗೆ ಹೋಗಲು ಮೊದಲೇ ವೀಸಾ ಪಡೆಯುವ ಅವಶ್ಯಕತೆ ಇಲ್ಲ. ಆ ದೇಶಕ್ಕೆ ಹೋಗಿ ತಲುಪಿದ ನಂತರ ವೀಸಾ ಪಡೆಯಬಹುದು. ಕೆಲವು ದೇಶಗಳಿಗೆ ಆನ್‌ಲೈನ್ ಮೂಲಕ ಮುಂಚಿತವಾಗಿ ವೀಸಾ ಪಡೆಯುವ ಸೌಲಭ್ಯವಿದ್ದರೆ, ಅಮೆರಿಕದಂಥ ದೇಶಗಳಿಗೆ ವೀಸಾ ಪಡೆಯಬೇಕಾದರೆ ದೂತಾವಾಸಕ್ಕೆ ಹೋಗಿ ಅದನ್ನು ಪಡೆಯಬೇಕಾಗುತ್ತದೆ. ಅಂದಹಾಗೆ, ಈಗ ಅಮೆರಿಕದ ವೀಸಾ ಬೇಕೆಂದರೆ ಹೆಚ್ಚು ಕಮ್ಮಿ ಒಂದು ಸಾವಿರ ದಿನ ಕಾಯಬೇಕಂತೆ!

ವೀಸಾದಂತೆಯೇ ಪಾಸ್‌ಪೋರ್ಟ್‌ನಲ್ಲಿಯೂ ಬೇರೆ ಬೇರೆ ಬಗೆಗಳಿವೆ. ಭಾರತ ಸರಕಾರವು, ಸಾಮಾನ್ಯವಾಗಿ ಕಾಣುವ ಕಡುನೀಲಿ ಬಣ್ಣದ ಪಾಸ್‌ಪೋರ್ಟ್ ಹೊರತಾಗಿ ಬಿಳಿ ಮತ್ತು ಕಡುಗೆಂಪು ಬಣ್ಣದ ಪಾಸ್‌ಪೋರ್ಟ್ ಅನ್ನೂ ವಿತರಿಸುತ್ತದೆ. ಕಡುಗೆಂಪು ಬಣ್ಣದ ಪಾಸ್‌ಪೋರ್ಟ್ ಅನ್ನು ಮಂತ್ರಿಗಳು, ಇತರೆ ರಾಜತಾಂತ್ರಿಕ ವರ್ಗದವರಿಗೂ, ಬಿಳಿ ಬಣ್ಣದ ಪಾಸ್‌ಪೋರ್ಟ್ ಅನ್ನು ಕೇಂದ್ರ ಸರಕಾರದ ಪ್ರಮುಖ ಅಧಿಕಾರಿಗಳಿಗೂ ನೀಡುತ್ತಾರೆ. ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಿದ್ದರೆ ಬಹುತೇಕ ದೇಶಗಳಿಗೆ ವೀಸಾ ಇಲ್ಲದೆಯೇ ಪ್ರವೇಶ ಪಡೆಯಬಹುದಾಗಿದೆ. ಅಷ್ಟೇ ಅಲ್ಲ, ಅವರನ್ನು ವಿಮಾನ ನಿಲ್ದಾಣದಲ್ಲಿ ಬೇರೆ ಮಾರ್ಗದಿಂದ ವಿಶೇಷ ಗೌರವದೊಂದಿಗೆ ಕರೆದೊಯ್ಯಲಾಗುತ್ತದೆ.

ಯಾವ ದೇಶದ ಪಾಸ್‌ಪೋರ್ಟ್ ಶಕ್ತಿಶಾಲಿ ಎನ್ನುವುದನ್ನು ನೋಡಲು ಸಮೀಕ್ಷೆ ನಡೆಯುತ್ತದೆ ಎಂದೆನಲ್ಲ, ಆ ಸಮೀಕ್ಷೆಯ ಪ್ರಕಾರ ಯಾವ ದೇಶದ ಪಾಸ್‌ಪೋರ್ಟ್ ಅತ್ಯಂತ ಶಕ್ತಿಯುತವಾಗಿದೆ ಊಹಿಸಬಲ್ಲಿರಾ? ದೊಡ್ಡಣ್ಣ ಅಮೆರಿಕ? ಅಲ್ಲ ಎಂದರೆ ಆಶ್ಚರ್ಯ ಪಡಬೇಡಿ! ಯುನೈಟೆಡ್ ಕಿಂಗ್‌ಡಮ್ ಕೂಡ ಅಲ್ಲ. ಫ್ರಾನ್ಸ್, ಜರ್ಮನಿ, ಇಟಲಿ? ಯುರೋಪ್ ಅಥವಾ ಅಮೆರಿಕದ ಇತರ ದೇಶಗಳು? ಊಹೂಂ... ಸಮೀಕ್ಷೆಯ ಪ್ರಕಾರ ಮೊದಲನೆಯ ಸ್ಥಾನದಲ್ಲಿರುವುದು ಜಪಾನ್. ಜಪಾನ್ ಶಕ್ತಿಯುತ ಪಾಸ್‌ಪೋರ್ಟ್ ಹೊಂದಿದ ದೇಶವಾಗಿ ನಿಂತಿರುವುದು ಇದೇ ಮೊದಲ ಸಲವಲ್ಲ. ಕಳೆದ ಕೆಲವು ವರ್ಷಗಳಿಂದ ಜಪಾನ್ ತನ್ನ ಸ್ಥಾನವನ್ನು ಕಾಯ್ದುಕೊಂಡು ಬಂದಿದೆ. ಎರಡನೆಯ ಸ್ಥಾನದಲ್ಲೂ ಏಷ್ಯಾ ಖಂಡದ ದೇಶಗಳೇ ಆದ ಸಿಂಗಾಪುರ ಮತ್ತು ದಕ್ಷಿಣ ಕೋರಿಯಾ. ಮೂರನೆಯ ಸ್ಥಾನದಲ್ಲಿ ಜರ್ಮನಿ ಮತ್ತು ಸ್ಪೇನ್ ಇವೆ. ಈ ಶಕ್ತಿ ಸ್ಪರ್ಧೆಯಲ್ಲಿ ಯುಕೆ, ಫ್ರಾನ್ಸ್, ಐರ್ಲೆಂಡ್, ಪೋರ್ಚುಗಲ್ ದೇಶಗಳು ಆರನೆಯ ಸ್ಥಾನ ಪಡೆದರೆ, ಅಮೆರಿಕ ಏಳನೆಯ ಸ್ಥಾನದಲ್ಲಿದೆ. ಈಗಾಗಲೇ ಹೇಳಿದಂತೆ ಭಾರತ ಎಂಬತ್ತೈದನೆಯ ಸ್ಥಾನದಲ್ಲಿದೆ. ಕಳೆದ ನಾಲ್ಕೈದು ವರ್ಷಗಳಿಂದಲೂ ಭಾರತ ಎಂಬತ್ತೆರಡರಿಂದ ಎಂಬತ್ತೇಳರ ಮಧ್ಯೆ ಗಿರಕಿ ಹೊಡೆಯುತ್ತಿದೆ. ಇರಲಿ, ಈ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ದೇಶ ಯಾವುದು ಗೊತ್ತೇ? ಅಫ್ಘಾನಿಸ್ತಾನ. ಇರಾಕ್ ಅದಕ್ಕಿಂತ ಒಂದು ಮನೆ ಮೇಲೆ.

ಹಾಗಾದರೆ ಇದನ್ನು ಅಳೆಯುವುದಕ್ಕೆ ಮಾಪನ ಯಾವುದು? ಈ ಕಾರ್ಯಕ್ಕೆ ಪ್ರಮುಖವಾಗಿ ಒಂದು ದೇಶದ ಪ್ರಜೆ ಎಷ್ಟು ದೇಶಕ್ಕೆ ಮುಂಚಿತವಾಗಿ ವೀಸಾ ಪಡೆಯದೆ ಪ್ರವೇಶ ಪಡೆಯಬಹುದು ಎಂಬುದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಉದಾಹರಣೆಗೆ, ಜಪಾನ್ ದೇಶದ ಪಾಸ್‌ಪೋರ್ಟ್ ಹೊಂದಿದವರು ನೂರ ತೊಂಬತ್ಮೂರು ದೇಶಗಳಿಗೆ ಮುಂಗಡ ವೀಸಾ ಪಡೆಯದೆ ಪ್ರವೇಶಿಸಬಹುದಾಗಿದೆ. ಸಿಂಗಾಪುರ, ದಕ್ಷಿಣ ಕೊರಿಯಾದ ಪ್ರಜೆಗಳು ನೂರತೊಂಬತ್ತೆರಡು ದೇಶಕ್ಕೆ ಪ್ರವೇಶ ಪಡೆಯಬಹುದಾಗಿದೆ. ವರ್ತಮಾನದಲ್ಲಿ ಭಾರತದ ಪಾಸ್‌ಪೋರ್ಟ್ ಹೊಂದಿದವರು ಐವತ್ತೊಂಬತ್ತು ದೇಶಕ್ಕೆ ಪ್ರವೇಶ ಪಡೆಯಬಹುದಾಗಿದೆ. ಇದುವರೆಗೂ ಭಾರತದ ಪ್ರಜೆಗಳಿಗೆ ಉಚಿತ ಪ್ರವೇಶ ನೀಡುತ್ತಿದ್ದ ಸರ್ಬಿಯ ಇದೇ ಜನವರಿಯಿಂದ ಉಚಿತ ಪ್ರವೇಶವನ್ನು ರದ್ದುಗೊಳಿಸಿದೆ.

ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆ ಹೊಂದಿದ ದೇಶಗಳ ಪಟ್ಟಿಯಲ್ಲಿ ಯುನೈಟೆಡ್ ಕಿಂಗ್‌ಡಮ್, ಫ್ರಾನ್ಸ್‌ನಂಥ ದೇಶಗಳನ್ನೆಲ್ಲ ಹಿಂದಿಕ್ಕಿ ಐದನೆಯ ಸ್ಥಾನಕ್ಕೇರಿದೆ. ಹೀಗೆಯೇ ಮುಂದುವರಿದರೆ ಇನ್ನು ನಾಲ್ಕು-ಐದು ವರ್ಷದಲ್ಲಿ (ರಷ್ಯಾ-ಉಕ್ರೇನ್ ಯುದ್ಧ ಮುಂದುವರಿದರೆ ಇನ್ನೂ ಬೇಗ!) ಜಪಾನ್, ಜರ್ಮನಿಯನ್ನೂ ಹಿಂದಿಕ್ಕಿ ಮುನ್ನಡೆಯುತ್ತದೆ ಎಂಬ ವರದಿಯಿದೆ. ಹಾಗಿರುವಾಗ ಶಕ್ತಿಯುತ ಪಾಸ್‌ಪೋರ್ಟ್ ಹೊಂದುವುದರಲ್ಲಿ ಏಕೆ ವಿಫಲವಾಗುತ್ತಿದೆ ಎನ್ನುವ ಪ್ರಶ್ನೆ ಕಾಡುವುದು ಸಹಜ. ಅಸಲಿಗೆ ಒಂದು ದೇಶವು ಆರ್ಥಿಕವಾಗಿ ಬಲಶಾಲಿಯಾಗಿದ್ದರೆ ಆ ದೇಶದ ಪಾಸ್‌ಪೋರ್ಟ್ ಶಕ್ತಿಯುತವಾಗಿರಲೇಬೇಕೆಂದೇನೂ ಇಲ್ಲ. ಒಂದು ದೇಶದ ಮಿಲಿಟರಿ ಬಲಶಾಲಿಯಾಗಿದ್ದರೆ ಆ ದೇಶದ ಪಾಸ್‌ಪೋರ್ಟ್ ಕೂಡ ಬಲಶಾಲಿಯಾಗಿರಬೇಕೆಂದೂ ಇಲ್ಲ. ಹಾಗೇನಾದರೂ ಇದ್ದರೆ ಅಮೆರಿಕದ ಪಾಸ್‌ಪೋರ್ಟ್ ಮೊದಲನೆಯ ಸ್ಥಾನದಲ್ಲಿರಬೇಕಿತ್ತು.

ಇಲ್ಲಿ ಪ್ರಮುಖವಾಗಿ ಗಣನೆಗೆ ಬರುವುದು ವೀಸಾ. ವೀಸಾ ಇಲ್ಲದೇ ಪ್ರವೇಶ ಪಡೆಯುವುದಕ್ಕೆ ಇರುವ ಮೂರು ಪ್ರಮುಖ ಅಂಶಗಳಲ್ಲಿ ಮೊದಲನೆಯದು, ಎರಡು ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧ. ಎರಡನೆಯದು, ಒಂದು ದೇಶದ ಪ್ರಜೆಗಳು ಉದ್ಯೋಗಕ್ಕೋ, ಪ್ರವಾಸಕ್ಕೋ ಇನ್ನೊಂದು ದೇಶಕ್ಕೆ ಹೋದಾಗ ಆ ದೇಶದಲ್ಲಿ ನಡೆದುಕೊಳ್ಳುವ ರೀತಿ. ಮೂರನೆಯದು, ಒಂದು ದೇಶದ ಒಳಗಿನ ಆರ್ಥಿಕತೆ, ಸುರಕ್ಷತೆ ಇತ್ಯಾದಿಗಳು. ಈ ಮೂರೂ ಕ್ಷೇತ್ರದಲ್ಲಿ ಹೆಚ್ಚಿನ ಅಂಕ ಪಡೆದಷ್ಟೂ ಆ ದೇಶದ ಪಾಸ್‌ಪೋರ್ಟ್ ಶಕ್ತಿಯುತವಾಗುತ್ತದೆ. ಪ್ರವಾಸಕ್ಕೆ ಹೋದ ದೇಶದ ವಿಮಾನ ನಿಲ್ದಾಣದಲ್ಲಿ, ಇಮಿಗ್ರೇಷನ್‌ನಲ್ಲಿ ಅದಕ್ಕೆ ತಕ್ಕಂತೆ ಮರ್ಯಾದೆ ಸಿಗುತ್ತದೆ. ಅಲ್ಲಿಗೆ, ಪಾಸ್‌ಪೋರ್ಟ್ ಶಕ್ತಿಯುತವಾಗುವುದಕ್ಕೆ ರಾಜತಾಂತ್ರಿಕ ಸಂಬಂಧ ಉತ್ತಮಗೊಳ್ಳುವುದರ ಜತೆಗೆ ಆ ದೇಶಕ್ಕೆ ಹೋದ ಪ್ರವಾಸಿಗರ ವರ್ತನೆಯೂ ಅಷ್ಟೇ ಉತ್ತಮವಾಗಿರಬೇಕು ಎನ್ನುವುದನ್ನೂ ಒಪ್ಪಬೇಕು.

ಭಾರತೀಯರೇ ಆಗಲಿ, ಅಫ್ಘಾನಿಸ್ತಾನದ ಪ್ರಜೆಗಳೇ ಆಗಲಿ ಯಾವುದೇ ದೇಶಕ್ಕೆ ಹೋಗುವಾಗ ತಮಗಲ್ಲದಿದ್ದರೂ, ತಮ್ಮ ದೇಶಕ್ಕೆ ಒಂದಷ್ಟು ಗೌರವ ಸಿಗಬೇಕೆಂದು ಅಪೇಕ್ಷಿಸುತ್ತಾರೆ. ವಿಮಾನ ನಿಲ್ದಾಣ ಅಥವಾ ಭೂಮಿ, ಜಲ ಪ್ರದೇಶದ ಗಡಿಯಲ್ಲಿ ಯಾವುದೇ ಅಡೆತಡೆ ಇಲ್ಲದೆ ಸುರಳೀತವಾಗಿ ದೇಶದ ಒಳಕ್ಕೆ ಪ್ರವೇಶ ಪಡೆಯಲು ಬಯಸುತ್ತಾರೆ. ಎಷ್ಟೆಂದರೂ, ಗಡಿಯಲ್ಲಿ ಅಥವಾ ವಿಮಾನ ನಿಲ್ದಾಣದಲ್ಲಿ ರಾಜಾರೋಷವಾಗಿ ನಡೆಯುವುದಕ್ಕೂ, ಸಾಲಿನಲ್ಲಿ ಕಾದು ನಿಂತು ಮುಂದುವರಿಯುವುದಕ್ಕೂ ವ್ಯತ್ಯಾಸ ಇದೆಯಲ್ಲ? ಸರತಿಯ ಸಾಲಿನಲ್ಲಿ ನಿಂತಾಗ ನಮ್ಮ ದೇಶದ ಪಾಸ್‌ಪೋರ್ಟ್ ಇನ್ನಷ್ಟು ಶಕ್ತಿಯುತವಾಗಿರಬೇಕಿತ್ತು ಎಂದೆನಿಸದೆ ಇರದು.

ಒಂದು ದೇಶವು ತಂತ್ರಜ್ಞಾನದಲ್ಲಿ ಮುಂದುವರಿದರೆ, ಆರ್ಥಿಕತೆಯಲ್ಲಿ ಅಭಿವೃದ್ಧಿ ಹೊಂದಿದರೆ, ಸೈನ್ಯ ಬಲಶಾಲಿಯಾದರೆ, ವ್ಯಾಪಾರ-ವಹಿವಾಟಿನಲ್ಲಿ ಮುಂದುವರಿದರೆ ಆ ದೇಶದ ಪಾಸ್‌ಪೋರ್ಟ್ ಶಕ್ತಿಯುತವಾಗುತ್ತದೆ ಎನ್ನುವುದು ಮಿಥ್ಯ. ಹೌದು, ಪಾಸ್‌ಪೋರ್ಟ್ ಶಕ್ತಿಯುತವಾಗಿ ಏನಾಗಬೇಕಿದೆ ಎನ್ನಬೇಡಿ. ಹೇಗೆ ವಿದ್ಯಾರ್ಥಿಯ ಜೀವನದಲ್ಲಿ ಪಠ್ಯಕ್ರಮದಲ್ಲಿ ಹೆಚ್ಚು ಅಂಕ ಗಳಿಸುವುದರೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ಹೆಚ್ಚಿನ ಅಂಕ ಪಡೆಯುವುದು ಮುಖ್ಯವೋ, ಹಾಗೆಯೇ ಪ್ರಪಂಚದ ಭೂಪಟದಲ್ಲಿ ಒಂದು ದೇಶವು ಘನತೆ, ಗೌರವ ಗಳಿಸಬೇಕಾದರೆ ಪ್ರತಿಯೊಂದು ಅಂಶವೂ ಮುಖ್ಯ.

ಕಳಕಳಿ
ಡಾ.ಡಿ.ಸಿ.ನಂಜುಂಡ

ಕಾರಿನ ಸನ್‌ರೂಫ್ ತೆರೆದು ಮಕ್ಕಳನ್ನು ನಿಲ್ಲಿಸಬೇಡಿ

ಕಾರಿನ 'ಸನ್‌ರೂಫ್'ನಿಂದ ಮಕ್ಕಳ ತಲೆಯನ್ನು ಹೊರಕ್ಕೆ ಹಾಕಿಸಿ ನಿಲ್ಲಿಸಿ ಕೈಬೀಸಲು ಪ್ರೋತ್ಸಾಹಿಸುವುದು ಅಥವಾ ಅದನ್ನು ನೋಡಿ ಸುಮ್ಮನಿರುವುದು ಇತ್ತೀಚೆಗೆ ಕಾಣಬರುತ್ತಿರುವ ಒಂದು ಆತಂಕಕಾರಿ 'ಟ್ರೆಂಡ್'. ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ 6 ವರ್ಷದ ಬಾಲಕನೊಬ್ಬ ಹೀಗೆ ನಿಂತಿದ್ದ ಪರಿಣಾಮ ಕಬ್ಬಿಣದ ಸಲಾಕೆಗೆ ತಲೆ ಬಡಿದು ತೀವ್ರವಾಗಿ ಗಾಯಗೊಂಡಿದ್ದು ಸುದ್ದಿಯಾಗಿತ್ತು. ಒಂದಷ್ಟು ಪೋಷಕರು ಇದನ್ನು ಮೋಜಿನ ಕ್ಷಣವೆಂದು ಬಗೆದು ವಿಡಿಯೋ ತೆಗೆದುಕೊಳ್ಳುವ ಅವಕಾಶವೆಂದು ಭಾವಿಸುತ್ತಾರೆ.

ಆದರೆ, ಇಂಥ ನಡೆಯ ಹಿಂದೆ ಗಂಭೀರವಾದ ಸಾಮಾಜಿಕ ಸಮಸ್ಯೆ, ತಪ್ಪಾದ ಪೋಷಕತ್ವದ ಮೌಲ್ಯಗಳು, ಶ್ರೀಮಂತಿಕೆಯ ಪ್ರದರ್ಶನ, ಮಕ್ಕಳ ಒತ್ತಡ ಇತ್ಯಾದಿ ಅಂಶಗಳಿರುತ್ತವೆ. ಮಕ್ಕಳ ಈ ಮನೋವೈಜ್ಞಾನಿಕ ವಿಪರೀತ ವರ್ತನೆಗಳು, ಕಾನೂನು ಉಲ್ಲಂಘನೆ ಮತ್ತು ಜೀವಕ್ಕೆ ಅಪಾಯವಾಗಬಹುದಾದ ಸಮಸ್ಯೆ ಇಂಥ ಕಾರಿನಲ್ಲೇ ಇವೆ ಎನ್ನಬಹುದು. ಹೆಚ್ಚುತ್ತಿರುವ ಆಕಾಂಕ್ಷೆ, ಕಡಿಮೆಯಾಗುತ್ತಿರುವ ಜಾಗೃತಿ, ಪೋಷಕರ ಶ್ರೀಮಂತಿಕೆಯ ಪ್ರದರ್ಶನಕ್ಕೆ ಆದ್ಯತೆ ಮುಂತಾದ ಅಂಶಗಳು ಮಕ್ಕಳ ಜೀವಕ್ಕೆ ಎರವಾಗುತ್ತಿವೆ. ಬಿಗ್ ಬಾಸ್ ಸ್ಪರ್ಧಿಯೊಬ್ಬರು ತಮ್ಮ ಮಗಳು ಹೀಗೆ ಸನ್‌ರೂಫ್ ಮೂಲಕ ತಲೆಯನ್ನು ಹೊರಹಾಕಿ ಎಲ್ಲರಿಗೂ ಕೈಬೀಸುತ್ತಿರುವ ದೃಶ್ಯವನ್ನು ವಾಟ್ಸ್ಯಾಪ್‌ನಲ್ಲಿ ಹಂಚಿಕೊಂಡು, ನೆಟ್ಟಿಗರ ತರಾಟೆಗೂ ಒಳಗಾಗಿದ್ದರು.

ಸನ್‌ರೂಫ್ ಕಾರುಗಳು ತಂತ್ರಜ್ಞಾನದ ವೈಶಿಷ್ಟ್ಯವಷ್ಟೇ ಆಗಿರದೆ, ಸಾಮಾಜಿಕ ಸ್ಥಾನಮಾನ/ಆರ್ಥಿಕ ಉನ್ನತಿಯ ಸಂಕೇತವಾಗಿಯೂ ಪರಿಣಮಿಸಿವೆ. ಇಂಥ ಕಾರನ್ನು ಖರೀದಿಸಿದವರು ಅದರ ಸೌಲಭ್ಯಗಳನ್ನು ತೋರಿಸುವ ಉತ್ಸಾಹದಲ್ಲಿ ಮಕ್ಕಳನ್ನು ಹೀಗೆ ಸನ್‌ರೂಫ್‌ನಿಂದಾಚೆ ನಿಲ್ಲಿಸಿ ಕೈಬೀಸುವಂತೆ ಹೇಳುವುದು 'ನಾವು ಮೇಲೇರಿದ್ದೇವೆ' ಎಂಬ ಸಂದೇಶ ರವಾನಿಸುವ ಪ್ರಯತ್ನ ಎನ್ನಬಹುದು. ಮನೆ, ಉದ್ಯೋಗ, ಜೀವನಶೈಲಿ ಎಲ್ಲವೂ 'ಪ್ರದರ್ಶನವೇ' ಆಗಿಬಿಟ್ಟಿರುವ ಈ ದಿನಮಾನದಲ್ಲಿ ಸನ್‌ರೂಫ್ ಅದಕ್ಕೆ ಹೊರತಾಗಿಲ್ಲ. ಸಾಲದೆಂಬಂತೆ, ಈ ವರ್ತನೆಗೆ ಸೋಷಿಯಲ್ ಮೀಡಿಯಾ ಇನ್ನಷ್ಟು ಕುಮ್ಮಕ್ಕು ನೀಡುತ್ತಿದೆ. ಮಕ್ಕಳು ಹೀಗೆ ಕೈಬೀಸುವ ದೃಶ್ಯಗಳು ಇನ್‌ಸ್ಟಾಗ್ರಾಂ, ರೀಲ್ಸ್, ಯುಟ್ಯೂಬ್ ಶಾರ್ಟ್ಸ್, ವಾಟ್ಸ್ಯಾಪ್ ಸ್ಟೇಟಸ್‌ಗಳಲ್ಲಿ ವೈರಲ್ ಆಗಿ, ಇತರೆ ಮಕ್ಕಳು ಮತ್ತು ಪೋಷಕರನ್ನು ಕಂಗೆಡಿಸುತ್ತವೆ. ಒಂದಿಷ್ಟು ತಲೆಕೆಟ್ಟ ಜನರು ಇಂಥ ದೃಶ್ಯಗಳಿಗೆ 'ಕ್ಯೂಟ್' ಎಂದು ಪ್ರತಿಕ್ರಿಯಿಸುತ್ತಾರೆ. ಆದರೆ ಅಂಥ ವಿಡಿಯೋ ಹಿಂದೆ ಮಗುವೊಂದು ಕಂಟೆಂಟ್ ರಚನೆಯ ಸರಕಾಗಿರುವುದನ್ನು, ಜೀವಕ್ಕೆ ಅಪಾಯ ತಂದುಕೊಳ್ಳುವುದನ್ನು ಪೋಷಕರು ಗಮನಿಸುವುದಿಲ್ಲ.

ಇತ್ತೀಚೆಗೆ ಸೂರತ್‌ನಲ್ಲಿ, ಸನ್‌ರೂಫ್‌ನಿಂದ ಹೊರನಿಂತಿದ್ದ ಬಾಲಕಿಯೊಬ್ಬಳು ಗಾಳಿಪಟದ ತಂತಿಯು ಗಂಟಲಲ್ಲಿ ಸಿಲುಕಿ ಗಂಭೀರವಾಗಿ ಗಾಯಗೊಂಡು, ಆಸ್ಪತ್ರೆಗೆ ಸಾಗಿಸಲ್ಪಟ್ಟರೂ ಕೊನೆಗೆ ಮರಣಿಸಿದಳು. ಇನ್ನು ಕಾರಿಗೆ ಏಕಾಏಕಿ ಬ್ರೇಕ್ ಹಾಕಿದಾಗ ಮಗುವು ಮುಗ್ಗರಿಸಿ ತಲೆ, ಮುಖ, ಕಂಠಕ್ಕೆ ತೀವ್ರ ಗಾಯವಾಗುವುದು ಖಚಿತ. ಸಾಲದೆಂಬಂತೆ, ವೇಗದ ಗಾಳಿ, ಧೂಳು, ಕಲ್ಲು ಕಣಗಳಿಂದ ಕಣ್ಣಿಗೆ ಮತ್ತು ಮುಖಕ್ಕೆ ತೀವ್ರ ಹಾನಿಯಾಗಬಹುದು. ರಸ್ತೆಯಲ್ಲಿ ಕೆಳಮಟ್ಟದಲ್ಲಿ ತೂಗುವ ಮರದ ಕೊಂಬೆಗಳು, ವಿದ್ಯುತ್ ಕಂಬಗಳು, ಹೆಚ್ಚು ಎತ್ತರವಿಲ್ಲದ ಫ್ಲೈಓವರ್‌ಗಳು, ಕಬ್ಬಿಣದ ಸಲಾಕೆಗಳು ಮಗುವಿನ ತಲೆಗೆ ಅಪ್ಪಳಿಸಿ ಪ್ರಾಣಕ್ಕೆ ಸಂಚಕಾರ ತರುವ ಘಟನೆಗಳು ನಡೆಯುತ್ತಲೇ ಇವೆ. ಆದರೂ ಪೋಷಕರು ಎಚ್ಚೆತ್ತುಕೊಳ್ಳುತ್ತಿಲ್ಲ; ಅವರಿಗೆ ದಾರಿಹೋಕರ ಗಮನ ಸೆಳೆಯುವುದೇ ಮುಖ್ಯವಾಗಿಬಿಟ್ಟಿದೆ!



ಮನರಂಜನೆಯಾಗಲೀ, ಕ್ಷಣಿಕ ಆನಂದ ನೀಡುವುದಾಗಲೀ ಸನ್‌ರೂಫ್‌ನ ಮೂಲೋದ್ದೇಶವಲ್ಲ; ಅದು ವಾಹನದೊಳಗೆ ಸ್ವಾಭಾವಿಕ ಬೆಳಕು ಮತ್ತು ಶುದ್ಧಗಾಳಿಯ ಹರಿವನ್ನು ಹೆಚ್ಚಿಸಲು ಮಾಡಿರುವ ವಿನ್ಯಾಸವಷ್ಟೇ. ವಿಶೇಷವಾಗಿ ದೀರ್ಘಪ್ರಯಾಣದಲ್ಲಿ ವಾಹನದ ಒಳಗೆ ಉಂಟಾಗುವ ಬಿಸಿಯನ್ನು ತಗ್ಗಿಸಲು, ಗಾಳಿಯ ವಿನಿಮಯ ವ್ಯವಸ್ಥೆಯನ್ನು ಸುಗಮಗೊಳಿಸಲು ಇದು ಸಹಾಯಕ. ಜತೆಗೆ, ಕಾರು ಅತಿವೇಗದಲ್ಲಿ ಚಲಿಸುವಾಗ ಎದುರಾಗುವ ಗಾಳಿಯ ಒತ್ತಡದಿಂದ ಕಾರಿನೊಳಗೆ ಇರುವವರ ಕಣ್ಣು-ಕಿವಿ-ಮುಖಕ್ಕೆ ಉಂಟಾಗುವ ತೀವ್ರ ತೊಂದರೆಯನ್ನು ತಗ್ಗಿಸಲು ಸನ್‌ರೂಫ್ ಸಹಕಾರಿಯಾಗುತ್ತದೆ. ಗಾಳಿಯ ಸಮತೋಲನದ ನಿರ್ವಹಣೆಯಾಗುವುದರಿಂದ ವಾಹನವು ಸುಸ್ಥಿರವಾಗಿ ಸಾಗಲು ಇದು ನೆರವಾಗುತ್ತದೆ. ಆದ್ದರಿಂದ ಸನ್‌ರೂಫ್ ಅನ್ನು ತಜ್ಞರು 'ಸುಗಮ ಚಾಲನೆ' ಮತ್ತು 'ವಾತಾವರಣ ನಿಯಂತ್ರಣ' ವ್ಯವಸ್ಥೆಯ ಭಾಗವೆಂದು ಗುರುತಿಸುತ್ತಾರೆ.

ಈ ವಿಚಾರದಲ್ಲಿ ಭಾರತದ ರಸ್ತೆ ಕಾನೂನು ಸ್ಪಷ್ಟವಾಗಿದೆ. ಮೋಟಾರು ವಾಹನಗಳ ಕಾಯಿದೆ, 1988ರ ಹಲವು ಕಲಮುಗಳು ಕಾರಿನ ಸನ್‌ರೂಫ್ ಅನ್ನು ಪ್ರದರ್ಶನಕ್ಕೆ ಬಳಸುವುದನ್ನು ನಿಷೇಧಿಸುತ್ತವೆ. ಈ ಕಾಯಿದೆಯ ಕಲಮು 125 ಮತ್ತು 138ರ ಪ್ರಕಾರ, ಚಲಿಸುತ್ತಿರುವ ವಾಹನದಿಂದ ಪ್ರಯಾಣಿಕರು ತಮ್ಮ ದೇಹದ ಯಾವುದೇ ಭಾಗವನ್ನು (ತಲೆ, ಕೈ, ಮುಖ, ಭುಜ) ಹೊರಹಾಕಬಾರದು. ಹೀಗಾಗಿ, ಸನ್‌ರೂಫ್ ಮೂಲಕ ಮಕ್ಕಳನ್ನು ಹೊರಗೆ ನಿಲ್ಲಿಸುವುದು ಈ ನಿಯಮದ ನೇರ ಉಲ್ಲಂಘನೆಯಾಗುತ್ತದೆ. ಕಲಮು 177 ಮತ್ತು 184ರ ಪ್ರಕಾರ, ಚಾಲಕನು ಪ್ರಯಾಣಿಕರ ಸುರಕ್ಷತೆಗೆ ಕಾನೂನುಬದ್ಧ ಹೊಣೆಗಾರನಾಗಿದ್ದು, ಅಪಾಯಕಾರಿ ಪರಿಸ್ಥಿತಿಯನ್ನು ಉಂಟುಮಾಡಿದರೆ ಆತ ದಂಡ ತೆರಬೇಕಾಗುತ್ತದೆ. ಕಲಮು 138ರ ಪ್ರಕಾರ, ಮುಂಭಾಗದಲ್ಲಷ್ಟೇ ಅಲ್ಲದೆ ಕಾರಿನ ಹಿಂಬದಿಯ ಪ್ರಯಾಣಿಕರೂ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ (ಸನ್‌ರೂಫ್‌ನ ಹೊರಗೆ ನಿಲ್ಲುವ ಮಗು ಸೀಟ್ ಬೆಲ್ಟ್‌ನ ರಕ್ಷಣೆಯನ್ನೇ ಪಡೆಯಲಾಗದು). ಈ ಕಾಯಿದೆಯ ಪ್ರಕಾರ, ಅಪ್ರಾಪ್ತ ಮಕ್ಕಳನ್ನು ಹೀಗೆ ಅಪಾಯಕ್ಕೆ ಒಳಪಡಿಸುವ ವರ್ತನೆಗೆ ಪೋಷಕರೇ ನೇರ ಹೊಣೆಗಾರರು. ಈ ತಪ್ಪಿಗೆ 1000ದಿಂದ 5000 ರುಪಾಯಿವರೆಗೆ ದಂಡ, ಚಾಲಕನ ಲೈಸೆನ್ಸ್ ರದ್ದು ಇತ್ಯಾದಿ ಕಾನೂನು ಕ್ರಮಗಳಿವೆ. ಆದರೂ ಮಗುವಿನ ಪ್ರಾಣಕ್ಕೆ ಸಂಚಕಾರ ಒದಗಿದರೆ ಯಾವ ಕಾನೂನು ಏನು ಮಾಡೀತು?

ಸಮಾಜ ಶಾಸ್ತ್ರಜ್ಞರ ಪ್ರಕಾರ, ಈ ವರ್ತನೆಯು ಇತ್ತೀಚಿನ ಕೆಲ ಪೋಷಕರಲ್ಲಿ ಕಾಣಬರುತ್ತಿರುವ ವಿಲಕ್ಷಣ ಬದಲಾವಣೆಯನ್ನು ತೋರಿಸುತ್ತದೆ. ಮಕ್ಕಳಿಗೆ ಎಲ್ಲವನ್ನೂ ಕೊಡಬೇಕು, ಅವರ ಪ್ರತಿಕ್ಷಣವೂ ವಿಶೇಷವಾಗಿರಬೇಕು, ಅವರು ಯಾವಾಗಲೂ ಸಂತಸದಿಂದಿರಬೇಕು ಎಂಬ ಗ್ರಹಿಕೆಯ ಒತ್ತಡ ಇಂಥ ಪೋಷಕರಲ್ಲಿ ಹೆಚ್ಚಾಗುತ್ತಿದೆ. ಇದೊಂದು ರೀತಿಯಲ್ಲಿ 'ಪ್ರದರ್ಶನಾತ್ಮಕ ಪೋಷಕತ್ವ'. ಅಂದರೆ, 'ನಮ್ಮ ಮಗು ಸಾಹಸಿ', 'ನಮ್ಮದು ಆಧುನಿಕ ಕುಟುಂಬ', 'ನಾವು ವಿಭಿನ್ನರು' ಎಂದು ತೋರಿಸಿಕೊಳ್ಳುವ ಹಪಾಹಪಿ. ಆದರೆ, ಈ ಪ್ರದರ್ಶನದಲ್ಲಿ ಮಕ್ಕಳ ಸುರಕ್ಷತೆ ಮತ್ತು ಹೊಣೆಗಾರಿಕೆಯ ಮೌಲ್ಯಗಳು ಹಿಮ್ಮೆಟ್ಟುತ್ತಿವೆ. ಪೋಷಕರ ವರ್ತನೆಯನ್ನು ಮಗುವು ಅನುಸರಿಸುವುದರಿಂದ, ಈ ಅಪಾಯಕಾರಿ ಮೋಜು ಮಕ್ಕಳ ಮನಸ್ಸಿನಲ್ಲಿ 'ನಿಯಮೋಲ್ಲಂಘನೆಯನ್ನು ಮರೆತು ಗಮನ ಸೆಳೆಯುವುದೇ ಸಾಧನೆ' ಎಂಬ ತಪ್ಪುಕಲ್ಪನೆಗಳನ್ನು ಹುಟ್ಟಿಸುತ್ತದೆ. ಈ ಮನೋವೈಜ್ಞಾನಿಕ ಪ್ರಭಾವಗಳು ಅವರ ಮುಂದಿನ ದಿನಗಳಲ್ಲಿ ಇನ್ನಷ್ಟು ಅಪಾಯಕಾರಿ ನಡೆಗಳ ಪುನರಾವರ್ತನೆಗೆ ಕಾರಣವಾಗಬಹುದು. ಮಕ್ಕಳಿಗೆ ಸಂತಸ ನೀಡುವ ಭರದಲ್ಲಿ 'ವಿದ್ಯಾವಂತ' ಪೋಷಕರು ನೈತಿಕತೆಯ ಎಲ್ಲೆಯನ್ನು ಮೀರುತ್ತಿದ್ದಾರೆ.

ಒಟ್ಟಿನಲ್ಲಿ, 'ಸನ್‌ರೂಫ್ ಟ್ರೆಂಡ್' ಭಾರತೀಯ ಸಮಾಜದ ಕೆಲ ವರ್ಗಗಳ 'ವ್ಯಕ್ತಿಚಿತ್ರ'ವನ್ನು ಬಿಂಬಿಸುತ್ತದೆ. ಮಧ್ಯಮ ವರ್ಗದವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದ್ದಂತೆ ಕಾರಿನ ಬಳಕೆ ಹೆಚ್ಚುತ್ತಿದೆ. ಆದರೆ, ಮಕ್ಕಳನ್ನು ಸನ್‌ರೂಫ್‌ನಿಂದಾಚೆ ನಿಲ್ಲಿಸಿ ಕೈಬೀಸಿಸುವ ಮೋಜಿದೆಯಲ್ಲಾ, ಅದು, ಸುರಕ್ಷತೆ, ಕಾನೂನು ಮತ್ತು ಮನೋವೈಜ್ಞಾನಿಕ ದೃಷ್ಟಿಯಿಂದ ಗಂಭೀರ ಪರಿಣಾಮಗಳನ್ನು ಉಂಟುಮಾಡಬಲ್ಲದು ಮತ್ತು ಮಕ್ಕಳ ಸುರಕ್ಷತೆಯು ಯಾವುದೇ ಟ್ರೆಂಡ್‌ಗಿಂತ ಮಿಗಿಲು ಎಂಬುದನ್ನು ಇಂಥ ಪೋಷಕರು ಅರಿತರೆ ಒಳಿತು. ಮಕ್ಕಳ ಜೀವವು ಯಾವುದೇ ರೀಲ್ಸ್, ಫೋಟೋ, ವಿಡಿಯೋ ಅಥವಾ ಪ್ರದರ್ಶನಕ್ಕಿಂತಲೂ ಮಹತ್ವದ್ದು. ಮಕ್ಕಳನ್ನು ಸುರಕ್ಷಿತವಾಗಿ, ಮೌಲ್ಯಗಳೊಂದಿಗೆ, ಹೊಣೆಗಾರಿಕೆಯೊಂದಿಗೆ ಬೆಳೆಸುವುದು ನಿಜವಾದ ಪೋಷಕತ್ವ; ಮೋಜಿನ ಕ್ಷಣಗಳನ್ನು ಚಿತ್ರಿಸುವುದು ಈ ವ್ಯಾಪ್ತಿಗೆ ಬರುವುದಿಲ್ಲ...

(ಲೇಖಕರು ಸಹ-ಪ್ರಾಧ್ಯಾಪಕರು)

ಸುದ್ದಿ-ಸಂವಹನ ಕ್ಷೇತ್ರಗಳಲ್ಲಿ ಕನ್ನಡವು ಕುಣಿದಾಡಲಿ

ಇಂದು ಪ್ರಾಥಮಿಕ ಶಾಲೆಗಳಲ್ಲಿ ಭಾಷೆಯನ್ನು ಶಿಸ್ತುಬದ್ಧವಾಗಿ ಕಲಿಸುವ ಕ್ರಮವಿಲ್ಲ. ಭಾಷೆಯನ್ನೇ ಸರಿಯಾಗಿ ಕಲಿಯದ ಮಗು, ತನ್ನ ಚಿಂತನೆಗಳ ಅಭಿವ್ಯಕ್ತಿಯಲ್ಲಿ ಅಸಮರ್ಥವಾಗುತ್ತದೆ. ಕಳೆದ ಒಂದು ದಶಕದಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳಲ್ಲಿ ಕಾಗುಣಿತ/ವ್ಯಾಕರಣ ದೋಷ, ತಪ್ಪು ಭಾಷಾಂತರದ ವರದಿಯಾಗುತ್ತಿರುವುದು, ಭಾಷೆಯನ್ನು ಸರಿಯಾಗಿ ಕಲಿಸದಿರುವುದರ ಪರಿಣಾಮವೇ.

ಕನ್ನಡ ಕಸ್ತೂರಿ
ಡಾ. ಜಗದೀಶ್ ಅಂಗಡಿ
vveditoped@gmail.com

ಕನ್ನಡ ರಾಜ್ಯೋತ್ಸವದ ಮಾಸವು ಕನ್ನಡತನದ ಅವಲೋಕನದ ಸಂದರ್ಭವನ್ನು ಮತ್ತೆ ಹೊತ್ತು ತಂದಿದೆ. ಭಾಷೆಯ ಬಳಕೆ, ಉಳಿಕೆ ಮತ್ತು ಬೆಳವಣಿಗೆಯಲ್ಲಿ ಸುದ್ದಿಮನೆ ಮತ್ತು ಸಂವಹನ ಕ್ಷೇತ್ರಗಳ ಪಾತ್ರ ನಿರ್ಣಾಯಕವಾಗಿರುತ್ತದೆ. ಸುದ್ದಿಮನೆಯಲ್ಲಿ ಕಾಣಬರುವ 'ಪದಪ್ರಯೋಗ'ವು, ಅವನ್ನು ಉಪಯೋಗಿಸುವಂತೆ ಶ್ರೀಸಾಮಾನ್ಯರನ್ನು ಪ್ರೇರೇಪಿಸುತ್ತದೆ. ಆದರೆ, ಈ ಹೊಣೆಗಾರಿಕೆಯನ್ನು ಮಾಧ್ಯಮ ಸಂಸ್ಥೆಗಳು ಎಷ್ಟರ ಮಟ್ಟಿಗೆ ನಿಭಾಯಿಸುತ್ತಿವೆ? ಎಂಬುದು ಯಕ್ಷಪ್ರಶ್ನೆ. ಈ ಸಾಲುಗಳನ್ನೊಮ್ಮೆ ನೋಡಿ: 'ಸಿಎಂಗೆ ಬಿಗ್ ರಿಲೀಫ್', 'ಅಸೆಂಬ್ಲಿಯಲ್ಲಿ ಹೈಡ್ರಾಮಾ'. ಇಲ್ಲಿ 'ಗೆ' ಹಾಗೂ 'ಯಲ್ಲಿ' ಮಾತ್ರ ಕನ್ನಡದವಾದರೆ, ಮಿಕ್ಕವು ಕನ್ನಡದ ಮುಖವಾಡವನ್ನು ಧರಿಸಿರುವ ಇಂಗ್ಲಿಷ್ ಅಭಿವ್ಯಕ್ತಿಗಳು! ಇದನ್ನು 'ಭಾಷಾ ಕಲಬೆರಕೆ ಸಂಸ್ಕೃತಿ' ಎಂದೇ ಗುರುತಿಸಬೇಕಾಗುತ್ತದೆ.

ಸಂದರ್ಭದ ಅಭಿವ್ಯಕ್ತಿಗೆ ಸೂಕ್ತ/ಸಮರ್ಥ ಕನ್ನಡ ಪದವು ಇಲ್ಲದಿದ್ದಾಗ, ತರ್ಜುಮೆ ಮಾಡಿದರೂ ಅದನ್ನು ಬಳಸಲು ಕ್ಲಿಷ್ಟವೆನ್ನಿಸಿದಾಗ ಅಥವಾ ಇಂಗ್ಲಿಷ್‌ನ ನಿರ್ದಿಷ್ಟ ಪದವೇ ಪರಿಣಾಮಕಾರಿ ಎನ್ನಿಸಿದಾಗ, ಅಂಥ ಇಂಗ್ಲಿಷ್ ಪದದ ಉಚ್ಚಾರಣೆಯನ್ನು ಕನ್ನಡದ ಅಕ್ಷರಗಳಲ್ಲಿ ರಚಿಸುವುದು ವಾಡಿಕೆ. ಕನ್ನಡವು ವ್ಯಾಪಕವಾಗಲು ಈ ಪದ್ಧತಿಯು ಪೂರಕವೂ ಹೌದು. ಉದಾಹರಣೆಗೆ, ಬಸ್, ಪೊಲೀಸ್, ಲ್ಯಾಪ್‌ಟಾಪ್, ಪ್ಯಾನ್ ಇಂಡಿಯಾ ಮುಂತಾದವನ್ನು ತರ್ಜುಮೆ ಮಾಡುವುದಕ್ಕಿಂತ ಈ ಪದ್ಧತಿಯಲ್ಲಿ ಪದಗಳನ್ನು ರಚಿಸಿ, ಅವನ್ನು ಕನ್ನಡ ಪದಗಳನ್ನಾಗಿ ಪರಿವರ್ತಿಸುವುದರಿಂದ ಕನ್ನಡ ಪದಕೋಶ ಹಿರಿದಾಗುತ್ತಾ ಹೋಗುತ್ತದೆ. ಆದರೆ ಕೋರ್ಟ್, ಕೇಸ್, ರಿಯಾಲಿಟಿ, ಬರ್ತ್‌ಡೇ, ಸೆಂಚುರಿ, ಲಿರಿಕ್ಸ್, ಪ್ರಾಜೆಕ್ಟ್, ಮರ್ಡರ್, ಬ್ಯಾಕ್‌ಗ್ರೌಂಡ್ ಸ್ಕೋರ್ ಮುಂತಾದ ಇಂಗ್ಲಿಷ್ ಪದಗಳಿಗೆ ಕ್ರಮವಾಗಿ ನ್ಯಾಯಾಲಯ, ಪ್ರಕರಣ, ವಾಸ್ತವ/ವಾಸ್ತವಿಕತೆ, ಗೀತಸಾಹಿತ್ಯ, ಯೋಜನೆ, ಕೊಲೆ, ಹಿನ್ನೆಲೆ ಸಂಗೀತ ಮುಂತಾದ ಸಮರ್ಥ ಕನ್ನಡ ಪದಗಳು ಲಭ್ಯವಿರುವಾಗಲೂ ಬರಹದಲ್ಲಾಗಲೀ ಸುದ್ದಿ ವಾಚನದಲ್ಲಾಗಲೀ ಅವನ್ನು ಬಳಸುತ್ತಿಲ್ಲವೇಕೆ? 'ಭಾಷಾ ಕಲಬೆರಕೆ ಸಂಸ್ಕೃತಿ'ಯ ಪದಬಳಕೆ ಎಷ್ಟು ಸರಿ? ಈ ಪದ್ಧತಿಯು ಕನ್ನಡ ಪದಗಳ ಅವಸಾನದ ಪ್ರತೀಕವಲ್ಲವೇ? ಕನ್ನಡ ಅಂಕಿಗಳ ಬಳಕೆಯು ಕ್ರಮೇಣ ಮರೆಯಾಗಿರುವುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಹಾಗೆ ನೋಡಿದರೆ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಮಾತ್ರ ಕನ್ನಡದ ಅಂಕಿಗಳು ಕಾಣುತ್ತವೆ.

ಎರಡು ದಶಕಗಳ ಹಿಂದೆ, ಇಂಗ್ಲಿಷ್ ಶಬ್ದಗಳನ್ನು ಇಂಗ್ಲಿಷ್ ಅಕ್ಷರಗಳಲ್ಲಿಯೇ ಬಳಸುವ ಪದ್ಧತಿಯು ಹೆಚ್ಚಾಗಿ ಸಾಹಿತ್ಯ ಬರವಣಿಗೆಯಲ್ಲಿ ಇತ್ತು. ಇದು ಪಿ.ಲಂಕೇಶ್ ಅವರ ಕಾಲದಲ್ಲಿ ಜನಪ್ರಿಯವಾಗುತ್ತಾ ಹೋಯಿತು. ಲಂಕೇಶರು ಇಂಗ್ಲಿಷ್ ಪ್ರಾಧ್ಯಾಪಕ, ಕನ್ನಡ ಸಾಹಿತಿ ಮತ್ತು ಪತ್ರಕರ್ತರಾಗಿದ್ದುದರಿಂದ ಆ ಶೈಲಿಗೆ ಒಂದು ರೀತಿಯ ಅಧಿಕೃತತೆ ಒದಗಿಬಂತು. ಲಘು ಬರಹ, ಲಹರಿ ಹಾಗೂ ವಿಶ್ಲೇಷಣಾ ಬರಹಗಳಲ್ಲಿ ಈ ಪದ್ಧತಿ ರೂಢಿಗತವಾಯಿತು ಮತ್ತು ಅದು ಆಯಾ ಸಂದರ್ಭಗಳನ್ನು ಅರ್ಥಪೂರ್ಣವಾಗಿಸುತ್ತಿತ್ತು, ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳ ಸೂಕ್ಷ್ಮತೆ-ಶುದ್ಧತೆಯನ್ನು ಗೌರವಿಸುವಂತಿತ್ತು ಎಂಬುದನ್ನು ಗಮನಿಸಬೇಕು.

ಆದರೆ, 'ಭಾಷಾ ಕಲಬೆರಕೆ ಸಂಸ್ಕೃತಿ'ಯಲ್ಲಿ ಇಂಗ್ಲಿಷ್ ಪದಗಳ ವಿಲಕ್ಷಣ ಉಚ್ಚಾರವನ್ನು ಬರೆಯುವ ಮೂಲಕ ಮತ್ತೊಂದು ತಪ್ಪನ್ನು ಎಸಗಲಾಗುತ್ತಿದೆ. 'ತ್ರಿಬಲ್' ಎಂಬ ಪದಬಳಕೆ ಇದಕ್ಕೊಂದು ಉದಾಹರಣೆ, 'ಟ್ರಿಪ್ಲ್' ಎಂಬುದು ಸರಿಯಾದ ಉಚ್ಚಾರ. ಅಂತೆಯೇ, ಇಂಗ್ಲಿಷ್‌ನಲ್ಲಿ ಇಲ್ಲದ ಪದಗಳ ಉಚ್ಚಾರವನ್ನು ಕನ್ನಡದಲ್ಲಿ ಬರೆಯಲಾಗುತ್ತಿದೆ. ಉದಾಹರಣೆಗೆ- 'ಡಿಜಿಟಲೀಕರಣ'. ಭಾಷಾ ಶುದ್ಧತೆಯ ಬಗ್ಗೆ ಸಂವೇದನಾರಹಿತರಾದಾಗ ಇಂಥ ತಪ್ಪುಗಳು ಜರುಗುತ್ತವೆ. 'ರೂಢಿಯಲ್ಲಿರುವ ಪದವನ್ನು ಬಳಸುವುದು ತಪ್ಪಲ್ಲ' ಎಂಬ ವಾದವನ್ನು 'ಭಾಷಾ ಕಲಬೆರಕೆ ಸಂಸ್ಕೃತಿ'ಗೆ ಪೂರಕವಾಗಿ ಮಂಡಿಸಲಾಗುತ್ತಿದೆ. ಸಾಮಾನ್ಯರು ಹೀಗೆ ತಪ್ಪು ಪದಪ್ರಯೋಗ/ತಪ್ಪು ಉಚ್ಚಾರಣೆಗೆ ಮುಂದಾದರೆ ಅದು ಕ್ಷಮೆಗೆ ಅರ್ಹ, ಆದರೆ ಇದೇ ಮಾತನ್ನು ಸುದ್ದಿಮನೆಗಳಿಗೂ ಅನ್ವಯಿಸಲಾಗದು. ಏಕೆಂದರೆ, ಸರಿಯಾದ ಪದಪ್ರಯೋಗವು ಸುದ್ದಿಮನೆಯ ಜವಾಬ್ದಾರಿಗಳಲ್ಲೊಂದು. ಶಸ್ತ್ರಚಿಕಿತ್ಸೆ ಮಾಡುವ ವೈದ್ಯ ತನ್ನ ಕಸುಬಿನಲ್ಲಿ ಸಂವೇದನಾರಹಿತನಾದಾಗ ರೋಗಿಗೆ ತೊಂದರೆಯಾಗುವುದು ನಿಶ್ಚಿತ; ಅಂತೆಯೇ ಸರಿಯಾದ ಪದಬಳಕೆಯ ವಿಷಯದಲ್ಲಿ ಪತ್ರಕರ್ತ ಸಂವೇದನಾರಹಿತನಾದಾಗ, ಭಾಷೆಯ ಅವನತಿ ಖಚಿತ.

ತಂತ್ರಜ್ಞಾನ, ಮಾಧ್ಯಮ ಹಾಗೂ ಭಾಷೆಯ ನಡುವೆ ಸೂಕ್ಷ್ಮವಾದ ಸಂಬಂಧವಿದೆ. ಸ್ಥೂಲವಾಗಿ ಹೇಳುವುದಾದರೆ, ಕಳೆದ ಎರಡೂವರೆ ದಶಕಗಳಲ್ಲಿ 'ಭಾಷಾ ಕಲಬೆರಕೆ'ಯು ಮೂರು ಹಂತಗಳಲ್ಲಾಗಿದೆ. ಎಫ್.ಎಂ. ರೇಡಿಯೋ ಸಂಸ್ಕೃತಿ ಪರಿಚಯವಾದಾಗ ಬಳಕೆಯಲ್ಲಿದ್ದ ಶುದ್ಧ ಕನ್ನಡದ ಬದಲು ಇಂಗ್ಲಿಷ್ ಪದಗಳನ್ನು ಮುನ್ನೆಲೆಗೆ ತರಲಾಯಿತು, ಇದು ಮೊದಲ ಹಂತ. ಜಾಗತೀಕರಣವು ವ್ಯಾಪಕವಾಗುತ್ತಿದ್ದ ಈ ಅವಧಿಯಲ್ಲಿ ಈ ಸಂಸ್ಕೃತಿಗೆ, ವಾಣಿಜ್ಯಕ ಕಾರಣಗಳಿಗಾಗಿ ಯುವಜನರನ್ನು ಹೆಚ್ಚು ತಲುಪುವುದು ಅನಿವಾರ್ಯವಾಗಿತ್ತು. ಕನ್ನಡ ಪದಗಳನ್ನು ಬಳಸಿಯೂ ಈ ಗುರಿಗಳನ್ನು ತಲುಪಲು ಸಾಧ್ಯವಿತ್ತು; ಆದರೆ, 'ಬಹುಭಾಷಿಕರಿರುವ ಬೆಂಗಳೂರು ನಗರದಲ್ಲಿ ಇದು ಸಾಧ್ಯವಿಲ್ಲ' ಎಂಬ ಢೋಂಗಿ ಸಮರ್ಥನೆಯನ್ನು ನೀಡಲಾಯಿತು. ತೊಂಬತ್ತರ ದಶಕದಲ್ಲಿ 'ಆಕಾಶವಾಣಿ'ಗಳಲ್ಲಿ ಬಳಕೆಯಾಗುತ್ತಿದ್ದ ಕನ್ನಡಕ್ಕೂ, ಖಾಸಗಿ ಎಫ್.ಎಂ. ರೇಡಿಯೋತ್ತರ ಅವಧಿಯಲ್ಲಿ ಈ ಕೇಂದ್ರಗಳಲ್ಲಿ ಬಳಕೆಯಾಗುತ್ತಿರುವ ಕನ್ನಡಕ್ಕೂ ಭೂಮಿ-ಆಕಾಶದಷ್ಟು ಅಂತರವಿದೆ. ಇಂದು ದೂರದರ್ಶನದ ಉದ್ಘೋಷದ ಕನ್ನಡವೂ ಇದಕ್ಕಿಂತ ಭಿನ್ನವಾಗಿಲ್ಲ.

ಸುದ್ದಿವಾಹಿನಿಗಳ 'ಹಾವಳಿ'ಯ ನಂತರದ ಎರಡನೇ ಹಂತದಲ್ಲಿ, ಒಂದೂವರೆ ದಶಕದಿಂದ ಈಚೆಗೆ 'ಕಲಬೆರಕೆ ಸಂಸ್ಕೃತಿ' ವೇಗ ಪಡೆಯಿತು. ಇಂದಿನ ಸುದ್ದಿವಾಹಿನಿಗಳಲ್ಲಿ ಬಳಕೆಯಾಗುತ್ತಿರುವ ಕನ್ನಡವು 'ಅತ್ತ ಅದೂ ಇಲ್ಲ, ಇತ್ತ ಇದೂ ಇಲ್ಲ' ಎಂಬಂಥ ಸ್ಥಿತಿಯಲ್ಲಿದೆ. ಕನ್ನಡ ಪದಗಳ ತಪ್ಪು ಉಚ್ಚಾರಣೆ ಹಾಗೂ ಅನಗತ್ಯ ಇಂಗ್ಲಿಷ್ ಪದಗಳ ಬಳಕೆಯಿಂದಾಗಿ ಭಾಷಾ ಶುದ್ಧತೆಗೆ ಧಕ್ಕೆಯಾಗಿದೆ.

ಇನ್ನು ಮೂರನೇ ಹಂತದ ಭಾಷಾ ಕಲಬೆರಕೆ ಆಗಿ, ಅಪಹಾಸ್ಯದ ಸ್ವರೂಪವನ್ನು ಪಡೆದಿದ್ದು ಸಾಮಾಜಿಕ ಜಾಲತಾಣೋತ್ತರ ಅವಧಿಯಲ್ಲಿ, ನಿರ್ದಿಷ್ಟ ಪದಗಳ ಬಳಕೆಯು 'ಟ್ರೆಂಡ್' ಎಂದು ಪರಿಗಣಿತವಾಗುತ್ತದೆ. ಇದು ಯುವ ಸಮೂಹದ ಆಡುಮಾತಿನಲ್ಲಿ ಅಥವಾ ಸಾಮಾಜಿಕ ಜಾಲತಾಣದಲ್ಲಿ ಸಹಜ. ಈ ಜಾಲತಾಣಗಳಲ್ಲಿ ಭಾಷಾ ಹೊಣೆಗಾರಿಕೆ ಕಾಣುತ್ತಿಲ್ಲ.

'ಭಾಷಾ ಕಲಬೆರಕೆ ಸಂಸ್ಕೃತಿ'ಯ ಮೂಲವು ಪ್ರಾಥಮಿಕ ಹಂತದ ಭಾಷಾ ಬೋಧನಾ ವ್ಯವಸ್ಥೆಯಲ್ಲಿದೆ. ಇಂದು ಪ್ರಾಥಮಿಕ ಶಾಲೆಗಳಲ್ಲಿ ಭಾಷೆಯನ್ನು ಶಿಸ್ತುಬದ್ಧವಾಗಿ ಕಲಿಸುವ ಕ್ರಮವಿಲ್ಲ. ಬಾಲ್ಯದಲ್ಲಿ ಸರಿಯಾಗಿ ಭಾಷೆಯನ್ನೇ ಕಲಿಯದ ಮಗು, ತನ್ನ ಚಿಂತನೆಗಳ ಅಭಿವ್ಯಕ್ತಿಯಲ್ಲಿ ಅಸಮರ್ಥವಾಗುತ್ತದೆ. ಕಳೆದ ಒಂದು ದಶಕದಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳಲ್ಲಿ ಕಾಗುಣಿತ ದೋಷ, ವ್ಯಾಕರಣ ದೋಷ ಮತ್ತು ತಪ್ಪು ಭಾಷಾಂತರದ ವರದಿಯಾಗುತ್ತಿರುವುದು, ಭಾಷೆಯನ್ನು ಹೀಗೆ ಸರಿಯಾಗಿ ಕಲಿಸದಿರುವುದರ ಪರಿಣಾಮವೇ. ಇಂಥ ವ್ಯವಸ್ಥೆಯಲ್ಲಿ ಶಿಕ್ಷಣ ಪಡೆದವರು ಸುದ್ದಿಮನೆ ಮತ್ತು ಇತರ ಸಂವಹನ ಕ್ಷೇತ್ರಗಳ ಒಳಗೆ ತೂರಿಕೊಂಡು, 'ಭಾಷಾ ಕಲಬೆರಕೆ ಸಂಸ್ಕೃತಿ'ಯ ರಾಯಭಾರಿಗಳಾಗಿಬಿಡುತ್ತಾರೆ!

ನಿರಂತರತೆಯು ಭಾಷೆಯ ಸ್ವರೂಪ. ಕನ್ನಡವು ಬೇರೊಂದು ಭಾಷೆಯ ಪದಗಳನ್ನು ತನ್ನದಾಗಿಸಿಕೊಳ್ಳಬೇಕು; ಹಾಗೆಂದ ಮಾತ್ರಕ್ಕೆ ಉಪಯೋಗದಲ್ಲಿರುವ ಕನ್ನಡ ಪದಗಳನ್ನು ತ್ಯಜಿಸಬೇಕೆಂದು ಅರ್ಥವಲ್ಲ. ಭಾಷಾ ಶುದ್ಧತೆಯ ಆಚೆಗೆ ಈ 'ಕಲಬೆರಕೆ ಸಂಸ್ಕೃತಿ'ಯನ್ನು ವಿಶ್ಲೇಷಿಸಿದಾಗ, ಬದಲಾಗುತ್ತಿರುವ ಕನ್ನಡ ಭಾಷೆಯ ಸ್ವರೂಪವನ್ನು ಅದು ಸೂಚಿಸುವಂತೆ ಭಾಸವಾಗುತ್ತದೆ. ಮುಂದಿನ ದಶಕಗಳಲ್ಲಿ ಈ ಸ್ವರೂಪವು ಇನ್ನೂ ಬದಲಾಗಬಹುದು. ಈ 'ಕಲಬೆರಕೆ ಸಂಸ್ಕೃತಿ'ಯು ಕನ್ನಡದ ಚಲನಶೀಲತೆಯ ಪ್ರತೀಕವಾಗುವ ಸಾಧ್ಯತೆಯೂ ಇದೆ. ಹೀಗಾಗಿ, ಈ ಸಂದರ್ಭವು ಭಾಷಾತಜ್ಞರಿಗೆ ಸಂಶೋಧನೆಗೆ ಯೋಗ್ಯವಾಗಿದೆ. ಇಂಥ ಸಂಕೀರ್ಣ ವ್ಯವಸ್ಥೆಯಲ್ಲಿ ಹಾಗೂ ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ, 'ಭಾಷಾ ಕಲಬೆರಕೆ ಸಂಸ್ಕೃತಿ'ಯ ಸಮಸ್ಯೆಗೆ ಉತ್ತರ ಕಂಡುಕೊಳ್ಳುತ್ತಲೇ, ಕನ್ನಡವನ್ನು ಇನ್ನಷ್ಟು ವಿಸ್ತರಿಸುವ ಹೊಣೆಗಾರಿಕೆಯು ಸುದ್ದಿಮನೆ ಮತ್ತು ಸಂವಹನ ಕ್ಷೇತ್ರಗಳ ಮೇಲಿದೆ. ಆದರೆ ಇದು ಆರಂಭವಾಗಬೇಕಿರುವುದು ಯಾರಿಂದ? ಎಲ್ಲಿಂದ? ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು? ಎಂಬ ಪ್ರಶ್ನೆಗಳಿಗೆ ಉತ್ತರ ಇದ್ದಂತಿಲ್ಲ...

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:306

ಸಮಾಚಾರ ಸಣ್ಣದಲ್ಲ

ಆರೆಸ್ಸೆಸ್ ಮುಖಂಡನ ಮಗನ ಗುಂಡಿಕ್ಕಿ ಹತ್ಯೆ

ಫಿರೋಜ್‌ಪುರ: ಪಂಜಾಬ್ ರಾಜ್ಯದ ಫಿರೋಜ್ ಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್ ಎಸ್) ಮುಖಂಡ ಬಲದೇವ್ ರಾಜ್ ಅರೋರಾ ಎಂಬವರ ಪುತ್ರ ನವೀನ್ ಅರೋರಾ (32) ಎಂಬವರ ಹತ್ಯೆಯಾಗಿದೆ ಎಂದು ಪೊಲೀಸರು ಭಾನು ವಾರ ತಿಳಿಸಿದ್ದಾರೆ. ಬಲದೇವ್ ಹಲವು ವರ್ಷ ಗಳಿಂದ ಆರ್‌ಎಸ್‌ಎಸ್ ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ನವೀನ್ ಶನಿವಾರ ತಮ್ಮ ಅಂಗಡಿಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಮೋಟಾರ್ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳಿಬ್ಬರು ಗುಂಡಿಕ್ಕಿ ಕೊಂದಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಜನರು ಭಯದ ವಾತಾ ವರಣದಲ್ಲೇ ಬದುಕ ಬೇಕಾಗಿದೆ ಎಂದು ಪಂಜಾಬ್ ಬಿಜೆಪಿ ಮುಖ್ಯಸ್ಥ ಸುನೀಲ್ ಜಾಖರ್ ಕಳವಳ ವ್ಯಕ್ತಪಡಿಸಿದ್ದಾರೆ.ಹತ್ಯೆ ಪ್ರಕರಣ ದಾಖಲಿಸಿರುವ ಪೊಲೀಸರು, ಹಂತಕರ ಗುರುತು ಪತ್ತೆಗೆ ಆ ಪ್ರದೇಶದ ಸಿಸಿಟಿವಿ ದೃಶ್ಯಾವಳಿ ಗಳನ್ನು ಪರಿಶೀಲಿಸು ತ್ತಿದ್ದಾರೆ. ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗು ವುದು ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಸುಕ್ಮಾ ಕಾರ್ಯಾಚರಣೆ: 3 ನಕ್ಸಲರ ಅಂತ್ಯ

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಭಾನು ವಾರ ಬೆಳಗ್ಗೆ ನಡೆಸಲಾದ ನಕ್ಸಲರ ನಿಗ್ರಹ ಕಾರ್ಯಾ ಚರಣೆಯಲ್ಲಿ ಜಂಟಿ ಭದ್ರತಾ ಪಡೆಗಳು ಮೂವರು ನಕ್ಸಲ ರನ್ನು ಹೊಡೆದುರುಳಿಸಿವೆ. ಬೆಜ್ಜಿ ಮತ್ತು ಚಿಂತಗುಫಾ ಪೊಲೀಸ್ ಠಾಣೆ ಪ್ರದೇಶಗಳ ನಡುವಿನ ಅರಣ್ಯ ಪ್ರದೇಶದಲ್ಲಿನ ಬೆಟ್ಟಗಳ ಸಾಲಿನಲ್ಲಿ ಭಾನುವಾರ ಬೆಳಗ್ಗೆ ನಕ್ಸಲ್ ನಿಗ್ರಹ ಪಡೆ ಮತ್ತು ನಕ್ಸಲರ ತಂಡದ ನಡುವೆ ಗುಂಡಿನ ಚಕಮಕಿ ನಡೆದಿದೆ. ಪ್ರದೇಶದಲ್ಲಿ ಮಾವೋವಾದಿ ನಕ್ಸಲರ ಇರುವಿಕೆ ಬಗ್ಗೆ ಮಾಹಿತಿ ಸಿಕ್ಕ ಬಳಿಕ ಜಿಲ್ಲಾ ಮೀಸಲು ಪಡೆ(ಡಿಎಆರ್) ತಂಡವು ನಕ್ಸಲರ ವಿರೋಧಿ ಕಾರ್ಯಾಚರಣೆ ಪ್ರಾರಂಭಿಸಿತು ಭಾನುವಾರ ಬೆಳಗ್ಗೆ ಕಾರ್ಯಾಚರಣೆ ಶುರುವಾ ಗಿದ್ದು, ಸಂಜೆಯವರೆಗೆ ಮೂವರು ನಕ್ಸಲರನ್ನು ಕೊಲ್ಲಲಾಗಿದೆ. ಕಾರ್ಯಾ ಚರಣೆ ಇನ್ನೂ ನಡೆಯು ತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಈ ವರ್ಷ ಛತ್ತೀಸ್‌ಗಢದಲ್ಲಿ 262 ನಕ್ಸಲರು ಹತರಾಗಿದ್ದಾರೆ. ಸುಕ್ಮಾ ಸೇರಿದಂತೆ ಏಳು ಜಿಲ್ಲೆಗಳನ್ನು ಒಳಗೊಂಡ ಬಸ್ತಾರ್ ವಿಭಾಗವೊಂದ ರಲ್ಲಿಯೆ 233 ನಕ್ಸಲರನ್ನು ಹೊಡೆದು ಹಾಕಲಾಗಿದೆ. ರಾಯಪುರ ವಿಭಾಗದ ಗರಿಯಾಬಂದ್ ಜಿಲ್ಲೆಯಲ್ಲಿ 27 ಜನರು ಮೃತಪಟ್ಟಿದ್ದಾರೆ. ದುರ್ಗ್ ವಿಭಾಗದ ಮೊಹ್ಲಾ- ಮನುಪುರ-ಅಂಬಾಘರ್ ಚೌಕಿ ಜಿಲ್ಲೆ ಗಳಲ್ಲಿ 2 ನಕ್ಸಲರನ್ನು ಕೊಲ್ಲಲಾಗಿದೆ ಎಂದು ಪೊಲೀಸರು ಮಾಹಿತಿ ಹಂಚಿಕೊಂಡಿದ್ದಾರೆ.

ಎಂವಿಎ ಬಿಟ್ಟು ಬಿಎಂಸಿಗೆ ಏಕಾಂಗಿ ಸ್ಪರ್ಧೆ: ಕಾಂಗ್ರೆಸ್

ಮುಂಬೈ: ಬಿಹಾರ ಚುನಾವಣೆ ಸೋಲಿನ ಬಳಿಕ ಒಕ್ಕೂಟ ರಚನೆ, ಒಟ್ಟಾಗಿ ಚುನಾವಣೆ ಸ್ಪರ್ಧೆ ಬಗೆಗೆ ಕಾಂಗ್ರೆಸ್ ನಿಲುವಿನಲ್ಲಿ ಬದಲಾ ವಣೆ ಆಗಿರುವಂತೆ ಕಾಣ ಬರುತ್ತಿದೆ. ಬಿಹಾರ ದಲ್ಲಿ ಮಹಾಘಟಬಂಧನ್ ಭಾಗ ವಾಗಿ ಸ್ಪರ್ಧೆ ಮಾಡಿ ದರೂ ಹೀನಾಯ ಸೋಲು ಉಂಟಾಗಿರುವ ಹಿನ್ನೆಲೆಯಲ್ಲಿ ಮಹಾ ರಾಷ್ಟ್ರ ದಲ್ಲಿಯೂ 'ಮಹಾ ವಿಕಾಸ್ ಅಘಾಡಿ'ಯಿಂದ ದೂರವಾಗಲು, ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ಕಾಂಗ್ರೆಸ್ ಸಜ್ಜಾಗಿದೆ. ಮುಂಬರುವ ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್(ಬಿಎಂಸಿ) ಚುನಾ ವಣೆಯಲ್ಲಿ ಕಾಂಗ್ರೆಸ್ ಪಕ್ಷ ಸ್ವತಂತ್ರವಾಗಿಯೇ ಸ್ಪರ್ಧಿಸಲಿದೆ. ಈ ಕುರಿತು ಪಕ್ಷದಲ್ಲಿ ಸಿದ್ಧತೆ ನಡೆಸಲಾ ಗುತ್ತಿದೆ ಎಂದು ಕಾಂಗ್ರೆಸ್ ಮುಂಬೈ ಘಟಕದ ಅಧ್ಯಕ್ಷೆ ವರ್ಷಾ ಗಾಯಕ್ವಾಡ್ ಪಕ್ಷದ ಸಭೆ ಯಲ್ಲಿ ಹೇಳಿ ದ್ದಾರೆ. ಎಲ್ಲಾ 227 ವಾರ್ಡ್‌ಗಳಲ್ಲೂ ಸ್ಪರ್ಧೆಗೆ ಪಕ್ಷದ ನಾಯಕರು ಸಿದ್ಧರಾಗಿರಿ. ಹೆಚ್ಚಿನ ಸಂಖ್ಯೆಯ ಕಾಂಗ್ರೆಸ್ ಕಾರ್ಪೊರೇಟರ್‌ಗಳು ಆಯ್ಕೆಯಾಗು ವುದನ್ನು ಖಚಿತಪಡಿಸಿರಿ. 'ಬಿಎಂಸಿ'ಯಲ್ಲಿ ಕಾಂಗ್ರೆಸ್ ಧ್ವಜ ಹಾರಿಸುವಂತೆ ಮಾಡಿ ಎಂದೂ ಪಕ್ಷದ ಕಾರ್ಯ ಕರ್ತರಿಗೆ ಕರೆ ನೀಡಿದ್ದಾರೆ. ಇನ್ನೊಂದೆಡೆ, ಶಿವಸೇನೆ (ಉದ್ಧವ್ ಬಣ)ದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಸೋದರ ಸಂಬಂಧಿ 'ಮಹಾರಾಷ್ಟ್ರ ನವ ನಿರ್ಮಾಣ ಸೇನೆ' (ಎಂಎನ್‌ಎಸ್) ನಾಯಕ ರಾಜ್ ಠಾಕ್ರೆ ಜತೆಗೂಡಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಸ್ಪರ್ಧೆ ಮಾಡಲು ಸಿದ್ಧವಾಗುತ್ತಿರುವುದು ಕೂಡಾ ಕಾಂಗ್ರೆಸ್‌ನ ಏಕಾಂಗಿ ಸ್ಪರ್ಧೆ ನಿಲುವಿಗೆ ಮತ್ತೊಂದು ಕಾರಣವಾಗಿದೆ ಎನ್ನಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ನ್ಯಾ.ಬಿ.ಆರ್.ಗವಾಯಿ} ಸಿಜೆಐ

ಪರಿಶಿಷ್ಟ ಜಾತಿಯವರಿಗೆ ಮೀಸಲು ಸೌಲಭ್ಯ ನೀಡುವಾಗ ಕೆನೆಪದರ ನೀತಿ ಅನುಸರಿಸ ಬೇಕು. ಅದಕ್ಕೆ ನನ್ನ ಬೆಂಬಲವಿದೆ. ಏಕೆಂದರೆ, ಮೀಸಲು ವಿಚಾರದಲ್ಲಿ ಬಡ ಕೃಷಿ ಕೂಲಿ ಕಾರ್ಮಿಕನ ಮಕ್ಕಳು, ಐಎಎಸ್ ಅಧಿಕಾರಿ ಮಕ್ಕಳನ್ನು ಒಂದೇ ಲೆಕ್ಕದಲ್ಲಿ ನೋಡಲು ಸಾಧ್ಯವಿಲ್ಲ. ಇಂದ್ರಾ ಸಾಹ್ನಿ ವರ್ಸಸ್ ಕೇಂದ್ರ ಸರಕಾರ ಪ್ರಕರಣದಲ್ಲಿ ಉಲ್ಲೇಖಿತ ಕೆನೆಪದರ ನೀತಿ ಉಲ್ಲೇಖಾರ್ಹ.

ನ.19/20ರಂದು ಹೊಸ ಸಿಎಂ, ಡಿಸಿಎಂ ಪ್ರಮಾಣ ನಿರೀಕ್ಷೆ
ಜೆಡಿಯುಗೆ ಸಿಎಂ, ಬಿಜೆಪಿ-ಎಲ್‌ಜೆಪಿಗೆ ಡಿಸಿಎಂ ಸಾಧ್ಯತೆ
2-3 ದಿನದಲ್ಲಿ ಬಿಹಾರ ನೂತನ ಸರಕಾರ ರಚನೆ

ಪಟನಾ: ಬಿಹಾರ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಗಳು ಪೂರ್ಣಗೊಂಡಿದ್ದು, ಹೊಸ ಸರಕಾರದ ರಚನೆ ಪ್ರಕ್ರಿಯೆ ಸೋಮವಾರ ಆರಂಭಗೊಳ್ಳುವ ಸಾಧ್ಯತೆ ಇದೆ. ನ.19 ಅಥವಾ 20ರಂದು ಬಿಹಾರದ ನೂತನ ಸರಕಾರದ ರಚನೆ, ಮುಖ್ಯಮಂತ್ರಿ ಹಾಗೂ ಸಂಪುಟ ಸಚಿವರ ಪ್ರಮಾಣವಚನ ನಡೆಯಲಿದೆ ಎಂದು ಮೂಲ ಗಳು ಹೇಳಿವೆ.

ಬಿಜೆಪಿ-ಜೆಡಿಯು ಜಂಟಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಒಟ್ಟಾಗಿ 202 ಸ್ಥಾನಗಳನ್ನು ಗೆದ್ದಿರು ವುದರಿಂದ ಹೊಸ ಸರಕಾರದ ರಚನೆ ಸರಾಗವಾಗಿ ಆಗಲಿದೆ. ಆದರೆ, ಉಪ ಮುಖ್ಯಮಂತ್ರಿಗಳ ಸಂಖ್ಯೆ, ಸಚಿವ ಸಂಪುಟ ರಚನೆ, ಖಾತೆಗಳ ಹಂಚಿಕೆ ಮೊದ ಲಾದ ಪ್ರಮುಖ ಅಂಶಗಳು ಮೊದಲು ಅಂತಿಮ ಗೊಳ್ಳ ಬೇಕಿದೆ. ಈಗಾಗಲೇ 4 ಅವಧಿಗಳನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಪೂರ್ಣಗೊಳಿಸಿರುವ ಸಂಯುಕ್ತ ಜನತಾ ದಳದ ನಾಯಕ ನಿತೀಶ್ ಕುಮಾರ್, 5ನೇ ಅವಧಿಗೂ ಮುಖ್ಯಮಂತ್ರಿಯಾಗಿ ಮುಂದುವರಿ ಯಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ಮಾತನ್ನು ಕೇಂದ್ರ ಸಚಿವ, ಲೋಕ ಜನಶಕ್ತಿ ಪಕ್ಷದ ಮುಖಂಡ, ಪ್ರಧಾನಿ ನರೇಂದ್ರ ಮೋದಿ ಅವರ ಮೆಚ್ಚಿನ 'ಹನುಮಂತ' ಚಿರಾಗ್ ಪಾಸ್ವಾನ್ ಅವರೇ ಪರೋಕ್ಷವಾಗಿ ಪಟನಾದಲ್ಲಿ ನಿತೀಶ್ ಕುಮಾರ್ ಮನೆಯ ಅಂಗಳದಲ್ಲೇ ಶನಿವಾರ ಹೇಳಿದ್ದಾರೆ.

ಆದರೆ, ಎನ್‌ಡಿಎ ಮೈತ್ರಿಕೂಟದಲ್ಲೇ ಅತ್ಯಧಿಕ (89) ಶಾಸಕ ಬಲವನ್ನು ಹೊಂದಿರುವ ಬಿಜೆಪಿ ವರಿಷ್ಠರ ಮನದಾಳದಲ್ಲೇನಿದೆ ಎಂಬುದು ಇನ್ನೂ ನಿಚ್ಚಳವಾಗಿಲ್ಲ. ನಿತೀಶ್ ಕುಮಾರ್ ಅವರನ್ನೇ ಸಿಎಂ ಸ್ಥಾನದಲ್ಲಿ ಮುಂದುವರಿಸಲಾಗುವುದೇ? ಹೊಸ ನಾಯಕರೊಬ್ಬರಿಗೆ ಅವಕಾಶ ಮಾಡಿಕೊಡಲಾ ಗುವುದೇ ಎಂಬುದು ಸ್ಪಷ್ಟವಾಗಿಲ್ಲ.

ಇಂದು ರಾಜೀನಾಮೆ: ಇದರ ಬೆನ್ನಲ್ಲೇ ಮುಖ್ಯ ಮಂತ್ರಿ ಸ್ಥಾನಕ್ಕೆ ನಿತೀಶ್ ಕುಮಾರ್ ಅವರು ಸೋಮ ವಾರ ರಾಜೀನಾಮ ನೀಡುವ ಸಾಧ್ಯತೆ ಇದೆ. ರಾಜ್ಯ ಪಾಲರ ಬಳಿ ತೆರಳಿ ರಾಜೀನಾಮೆ ಪತ್ರ ಸಲ್ಲಿಸಲಿದ್ದಾರೆ. ಆ ಬಳಿಕ ಜೆಡಿಯು ಪಕ್ಷದ ಮಹತ್ವದ ಸಭೆ ನಡೆಸಲಿ ದ್ದಾರೆ ಎಂದು ತಿಳಿದುಬಂದಿದೆ.

ಇಂದು ಜೆಡಿಯು ಸಭೆ

ಜೆಡಿಯು ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ನಿತೀಶ್ ಕುಮಾರ್ ಅವರು ಸೋಮ ವಾರ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಆ ಬಳಿಕ ಪಕ್ಷದ ಹಿರಿಯ ನಾಯಕರು ಮತ್ತು ನೂತನ ಶಾಸಕರ ಸಭೆ ನಡೆಸಲಿದ್ದಾರೆ. ಜೆಡಿಯು ಶಾಸಕಾಂಗ ಪಕ್ಷದ ಸಭೆಯ ಬಳಿಕ ಎನ್‌ಡಿಎ ಮೈತ್ರಿಕೂಟದ ಪಕ್ಷಗಳನ್ನು ಒಳಗೊಂಡ ಸಭೆ ನಡೆಯಲಿದೆ. ಆ ಮೂಲಕ ನೂತನ ಸರಕಾರ ರಚನೆಯ ಪ್ರಕ್ರಿಯೆಗೆ ಸೋಮವಾರ ಚಾಲನೆ ಸಿಗಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಎನ್‌ಡಿಎ ಸಭೆ

ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯಲ್ಲಿ ಬಿಜೆಪಿ, ಜೆಡಿಯು, ಎಲ್‌ಜೆಪಿ ಸೇರಿದಂತೆ ಮಿತ್ರ ಪಕ್ಷಗಳ ನಾಯಕರು, ಶಾಸಕರು ಸೇರಿ ಬಿಹಾರದ ನೂತನ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲಿದ್ದಾರೆ. ಜತೆಗೆ ಸಚಿವ ಸಂಪುಟ, ಮಿತ್ರ ಪಕ್ಷಗಳ ನಾಯಕರಿಗೆ ಅವಕಾಶ, ಸಚಿವ ಸ್ಥಾನ ಸೇರಿದಂತೆ ಎಲ್ಲವೂ ಅಂತಿಮಗೊಳ್ಳಲಿದೆ. ಆ ಬಳಿಕ ರಾಜಭವನಕ್ಕೆ ತೆರಳಿ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರಿಗೆ ನೂತನ ಸರಕಾರ ರಚನೆಗೆ ಅವಕಾಶ ಕೋರಿ ಪ್ರಸ್ತಾವನೆ ಸಲ್ಲಿಸಲಿದ್ದಾರೆ.

ಸಿಎಂ-ಡಿಸಿಎಂ ಲೆಕ್ಕಾಚಾರ

ಬಿಹಾರ ವಿಧಾನಸಭೆಯಲ್ಲಿ ಪ್ರಸ್ತುತ ಬಿಜೆಪಿ ಅತಿದೊಡ್ಡ ಪಕ್ಷವಾಗಿದೆ. ಹಾಗಿದ್ದರೂ ಕಮಲ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನ ಸಿಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ತನಗಿಂತ ಕೇವಲ 4 ಸ್ಥಾನಗಳಷ್ಟೇ ಕಡಿಮೆ ಗೆದ್ದಿರುವ ಜೆಡಿಯುಗೆ(ನಿತೀಶ್ ಕುಮಾರ್ ಗೇ) ಸಿಎಂ ಸ್ಥಾನವನ್ನು ಬಿಜೆಪಿ ಬಿಟ್ಟುಕೊಡಬೇಕಾಗಿ ಬರಲಿದೆ. ಬಿಜೆಪಿ ಮತ್ತು ಎಲ್‌ಜೆಪಿಗೆ ತಲಾ ಒಂದು ಡಿಸಿಎಂ ಸ್ಥಾನ ನೀಡಬಹುದಾಗಿದೆ. ರಾಜ್ಯ ರಾಜಕಾರಣಕ್ಕೆ ಮರಳಲು ಉತ್ಸುಕರಾಗಿರುವ ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಅವರು ಡಿಸಿಎಂ ಆಗಬಹುದು. ಉಳಿದಂತೆ ಬಿಜೆಪಿಯಿಂದ ಸಾಮ್ರಾಟ್ ಚೌಧರಿ ಅವರಿಗೆ ಮತ್ತೊಂದು ಅವಧಿಗೆ ಡಿಸಿಎಂ ಹುದ್ದೆ ಸಿಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಫರೀದಾಬಾದ್ ಸ್ಫೋಟಕ ಪತ್ತೆ: ಕಾಶ್ಮೀರದಲ್ಲಿ ವೈದ್ಯೆ ಬಂಧನ

ಶ್ರೀನಗರ: ಹರಿಯಾಣದಲ್ಲಿನ ಫರೀದಾಬಾದ್ ನಗರ ಸಮೀಪದ ಧವ್ಜ್ ಗ್ರಾಮದಲ್ಲಿ ಡಾ. ಮುಜಮ್ಮಿಲ್ ಬಾಡಿಗೆಗಿದ್ದ ಮನೆಯಲ್ಲಿ 2900 ಕಿಲೋ ಸ್ಫೋಟಕ ಸಾಮಗ್ರಿಗಳು ಸಿಕ್ಕ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಜಮ್ಮು-ಕಾಶ್ಮೀರದ ಪೊಲೀಸ್ ಅಧಿಕಾರಿಗಳು ದಕ್ಷಿಣ ಕಾಶ್ಮೀರದಲ್ಲಿರುವ ಸರಕಾರಿ ವೈದ್ಯಕೀಯ ಕಾಲೇಜಿನ ವೈದ್ಯೆಯೊಬ್ಬರನ್ನು ಭಾನುವಾರ ಬಂಧಿಸಿದ್ದಾರೆ. ಹರಿಯಾಣ ರಾಜ್ಯದ ರೋಹ್ಟಕ್ ನಗರ ಮೂಲದ ಡಾ.ಪ್ರಿಯಾಂಕಾ ಶರ್ಮಾ ಬಂಧಿತ ಆರೋಪಿ.

ಅನಂತನಾಗ್ ಜಿಲ್ಲೆಯ ಮಲಕ್‌ನಾಗ್ ಪ್ರದೇಶದಲ್ಲಿ ಬಾಡಿಗೆ ವಸತಿಗೃಹದಲ್ಲಿ ನೆಲೆಸಿದ್ದ ಡಾ.ಪ್ರಿಯಾಂಕಾ ಶರ್ಮಾಳನ್ನು ಜಮ್ಮು-ಕಾಶ್ಮೀರ ಪೊಲೀಸರ ಗುಪ್ತಚರ ತಂಡ ಭಾನುವಾರ ಬಂಧಿಸಿದೆ. ಈ ದಾಳಿ ವೇಳೆ ಮೊಬೈಲ್ ಫೋನ್ ಮತ್ತು ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಂಡ ತನಿಖಾ ತಂಡ, ಅವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಟ್ಟಿದೆ. ಈಕೆ ಜಮ್ಮು-ಕಾಶ್ಮೀರದಿಂದ ಹರಿಯಾಣದ ಫರೀದಾಬಾದ್ ಮತ್ತು ದೆಹಲಿ ಕೆಂಪು ಕೋಟೆ ಮೆಟ್ರೊ ನಿಲ್ದಾಣವರೆಗಿನ ಭಯೋತ್ಪಾದಕ ಕೃತ್ಯಗಳಿಗೆ ಸಂಪರ್ಕ ಹೊಂದಿರುವ 'ವೈಟ್-ಕಾಲರ್ ಉಗ್ರರ ಕೂಟ'ದ ಜತೆ ಸಂಪರ್ಕದಲ್ಲಿದ್ದಳು ಎಂಬುದು ತಿಳಿದುಬಂದ ಬಳಿಕವೇ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅನಂತನಾಗ್ ಜಿಲ್ಲೆಯ ಸರಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಈ ಹಿಂದೆ ಸೇವೆ ಸಲ್ಲಿಸುತ್ತಿದ್ದ ಡಾ. ಅದಿಲ್‌ನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ ವೇಳೆ ಈಕೆಯ ಹೆಸರು ಬೆಳಕಿಗೆ ಬಂದಿದೆ.

ದೆಹಲಿ ಕಾರು ಬಾಂಬ್ ಸ್ಫೋಟ ಮಸೂದ್, ಹಫೀಜ್ ಪಿತೂರಿ



ಇಸ್ಲಾಮಾಬಾದ್: ನ.10ರ ಸಂಜೆ ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣ ಬಳಿ ಕಾರು ಬಾಂಬ್ ಸ್ಫೋಟವಾಗಿ 12 ಮಂದಿ ಸಾವಿಗೀಡಾದರು. ಈ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಪಾತ್ರವಿದೆ ಎಂಬುದನ್ನು ದೃಢೀಕರಿಸುಂತೆ ಪಾಕಿಸ್ತಾನದ ಹಿರಿಯ ಪತ್ರಕರ್ತರ ಹಳೆಯ ವಿಡಿಯೊ ಇದೀಗ ಮತ್ತೆ ಮುನ್ನೆಲೆಗೆ ಬಂದಿದೆ. ಪಾಕಿಸ್ತಾನದ ಹಿರಿಯ ಪತ್ರಕರ್ತ ಜಾವೇದ್ ಚೌಧರಿ ಭಾರತದಲ್ಲಿ ಭಯೋತ್ಪಾದಕ ದಾಳಿಗಳು ಸಂಭವಿಸಲಿವೆ ಎಂದು 5 ತಿಂಗಳ ಹಿಂದೆಯೇ ಪಾಕ್‌ನಲ್ಲಿ ಹೇಳಿದ್ದ ವಿಡಿಯೊ ಈಗ ಮತ್ತೆ ಜಾಲತಾಣದಲ್ಲಿ ಸದ್ದು ಮಾಡುತ್ತಿದೆ. ಪತ್ರಕರ್ತ ಜಾವೇದ್ ಚೌಧರಿ ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್‌ಐ'ಗೆ ಬಹಳ ಆಪ್ತ ಎಂದೂ ಹೇಳಲಾಗಿದೆ. ಭಾರತದಲ್ಲಿ ಇಂತಹ ದಾಳಿಗಳು ನಡೆಯುತ್ತವೆ. ಉಗ್ರರ ಸೃಷ್ಟಿಕರ್ತರಾದ ಮಸೂದ್ ಅಜರ್ ಮತ್ತು ಹಫೀಜ್ ಸಯೀದ್ ಭಾರತದಲ್ಲಿ ಭಯೋತ್ಪಾದಕ ದಾಳಿಗಳ ಹಿಂದಿರುತ್ತಾರೆ ಎಂದು ಪತ್ರಕರ್ತ ಚೌಧರಿ ಐದು ತಿಂಗಳ ಹಿಂದೆಯೇ ಹೇಳಿದ್ದರ ಕುರಿತ ವಿವರಗಳನ್ನು ಭಾರತೀಯ ತನಿಖಾ ಸಂಸ್ಥೆಗಳು ಒಟ್ಟುಗೂಡಿಸುತ್ತಿವೆ ಎನ್ನಲಾಗಿದೆ.

ಚೀನಾದ ಜಿಯಾಂಗ್ಸು ಪ್ರಾಂತ್ಯದ ಜಾಂಗ್ಜಿಯಾಗ್ಯಾಂಗ್‌ನಲ್ಲಿ ಇರುವ, ಬೌದ್ಧ ವಾಸ್ತುಶಿಲ್ಪ ಮತ್ತು ಆಧ್ಯಾತ್ಮಿಕ ಮಹತ್ವಕ್ಕೆ ಹೆಸರುವಾಸಿಯಾದ 1,500 ವರ್ಷ ಹಳೆಯದಾದ ಬಹು ಮಹಡಿಗಳ ಯೋಂಗ್‌ಕಿಂಗ್ ಬೌದ್ಧ ಮಂದಿರ 2 ದಿನದ ಹಿಂದೆ ಶಾರ್ಟ್ ಸರ್ಕಿಟ್ ಕಾರಣ ಬೆಂಕಿ ಹೊತ್ತಿ ಪೂರ್ಣ ಭಸ್ಮವಾಗಿದೆ. ಯಾವುದೇ ಸಾವುನೋವು ವರದಿಯಾಗಿಲ್ಲ.

ದೆಹಲಿ ಸ್ಫೋಟದ ರೂವಾರಿ ಡಾ.ಉಮರ್ ಉನ್‌ನಬಿ
ಅಕ್ರಮ ಮಾರ್ಗದ ₹ 20 ಲಕ್ಷ ಬಳಸಿ ರಾಸಾಯನಿಕ ಖರೀದಿ

ದೆಹಲಿ: ದೆಹಲಿ ಕೆಂಪು ಕೋಟೆ ಮೆಟ್ರೊ ನಿಲ್ದಾಣದ ಬಳಿ ಹುಂಡೈ ಐ20 ಕಾರು ಸ್ಫೋಟಿಸಿ 12 ಜನರ ಸಾವಿಗೆ ಕಾರಣನಾದ 'ವೈಟ್ ಕಾಲರ್ ಭಯೋತ್ಪಾದಕ' ಡಾ.ಉಮರ್ ಉನ್‌ನಬಿ, ಅಕ್ರಮ ಮಾರ್ಗದಲ್ಲಿ 20 ಲಕ್ಷ ರು. ಪಡೆದುಕೊಂಡಿದ್ದಾನೆ. ಈ ಸಂಬಂಧ ಹರಿಯಾಣ ಮೂಲದ ಮೂವರು ಹವಾಲಾ ಡೀಲರ್‌ಗಳನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ.

ಅಕ್ರಮ ಮಾರ್ಗದಲ್ಲಿ ಬಂದ ಈ ಹಣವನ್ನು ಬಳಸಿಯೇ ಹರಿಯಾಣ ರಾಜ್ಯದ 'ನುಹ್' ನಗರದಲ್ಲಿ ಅಮೋನಿಯಂ 360 ಕಿಲೊ ನೈಟ್ರೇಟ್ ಸೇರಿದಂತೆ 2900 ಕಿಲೊ ಸ್ಫೋಟಕ ರಾಸಾಯನಿಕಗಳನ್ನು ಖರೀದಿಸಿದ್ದಾನೆ ಎಂಬುದು ತನಿಖೆಯ ವಿವಿಧ ಹಂತಗಳಲ್ಲಿ ತಿಳಿದುಬಂದಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಮತ್ತು ಅಮೋನಿಯಂ ನೈಟ್ರೇಟ್ ಖರೀದಿಸಿದಾಗ ಹರಿಯಾಣದ ನುಹ್ ನಗರ ದಲ್ಲಿನ ಮಾರಾಟಗಾರನಿಗೆ ಹಣವನ್ನು ನಗದು ರೂಪದಲ್ಲಿಯೇ ಪಾವತಿಸಿದ್ದಾನೆ. ಏಕೆಂದರೆ, ಡಿಜಿಟಲ್ ಪೇ ಮಾಡಿದರೆ, ಅಥವಾ ಚೆಕ್ ಮೂಲಕ ಹಣ ನೀಡಿದರೆ ಬೇಗನೇ ಸಿಕ್ಕಿಕೊಳ್ಳ ಬೇಕಾಗಬಹುದು ಎಂಬ ಕಾರಣದಿಂದಲೇ ನಗದಾಗಿಯೇ ಹಣ ಪಾವತಿಸಿದ್ದಾನೆ ಎಂದು ತಿಳಿದುಬಂದಿದೆ.

6-7 ವರ್ಷ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರದ ಓದಿನ ಜತೆಗೇ ರಾಸಾಯನಿಕ ಬಗೆಗೂ ಅಧ್ಯಯನ ನಡೆಸಿದ್ದ 'ಉಗ್ರ ವೈದ್ಯ' ಡಾ. ಉಮರ್ ಉನ್‌ನಬಿ, ಅಮೋನಿಯಂ ನೈಟ್ರೇಟ್ ಮತ್ತು ಇತರೆ ರಾಸಾಯನಿಕಗಳನ್ನು ಬಳಸಿ ಸ್ಫೋಟಕಗಳನ್ನು ತಯಾರಿಸುವುದನ್ನೂ ಕಲಿತಿದ್ದ. ಹಾಗಾಗಿಯೇ, ನ.10ರ ಸೋಮವಾರ ಸಂಜೆ 6.58ರಲ್ಲಿ ದೆಹಲಿಯಲ್ಲಿ ಐ20 ಕಾರಿನಲ್ಲಿ ಕುಳಿತೇ ಕೆಲವೇ ಸಮಯದಲ್ಲಿ ಸ್ಫೋಟಕ ಸಿದ್ಧಪಡಿಸಿ ಆತ್ಮಾಹುತಿ ದಾಳಿ ನಡೆಸಿದೆ ಎಂಬುದು ತನಿಖೆಯ ವಿವಿಧ ಹಂತಗಳಲ್ಲಿ ತಿಳಿದುಬಂದಿದೆ.

ಮೆಟ್ರೊ ನಿಲ್ದಾಣ ಮತ್ತೆ ಕಾರ್ಯಾರಂಭ: ನ.10ರ ಸಂಜೆಯ ಸ್ಫೋಟದ ಬಳಿಕ ತನಿಖೆಯ ಕಾರಣಕ್ಕೆ ಮುಚ್ಚಲಾಗಿದ್ದ ದೆಹಲಿ ಕೆಂಪುಕೋಟೆ ಬಳಿಯ 'ಲಾಲ್‌ಖಿಲಾ ಮೆಟ್ರೊ ನಿಲ್ದಾಣ' ಭಾನುವಾರದಿಂದ ಮತ್ತೆ ಸೇವೆಗೆ ತೆರೆದುಕೊಂಡಿದೆ. ಡಾ. ಉಮರ್ ಉನ್‌ನಬಿಯ ಐ20 ಕಾರಿನ ಸ್ಫೋಟದ ತೀವ್ರತೆಗೆ ಲಾಲ್ ಖಿಲಾ ಮೆಟ್ರೊ ನಿಲ್ದಾಣ ಭೂಕಂಪದಲ್ಲಾಗುವಂತೆ ಅದುರಿ ಹೋಗಿತ್ತು. 40 ಅಡಿಗಳಷ್ಟು ಆಳದಲ್ಲಿ ನೆಲದಾಳ ದಲ್ಲಿದ್ದ ಮೆಟ್ರೊ ನಿಲ್ದಾಣದಲ್ಲಿದ್ದ ಜನರಿಗೆ ಆಗ ಭೂಕಂಪನದ ಅನುಭವವೇ ಆಗಿದೆ. ಇದು ಅಲ್ಲಿದ್ದ ಸಿಸಿಟಿವಿಯಲ್ಲಿ ದಾಖಲಾಗಿರುವ ದೃಶ್ಯ ಗಳಿಂದ ತಿಳಿದುಬರುತ್ತದೆ.

ಪಾರ್ಕಿಂಗ್ ಸ್ಥಳದಲ್ಲೇ ಪ್ರಬಲ ಸ್ಫೋಟಕದ ಸಿದ್ಧತೆ

ನ.10ರಂದು ತಯಾರಿಸಿದ ಸ್ಫೋಟಕಕ್ಕೆ ಡಾ.ಉಮರ್ ಉನ್‌ನಬಿ, ಇಂಧನ ತೈಲ ಮತ್ತು ಟ್ರಾನ್ಸ್‌ಫಾರ್ಮರ್‌ಗೆ ಬಳಸುವ ಆಯಿಲ್, ಅಮೋನಿಯಂ ನೈಟ್ರೇಟ್, ಕೆಲವು ರಾಸಾಯನಿಕಗಳನ್ನು ಬಳಸಿದ್ದ. ಅಷ್ಟರಿಂದಲೇ ಸುತ್ತಮುತ್ತಲಿನ ಹತ್ತಾರು ವಾಹನಗಳನ್ನು ಜಖಂಗೊಳಿಸುವಂತಹ, ಸ್ಫೋಟಕ್ಕೆ ಸಿಕ್ಕ ವ್ಯಕ್ತಿ ಮತ್ತು ವಸ್ತುಗಳ ನೂರಾರು ಮೀಟರ್‌ಗಳಷ್ಟು ದೂರದವರೆಗೂ ಚಿಮ್ಮಿಹೋಗುವಂತೆ, ಸ್ಫೋಟದ ಸದ್ದು ಕಿಮೀಗಳಷ್ಟು ದೂರದವರೆಗೂ ಕೇಳಿಸುವಂತೆ ಮಾಡಬಲ್ಲ ಪ್ರಬಲವಾದ ಸ್ಫೋಟಕವನ್ನೇ, ಅದೂ ಕೆಲವೇ ನಿಮಿಷಗಳಲ್ಲಿ ಸಿದ್ಧಪಡಿಸಿದ್ದ. ಈ ರಾಸಾಯನಿಕ ಸ್ಫೋಟಕಕ್ಕೆ 3 ಎಂಎಂ ಅಥವಾ 9 ಎಂಎಂ ಸಾಮರ್ಥ್ಯದ ಬ್ಯಾಟರಿ-ಚಾಲಿತ ಟೈಮಿಂಗ್ ಸಾಧನಕ್ಕೆ ತೆಳುವಾದ ವೈರ್‌ಗಳನ್ನು ಜೋಡಿಸಿದ್ದ. ಕೈಯಿಂದಲೇ ಆನ್-ಆಫ್ ಮಾಡಬಲ್ಲ, ಸರಳ ಸ್ವಿಚ್ಚನ್ನೇ ಸ್ಫೋಟಕ ಸಿಡಿಸುವುದಕ್ಕೆ ಬಳಸಿದ್ದ. ಈ ಸ್ಫೋಟಕದ ಜೋಡಣೆ ಪ್ರಕ್ರಿಯೆಯನ್ನು ಕೇವಲ 10 ನಿಮಿಷದಲ್ಲೇ ಮುಗಿಸಿದ್ದ. ಸುನ್ಹೇರಿ ಮಸೀದಿ ಬಳಿಯ ವಾಹನ ನಿಲುಗಡೆ ಸ್ಥಳದಲ್ಲಿ ಮಧ್ಯಾಹ್ನ 3.19ರಿಂದ ಸಂಜೆ 6.48ರವರೆಗೆ ಐ 20 ಕಾರನ್ನು ನಿಲುಗಡೆ ಮಾಡಿದ್ದಾಗಲೇ ಈ ಸ್ಫೋಟಕವನ್ನು ಉಗ್ರ ಉಮರ್ ಜೋಡಿಸಿರಬಹುದು ಎಂಬುದು ತನಿಖೆ ನಡೆಸುತ್ತಿರುವ ಅಧಿಕಾರಿಗಳ ಅಂದಾಜಾಗಿದೆ.

ಟಿಎಟಿಪಿ ಬಳಸಿರುವ ಶಂಕೆ

ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಬಳಿಯ ಡಾ.ಉಮರ್‌ನ 'ಐ 20' ಕಾರು ಸ್ಫೋಟದಲ್ಲಿ 'ಟ್ರಯಾಸೆಟೋನ್ ಟ್ರೈಪೆರಾಕ್ಸೈಡ್'(ಟಿಎಟಿಪಿ) ರಾಸಾಯನಿಕ ಬಳಸಿರಬಹುದು. 2-3 ಕೆಜಿ ಅಮೋನಿಯಂ ನೈಟ್ರೇಟ್ ಮತ್ತು ಇಂಧನ ತೈಲದ ಜತೆಗೇ 'ಟಿಎಟಿಪಿ' ರಾಸಾಯನಿಕ ಬಳಸಿರಬಹುದು. ಇದರಿಂದಾಗಿ ಬಾಂಬ್ 40-50 ಕೆಜಿ ತೂಕವಿರಬಹುದು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ. ಟಿಎಟಿಪಿ ರಾಸಾಯನಿಕ ಅತ್ಯಂತ ಅಪಾಯಕಾರಿ. ಸ್ವಲ್ಪ ಘರ್ಷಣೆ ಉಂಟಾದರೆ, ಶಾಖ ತಗುಲಿದರೆ, ಸ್ವಲ್ಪವೇ ವಿದ್ಯುತ್ ಸ್ಪರ್ಶವದರೆ ಜೋರಾಗಿ ಸ್ಫೋಟಗೊಳ್ಳಬಲ್ಲದಾಗಿದೆ. ವಿಶೇಷವೆಂದರೆ 'ಟಿಎಟಿಪಿ'ಯನ್ನು ಮಿಲಿಟರಿ ದರ್ಜೆಯ ಶಕ್ತಿಶಾಲಿ 'ಐಇಡಿ' ತಯಾರಿಕೆಗೆ ಬಳಸಲಾಗುತ್ತದೆ. ರಾಷ್ಟ್ರೀಯ ಭದ್ರತಾ ಸಿಬ್ಬಂದಿ(ಎನ್‌ಎಸ್‌ಜಿ) ಮತ್ತು ವಿಧಿವಿಜ್ಞಾನ ಪರಿಣತರ ತಂಡಗಳು ಪರಿಶೀಲಿಸಿ ವರದಿ ನೀಡಿದ ನಂತರವಷ್ಟೇ ಈ ಬಗ್ಗೆ ದೃಢಪಡಿಸಲಾಗುವುದು ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ಹೇಳಿದ್ದಾರೆ.

39 ಸಾಮಾನ್ಯ ಕರೆ, 43 ವಾಟ್ಸಪ್ ಕರೆ



ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣದ ಬಳಿ ನ.10ರ ಸಂಜೆ ನಡೆಸಲಾದ ಹುಂಡೈ ಐ20 ಕಾರು ಸ್ಫೋಟ ಮತ್ತು ಹರಿಯಾಣದ ಫರೀದಾಬಾದ್‌ನ ಧವ್ಜ್ ಗ್ರಾಮದಲ್ಲಿನ ಬಾಡಿಗೆ ಮನೆಯಲ್ಲಿ 2900 ಕಿಲೊ ಸ್ಫೋಟಕ ಸಾಮಗ್ರಿ ಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಉಗ್ರ ವೈದ್ಯ ಡಾ. ಮುಜಮ್ಮಿಲ್‌ನ ಫೋನ್ ಕರೆಗಳ ಬಗ್ಗೆ ತನಿಖಾ ತಂಡ ಮಾಹಿತಿ ಕಲೆ ಹಾಕಿದೆ. ಸ್ಫೋಟಕ ಪತ್ತೆ ಪ್ರಕರಣ, ದೇಶದ ವಿವಿಧೆಡೆ ಭಯೋತ್ಪಾದಕ ಕೃತ್ಯಕ್ಕೆ ಸಂಚು ನಡೆಸಿದ್ದಕ್ಕೆ ಸಂಬಂಧಿಸಿ ಡಾ. ಶಾಹೀನ್ ಸಯೀದ್, ಡಾ.ಮುಜಮ್ಮಿಲ್ ಮತ್ತು ಡಾ.ಆದಿಲ್ ನಡುವೆ ದೂರವಾಣಿಯಲ್ಲಿ ಗೂಢವಾದ ಭಾಷೆಯಲ್ಲಿ ಸಂವಹನ ನಡೆದಿರುವುದು ಪತ್ತೆಯಾಗಿದೆ. ನ.1ರಿಂದ 7ರವರೆಗೆ ಡಾ.ಆದಿಲ್ ಮತ್ತು ಡಾ. ಶಾಹೀನ್ ಹಲವು ಬಾರಿ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಅದರಲ್ಲಿ ಸಿಮ್ ಬಳಸಿ 39 ಕರೆ ಮಾಡಿದ್ದರೆ, ಉಳಿದಂತೆ ವಾಟ್ಸಪ್ ಮೂಲಕ 43 ಕರೆಗಳನ್ನು ಮಾಡಲಾಗಿದೆ. 200 ಟೆಕ್ಸ್ಟ್ ಸಂದೇಶಗಳೂ ಗೂಢಾರ್ಥದಲ್ಲಿ ವಿನಿಮಯವಾಗಿವೆ ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಆರ್‌ಜೆಡಿ ವರಿಷ್ಠ ಲಾಲೂ ಕುಟುಂಬದಲ್ಲಿ ಭಾರೀ ಅಂತಃಕಲಹ | ಸೋಲಿಗೆ ರೋಹಿಣಿ ಆಚಾರ್ಯ ಕಾರಣ ಎಂದು ಆರೋಪ
ಸೋಲಿನ ಹತಾಶೆಗೆ ಸೋದರಿ ಮೇಲೆ ಚಪ್ಪಲಿ ಎಸೆದರೇ ತೇಜಸ್ವಿ?

ತೇಜಸ್ವಿ ಯಾದವ್.

ಸಂಜಯ ಯಾದವ್-ರಮೀಜ್ ಖಾನ್

ಪಟನಾ: ಬಿಹಾರ ವಿಧಾನಸಭಾ ಚುನಾವಣೆ ಯಲ್ಲಿ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಪಕ್ಷಕ್ಕಾಗಿ ಹೀನಾಯ ಸೋಲು ಲಾಲೂ ಪ್ರಸಾದ್ ಯಾದವ್ ಕುಟುಂಬವನ್ನೇ ಛಿದ್ರಗೊಳಿಸಿದೆ. ಕುಟುಂಬದ ಜಗಳವನ್ನು ಬೀದಿಗೆ ತಂದುಬಿಟ್ಟಿದೆ.

ಚುನಾವಣೆಯಲ್ಲಿ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಪಕ್ಷಕ್ಕಾಗಿ ಹೀನಾಯ ಸೋಲು, ಮುಖ್ಯಮಂತ್ರಿಯಾಗಬೇಕೆಂಬ ಕನಸು ಭಗ್ನವಾಗಿದ್ದು, ಪರಿವಾರದ ಬಿಗಿ ಹಿಡಿತದಲ್ಲಿದ್ದ ರಾಘೋಪುರ ಕ್ಷೇತ್ರದಲ್ಲೇ ಬಹಳ ತಿಣುಕಾಡಿ ಕಷ್ಟ ಪಟ್ಟು ಕೊನೆ ಸುತ್ತಿನಲ್ಲಿ ಗೆಲುವನ್ನು ಕಂಡಿದ್ದು, ಇದೆಲ್ಲವೂ ಪಕ್ಷದ ನಾಯಕ ತೇಜಸ್ವಿ ಯಾದವ್ ಅವರನ್ನು ಬಹಳವಾಗಿ ಕೆರಳಿಸಿದೆ.

ಪಕ್ಷಕ್ಕಾದ ಕೆಟ್ಟ ಸೋಲಿಗೆ, ತಾವು ಬಹಳ ಕಷ್ಟ ಪಟ್ಟು ಗೆಲ್ಲುವುದಕ್ಕೆ ಸಹೋದರಿ ರೋಹಿಣಿ ಆಚಾರ್ಯ ಅವರೇ ಕಾರಣ ಎಂದು ತೇಜಸ್ವಿ ಯಾದವ್ ಜಗಳವಾಡಿದ್ದಾರೆ ಎಂದು ವಿಶ್ವಸನೀಯ ಮೂಲಗಳು ಭಾನುವಾರ ಸುದ್ದಿಸಂಸ್ಥೆಗೆ ತಿಳಿಸಿವೆ.

ಶನಿವಾರ ಮಧ್ಯಾಹ್ನ ತೇಜಸ್ವಿ ಮತ್ತು ರೋಹಿಣಿ ನಡುವೆ ಜಗಳವಾಗಿದೆ. ಆಗ ಪಕ್ಷಕ್ಕಾದ ಹೀನಾಯ ಸೋಲಿಗೆ ರೋಹಿಣಿ ಆಚಾರ್ಯ ಅವರೇ ಕಾರಣ ಎಂದು ತೇಜಸ್ವಿ ಯಾದವ್ ನಿಂದಿಸಿದ್ದಾರೆ ಎನ್ನಲಾಗಿದೆ. 'ತುಮ್ಹಾರೆ ಕಾರಣ್ ಹಮ್ ಚುನಾವ್ ಹಾರ್ ಗಯೇ. ತುಮ್ಹಾರಾ ಹಾಯ್ ಲಗ್ ಗಯಾ ಹಮ್ ಲೋಗೋ ಕೋ' (ನಿನ್ನಿಂದಾ ಗಿಯೇ ನಾವು ಚುನಾವಣೆಯಲ್ಲಿ ಸೋತಿ ದ್ದೇವೆ. ನಿನ್ನ ಶಾಪ ನಮ್ಮಗಳಿಗೆ ತಟ್ಟಿದೆ) ಎಂದು ತೇಜಸ್ವಿ ಯಾದವ್ ತನ್ನ ಅಕ್ಕನನ್ನು ನಿಂದಿಸಿದ್ದಾರೆ. ನಂತರ ಕೋಪದ ಭರದಲ್ಲಿ ತಮ್ಮ ಚಪ್ಪಲಿ ತೆಗೆದು ಸೋದರಿ ರೋಹಿಣಿ ಮೇಲೆ ಎಸೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೇ, 'ತಂದೆಗೆ ನಿನ್ನ ಕೆಟ್ಟುಹೋದ ಕಿಡ್ನಿಯನ್ನು (ಮೂತ್ರಕೋಶವನ್ನು) ನೀಡಿದ್ದೀಯಾ. ಅದಕ್ಕಾಗಿ ಕೋಟಿಗಟ್ಟಲೆ ಹಣ ಪಡೆದಿದ್ದೀಯಾ. ಲೋಕಸಭೆ ಟಿಕೆಟ್ ಕೂಡಾ ಪಡೆದುಕೊಂಡೆ' ಎಂದೂ ತೇಜಸ್ವಿ ನಿಂದಿಸಿದ ಎಂದೂ ರೋಹಿಣಿ ರೋದಿಸಿದ್ದಾರೆ. ಲಾಲೂ ಪ್ರಸಾದ್ ಯಾದವ್ ಅವರ ಮೂತ್ರಕೋಶ ಹಾನಿಗೀಡಾಗಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾಗ ರೋಹಿಣಿ ಆಚಾರ್ಯ ಅವರು ತಮ್ಮದೊಂದು ಕಿಡ್ನಿ ದಾನ ಮಾಡಿದ್ದರು ಎಂಬುದು ಉಲ್ಲೇಖಾರ್ಹ.

ಆರ್‌ಜೆಡಿ ಪಕ್ಷದ ಸಂಸ್ಥಾಪಕ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಮತ್ತು ರಾಬ್ರಿ ದೇವಿ ದಂಪತಿಯ 9 ಮಕ್ಕಳಲ್ಲಿ ರೋಹಿಣಿ ಆಚಾರ್ಯ ಒಬ್ಬರು. ಅವರು ಸೋದರ ತೇಜಸ್ವಿ ಸ್ಪರ್ಧೆ ಮಾಡಿದ್ದ ರಾಘೋಪುರ ಕ್ಷೇತ್ರದಲ್ಲಿ ಖುದ್ದಾಗಿ ಪ್ರಚಾರವನ್ನೂ ಮಾಡಿದ್ದರು. ಆದರೆ, ಫಲಿತಾಂಶದ ನಂತರ ಕುಟುಂಬದಲ್ಲಾದ ಜಗಳಕ್ಕೆ ಬೇಸರಗೊಂಡ ಅವರು ರಾಜಕೀಯವನ್ನು ತ್ಯಜಿಸುವುದಾಗಿ ಹೇಳಿದರು. ತವರು ಮನೆ ಯೊಂದಿಗಿನ ಸಂಬಂಧವನ್ನೂ ಕಡಿದುಕೊಳ್ಳುವುದಾಗಿ ಹೇಳಿ ಶನಿವಾರ ಮಧ್ಯಾಹ್ನ ಅಳುತ್ತಾ ನಿರ್ಗ ಮಿಸಿದರು. ತಮ್ಮ ಈ ಕಠಿಣ ನಿರ್ಧಾರಕ್ಕೆ ತೇಜಸ್ವಿಗೆ ಬಹಳ ಆಪ್ತರಾದ ಆರ್‌ಜೆಡಿ ನಾಯಕ ಸಂಜಯ್ ಯಾದವ್ ಮತ್ತು ತೇಜಶ್ವಿಯ ದೀರ್ಘಕಾಲದ ಮಿತ್ರ, ಅವರ ಆಪ್ತವಲಯದ ರಮೀಜ್ ನೆಮತ್ ಖಾನ್ ಅವರೇ ಕಾರಣ ಎಂದೂ ರೋಹಿಣಿ ಹೇಳಿದ್ದಾರೆ.

'ಕೊಳಕಿ, ಕೆಟ್ಟ ಕಿಡ್ನಿ ಕೊಟ್ಟವಳು ಎಂದು ನಿಂದಿಸಿದ ಸೋದರ'

ಲಾಲೂ ಜತೆ ರೋಹಿಣಿ .

'ನನಗೀಗ ಕುಟುಂಬ ಇಲ್ಲ. ಚುನಾವಣೆ ಸೋಲಿನ ಹೊಣೆ ಹೊರಲು ಧೈರ್ಯವಿಲ್ಲದೇ ಸಂಜಯ್, ರಮೀಜ್ ಮತ್ತು ತೇಜಸ್ವಿ ಯಾದವ್ ನನ್ನ ಮೇಲೆ ವೃಥಾ ಆರೋಪ ಹೊರಿ ಸುತ್ತಿದ್ದಾರೆ. ನನ್ನನ್ನು ಬಹಳವಾಗಿ, ಕೆಟ್ಟದಾಗಿ ನಿಂದಿಸಿ ಕುಟುಂಬದಿಂದ ಹೊರ ಹಾಕಿದ್ದಾರೆ. ತವರಿನಿಂದ ದೂರ ಮಾಡಿದ್ದಾರೆ. ಅಸಹ್ಯಕರ ನಿಂದನೆ ಮಾಡಿದ್ದಾರೆ, ಮೈಮೇಲೆ ಚಪ್ಪಲಿ ಎಸೆದಿದ್ದಾರೆ' ಎಂದು ರೋಹಿಣಿ 'ಎಕ್ಸ್' ಖಾತೆ ಯಲ್ಲಿ ಬರೆದಿದ್ದಾರೆ. ತಂದೆಯ ಆರೋಗ್ಯ ಹದ ಗೆಟ್ಟಿದ್ದಾಗ ಹಿಂದೆ ಮುಂದೆ ಯೋಚಿಸದೇ ಕಿಡ್ನಿ ಕೊಡಲು ಸಿದ್ಧಳಾದೆ. ಆ ವಿಚಾರವಾಗಿ ಪತಿ ಹಾಗೂ ಅತ್ತೆ-ಮಾವನ ಅನುಮತಿಯನ್ನೂ ಕೇಳಲಿಲ್ಲ. ದೇವರಂತಹ ತಂದೆಗಾಗಿ ನನ್ನದೊಂದು ಮೂತ್ರಕೋಶವನ್ನೇ ತ್ಯಾಗ ಮಾಡಿದೆ. ಆಗಲೂ ನನ್ನ ಮೂರು ಮಕ್ಕಳು, ಅವರ ಭವಿಷ್ಯದ ಬಗೆಗೂ ಯೋಚಿಸ ಲಿಲ್ಲ. ಆದರೆ, ನನ್ನ ಸೋದರ ನನ್ನನ್ನೇ ಕೊಳಕಿ ಎಂದ, ಕೆಟ್ಟು ಹೋದ ಕಿಡ್ನಿ ನೀಡಿದೆ ಎಂದು ನಿಂದಿಸಿದ ಎಂದು ರೋಹಿಣಿ ಬಹಳ ದುಃಖ ತೋಡಿಕೊಂಡಿದ್ದಾರೆ.

ತೇಜ್‌ಪ್ರತಾಪ್ ಬೇಸರ

'ಸೋದರಿ ರೋಹಿಣಿಗೆ ತೇಜಸ್ವಿ ಯಾದವ್ ಮತ್ತು ಕುಟುಂಬದವರು ಮಾಡಿರುವ ಅನ್ಯಾಯ ಸಹಿಸಲಾಗದು' ಎಂದು ಲಾಲೂ ಪ್ರಸಾದ್ ಯಾದವ್ ಹಿರಿಯ ಪುತ್ರ, ಈಗಾಗಲೇ ಕುಟುಂಬದಿಂದ ದೂರವಾಗಿರುವ ತೇಜ್‌ಪ್ರತಾಪ್ ಯಾದವ್ ಭಾನುವಾರ ಹೇಳಿದ್ದಾರೆ. 'ನಿನ್ನೆ(ಶನಿವಾರ) ತಂದೆಯವರ ಮನೆಯಲ್ಲಿ ನಡೆದಿರುವ ಗಲಾಟೆ, ರೋಹಿಣಿಯನ್ನು ಮನೆಯಿಂದ ಹೊರದೂಡಿರುವುದನ್ನು ಕೇಳಿ ಬಹಳ ಆಘಾತವಾಗಿದೆ. ಮೊದಲು ನನ್ನನ್ನು ಕುಟುಂಬದಿಂದ ದೂರ ಮಾಡಿದರು. ಈಗ ಸೋದರಿಯನ್ನು ಗುರಿಯಾಗಿಸಿದದಾರೆ. ಕುಟುಂಬವನ್ನು ಒಡೆಯುತ್ತಿರುವ ವಿಧ್ವಂಸಕರಿಗೆ, ತಂದೆಯವರ ದಶಕಗಳ ರಾಜಕಾರಣವನ್ನು ಹಾಳುಗೆಡವುತ್ತಿರುವ ಸಂಚುಕೋರರಿಗೆ ಸರಿಯಾದ ಶಿಕ್ಷೆಯಾಗಬೇಕಿದೆ. ಈ ಬಗ್ಗೆ ತಂದೆ ಲಾಲೂ ಪ್ರಸಾದ್ ಅವರು ಬಹಳ ಗಮನ ಹರಿಸಬೇಕಿದೆ' ಎಂದು 'ಎಕ್ಸ್' ಸಂದೇಶದಲ್ಲಿ ತೇಜ್‌ಪ್ರತಾಪ್ ಬರೆದಿದ್ದಾರೆ.

ಒಬ್ಬ ಮಹಿಳೆಯಾಗಿ, ಒಬ್ಬ ತಾಯಿಯಾಗಿ, ಒಬ್ಬ ಸೋದರಿಯಾಗಿ ರೋಹಿಣಿ ಆಚಾರ್ಯ ಸೇವೆ, ತ್ಯಾಗವನ್ನು ಎಲ್ಲರೂ ಮೆಚ್ಚಲೇಬೇಕು. ಮೂತ್ರಕೋಶ ಸಮಸ್ಯೆ ಎದುರಿಸುತ್ತಿದ್ದ ತಂದೆಗೆ ಕಿಡ್ನಿ ದಾನ ಮಾಡಿದ್ದಾಳೆ, ಚುನಾವಣೆಗೆ ನಿಂತ ಸೋದರ ಪರವಾಗಿ ಪ್ರಚಾರ ಮಾಡಿದ್ದಾಳೆ, ತವರು ಮನೆ-ಗಂಡನ ಮನೆ ಎರಡೂ ಕಡೆ ಜವಾಬ್ದಾರಿಯನ್ನು ನಿರ್ವಹಿಸಿದ್ದಾಳೆ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿಚಾರಣಾಧೀನ ಕೈದಿ ಆತ್ಮಹತ್ಯೆ

ಬೀದರ್: ಜೈಲು ಸಿಬ್ಬಂದಿಯ ನಿರ್ಲಕ್ಷ್ಯ, ಸಹ ಖೈದಿಗಳ ಕಿರುಕುಳದಿಂದ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ನಡೆದಿದೆ.

ಖಂಡಪ್ಪ ಮೇತ್ರೆ (46), ಮೃತ ದುರ್ದೈವಿ, ಬಸವಕಲ್ಯಾಣ ತಾಲೂಕಿನ ಗೌರ್ ಗ್ರಾಮದ ನಿವಾಸಿಯಾಗಿದ್ದ ಖಂಡಪ್ಪ ಮೇತ್ರಿ. ಏಪ್ರಿಲ್ 14, 2025ರಂದು ನಡೆದ ತನ್ನ ಸ್ವಂತ ತಾಯಿ ಸುಂದರಾಬಾಯಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ. ಹೆತ್ತತಾಯಿ ಕೊಲೆ ಮಾಡಿದ್ದಾನೆ ಎಂದು ಆರೋಪಿಸಿ ಹುಲಸೂರ ಪೊಲೀಸ್ ಠಾಣೆಯಲ್ಲಿ ಮೃತನ ಸಹೋದರಿಯರು ದೂರು ನೀಡಿದ್ದರು. ಈ ವಿಚಾರಣೆ ಹಿನ್ನೆಲೆಯಲ್ಲಿ ಎರಡೂವರೆ ತಿಂಗಳಿನಿಂದ ಹುಮನಾಬಾದ್ ಜೈಲಿನಲ್ಲಿದ್ದ ಆರೋಪಿ.

ಸಹ ಕೈದಿಗಳಿಂದ ಕಿರುಕುಳದಿಂದಲೇ ಸಾವು: ಆರೋಪ: ಜೈಲಿನಲ್ಲಿ ಸಹ ಕೈದಿಗಳು ದಿನನಿತ್ಯ ಕಿರುಕುಳ ಕೊಡುತ್ತಿದ್ದರು ಇದರಿಂದ ಬೇಸತ್ತು ಶನಿವಾರ ಸಂಜೆ ಮರವೇರಿ ಬಿಲ್ಡಿಂಗ್‌ನಿಂದ ಜಿಗಿದು ಮೃತಪಟ್ಟಿದ್ದಾರೆ. ಸಹ ಕೈದಿಗಳ ಕಿರುಕುಳ ಕುರಿತು ಜೈಲರ್ ಗಮನಕ್ಕೆ ತಂದರೂ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಜೈಲು ಸಿಬ್ಬಂದಿ ನಿರ್ಲಕ್ಷ್ಯದಿಂದಲೇ ನಮ್ಮ ತಂದೆ ಸಾವನ್ನಪ್ಪಿದ್ದಾರೆ ಎಂದು ಮೃತನ ಮಗಳು ಆರೋಪಿಸಿದ್ದಾರೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಎಎಸ್‌ಐ

ಧಾರವಾಡ: ಕಲಘಟಗಿ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಚಂದ್ರಕಾಂತ ಹುಟಗಿ (58) ಭಾನುವಾರ ಬೆಳಗ್ಗೆ ಹೃದಯಘಾತದಿಂದ ನಿಧನರಾದರು. ಚಂದ್ರಕಾಂತ ಹುಟಗಿ ಅವರು ತಮ್ಮ ಎರಡು ಕಣ್ಣುಗಳನ್ನು ದಾನ ಮಾಡುವ ಮೂಲಕ ಸಾವಿನಲ್ಲಿ ಸಾರ್ಥಕತೆ ಮೆರೆದಿದ್ದಾರೆ. 32 ವರ್ಷಗಳ ಪೊಲೀಸ್ ಇಲಾಖೆಯಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ಕಲಾವಿದರು, ನಟರು ಮತ್ತು ಸಂಗೀತ ಗಾರರು, ಕೊಳಲುವಾದನ ಸೇರಿದಂತೆ ವಿವಿಧ ಕಲೆ ಗಳಲ್ಲಿ ನಿಪುಣರಾಗಿದ್ದರು. ಹುಟಗಿ ಅವರ ನಿಧನಕ್ಕೆ ಪೊಲೀಸ್ ಸಿಬ್ಬಂದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಸರಣಿ ಅಪಘಾತ: ಸವಾರ ಸಾವು

ಚನ್ನರಾಯಪಟ್ಟಣ: ಹಾಸನದಲ್ಲಿ ಸರಣಿ ಅಪಘಾತ ಸಂಭವಿಸಿದೆ. ಖಾಸಗಿ ಬಸ್ ಮೊದಲು ಕಾರಿಗೆ ಡಿಕ್ಕಿಯಾಗಿ ಬಳಿಕ ಡ್ರೈವರ್ ಹಾರಿ ಸರ್ವೀಸ್ ರಸ್ತೆಯಲ್ಲಿ ಹೋಗುತ್ತಿದ್ದ ಸ್ಕೂಟರ್ ಸವಾರನಿಗೆ ಡಿಕ್ಕಿಯಾಗಿದೆ. ಇದರ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲೆ ಮೃತಪಟ್ಟಿದ್ದಾರೆ. ನಿಯಂತ್ರಣ ತಪ್ಪಿದ ಬಸ್ ಉರುಳಿ ಬಿದ್ದಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯ ಅಂಬೇಡ್ಕರ್ ವೃತ್ತದಲ್ಲಿ ಘಟನೆ ನಡೆದಿದೆ. ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಈ ಘಟನೆ ಸಂಭವಿಸಿದೆ. ಕಾರು, ಖಾಸಗಿ ಬಸ್ ಮತ್ತು ಸ್ಕೂಟರ್ ನಡುವೆ ಸರಣಿ ಅಪಘಾತ ನಡೆದಿದೆ. ಹಾಸನದಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಖಾಸಗಿ ಬಸ್ ಮೊದಲು ಕಾರಿಗೆ ಡಿಕ್ಕಿಯಾಗಿದೆ. ವೇಗದ ಕಾರಣದಿಂದ ಡಿಕ್ಕಿಯಾದ ಬೆನ್ನಲ್ಲೇ ಸಂಪೂರ್ಣ ನಿಯಂತ್ರಣ ಕಳೆದುಕೊಂಡಿದೆ. ಕಾರಿಗೆ ಡಿಕ್ಕಿ ಹೊಡೆದು ನಂತರ ಸರ್ವೀಸ್ ರಸ್ತೆ ಕಡೆಗೆ ನುಗ್ಗಿದ್ದ ಬಸ್, ಸರ್ವೀಸ್ ರಸ್ತೆಯಲ್ಲಿ ತೆರಳುತ್ತಿದ್ದ ಸ್ಕೂಕರ್ ಸವಾರನಿಗೆ ಬಸ್ ಡಿಕ್ಕಿಯಾಗಿದೆ. ಹಿರೀಸಾವೆ ಹೋಬಳಿಯ ಮಸಕನಳ್ಳಿ ಗ್ರಾಮದ ದೇವರಾಜ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್ ಚಾಲಕಕನಿಗೆ ಸಣ್ಣ ಪುಟ್ಟ ಗಾಯಗಳಾಗಿದೆ.

ಹಗಲು ರಾತ್ರಿ ಪಕ್ಷ ಕಟ್ಟಿದ್ದೇನೆ, ಕಾಂಗ್ರೆಸ್ ಪಕ್ಷಕ್ಕೆ ಬ್ಲ್ಯಾಕ್‌ಮೇಲ್ ಮಾಡುವವನು ನಾನಲ್ಲ

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನೇಕೆ ರಾಜೀನಾಮೆ ನೀಡಲಿ?

ಬೆಂಗಳೂರು/ದೆಹಲಿ: ನಾನು ಪಕ್ಷದ ಶಿಸ್ತಿನ ಸಿಪಾಯಿ. ಯಾವತ್ತೂ ಕಾಂಗ್ರೆಸ್ ಪಕ್ಷಕ್ಕೆ ಬ್ಲ್ಯಾಕ್‌ಮೇಲ್ ಮಾಡುವವನಲ್ಲ. ನಾನು ಹಗಲು ರಾತ್ರಿ ದುಡಿದು ಪಕ್ಷ ಕಟ್ಟಿದ್ದೇನೆ. ಮುಂದೆಯೂ ಕಟ್ಟುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

- ನಾನು ಪಕ್ಷದ ಶಿಸ್ತಿನ ಸಿಪಾಯಿ, ಸಂಪುಟ ಬದಲಾವಣೆ ಸಿಎಂಗೆ ಬಿಟ್ಟ ವಿಚಾರ
- ನನ್ನ ಮಾನಸಿಕ, ದೈಹಿಕ, ರಾಜಕೀಯ ಆರೋಗ್ಯ ಸರಿಯಾಗಿದೆ

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೀರಿ ಎಂಬ ವಿಚಾರವಾಗಿ ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಮಾನಸಿಕ, ದೈಹಿಕ ಹಾಗೂ ರಾಜಕೀಯ ಆರೋಗ್ಯ ಸರಿಯಾಗಿದೆ. ನಾನು ಖರ್ಗೆ ಸಾಹೇಬರನ್ನು ಭೇಟಿ ಮಾಡಲು ಹೋಗುತ್ತಿದ್ದೇನೆ. ಡಿಸೆಂಬರ್ ತಿಂಗಳ ಒಳಗಾಗಿ ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ ಮಾಡಲೇ ಬೇಕಾಗಿದೆ. ಗಾಂಧಿ ಭಾರತ ಎಂಬ ಪುಸ್ತಕ ರಚಿಸಿದ್ದೇನೆ. ಇದರ ಬಿಡುಗಡೆಗೆ ದಿನಾಂಕ ನಿಗದಿ ಮಾಡಬೇಕಾಗಿದೆ. ಸದ್ಯದಲ್ಲೇ ಸಂಸತ್ ಅಧಿವೇಶನ ಆರಂಭವಾಗಲಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಣೆ ಮಾಡಬೇಕು. ಇದೆಲ್ಲವನ್ನು ಯಾರು ಮಾಡಬೇಕು? ನಾನೇ ಮಾಡಬೇಕು. ನಾನೇಕೆ ರಾಜಿನಾಮೆ ನೀಡಲಿ. ಈಗ ಅಂತಹ ಸಂದರ್ಭವಿಲ್ಲ ಎಂದರು.

ಕಾಂಗ್ರೆಸ್ ಪಕ್ಷ ಎಲ್ಲಿಯವರೆಗೂ ಈ ಸ್ಥಾನದಲ್ಲಿ ಕೆಲಸ ಮಾಡಲು ಹೇಳುತ್ತಾರೋ ಅಲ್ಲಿಯವರೆಗೆ ನಾನು ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿಕೊಂಡು ಹೋಗುತ್ತೇನೆ. ಮುಂದೆಯೂ ಪಕ್ಷ ಅಧಿಕಾರಕ್ಕೆ ಬರುವಂತೆ ದುಡಿಯುವವನು ನಾನು. ಎಂದು ಸ್ಪಷ್ಟಪಡಿಸಿದರು.

ಕಚೇರಿ ಶಂಕುಸ್ಥಾಪನೆಗೆ ಮಾತ್ರ ಹೋಗುವೆ

ಸಚಿವ ಸಂಪುಟ ಪುನಾರಚನೆ ಮುಖ್ಯಮಂತ್ರಿ ಅವರಿಗೆ ಬಿಟ್ಟ ವಿಚಾರ. ಅವರು ಹೈಕಮಾಂಡ್ ಬಳಿ ಚರ್ಚೆ ಮಾಡುತ್ತಾರೆ. ನನ್ನನ್ನು ಕರೆದರೆ ನಾನು ಹೋಗುತ್ತೇನೆ. ನಾನು ಕೇವಲ ಪಕ್ಷದ ಕಚೇರಿಗಳ ಶಂಕುಸ್ಥಾಪನೆಗೆ ದಿನಾಂಕ ನಿಗದಿ ಮಾಡಲು ಹೋಗುತ್ತಿರುವೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಒಟ್ಟಾಗಿ ಶಂಕುಸ್ಥಾಪನೆ ಮಾಡಬೇಕು ಎಂಬುದು ನನ್ನ ಆಸೆ. ಡಿ.1 ರಿಂದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಅಷ್ಟರೊಳಗೆ, ಯಾವುದಾದರೂ ವಾರಾಂತ್ಯದಲ್ಲಿ ಬಂದು ಹೋಗಿ ಎಂದು ಮನವಿ ಮಾಡುತ್ತೇನೆ. ಕಾಂಗ್ರೆಸ್ ಕಚೇರಿ ನಿರ್ಮಾಣದ ಕಟ್ಟಡ ನಕ್ಷೆ ಅನುಮೋದನೆಗೆ ನಾನು 2.30 ಕೋಟಿ ರು. ಹಣ ಪಾವತಿಸುತ್ತಿದ್ದೇನೆ. ರಾಮಲಿಂಗಾರೆಡ್ಡಿ ಅವರ ಮುಂದಾಳತ್ವದಲ್ಲಿ ಒಂದು ಕಚೇರಿ ನಿರ್ಮಿಸಲಾಗುತ್ತಿದೆ. 75-80 ಕಡೆ ಕಚೇರಿ ನಿರ್ಮಾಣಕ್ಕೆ ಜಾಗ ಕೂಡ ಸಿದ್ದವಾಗಿವೆ. ನೂರು ಕಚೇರಿ ನಿರ್ಮಾಣ ಕಾರ್ಯ ಮಾಡುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ವಾಲಿಕುಂಜ, ನರಸಿಂಹಪರ್ವತ ಚಾರಣಕ್ಕೆ ತಾತ್ಕಾಲಿಕ ನಿರ್ಬಂಧ

ಕಾರ್ಕಳ: ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಕೆರೆಕಟ್ಟೆ ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿರುವ ಜನಪ್ರಿಯ ವಾಲಿಕುಂಜ ಹಾಗೂ ನರಸಿಂಹಪರ್ವತ ಚಾರಣ ಮಾರ್ಗಗಳಿಗೆ ಕಾಡಾನೆಗಳ ಸಂಚಾರ ಹೆಚ್ಚಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ನ.17ರಿಂದ ನ.19ರವರೆಗೆ ಪ್ರವಾಸಿಗರಿಗೆ ಈ ಎರಡೂ ಚಾರಣ ಮಾರ್ಗಗಳಿಗೆ ಪ್ರವೇಶ ಅವಕಾಶ ಇರುವುದಿಲ್ಲ. ಪ್ರವಾಸಿಗರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅರಣ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ವಾಲಿಕುಂಜ ಹಾಗೂ ನರಸಿಂಹಪರ್ವತ ಚಾರಣಗಳು ಪ್ರಕೃತಿ ಸೌಂದರ್ಯ, ದಟ್ಟ ಅರಣ್ಯ ಮಾರ್ಗಗಳು, ಕಾಡಿನ ಜೀವ ವೈವಿಧ್ಯವನ್ನು ಸಮೀಪದಿಂದ ಅನುಭವಿಸುವ ಅವಕಾಶಗಳಿಂದ ಪ್ರಸಿದ್ಧವಾಗಿವೆ.

ವಿಶೇಷವಾಗಿ ನರಸಿಂಹಪರ್ವತ ಶಿಖರದಿಂದ ಕಾಣುವ ಪಶ್ಚಿಮಘಟ್ಟದ ದೃಶ್ಯ ಪ್ರವಾಸಿಗರನ್ನು ಆಕರ್ಷಿಸುವ ಪ್ರಮುಖ ಅಂಶ. ವಾಲಿಕುಂಜ ಮಾರ್ಗದಲ್ಲಿನ ನಿಷ್ಕಳಂಕ ಕಾಡು, ನೀರಿನ ಹರಿವು, ಹಸಿರಿನ ನಿಸರ್ಗ ಪ್ರವಾಸಾಸಕ್ತರಿಗೆ ವಿಶಿಷ್ಟ ಅನುಭವ ನೀಡುತ್ತದೆ. ಇತ್ತೀಚಿನ ದಿನಗಳಲ್ಲಿ ಕಾಡಾನೆಗಳ ಚಲನವಲನ ಈ ಪ್ರದೇಶದಲ್ಲಿ ಹೆಚ್ಚಿರುವ ಹಿನ್ನೆಲೆಯಲ್ಲಿ ನಿರ್ಬಂಧಿಸಲಾಗಿದೆ.

ಕೆಪಿಸಿಸಿ ಪಟ್ಟ ಬಿಡಲ್ಲ: ಡಿಕೆಶಿ

← ಮೊದಲಪುಟದಿಂದ

ಸಚಿವ ಸಂಪುಟ ಪುನಾರಚನೆಯಾದಲ್ಲಿ ಬಹಳಷ್ಟು ಮಂದಿ ಹಿರಿಯ ಸಚಿವರನ್ನು ಕೈಬಿಡುವ ಸಾಧ್ಯತೆ ಇದ್ದು ಹೊಸಬರ ನೇಮಕಕ್ಕೆ ಹೈಕಮಾಂಡ್ ಅಸ್ತು ಎನ್ನಬೇಕಿದೆ. ಈ ಹಿನ್ನೆಲೆಯಲ್ಲಿ ಕೆಲವು ಸಚಿವರು ಹಾಗೂ ಶಾಸಕರು ಕೂಡ ದೆಹಲಿಗೆ ಭೇಟಿ ನೀಡುತ್ತಿದ್ದು ಕುರ್ಚಿ ಭದ್ರಪಡಿಸಿಕೊಳ್ಳಲು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರುವ ಸಂಭವವಿದೆ. ಸಚಿವ ಸಂಪುಟ ಪುನಾರಚನೆಗೆ ಹಸಿರು ನಿಶಾನೆ ಸಿಕ್ಕಿರುವ ಹಿನ್ನೆಲೆಯಲ್ಲಿ ನಾಯಕತ್ವದ ಚರ್ಚೆ ಸದ್ಯಕ್ಕೆ ನೇಪಥ್ಯಕ್ಕೆ ಸರಿದಂತಿದ್ದರೂ ಎಲ್ಲವೂ ಹೈಕಮಾಂಡ್ ಅಂಗಳದಲ್ಲಿದೆ ಎನ್ನಲಾಗಿದೆ. ಹೀಗಿದ್ದರೂ, ಹೈಕಮಾಂಡ್ ಒಪ್ಪಿದರೂ ಸಂಪುಟ ಪುನಾರಚನೆ ಕಷ್ಟವಾಗಲೂಬಹುದು. ಇಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್ ಅವರ ಪಟ್ಟಿಯನ್ನು ಸಮದೂಗಿಸಬೇಕಿರುವ ಒತ್ತಡವಿದೆ.



ಸಂಪುಟ ಪುನಾರಚನೆ, ಪವರ್ ಶೇರಿಂಗ್ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್. ಅವರು ಯಾವ ತೀರ್ಮಾನ ಮಾಡಲಿದ್ದಾರೆ, ಕಾದು ನೋಡೋಣ. ಪುನಾರಚನೆ ಸಂಬಂಧ ಮಾಧ್ಯಮಗಳಲ್ಲಿ ವರದಿ ನೋಡಿದ್ದೇನೆ. ಇದು ಸಿಎಂ ಹಾಗೂ ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ.ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ಅವರ ಕೆಲಸದ ಮೇಲೆ ದೆಹಲಿಗೆ ಹೋಗಿದ್ದಾರೆ, ನನ್ನ ಪಾಡಿಗೆ ನಾನು ಹೋಗುತ್ತಿರುವೆ.

-ಡಿ.ಕೆ.ಸುರೇಶ್, ಬಮೂಲ್ ಅಧ್ಯಕ್ಷ

ಖರ್ಗೆ ಕೋಟೆ ಚಿತ್ತಾಪುರದಲ್ಲಿ ಸಂಘಪಥ ಶಾಂತ, ಸುಸೂತ್ರ

← ಮೊದಲಪುಟದಿಂದ

ಈ ವೇಳೆ ಸಂಚಲನದಲ್ಲಿ ಭಾಗವಹಿಸಿದ್ದವರ ಮೇಲೆ ಹೂ ಮಳೆಯನ್ನು ಸುರಿಸಲಾಯಿತು. ಭಾನುವಾರ ಇಡೀ ಪಟ್ಟಣ ಕೇಸರಿಮಯವಾಗಿತ್ತು. ಭದ್ರತೆಗೆ 686 ಪೊಲೀಸ್ ಸಿಬ್ಬಂದಿ, 250 ಹೋಮ್ ಗಾರ್ಡ್ಸ್, 8 ಕೆಎಸ್‌ಆರ್‌ಪಿ ತುಕಡಿಗಳನ್ನು ನಿಯೋಜಿಸಲಾಗಿತ್ತು.

ಹೊರಗಿನವರಿಗೆ ಪ್ರವೇಶವಿಲ್ಲ: ಪಥಸಂಚಲನಕ್ಕೆ ಜಿಲ್ಲಾಡಳಿತ, ಹೈಕೋರ್ಟ್ ಮೂಲಕ ಷರತ್ತುಬದ್ಧ ಅನುಮತಿ ನೀಡಿದ ಹಿನ್ನಲೆ, ಜಿಲ್ಲಾ ಪೊಲೀಸ್ ಭಾರಿ ಕಟ್ಟೆಚ್ಚರ ವಹಿಸಿತ್ತು. ನೋಂದಾಯಿತ 350 ಗಣವೇಷಧಾರಿಗಳನ್ನು ಹೊರತುಪಡಿಸಿ, ಬೇರೆಯಾರಿಗೂ ಅನುಮತಿ ನೀಡಲಿಲ್ಲ. ಸೇಡಂನಿಂದ ಆಗಮಿಸಿದ ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ್ ಅವರ ಸಹೋದರ ಜಿ.ಕೆ.ಪಾಟೀಲ್ ಸೇರಿ ಅನೇಕರಿಗೆ ಪಥಸಂಚಲನದಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಲಿಲ್ಲ.

ಮೈಸೂರಿಗೆ 25 ಜಿಐ ಟ್ಯಾಗ್

ಮೈಸೂರು: ಮೈಸೂರು ಈಗ 25 ಭೌಗೋಳಿಕ ಸೂಚಕ (ಜಿಐ) ಟ್ಯಾಗ್‌ಗಳನ್ನು ಹೊಂದಿದ್ದು, ಇದು ದೇಶದಲ್ಲಿ ಅತಿ ಹೆಚ್ಚು ಪ್ರಾದೇಶಿಕ ಸಂರಕ್ಷಿತ ಉತ್ಪನ್ನಗಳ ಸಾಂದ್ರತೆಗಳಲ್ಲಿ ಒಂದಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಆಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಜಿಐ ನೋಂದಣಿ ಈ ಪ್ರದೇಶದ ಆಳವಾದ ಕುಶಲಕರ್ಮಿ ಪರಂಪರೆ ಮತ್ತು ಅದರ ವಿಶಿಷ್ಟ ಕರಕುಶಲ ವಸ್ತುಗಳು, ಆಹಾರಗಳು ಮತ್ತು ಜವಳಿಗಳನ್ನು ಸಂರಕ್ಷಿಸುವ ಅಗತ್ಯವನ್ನು ಸೂಚಿಸುತ್ತದೆ ಎಂದು ಹೇಳಿದರು. ಮೈಸೂರು ಪಾಕ್, ಮೈಸೂರು ರೇಷ್ಮೆ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಸ್ಟೀಲ್, ಮೈಸೂರು ರೋಸ್‌ವುಡ್ ಇನ್ಲೇ ಮತ್ತು ಹಲವಾರು ಕೈಮಗ್ಗ, ಕರಕುಶಲ ವಸ್ತುಗಳು ಮತ್ತು ಕೃಷಿ ಆಧಾರಿತ ಉತ್ಪನ್ನಗಳು ಈಗ ಜಿಐ ರಕ್ಷಣೆಯನ್ನು ಪಡೆಯುತ್ತಿವೆ. ಕುಶಲ ಕರ್ಮಿಗಳು ಉತ್ತಮ ಮಾರುಕಟ್ಟೆಗಳನ್ನು ಪಡೆಯಲು ಮತ್ತು ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಸ್ತುಗಳನ್ನು ಒದಗಿಸುತ್ತಿವೆ ಎಂದರು.

ಕೃಷ್ಣಮೃಗ ಸಾವು: ತಜ್ಞರ ಭೇಟಿ

← ಮೊದಲಪುಟದಿಂದ

ಈ ಕಿರು ಮೃಗಾಲಯದಲ್ಲಿ ಗುರುವಾರ 8, ಶನಿವಾರ 20 ಕೃಷ್ಣಮೃಗಗಳು ನಿಗೂಢವಾಗಿ ಸಾವನ್ನಪ್ಪಿದ ಘಟನೆಯಿಂದಾಗಿ ಮೃಗಾಲಯ ಪ್ರೇಮಿಗಳು ಬೆಚ್ಚಿಬಿದ್ದಿದ್ದರು. ಶನಿವಾರ ತಡರಾತ್ರಿಯೂ ಒಂದು ಕೃಷ್ಣಮೃಗ ಮೃತಪಟ್ಟಿತು. ಇದರಿಂದ ಒಟ್ಟು 29 ಕೃಷ್ಣಮೃಗಗಳು ಇಲ್ಲಿಯವರೆಗೆ ಸಾವನ್ನಪ್ಪಿದಂತಾಗಿದೆ. ಸತ್ತ 25 ಕೃಷ್ಣಮೃಗಗಳನ್ನು ಶನಿವಾರವೇ ಅರಣ್ಯ ಇಲಾಖೆ ಅಧಿಕಾರಿಗಳು ಅಗ್ನಿಸ್ಪರ್ಶದ ಮೂಲಕ ಅಂತ್ಯಕ್ರಿಯೆ ನಡೆಸಿದ್ದರು. ಇನ್ನುಳಿದ ಕೃಷ್ಣಮೃಗಗಳ ಆರೋಗ್ಯದ ಮೇಲೆಯೂ ತೀವ್ರ ನಿಗಾ ವಹಿಸಲಾಗಿದೆ. ಹೆಚ್ಚಿನ ತನಿಖೆಗಾಗಿ ಮೃತಪಟ್ಟ ಕೃಷ್ಣಮೃಗಗಳ ಕೆಲ ಅಂಗಾಗಳ ಮಾದರಿಯನ್ನು ಬೆಂಗಳೂರಿನ ಲ್ಯಾಬ್‌ಗೆ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪವರ್ ಶೇರಿಂಗ್, ಸಂಪುಟ ರಚನೆ ಹೈಕಮಾಂಡ್‌ಗೆ ಬಿಟ್ಟ ವಿಚಾರ: ಡಿಕೆಸು

ಬೆಂಗಳೂರು: ಸಂಪುಟ ಪುನಾರಚನೆ, ಪವರ್ ಶೇರಿಂಗ್ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್. ಅವರು ಯಾವ ತೀರ್ಮಾನ ಮಾಡಲಿದ್ದಾರೆ ಎಂದು ಕಾದು ನೋಡೋಣ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು. ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟ ಪುನಾರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿರುವ ಸುದ್ದಿ ಬಗ್ಗೆ ವರದಿ ನೋಡಿದ್ದೇನೆ. ಇದು ಸಿಎಂ ಹಾಗೂ ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ. ಕಾದು ನೋಡೋಣ. ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಏನೇ ಇದ್ದರೂ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆಯೇ ಹೊರತು ಬೇರೆಯವರಲ್ಲ ಎಂದರು. ಡಿ.ಕೆ. ಶಿವಕುಮಾರ್ ಅವರು ಅವರ ಕೆಲಸದ ಮೇಲೆ ದೆಹಲಿಗೆ ಹೋಗಿದ್ದಾರೆ, ನನ್ನ ಪಾಡಿಗೆ ನಾನು ಹೋಗುತ್ತಿರುವೆ. ನಾನು ದೆಹಲಿಗೆ ಹೋದಾಗ ಅವಕಾಶ ಸಿಕ್ಕರೆ ಪಕ್ಷದ ನಾಯಕರನ್ನು ಭೇಟಿ ಮಾಡುತ್ತೇನೆ. ನಮ್ಮ ಸಹೋದರ ಸಿಎಂ ಆಗಬೇಕು ಎಂದರು.

SBI
The banker to every Indian

ಭಾರತೀಯ ಸ್ಟೇಟ್ ಬ್ಯಾಂಕ್
ಆವರಣ ಮತ್ತು ಸಂಪದ ವಿಭಾಗ ಸ್ಥಳೀಯ ಪ್ರಧಾನ ಕಛೇರಿ
IIನೇ ಮಹಡಿ,ಅನೆಕ್‌ಸ್ಬಿಲ್ಡಿಂಗ್
ನಂ.65, ಸಂತ ಮಾರ್ಕರ ರಸ್ತೆ, ಬೆಂಗಳೂರು 560 001

ಟೆಂಡರ್‌ಆಮಂತ್ರಿಸುವ ಸೂಚನೆ

ಭಾರತೀಯ ಸ್ಟೇಟ್ ಬ್ಯಾಂಕ್ 2026ನೇ ಸಾಲಿನ ಬ್ಯಾಂಕ್ ಉಪಯೋಗಕ್ಕಾಗಿ ಒಟ್ಟುವೆಚ್ಚದ ಆಧಾರದ ಮೇಲೆ ಕ್ಯಾಲೆಂಡರ್‌ಗಳ ಮುದ್ರಣ ಮತ್ತು ವಿತರಣೆಗಾಗಿ ಈ ಮೊದಲು ಸಾರ್ವಜನಿಕ ವಲಯದ ಉದ್ಯಮ/ ವಾಣಿಜ್ಯ ಬ್ಯಾಂಕ್‌ಗಳಿಗಾಗಿ ಯಶಸ್ವಿಯಾಗಿ ಮುದ್ರಿಸಿ ಕೊಟ್ಟಿರುವ ಕರ್ನಾಟಕ ಮೂಲದ ಮುದ್ರಕರಿಂದ ಎರಡು ಬಿಡ್ ವ್ಯವಸ್ಥೆಯಲ್ಲಿ ಇ-ಟೆಂಡರನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಭಾರತೀಯ ಸ್ಟೇಟ್ ಬ್ಯಾಂಕ್ ಅಡಿಯಲ್ಲಿ ನಮ್ಮ ವೆಬ್‌ಸೈಟ್ www.bank.sbi <SBI in the News> Procurement News ಗೆ ಲಾಗಿನ್ ಆಗಿ, ಅಥವಾ ಆವರಣ ಮತ್ತುಸಂಪದ ವಿಭಾಗ, ಸ್ಥಳೀಯ ಪ್ರಧಾನಕಛೇರಿ, ಬೆಂಗಳೂರು 080-25943103ಸಂಪರ್ಕಿಸಿ. ಬ್ಯಾಂಕ್ ಯಾವುದೇ ಕಾರಣವನ್ನು ನೀಡದೆಯಾವುದೇ / ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ. ಬಿಡ್ಸಲ್ಲಿಸಲು ಕೊನೆಯ ದಿನಾಂಕ 01.12.2025 ಮಧ್ಯಾಹ್ನ 3.00 ಘಂಟೆಯವರೆಗೆ.

ಸಹಾಯಕ ಪ್ರಧಾನವ್ಯವಸ್ಥಾಪಕರು, ಆವರಣ ಮತ್ತುಸಂಪದವಿಭಾಗ
ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ
ದೂರವಾಣಿ ಮತ್ತು ಪ್ಯಾಕ್ಸ್ ಸಂಖ್ಯೆ:08175-273229 **email: tstaff_ulb_holenarasipur@yahoo.co.in**
ನಂ:ಪುಸ:ಹೊನಪುರ/ಆ.ಶಾ/2025-26 ದಿನಾಂಕ: 14.11.2025

"Expression of Interest"

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2021-22ನೇ ಸಾಲಿನಿಂದ 2024-25ನೇ ಸಾಲಿನವರೆಗೆ 15ನೇ ಹಣಕಾಸು ಯೋಜನೆಯ ನಿರ್ಬಂಧಿತ ಅನುದಾನದ ಉಳಿಕೆ ಮೊತ್ತದಲ್ಲಿ ಈ ಕೆಳಕಂಡ ವಾಹನ ಸರಬರಾಜು ಮಾಡಲು ನೊಂದಾಯಿತ ಸಂಸ್ಥೆಗಳಿಂದ/ಅಧಿಕೃತ ಸರಬರಾಜುದಾರರಿಂದ ಡಾಟಾ ರೇಟ್ ಅನುಮೋದನೆಗಾಗಿ ತಾಂತ್ರಿಕ ನಿರ್ದಿಷ್ಟತೆ ಮತ್ತು ದರಪಟ್ಟಿಗಳನ್ನು ಸಲ್ಲಿಸಲು ಕೊಟೇಷನ್ ಆಹ್ವಾನಿಸಲಾಗಿರುತ್ತದೆ. ಕೊಟೇಷನ್ ಸಲ್ಲಿಸಲು ಕೊನೆಯ ದಿನಾಂಕ: 01.12.2025 ರ ಸಂಜೆ 4:30 ಗಂಟೆಯೊಳಗಾಗಿ "ಮುಖ್ಯಾಧಿಕಾರಿ, ಪುರಸಭೆ, ಹೊಳೆನರಸೀಪುರ" ಇವರಿಗೆ ಸಲ್ಲಿಸಬಹುದಾಗಿರುತ್ತದೆ. ಸ್ವೀಕರಿಸಿದ ಕೊಟೇಷನ್‌ಗಳನ್ನು ದಿನಾಂಕ: 02.12.2025 ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು. ತಡವಾಗಿ ಬಂದ ಕೊಟೇಷನ್‌ನ್ನು ತಿರಸ್ಕರಿಸಲಾಗುವುದು. ಕೊಟೇಷನ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಪುರಸಭೆ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಆರೋಗ್ಯಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.
ಕ್ರ.ಸಂ.ವಿವರಗಳು: 1)ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅಗತ್ಯವಿರುವ 4 ಚಕ್ರದ ಆಟೋ ಟಿಪ್ಪರ್ ಖರೀದಿಸುವುದು

ಸಹಿ/-ಮುಖ್ಯಾಧಿಕಾರಿ,
ಪುರಸಭೆ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/774/ಕೆಎಸ್‌ಎಂಸಿಎ/2025-26

ಶೋಕಿಗಾಗಿ ಕಳವು: ವಿದ್ಯಾರ್ಥಿಗಳ ಸೆರೆ

ಚಿಕ್ಕಬಳ್ಳಾಪುರ: ಕಾಲೇಜಿನಲ್ಲಿ ಶೋಕಿಗಾಗಿ ಮನೆಗಳ್ಳತನಕ್ಕೆ ಇಳಿದಿದ್ದ ಇಬ್ಬರು ಎಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಚಿಕ್ಕಬಳ್ಳಾಪುರ ಪೊಲೀಸರು ಬಂಧಿಸಿದ್ದಾರೆ. ಚೇತನ್ ಹಾಗೂ ಅಭಿಷೇಕ್ ಬಂಧಿತರು. ಬೆಂಗಳೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡ್ತಿದ್ದಾರೆ.

ಚೇತನ್ ಚಿಕ್ಕಬಳ್ಳಾಪುರ ನಗರದ ಚಾಮರಾಜಪೇಟೆ ನಿವಾಸಿ, ಅಭಿಷೇಕ್ ಮೂಲತಃ ಮಂಡ್ಯ ಜಿಲ್ಲೆಯವ. ಇಬ್ಬರೂ ಒಂದೇ ಕಾಲೇಜಲ್ಲಿ ವ್ಯಾಸಂಗ ಮಾಡುತ್ತಿದ್ದರು, ಇಬ್ಬರಿಗೂ ಕಾಲೇಜಲ್ಲಿ ಶೋಕಿ ಮಾಡುವ ಖಯಾಲಿ ಇತ್ತು ಎನ್ನಲಾಗಿದೆ. ಆದರೆ ಕೈಯಲ್ಲಿ ಹಣವಿಲ್ಲವೆಂದು ಇಬ್ಬರು ಪ್ಲ್ಯಾನ್ ಮಾಡಿ ಚಿಕ್ಕಬಳ್ಳಾಪುರ ನಗರದ ಚೇತನ್ ಮನೆ ಪಕ್ಕದಲ್ಲೇ ಇರುವ ಮನೆಗಳಿಗೆ ಕನ್ನ ಹಾಕಿದ್ದಾರೆ. ಚಾಮರಾಜಪೇಟೆಯ ಶಿಕ್ಷಕಿ ವಿನುತಾ ಹಾಗೂ ಶಾಂತಮ್ಮ ಎಂಬುವವರ ಮನೆಗಳಿಗೆ ನುಗ್ಗಿ ಚಿನ್ನಾಭರಣ ಸೇರಿ ಲಕ್ಷಾಂತರ ರು.ನಗದು ದೋಚಿ ಇಬ್ಬರು ಮೋಜು ಮಸ್ತಿ ಮಾಡಿದ್ದರು. ಆದರೆ ಈಗ ಚಿಕ್ಕಬಳ್ಳಾಪುರ ಪೊಲೀಸರು ಇಬ್ಬರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472/ 278675 ಫ್ಯಾಕ್ಸ : 08472 / 260776 ಇ ಮೇಲ್- itstaff_ulb_gulbarga@yahoo.com
No: KMP/VS/ /2025-26 ದಿನಾಂಕ: 15.11.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: /2025-26

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2025-26ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ (Corporation fund) ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (2) ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ 7 ದಿನಗಳ ಅಲ್ಪಾವದಿ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ **ರೂ. 57,96,000.00**, 3) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 1,10,400.00ಗಳು. 4) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **24.11.2025 ರಂದು ಸಾಯಂಕಾಲ 4:30 ಗಂಟೆಗೆ.** 5) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **25.11.2025 ರಂದು ಸಾಯಂಕಾಲ 04:35 ಗಂಟೆಗೆ.** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **26.11.2025 ರಂದು ಬೆಳಿಗ್ಗೆ 11:30 ಗಂಟೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 7) ಹೆಚ್ಚಿನ ವಿವರಗಳಿಗೆ : ಕಾರ್ಯಪಾಲಕ ಅಭಿಯಂತರರು/ಉಪ ಆಯುಕ್ತರು ಅಭಿವೃದ್ಧಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/
Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/722/ಕೆ.ಎಸ್.ಎಂ.ಸಿ.&ಎ/2025-26

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು -560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	**(1) ಶ್ರೀಮತಿ ಶಶಿ ಕುಮಾರ್.ಎಂ** D/o ಶ್ರೀ ಮುನಿರಾಜು, **(2) ಶ್ರೀ ಮುನಿರಾಜು** ಬಿನ್ ಶ್ರೀ ಮುನಿಯಪ್ಪ, **ಇವರಿಬ್ಬರ ವಿಳಾಸ:** ನಂ.7, ಪಾರಿಜಾತ ಕಟ್ಟಡ, ಸೂರ್ಯೋದಯ ಲೇಔಟ್, ಶಿವರಾಮ ಕಾರಂತ ನಗರ, ಹೆಗ್ಡೆನಗರ, ಬೆಂಗಳೂರು-560077. **ಮತ್ತೊಂದು ವಿಳಾಸ:** ನಿವೇಶನ ನಂ.29, ಖಾತಾ ನಂ.477/32/3ಎ/29, ಸಂಪಿಗೇನಹಳ್ಳಿ ಗ್ರಾಮ, ಯಲಹಂಕ, ಹೋಬಳಿ, ಬೆಂಗಳೂರು-560064. **ಮತ್ತೊಂದು ವಿಳಾಸ: ಶ್ರೀಮತಿ ಶಶಿಕುಮಾರ್.ಎಂ** D/o ಶ್ರೀ ಮುನಿರಾಜು, ನಂ.400, ಥಣಿಸಂದ್ರ, ಬೆಂಗಳೂರು ನಗರ, ಬೆಂಗಳೂರು-560045. **ಮತ್ತೊಂದು ವಿಳಾಸ:** ಶ್ರೀ **ಮುನಿರಾಜು** ಬಿನ್ ಶ್ರೀ ಮುನಿಯಪ್ಪ ನಂ.32-ಜಿ, ಥಣಿಸಂದ್ರ, ಬೆಂಗಳೂರು ನಗರ, ಬೆಂಗಳೂರು-560045.	**ಶ್ರೀಮತಿ ಶಶಿ ಕುಮಾರ್ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಉತ್ತರ ಭಾಗದ ಖಾಲಿ ನಿವೇಶನ ನಂ.477/32/3ಎ/29/1, ಈ ಆಸ್ತಿಯು ಸಂಪಿಗೆಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿದೆ ಮತ್ತು ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40-0 ಅಡಿ, ಉತ್ತರದಿಂದ ದಕ್ಷಿಣಕ್ಕೆ: 40'-0 ಅಡಿ, ಒಟ್ಟು ವಿಸ್ತೀರ್ಣ 1600 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.10, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.28, ದಕ್ಷಿಣಕ್ಕೆ: ನಿವೇಶನ ನಂ.29ರ ಉಳಿಕೆ ಭಾಗ. **ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234ನ್ನು ಸಂಪರ್ಕಿಸಿ.**	14.10.2025 ಎನ್‌ಪಿಎ ದಿನಾಂಕ : 03.10.2025	POWER HOME Loan A/c No. PHR051401616355 Amount Rs. 48,53,952/- ಒಟ್ಟು ಬಾಕಿ ಮೊತ್ತ ರೂ.29,61,198/- ದಿನಾಂಕ: 14.10.2025ರಂದು ಇದ್ದಂತೆ.
2	**(1) ಮೆ॥ ಬೆಲ್ಸ್ ಕ್ಲೀನ್ ಏರ್ ಮತ್ತು ಇಂಜಿನಿಯರಿಂಗ್ ಸೊಲ್ಯೂಷನ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ವೀರೇಂದ್ರ ಶೇರಿಕಾರ್ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಪಾರ್ವತಿ ಮಲ್ಲಿಕಾರ್ಜುನ್ ಶೇರಿಕಾರ್** ಬಸ್ ನಿಲ್ದಾಣ 38-1/ಬಿ, ಅಂಧ್ರಹಳ್ಳಿ ಮುಖ್ಯ ರಸ್ತೆ, ವಿಶ್ವನೀಡಂ ಪೋಸ್ಟ್, ನಡಹೇರಪ್ಪ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-56. **ಮತ್ತೊಂದು ವಿಳಾಸ: ಮೆ॥ ಬೆಲ್ಸ್ ಕ್ಲೀನ್ ಏರ್ ಮತ್ತು ಇಂಜಿನಿಯರಿಂಗ್ ಸೊಲ್ಯೂಷನ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ವೀರೇಂದ್ರ ಶೇರಿಕಾರ್ ಮತ್ತುಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಪಾರ್ವತಿ ಮಲ್ಲಿಕಾರ್ಜುನ್ ಶೇರಿಕಾರ್,** ಫ್ಲಾಟ್ ನಂ. 141 ಎ ಮತ್ತು 141 ಬಿ, ಯರಪ್ಪ ಇಂಡಸ್ಟ್ರಿಯಲ್ ಪ್ರದೇಶ, ಚನೇನಹಳ್ಳಿ, ತಾವರೆಕೆರೆ, ಬೆಂಗಳೂರು-1560. **(2) ಶ್ರೀ ವೀರೇಂದ್ರ ಶೇರಿಕಾರ್** ಬಿನ್ ಶ್ರೀ ಮಲ್ಲಿಕಾರ್ಜುನ್ ಶೇರಿಕಾರ್ ಅಲಯನ್ಸ್ ಬಿಲ್ಡ್ ಟೆಕ್ ಕ್ಲೈಮೇಟ್ಸ್ ಅಪಾರ್ಟ್‌ಮೆಂಟ್, ನಂ. 124, ಫ್ಲಾಟ್ ನಂ.106, ಮೊದಲ ಮಹಡಿ, ಹೊಸಕೇರಿಹಳ್ಳಿ, ಬನಶಂಕರಿ, 3ನೇ ಹಂತ, ಬೆಂಗಳೂರು-560085. **(3) ಶ್ರೀಮತಿ ಪಾರ್ವತಿ ಮಲ್ಲಿಕಾರ್ಜುನ ಶೇರಿಕಾರ್** ಕೋಂ ಶ್ರೀ ಮಲ್ಲಿಕಾರ್ಜುನ್ ಶೇರಿಕಾರ್ 19-6-7/16, ಶಿವನಗರ, ಬಿಎಸ್‌ಎಸ್‌ಕೆ ಲೇಔಟ್, ಬೀದರ್-585401.	**ಶ್ರೀಮತಿ ಪಾರ್ವತಿ ಶೇರಿಕಾರ್ ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ : ಷೆಡ್ಯೂಲ್ II :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪ್ಲಾಟ್ ನಂ.47, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 10 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 15 ಮೀಟರ್‌ಗಳು, ಒಟ್ಟು ವಿಸ್ತೀರ್ಣ 150 ಚದರ ಮೀಟರ್‌ಗಳು, ಸರ್ವೆ ನಂ.65ರಲ್ಲಿ ರೂಪಿಸಲಾಗಿದ್ದು, ಈ ಆಸ್ತಿಯು ಬಿಎಸ್‌ಎಸ್‌ಕೆ ಕಾಲೋನಿ, ಅಲಿಯಾಬಾದ್, ಬೀದರ್‌ನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.46, ಪಶ್ಚಿಮಕ್ಕೆ: ಪ್ಲಾಟ್ ನಂ.56, ಉತ್ತರಕ್ಕೆಳ 9 ಮೀಟರ್ ಅಗಲದ ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ.48. **ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರಕಾಶ್ ಕೆ, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ. 9986316545ನ್ನು ಸಂಪರ್ಕಿಸಿ.**	03.10.2025 ಎನ್‌ಪಿಎ ದಿನಾಂಕ: 27.08.2025	SBB OVER DRAFT (OVER DRAFT), Loan A/c No. 923030057318636 Amount Rs. 79,00,000/- ಒಟ್ಟು ಬಾಕಿ ಮೊತ್ತ ರೂ.79,07,413/- ದಿನಾಂಕ : 06.10.2025ರಂದು ಇದ್ದಂತೆ
3	**(1) ಶ್ರೀ ಅಬ್ದುಲ್ ಸಲೀಂ** ಬಿನ್ ಶ್ರೀ ಅಬ್ದುಲ್ ಬಶೀರ್, **(2) ಶ್ರೀಮತಿ ತಾಹೇರಾ ತಬುಸ್ಸುಮ್** D/o. ಶ್ರೀ ಅಬ್ದುಲ್ ಸಲೀಂ, **ಇವರಿಬ್ಬರ ವಿಳಾಸ:** Hudco 41, 3ನೇ ಹಂತ, ಬನ್ನಿಮಂಟಪ, ಲ್ಯಾಂಡ್ ಮಾರ್ಕ್: ಶಾಫಿ ಮಸೀದಿ, ಮೈಸೂರು-570015. **ಮತ್ತೊಂದು ವಿಳಾಸ:** ನಂ.10/1, ಹಲೀಮ್ ನಗರ, ಬನ್ನಿಮಂಟಪ, ಬಸ್ ಡಿಪೋ ಹಿಂಭಾಗ, ಮೈಸೂರು-570015. **ಮತ್ತೊಂದು ವಿಳಾಸ:** ಮನೆ ನಂ.30 ಎಲ್‌ಐಜಿ, 3ನೇ ಹಂತ, ಬನ್ನಿಮಂಟಪ, ಮಂಡಿ, ಮೊಹಲ್ಲಾ, ಮೈಸೂರು-570015.	**ಶ್ರೀ ಅಬ್ದುಲ್ ಸಲೀಂ ಮತ್ತು ಶ್ರೀಮತಿ ತಾಹೇರಾ ತಬುಸ್ಸುಮ್ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಕಾರ್ಪೋರೇಷನ್ ಎಲ್.ಐ.ಜಿ ಮಾಡಲ್ ಮನೆಯ ಆಸ್ತಿ ನಂ:30, ಈ ಆಸ್ತಿಯು Hudco, 3ನೇ ಹಂತ, ಬನ್ನಿಮಂಟಪ ಲೇಔಟ್, ಮಂಡಿ ಮೊಹಲ್ಲಾ, ಮೈಸೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಎಲ್.ಐ.ಜಿ. ಮನೆಯ ನಂ.31, ಪಶ್ಚಿಮಕ್ಕೆ: ಎಲ್.ಐ.ಜಿ. ಮನೆಯ ನಂ.29, ಉತ್ತರಕ್ಕೆ: 9 ಮೀಟರ್ ರಸ್ತೆ, ದಕ್ಷಿಣಕ್ಕೆ: ಹೆಚ್.ಐ.ಜಿ. ಮನೆಗಳು. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 25.00 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 35.00 ಅಡಿ ಮತ್ತು 140 ಚದರ ಅಡಿ ರೆಡ್‌ಆಕ್ಸಿಡ್ ಆರ್.ಸಿ.ಸಿ. ಮನೆಯನ್ನೊಳಗೊಂಡಿದೆ ಮತ್ತು 200 ಚದರ ಅಡಿ ಎ.ಸಿ. ಶೀಟ್ ರೆಡ್ ಆಕ್ಸಿಡ್ ಮನೆಯ ಜೊತೆಗೆ ವಿದ್ಯುತ್, ನೀರಿನ ಸೌಲಭ್ಯದ ಜೊತೆಗೆ ಠೇವಣಿ ಮೊತ್ತ ಮತ್ತು ಸ್ಯಾನಿಟರಿ ಸಂಪರ್ಕವನ್ನೊಳಗೊಂಡಿದೆ. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	16.10.2025 ಎನ್‌ಪಿಎ ದಿನಾಂಕ: 08.10.2025	POWER HOME BRE Loan A/c No. PHR015108836601 Amount Rs.17,15,724/- ಒಟ್ಟು ಬಾಕಿ ಮೊತ್ತ ರೂ.16,21,880/- ದಿನಾಂಕ: 16.10.2025ರಂದು ಇದ್ದಂತೆ
4	**(1) ಶ್ರೀ ಜಾನ್ ಸ್ಟೆಲೂನ್** ಬಿನ್ ಶ್ರೀ ಹೆನ್ರಿ, **(2) ಶ್ರೀಮತಿ ಜೋಸಿ** ಕೋಂ ಶ್ರೀ ಹೆನ್ರಿ, **ಇವರಿಬ್ಬರ ವಿಳಾಸ:** ನಂ.3419/34, ಕೇಂಬ್ರಿಡ್ಜ್ ಶಾಲೆಯ ಹಿಂಭಾಗ, ಮಾರುತಿ, ಬಡಾವಣೆ, ಹುಣಸೂರು ಪಟ್ಟಣ-571105. **ಮತ್ತೊಂದು ವಿಳಾಸ:** ನಂ. 698, ನಡು ಬೀದಿ, ಹುಣಸೂರು ಪಟ್ಟಣ, ಮೈಸೂರು, ಕೊಲ್ಲಾಪುರದಮ್ಮ ದೇವಸ್ಥಾನದ ಹತ್ತಿರ-571105. **ಮತ್ತೊಂದು ವಿಳಾಸ:** ನಂ.626/490/698, ನಡು ಬೀದಿ, 2ನೇ ವಿಭಾಗ, ವಾರ್ಡ್ ನಂ.18, ಹುಣಸೂರು ಪಟ್ಟಣ, ಮೈಸೂರು -571105.	**ಶ್ರೀ ಜಾನ್ ಸ್ಟೆಲೂನ್ ಮತ್ತು ಶ್ರೀಮತಿ ಜೋಸಿ ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ:** ಆಸ್ತಿಯ ಹುಣಸೂರು ನಗರಸಭಾ ಖಾತಾ ಅಸೆಸ್‌ಮೆಂಟ್ ನಂ.626/490/698, ಈ ಆಸ್ತಿಯು 2ನೇ ವಿಭಾಗ, ವಾರ್ಡ್ ನಂ.18, ನಡು ಬೀದಿ, ಹುಣಸೂರು ಟೌನ್‌ನಲ್ಲಿದೆ, ಜೊತೆಗೆ ಹುಣಸೂರು ನಗರಸಭಾ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 18 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 19 ಅಡಿ. ಚಕ್ಕುಬಂದಿ: ಪೂರ್ವಕ್ಕೆ: ತೆರೆಸಾರವರ ಮನೆ, ಪಶ್ಚಿಮಕ್ಕೆ: ಸುಶೀಲರವರ ಮನೆ, ಉತ್ತರಕ್ಕೆ: ಹೆಚ್.ಟಿ.ಸೋಮಶೇಖರ್‌ರವರ ಮನೆ, ದಕ್ಷಿಣಕ್ಕೆ: ರಸ್ತೆ. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್ ಕೆ, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	07.10.2025 ಎನ್‌ಪಿಎ ದಿನಾಂಕ: 03.10.2025	POWER HOME BRE Loan A/c No. PHR015103649320 Amount Rs.6,72,500/- ಒಟ್ಟು ಬಾಕಿ ಮೊತ್ತ ರೂ.6,38,683/- ದಿನಾಂಕ: 07.10.2025 ರಂದು ಇದ್ದಂತೆ
5	**(1) ಶ್ರೀ ಭೋಮಿಯಪ್ಪ** ಬಿನ್ ಶ್ರೀ ಮಹೇಂದ್ರ, **(2) ಶ್ರೀ ಮಹೇಂದ್ರ ಕುಮಾರ್ ಬಿನ್ ಶ್ರೀ ಕೃಷ್ಣಪ್ಪ, ಇವರಿಬ್ಬರ ವಿಳಾಸ:** ವಾರ್ಡ್ ನಂ.24, ಲಕ್ಷ್ಮಿ ಕ್ಯಾಂಪ್, ಗಂಗಾವತಿ, ಕೊಪ್ಪಳ-583227. **ಮತ್ತೊಂದು ವಿಳಾಸ:** ಮುನಿಸಿಪಲ್ ನಂ.4-14-190/3, ಅಸೋಸಿಯೇಷನ್ 24-1-509-150ಬಿ, ವಾರ್ಡ್ ನಂ.24, ಲಕ್ಷ್ಮಿ ಕ್ಯಾಂಪ್, ಹುಲಿಗೆಪ್ಪ ದೇವಸ್ಥಾನದ ಹತ್ತಿರ, ಗಂಗಾವತಿ, ಕೊಪ್ಪಳ-583227.	**ಶ್ರೀ ಭೋಮಿಯಪ್ಪ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಮುನಿಸಿಪಲ್ ನಂ.4-14-190/3, ಖಾತಾ ನಂ.24-1-509-150ಬಿ, ವಿಸ್ತೀರ್ಣ 55.7418 ಚದರ ಮೀಟರ್‌ಗಳು, ಜೊತೆಗೆ ಆರ್‌ಸಿಸಿ ಕಟ್ಟಡವನ್ನೊಳಗೊಂಡಿದೆ, ಈ ಆಸ್ತಿಯು ವಾರ್ಡ್ ನಂ.24, ಲಕ್ಷ್ಮೀ ಕ್ಯಾಂಪ್, ಗಂಗಾವತಿ, ಜಿಲ್ಲೆ: ಕೊಪ್ಪಳದಲ್ಲಿದೆ ಮತ್ತು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಬಸವರಾಜುರವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಬಾಬು ಸಾಬ್‌ರವರ ಆಸ್ತಿ, ದಕ್ಷಿಣಕ್ಕೆ: ಪ್ಲಾಟ್ ನಂ.18. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	16.10.2025 ಎನ್‌ಪಿಎ ದಿನಾಂಕ: 08.10.2025	POWER HOME BRE Loan A/c No. PHR022508074022 AMOUNT Rs. 20,00,000/- ಒಟ್ಟು ಬಾಕಿ ಮೊತ್ತ ರೂ.19,56,884/- ದಿನಾಂಕ: 16.10.2025 ರಂದು ಇದ್ದಂತೆ.
6	**(1) ಶ್ರೀ ಟಿ. ಇರ್ಫಾನ್** ಬಿನ್ ಶ್ರೀ ಟಿಂಕರ್ ವಾಲಿ ಬಾಷಾ, **(2) ಶ್ರೀಮತಿ ರೈಶಾ ತಬಸುಮ್** ಕೋಂ ಶ್ರೀ ಟಿ. ಇರ್ಫಾನ್, **ಇವರಿಬ್ಬರ ವಿಳಾಸ:** ನಂ.10, ಮುನಿಯಪ್ಪ ಗಾರ್ಡನ್, 7ನೇ ಕ್ರಾಸ್, ಕದಿರಪ್ಪ ರಸ್ತೆ, ಬೆಂಗಳೂರು ಉತ್ತರ, ಬೆಂಗಳೂರು-560005. **ಮತ್ತೊಂದು ವಿಳಾಸ:** ಟಿ.ಎಸ್. ನಂ. 643, ಎ3 ಬಿ1, ಡೋರ್ ನಂ.76/2, ಕಾರ್ಪ್ ವಾರ್ಡ್ ನಂ.10, ರೂಪಂಗುಡಿ ರಸ್ತೆ, ವರಬಸವನ ದೇವಸ್ಥಾನದ ಹತ್ತಿರ, ಬಳ್ಳಾರಿ-583101.	**ಶ್ರೀ ಟಿ. ಇರ್ಫಾನ್ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಆಸ್ತಿ: (6.6.2024 ರ ಮಾರಾಟ ಒಪ್ಪಂದದ ಪ್ರಕಾರ ಷೆಡ್ಯೂಲ್ ಆಸ್ತಿ):** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಭಾಗದ ಮನೆಯ ನಂ.76/2, ಟಿ.ಎಸ್.ನಂ.643/ಎ3ಬಿ1, ಬ್ಲಾಕ್ ನಂ.06, ಈ ಆಸ್ತಿಯು ರೋಪನಗುಡಿ ರಸ್ತೆ, ವರಬಸಪ್ಪ ದೇವಸ್ಥಾನದ ಹತ್ತಿರ, ಬಳ್ಳಾರಿ ಟೌನ್, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಟಿ.ಎಸ್.ನಂ.643/ಎ3ಬಿ2, ಪಶ್ಚಿಮಕ್ಕೆ: ಟಿ.ಎಸ್.ನಂ.643/ಎ3ಬಿ1, ಉತ್ತರಕ್ಕೆ: ಸೈಯದ್ ಮೊಹಮ್ಮದ್ ರಿಯಾಜ್ ಅವರಿಗೆ ಟಿ.ಎಸ್.ನಂ.643/ಎ3ಬಿ1, ದಕ್ಷಿಣಕ್ಕೆ: ಟಿ.ಎಸ್.ನಂ.643/ಎ3ಬಿ1. **ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234ನ್ನು ಸಂಪರ್ಕಿಸಿ.**	16.10.2025 ಎನ್‌ಪಿಎ ದಿನಾಂಕ: 03.10.2025	POWER HOME VANILLA BRE Loan A/c No. PHR168811255015 Amount Rs.10,00,000/- ಒಟ್ಟು ಬಾಕಿ ಮೊತ್ತ ರೂ.1,28,280/- ದಿನಾಂಕ: 16.10.2025 ರಂದು ಇದ್ದಂತೆ.
7.	**(1) ಶ್ರೀ ರವಿಕುಮಾರ್ ರಾಮಪ್ಪ ಕೋಳೂರು** ಬಿನ್ ಶ್ರೀ ರಾಮಪ್ಪ ಕೋಳೂರು, **(2) ಶ್ರೀಮತಿ ಶಕುಂತಲಾ** ಕೋಂ ಶ್ರೀ ರವಿಕುಮಾರ್ ರಾಮಪ್ಪ ಕೋಳೂರು, **ಇವರಿಬ್ಬರ ವಿಳಾಸ:** ಪ್ಲಾಟ್ ನಂ. 362/ಎ, ಮನೆ ನಂ. 15, ಹಾತಲಗೇರಿ ರಸ್ತೆ, ಸಾಯಿ ನಗರ, ವಾರ್ಡ್ ನಂ.29, ಗದಗ- 582101.	**ಶ್ರೀ ರವಿಕುಮಾರ್ ರಾಮಪ್ಪ ಕೋಳೂರು ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ :** ಆಸ್ತಿಯ ಪ್ಲಾಟ್ ನಂ.15, ಆರ್‌ಎಸ್ ನಂ.362ಎ, ಒಟ್ಟು ವಿಸ್ತೀರ್ಣ 1 ಗುಂಟೆ 11.1/2 ಅನ್ನಾಸ್ ಪೂರ್ವ ಭಾಗದ ವಿಸ್ತೀರ್ಣ ಪೂರ್ವದ ಕಡೆ 9.20 ಮೀಟರ್‌ಗಳು, ಪಶ್ಚಿಮದ ಕಡೆ 9.60 ಮೀಟರ್‌ಗಳು, ಉತ್ತರದ ಕಡೆ 9 ಮೀಟರ್‌ಗಳು, ದಕ್ಷಿಣದ ಕಡೆ 9 ಮೀಟರ್‌ಗಳು ಅಂದರೆ 911 ಚದರ ಅಡಿ, ಟಿಎಂಸಿ ನಂ.29-4-772-207ಎ/1, ಜೊತೆಗೆ ನಿರ್ಮಿತ ವಾಸಯೋಗ್ಯ ಕಟ್ಟಡದಲ್ಲಿ ಆವರಣವನ್ನೊಳಗೊಂಡಿದೆ ಜೊತೆಗೆ ನೆಲ ಮಹಡಿ ಬಿಲ್ಟ್‌ಅಪ್ 49.82 ಚದರ ಮೀಟರ್‌ಗಳು, ಈ ಆಸ್ತಿಯು ಗದಗ್-ಬೆಟಗೇರಿ ಟಿಎಂಸಿ ವ್ಯಾಪ್ತಿಯಲ್ಲಿದ್ದು, ಗದಗ್ ತಾಲ್ಲೂಕು & ಜಿಲ್ಲೆ: ಗದಗ್‌ನಲ್ಲಿದೆ ಮತ್ತು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.18, ಪಶ್ಚಿಮಕ್ಕೆ: ಪ್ಲಾಟ್ ನಂ.15ರ ಉಳಿಕೆ ಭಾಗ, ಉತ್ತರಕ್ಕೆ: ಪ್ಲಾಟ್ ನಂ.14, ದಕ್ಷಿಣಕ್ಕೆ: ಆರ್‌ಎಸ್ ನಂ.363. **ಹೆಚ್ಚಿನ ಮಾಹಿತಿಗಾಗಿ ಶ್ರೀ ಸುದರ್ಶನ್, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	16.10.2025 ಎನ್‌ಪಿಎ ದಿನಾಂಕ: 08.10.2025	POWER HOME BRE Loan A/c No. PHR012903241226 Amount: Rs.9,11,642/- Total Amount Rs.7,57,554/- as on 16.10.2025 ASSET POWER BRE Loan A/c No. LTR012906659295 Amount: Rs.20,77,704/- Total Amount Rs.19,93,143/- as on 16.10.2025 ಒಟ್ಟು ಬಾಕಿ ಮೊತ್ತ ರೂ.27,50,697/- ದಿನಾಂಕ: 16.10.2025 ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್-13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 15.11.2025
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಮನೆಗೆ ಬೆಂಕಿ: ವೃದ್ಧೆ ಸಜೀವ ದಹನ

ಕಾರವಾರ: ಮನೆಗೆ ಆಕಸ್ಮಿಕ ಬೆಂಕಿ ತಗುಲಿ ಮನೆಯಲ್ಲಿದ್ದ ವೃದ್ಧೆ ಸಜೀವ ದಹನವಾದ ಘಟನೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ಹನಮಾಪುರದಲ್ಲಿ ನಡೆದಿದೆ. ಪಕೀರವ್ವ ರಾಮಣ್ಣ ಆಲೂರು (70) ಮೃತ ವೃದ್ಧೆ. ಮನೆಯಲ್ಲಿ ಏಕಾಂಗಿಯಾಗಿ ವಾಸವಿದ್ದ ಪಕೀರವ್ವ ಮಲಗಿದ್ದ ವೇಳೆ ಮನೆಗೆ ಆಕಸ್ಮಿಕ ಬೆಂಕಿ ತಗಲಿದೆ. ಬೆಂಕಿ ತಗುಲಿದ ಪರಿಣಾಮ ಪಕೀರವ್ವ ಜೀವಂತ ಸುಟ್ಟು ಹೋಗಿದ್ದಾರೆ. ಘಟನೆ ಸಂಬಂಧ ಮುಂಡಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು-ಬೈಕ್ ಡಿಕ್ಕಿ: ಇಬ್ಬರು ಸಾವು

ಕಲಬುರಗಿ: ಕಾರು-ಬೈಕ್ ನಡುವೆ ಡಿಕ್ಕಿಯಾಗಿ ಭೀಕರ ಅಪಘಾತ ಸಂಭವಿಸಿದ್ದು, ಬೈಕ್ ಸವಾರರಿಬ್ಬರು ಮೃತಪಟ್ಟ ಘಟನೆ ಶನಿವಾರ ರಾತ್ರಿ ಮಹಾಗಾಂವ ಕ್ರಾಸ್ ರಾಜ ಧಾಬಾ ಬಳಿ ನಡೆದಿದೆ. ಕಮಲಾಪುರ ತಾಲೂಕಿನ ಸಿರಗಾಪುರ ಗ್ರಾಮದ ಆಕಾಶ ಚಂದ್ರಕಾಂತ ಧನವಂತ (19), ಭೂಸಣಗಿ ಗ್ರಾಮದ ಸುಶೀಲ್ ಮಲ್ಲಿಕಾರ್ಜುನ (28) ಮೃತ ಯುವಕರು. ಡಿಕ್ಕಿ ರಭಸಕ್ಕೆ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದ್ದು ಈ ಇಬ್ಬರು ಬೆಂಕಿಯಲ್ಲಿ ಬೆಂದಿದ್ದಾರೆ. ಆಕಾಶ ಸ್ಥಳದಲ್ಲೇ ಮೃತಪಟ್ಟಿದ್ದು, ಸುಶೀಲ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಕೊನೆಯುಸಿರೆಳೆದಿದ್ದಾನೆ. ಆಕಾಶ ಹಾಗೂ ಸುಶೀಲ್ ಇಬ್ಬರು ಬಜಾಜ್ ಎನ್‌ಎಸ್ ಬೈಕ್ ಮೇಲೆ ಸಿರಗಾಪುರದಿಂದ ಮಹಾಗಾಂವ ಕ್ರಾಸ್‌ಗೆ ತೆರಳುತ್ತಿದ್ದರು. ಹೈದರಾಬಾದ್‌ನಿಂದ ಕಲಬುರಗಿಗೆ ಕಾರು ತೆರಳುತ್ತಿತ್ತು. ಎರಡರ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಸುಶೀಲನನ್ನು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದ್ದು, ಫಲ ನೀಡಲಿಲ್ಲ.

ಆರ್‌ಎಸ್‌ಎಸ್ ಮೊದಲ ಬಾರಿ ಕಾನೂನು ಪಾಲನೆ

ಕಲಬುರಗಿ: 100 ವರ್ಷಗಳಲ್ಲಿ ಮೊದಲ ಬಾರಿಗೆ ಕಾನೂನು ಮತ್ತು ಸಾಂವಿಧಾನಿಕ ಅನುಮತಿ ಯೊಂದಿಗೆ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆಸುವ ಮೂಲಕ ನಿಯಮಗಳನ್ನು ಪಾಲಿಸುತ್ತಿದೆ

ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಪಥಸಂಚಲನವನ್ನು ಎಂದಿಗೂ ವಿರೋಧಿಸಿಲ್ಲ. ನಾನು ಹೇಳಿದ್ದು ಅನುಮತಿ ಪಡೆಯಬೇಕು ಎಂದು ಮಾತ್ರ. ಆರ್‌ಎಸ್‌ಎಸ್‌ನರಿಗೆ ಕಾನೂನಿನ ನಿಯಮವನ್ನು ಪಾಲಿಸದಿರುವ ಅಭ್ಯಾಸವಿದೆ. ಈಗ ಅವರು ನಿಯಮಗಳನ್ನು ಪಾಲಿಸುತ್ತಿದ್ದಾರೆ. ಅವರು ಅದನ್ನು ಮಾಡಲಿ. ಕಠಿಣ ಷರತ್ತುಗಳನ್ನು ವಿಧಿಸಲಾಗಿದೆ. ಅವರು ಷರತ್ತುಗಳನ್ನು ಪಾಲಿಸದಿದ್ದರೆ, ಕಾನೂನಿನ ಪ್ರಕಾರ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ. ಇಲ್ಲಿ ಏನು ಸಮಸ್ಯೆ? ಮೊದಲು, ಅವರು ಈ ಬಗ್ಗೆ ತಿಳಿಸುತ್ತಿದ್ದರು. ಆದರೆ ಈಗ ಅವರು ಪಥಸಂಚಲನಕ್ಕೆ ಅನುಮತಿ ಪಡೆಯುತ್ತಿದ್ದಾರೆ. ನಾವು ಅವರನ್ನು ಕಾನೂನು ಮತ್ತು ಸಂವಿಧಾನವನ್ನು ಪಾಲಿಸುವಂತೆ ಕೇಳಿ ಕೊಂಡಿದ್ದೇವೆ. ಅದನ್ನು ಅವರು 100 ವರ್ಷಗಳಲ್ಲಿ ಮೊದಲ ಬಾರಿಗೆ ಮಾಡುತ್ತಿದ್ದಾರೆ ಎಂದರು.

ಮಕ್ಕಳ ವಚನ ಮೇಳ

ಬೆಂಗಳೂರು: ವಚನ ಜ್ಯೋತಿ ಬಳಗದ ಆಶ್ರಯದಲ್ಲಿ ಮಕ್ಕಳ ವಚನ ಮೇಳ ಕಾರ್ಯಕ್ರಮವು ಇದೇ ಮಂಗಳವಾರದಿಂದ 27ನೇ ತಾರೀಕಿನ ವರೆಗೆ ನಡೆಯಲಿದೆ. 18ರಂದು ತುಮಕೂರು ಸಿದ್ಧಗಂಗಾ ಕ್ಷೇತ್ರದ ಕಿರಿಯ ಶ್ರೀಗಳಾದ ಶಿಸಿದ್ದೇಶ್ವರ ಸ್ವಾಮಿ ಅವರು ಉದ್ಘಾಟನಾ ಕಾರ್ಯಕ್ರಮ ನೆರವೇರಿಸಲಿದ್ದಾರೆ. ವಿಶ್ವಬಂಧು ಸೇವಾ ಪ್ರತಿಷ್ಠಾನದ ಡಾ. ಸಿದ್ದಯ್ಯ, ಗುರುವಣ್ಣದೇವರ ಮಠದ ನಜುಂಡಸ್ವಾಮಿ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಶಾಸಕ ಎಸ್‌ಟಿ ಸೋಮಶೇಖರ, ಕವಿ ನಾಗರಾಜ ಮೂರ್ತಿ, ಮಾಜಿ ಮೇಯರ್ ಗಂಗಾಂಬಿಕಾ ಮಲ್ಲಿಕಾರ್ಜುನ್, ಸಿದ್ದೇಶ ನಾಗೇಂದ್ರ, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್.ಪಿನಾಕಪಾಣಿ ಮುಂತಾದವರು ಭಾಗವಹಿಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನಾಡ ಸಮಸ್ಯೆಗೆ ಸಿಎಂ ಪರಿಹಾರ

• **ಸ್ಥಳ : ಹುಣಸೂರು, ಮೈಸೂರು**

ಸಮಸ್ಯೆಯೇನು..?: ಹುಣಸೂರು ನಗರದಲ್ಲಿ ಹದಗೆಟ್ಟ ರಸ್ತೆಗಳನ್ನು ಸರಿಪಡಿಸುವ ಬಗ್ಗೆ. ಮೈಸೂರು ಜಿಲ್ಲೆಯ ಹುಣಸೂರು ನಗರದಲ್ಲಿ ಹಲವು ರಸ್ತೆಗಳು ಗುಂಡಿ ಬಿದ್ದಿದ್ದು, ಗುಂಡಿಗಳನ್ನು ಮುಚ್ಚಲು ಆಗ್ರಹಿಸಿ ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ. ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಿದ ನಗರಸಭಾ ಅಧಿಕಾರಿಗಳು ಹೊಸ ರಸ್ತೆ ನಿರ್ಮಾಣ ಮಾಡಲು ಟೆಂಡರ್ ಕರೆದಿದ್ದಾರೆ. ತಾತ್ಕಾಲಿಕವಾಗಿ ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಿದ್ದಾರೆ.

ಕಲಬುರಗಿಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ಯಶಸ್ವಿ | ಎಲ್ಲೆಡೆ ರಾರಾಜಿಸಿದ ಭಗವಾಧ್ವಜ

ಸಂಘವು ದೇಶ ಒಡೆವ ಶಕ್ತಿಗಳ ವಿರೋಧಿ: ಕೃಷ್ಣ ಜೋಶಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಮತ್ತು ವಿಜಯದಶಮಿ ಉತ್ಸವದ ಅಂಗವಾಗಿ ಭಾನುವಾರ ನಡೆದ ಗಣವೇಷಧಾರಿ ಸ್ವಯಂಸೇವಕರ ಪಥಸಂಚಲನವು ರಾಜ್ಯಾದ್ಯಂತ ಗಮನ ಸೆಳೆದಿದೆ. ಈ ಹಿಂದೆ ಅಕ್ಟೋಬರ್ 19 ರಂದು ಸ್ಥಳೀಯ ಆಡಳಿತದ ಅನುಮತಿ ನಿರಾಕರಣೆಯಿಂದ ಮುಂದೂಡಲ್ಪಟ್ಟಿದ್ದ ಈ ಕಾರ್ಯಕ್ರಮವು ಹೈಕೋರ್ಟ್‌ನ ಷರತ್ತುಬದ್ಧ ಅನುಮತಿಯೊಂದಿಗೆ ಯಶಸ್ವಿಯಾಗಿ ನೆರವೇರಿತು.

ಬಜಾಜ್ ಕಲ್ಯಾಣ ಮಂಟಪದಿಂದ ಪ್ರಾರಂಭವಾದ ಸುಮಾರು 1.2 ಕಿ.ಮೀ. ದೂರದ ಪಥಸಂಚಲನದಲ್ಲಿ ಘೋಷವಾದಕರು ಸೇರಿದಂತೆ 350 ಸ್ವಯಂಸೇವಕರು ಪೂರ್ಣ ಗಣವೇಷದಲ್ಲಿ ಭಾಗವಹಿಸಿದರು. ಮಾರ್ಗದುದ್ದಕ್ಕೂ ಸ್ಥಳೀಯರು, ಮಹಿಳೆಯರು ಮತ್ತು ಮಕ್ಕಳು ಮಹಾಪುರುಷರ ವೇಷಭೂಷಣ ಧರಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಹಾಗೂ 'ಭಾರತ್ ಮಾತಾ ಕೀ ಜೈ' ಘೋಷಣೆಗಳೊಂದಿಗೆ ಭವ್ಯ ಸ್ವಾಗತ ಕೋರಿದರು. ಇದರಿಂದ ಇಡೀ ಚಿತ್ತಾಪುರ ಪಟ್ಟಣವು ಕೇಸರಿಮಯವಾಗಿ ಮಾರ್ಪಟ್ಟು ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಬಜಾಜ್ ಕಲ್ಯಾಣ ಮಂಟಪದಿಂದ ಪ್ರಾರಂಭವಾದ ಪಥಸಂಚಲನ ಪಟ್ಟಣದ ಪ್ರಮುಖ ಸ್ಥಳಗಳಾದ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಸರಕಾರಿ ಗ್ರಂಥಾಲಯ, ಬಸವ ಆಸ್ಪತ್ರೆ, ರಾಘವೇಂದ್ರ ಖಾನಾವಳಿ ರಸ್ತೆ, ಕಾಶಿ ಗಲ್ಲಿಯ ಗಣೇಶ ಮಂದಿರ, ಕೆನರಾ ಬ್ಯಾಂಕ್, ತಾಲೂಕು ಪಂಚಾಯತ್

ಕಲಬುರಗಿಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ಯಶಸ್ವಿಯಾಗಿ ನಡೆಯಿತು.

ಕಾರ್ಯಾಲಯ, ಸರ್ಕಾರಿ ಪದವಿ ಪೂರ್ವ ಕಾಲೇಜುನಿಂದ ಪುನಃ ಬಸವೇಶ್ವರರ ಸರ್ಕಲ್‌ನಿಂದ ಮರಳಿ ಬಜಾಜ್ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮದೊಂದಿಗೆ ದೇಶದ ಹೈವೋಲ್ಟೇಜ್ ಪಥಸಂಚಲನ ಸಂಪನ್ನಗೊಂಡಿತು.

ಬಳಿಕ ಸಾರ್ವಜನಿಕ ಸಮಾರಂಭದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದ ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಪ್ರಾಂತದ ಪ್ರಚಾರ ಪ್ರಮುಖ ಕೃಷ್ಣ ಜೋಶಿ ಅವರು, ಭಾರತವನ್ನು ಯಾರು ಪೂಜಿಸುತ್ತಾರೆ ಅವರೊಂದಿಗೆ ಸಂಘವಿದೆ. ಆದರೆ, ಭಾರತವನ್ನು ಒಡೆಯಲು ಮುಂದಾಗುವವರನ್ನು ಸಂಘ ಬಲವಾಗಿ ವಿರೋಧಿಸುತ್ತದೆ ಎಂದು ಸ್ಪಷ್ಟಪಡಿಸಿದರು.

1925ರಲ್ಲಿ ಡಾ. ಹೆಡಗೇವಾರ್ ಅವರು ಅಸಂಘಟಿತ ಹಿಂದೂ ಸಮಾಜವನ್ನು ಸಂಘಟಿಸುವ

> ಸಂಘಕ್ಕೆ ಟೀಕೆ ಟಿಪ್ಪಣಿ ಮಾಡುವ ಬದಲು ಸಂಘದ ಅಂಗಳಕ್ಕೆ ಬಂದು ಸಂಘವನ್ನು ಗಮನಿಸಿ. ಸಂಘ ಯಾವ ತ್ತಿಗೂ ತನಗೆ ಜಿಂದಾಬಾದ್ ಎಂಬ ಘೋಷಣೆ ಕೂಗಿಲ್ಲ. 3700 ಪ್ರಚಾರಕರು ಸಂಘಕ್ಕಾಗಿ ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಸಂಘದ ಅಂತಿಮ ವಿಜಯ ಭಾರತ ಮಾತೆಯನ್ನು ಪರಮ ವೈಭವದ ಸ್ಥಾನಕ್ಕೆ ಕೊಂಡೊಯ್ಯುವದಾಗಿದೆ.
>
> **- ಕೃಷ್ಣ ಜೋಶಿ, ಪ್ರಾಂತ ಪ್ರಚಾರ ಪ್ರಮುಖ,ಕ.ಉತ್ತರ**

ಉದ್ದೇಶದಿಂದ ಪ್ರಾರಂಭಿಸಿದ ಸಂಘವು ಇಂದು ರಾಷ್ಟ್ರಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದೆ ಎಂದು ಹೇಳಿದರು. ಸಂಘದ ಅಂತಿಮ ವಿಜಯ ಭಾರತ ಮಾತೆಯನ್ನು ಪರಮ ವೈಭವದ ಸ್ಥಾನಕ್ಕೆ ಕೊಂಡೊಯ್ಯುವುದಾಗಿದೆ ಎಂದು ಅವರು ಪ್ರತಿಪಾದಿಸಿದರು.

ಈ ಕಾರ್ಯಕ್ರಮವು ಕೋರ್ಟ್ ಕಟಕಟೆಗೆ ಹೋಗಿ ಅನುಮತಿ ಪಡೆದು ನಡೆಸಿದ ರಾಜ್ಯದ ಮೊದಲ ಪಥಸಂಚಲನವಾಗಿದ್ದು, ಉದ್ಯಮಿ ಭೀಮರೆಡ್ಡಿ ಕುರಾಳ ಅವರು ನಾವೆಲ್ಲರೂ ಭಾರತೀಯರು, ನಾವೆಲ್ಲರೂ ಹಿಂದುಗಳು ಎಂಬ ಭಾವ ಬರಲಿ ಎಂದರು.

ಎಲ್ಲೆಡೆ ಪೊಲೀಸ್ ಬಿಗಿ ಬಂದೋಬಸ್ತ್

ಪಥಸಂಚಲನಕ್ಕೆ ಹೈಕೋರ್ಟ್‌ನಿಂದ ಷರತ್ತುಬದ್ಧ ಅನುಮತಿ ದೊರೆತ ಹಿನ್ನೆಲೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಉಪ ಪೊಲೀಸ್ ಅಧೀಕ್ಷಕರಾದ ಮಹೇಶ್ ಮೇಘಣ್ಣನವರ್ ಮತ್ತು ಶಂಕರಗೌಡ ಪಾಟೀಲ ಅವರ ನೇತೃತ್ವದಲ್ಲಿ ಬಿಗಿ ಭದ್ರತಾ ವ್ಯವಸ್ಥೆಗೊಂಡಿದ್ದು, ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತು. ಒಟ್ಟು 686 ಪೊಲೀಸ್ ಸಿಬ್ಬಂದಿ, 250 ಹೋಮ್ ಗಾರ್ಡ್ಸ್ ಮತ್ತು 8 ಕೆ.ಎಸ್.ಆರ್.ಪಿ. ತುಕಡಿಗಳನ್ನು ನಿಯೋಜಿಸಾಲಾಗಿತ್ತು. ಪಥಸಂಚಲನ ಮಾರ್ಗದುದ್ದಕ್ಕೂ 52 ಸಿಸಿ ಟಿವಿಗಳ ಮೂಲಕ ನಿರಂತರ ಕಣ್ಗಾವಲು ಇಡಲಾಗಿತು.

ನಾಲ್ಕು ದಿಕ್ಕಲ್ಲೂ ಪೊಲೀಸ್ ನಾಕಾಬಂದಿ

ಪಥಸಂಚಲನ ಕಾರ್ಯಕ್ರಮ ಹಿನ್ನಲೆ ಚಿತ್ತಾಪುರ ಪಟ್ಟಣ ಸಂಪರ್ಕ ಕಲ್ಪಿಸುವ ನಾಲ್ಕು ದಿಕ್ಕುಗಳಲ್ಲಿ ಪೊಲೀಸ್ ನಾಕಾ ಬಂದಿ ಹಾಕಿದರು. ತಾಲೂಕು ಹೊರತುಪಡಿಸಿ ಹೊರಗಿನಿಂದ ಬರುವ ಪ್ರತಿಯೊಂದು ವಾಹನ, ಹಾಗೂ ವ್ಯಕ್ತಿಗಳ ದಾಖಲೆಗಳನ್ನು ತಪಾಸಣೆಗೊಳಪಡಿಸಿ ಒಳಬಿಟ್ಟ ಸಂಗತಿಯು ನಡೆಯಿತು. ಪರಿಸ್ಥಿತಿ ಸೂಕ್ಷ್ಮವಾಗಿರುವುದರಿಂದ, ಹೊರಗಿನ ವ್ಯಕ್ತಿಗಳು ಪಟ್ಟಣ ಪ್ರವೇಶಿಸದಂತೆ ಅಘೋಷಿತ ನಿರ್ಬಂಧ ವಿಧಿಸಿದಂತೆ ದೃಶ್ಯ ಕಂಡುಬಂತು.

ರಾರಾಜಿಸಿದ ಭಗವಾಧ್ವಜ

ಪಥಸಂಚಲನ ಸಂಬಂಧ ಚಿತ್ತಾಪುರ ಪಟ್ಟಣವು ಸಂಪೂರ್ಣವಾಗಿ ಕೇಸರಿಮಯವಾತ್ತು. ಪಟ್ಟಣದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಎಲ್ಲೆಡೆ ಉತ್ಸಾಹ ಮನೆಮಾಡಿತ್ತು. ಪಥಸಂಚಲನಕ್ಕೆ ಸ್ವಾಗತ ಕೋರಿ ರಸ್ತೆಗಳ ಇಕ್ಕೆಲಗಳಲ್ಲಿ ಕೇಸರಿ ಬ್ಯಾನರ್‌ಗಳು ಮತ್ತು ಬಂಟಿಂಗ್‌ಗಳು, ಭಗವಾಧ್ವಜ ರಾರಾಜಿಸಿದವು. ಕಟ್ಟಡಗಳು ಮತ್ತು ಕಂಬಗಳಿಗೆ ಕೇಸರಿ ಧ್ವಜಗಳು ಹಾಗೂ ತೋರಣಗಳನ್ನು ಕಟ್ಟಲಾಗಿದ್ದು, ಪ್ರತಿಯೊಂದು ಬೀದಿಯೂ ಸಿಂಗಾರಗೊಂಡಿತ್ತು.

ಬಿಹಾರ ಚುನಾವಣೆಯಲ್ಲಿ ನಮ್ಮ ಲೆಕ್ಕ ತಪ್ಪಿದೆ: ಸತೀಶ ಜಾರಕಿಹೊಳಿ

ಚುನಾವಣೆಯಲ್ಲಿ ಸೋಲು-ಗೆಲುವು ಸಹಜ

ಬೆಳಗಾವಿ: ಬಿಹಾರ ಚುನಾವಣೆಯಲ್ಲಿ ನಮ್ಮ ಲೆಕ್ಕ ತಪ್ಪಿದೆ. ಸರಿಯಾಗಿ ತಂತ್ರಗಾರಿಕೆ ಮಾಡುವಲ್ಲಿ ವಿಫಲರಾದೆವು. ಹಾಗಾಗಿ, ಈ ರೀತಿಯ ಫಲಿತಾಂಶ ಬಂದಿದೆ ಎಂದು ಸಚಿವ ಸತೀಶ ಜಾರಕಿಹೊಳಿ ಆತ್ಮಾವಲೋಕನ ಮಾಡಿಕೊಂಡರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಎಲ್ಲರೂ ಗೆಲ್ಲುವ ಆಸೆ ಇಟ್ಟುಕೊಂಡಿದ್ದೆವು. ಹರಿಯಾಣದಲ್ಲೂ ಬಹಳ ಹತ್ತಿರದಿಂದ ಸೋತಿದ್ದೇವೆ. ಅದೇ ರೀತಿ ಕೆಲವು ರಾಜ್ಯಗಳಲ್ಲಿ ಬಹಳ ಅಂತರದಿಂದ ಸೋಲು ಕಂಡಿದ್ದೇವೆ. ಚುನಾವಣೆಗಳಲ್ಲಿ ಸೋಲು-ಗೆಲುವು ಸಹಜ ಎಂದರು.

ಇವಿಎಂ ಬಗ್ಗೆ ಆರಂಭದಿಂದಲೂ ಅನುಮಾನವಿದೆ. ಅದು ಕೊನೆಯವರೆಗೂ ಇರುತ್ತದೆ. ಕೇಂದ್ರ ಸರಕಾರ, ಚುನಾವಣಾ ಆಯೋಗ ಸ್ಪಷ್ಟಪಡಿಸುವವರೆಗೂ ಆ ಅನುಮಾನ ಇದ್ದಿದ್ದೆ. ಹಾಗಾಗಿ, ಅವರೇ ಅದಕ್ಕೆ ಇತಿಶ್ರೀ ಹಾಡಬೇಕು ಎಂದರು. ಸಿಎಂ ಸಿದ್ದರಾಮಯ್ಯನವರು ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನು ದೆಹಲಿಯಲ್ಲಿ ಭೇಟಿಯಾ ಗಿದ್ದಾರೆ. ಆ ವೇಳೆ ಅವರ ನಡುವೆ ಏನು ಮಾತುಕತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಗಳನ್ನು ಮಾಧ್ಯಮಗಳು ಕೇಳಿದರೆ ಅವರು ಇದಕ್ಕೆ ಉತ್ತರ ಹೇಳಬಹುದು. ಸಂಪುಟ ಪುನಾರಚನೆ ನಮ್ಮ ಕೈಯಲ್ಲಿಲ್ಲ. ಅದನ್ನು ಹೈಕಮಾಂಡ್ ನಿರ್ಧರಿಸಬೇಕು ಎಂದು ಹೇಳಿದರು. ದೆಹಲಿ ಭೇಟಿ ವೇಳೆ ರಾಜ್ಯ ರಾಜಕಾರಣದ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಸುನೀಲ ಹನುಮಣ್ಣವರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಉಪಾಧ್ಯಕ್ಷರಾದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಆಗಿದ್ದೆವು ಅಷ್ಟೇ ಎಂದಿರುವ ಸತೀಶ ಜಾರಕಿಹೊಳಿ, ನೀವು ಕೆಪಿಸಿಸಿ ಅಧ್ಯಕ್ಷರಾಗುತ್ತೀರೆಂಬ ಚರ್ಚೆ ಜೋರಾಗಿದೆ ಎಂಬ ಪ್ರಶ್ನೆಗೆ, ಆರು ಕೋಟಿ ಜನಸಂಖ್ಯೆ ಇದೆ. ಜನರು ಚರ್ಚೆ ಮಾಡುತ್ತಾರೆ. ಚರ್ಚೆಗೆ ಯಾವುದೇ ಕಡಿವಾಣ ಇಲ್ಲ. ಆ ವಿಚಾರವನ್ನು ಪಕ್ಷ ತೀರ್ಮಾನ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

> 28 ಕೃಷ್ಣಮೃಗಗಳು ಮೃತಪಟ್ಟಿದ್ದು, ಈಗಾಗಲೇ ಅರಣ್ಯ ಸಚಿವರು ತನಿಖೆಗೆ ಆದೇಶಿಸಿದ್ದಾರೆ. ವರದಿ ಬಂದ ಮೇಲೆ ಯಾರ ಮೇಲೆ ಕ್ರಮ ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಅಲ್ಲಿಯವರೆಗೂ ಕಾಯಬೇಕು.
>
> **-ಸತೀಶ್ ಜಾರಕಿಹೊಳಿ, ಸಚಿವ**

ಕಾರಿಗೆ ಕಾಡಾನೆ ಡಿಕ್ಕಿ: ಕಾರು ಜಖಂ

ಚಿಕ್ಕಮಗಳೂರು: ರಸ್ತೆ ದಾಟುತ್ತಿದ್ದ ಕಾಡಾನೆಗೆ ಕಾರು ಡಿಕ್ಕಿಯಾಗಿ ಕಾರಿನ ಮೇಲೆ ಬಿದ್ದ ಪರಿಣಾಮ ಕಾರಿನ ಮುಂಭಾಗ ಸಂಪೂರ್ಣ ಜಖಂಗೊಂಡಿರುವ ಘಟನೆ ಚಿಕ್ಕಮಗಳೂರು ಜಿಲ್ಲೆ ಎನ್.ಆರ್.ಪುರ ತಾಲೂಕಿನ 9ನೇ ಮೈಲಿಗಲ್ಲಿನ ಸಮೀಪದ ಬುಡಗಮನೆ ಗ್ರಾಮದ ಬಳಿ ನಡೆದಿದೆ. ಎರಡು ಕಾಡಾನೆಗಳು ರಸ್ತೆ ದಾಟಲು ಮುಂದಾಗಿದ್ದ ವೇಳೆ ತಿರುವಿನಲ್ಲಿ ಆನೆಯೊಂದಕ್ಕೆ ಕಾರು ಡಿಕ್ಕಿ ಹೊಡೆದಿದೆ. ಕಾರು ಆನೆಗೆ ಡಿಕ್ಕಿ ಹೊಡೆದ ಪರಿಣಾಮ ಆನೆ ಕಾರಿನ ಮೇಲೆಯೇ ಬಿದ್ದಿದೆ. ಇದರಿಂದ ಕಾರಿನ ಮುಂಭಾಗ ಬಹುತೇಕ ಜಖಂಗೊಂಡಿದೆ. ಗಾಯಗೊಂಡ ಕಾಡನೇ ಆತಂಕದಿಂದ ಕಾಡಿನೊಳಗೆ ಓಡಿ ಹೋಗಿದೆ. ಕಾರಿನಲ್ಲಿ ಮೂವರು ಯುವಕರು ಪ್ರಯಾಣಿಸುತ್ತಿದ್ದು ತಿರುವಿನಲ್ಲಿ ಆನೆಯನ್ನು ನೋಡಿದ ಕೂಡಲೇ ಹುಡುಗರು ಗಾಬರಿಗೊಂಡು ಆನೆಗೆ ಡಿಕ್ಕಿ ಹೊಡೆಸಿದ್ದಾರೆ. ಅದೃಷ್ಟವಶಾತ್ ಆನೆಯೂ ಗಾಬರಿಯಾಗಿ ಪ್ರತಿರೋಧ ತೋರದ ಕಾರಣ ಯುವಕರು ಅನಾಹುತದಿಂದ ಪಾರಾಗಿದ್ದಾರೆ.

ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಮೂವರ ವಿರುದ್ಧ ಪ್ರಕರಣ

ಬಾಗಲಕೋಟೆ: ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿನ ನ.13 ರಂದು ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ ಹಾಗೂ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾಲಿಂಗಾಪುರ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

> ರೈತರ ಹೋರಾಟದ ವೇಳೆ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿ ದಾಂಧಲೆ

ಹೋರಾಟದ ಮುಂದಾಳತ್ವ ವಹಿಸಿದ್ದ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬಸವಂತಪ್ಪ ಕಾಂಬಳೆ, ಸುಭಾಷ್ ಶಿರಬೂರ, ಈರಪ್ಪ ಹಂಚಿನಾಳ, ಮುತ್ತಪ್ಪ ಕೋಮಾರ, ಹನುಮಂತ ಗೌಡ ಪಾಟೀಲ, ದುಂಡಪ್ಪ ಯರಗಟ್ಟಿ, ಬಸಪ್ಪ ಸಂಗಣ್ಣವರ, ಸುರೇಶ ಚಿಂಚಲಿ, ಸದಾಶಿವ ಸಕರೆಡ್ಡಿ, ರಾಚಪ್ಪ ಕಲ್ಲೊಳ್ಳಿ, ಗಂಗಾಧರ ಮೇಟಿ, ಮಹೇಶಗೌಡ ಪಾಟೀಲ್, ಹನುಮಂತ ನಬಾಬ್ ಸೇರಿದಂತೆ 17 ಜನರ ವಿರುದ್ಧ ಸಾರ್ವ ಜನಿಕ ಆಸ್ತಿ ಹಾನಿಯಡಿ ತೇರದಾಳ ಪಿಎಸ್‌ಐ ಶಿವಾನಂದ ಸಿಂಗನ್ನವರ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದೆ. ಕಾರ್ಖಾನೆ ಸಿಬ್ಬಂದಿ ಯಾದ ಮಲ್ಲಿಕಾರ್ಜುನ ಗುಗ್ಗರಿ ಎಂಬುವವರು ಕಾರ್ಖಾನೆಯ ಆವರಣದೊಳಗೆ 100-150 ಅಪರಿಚಿತರು ನುಗ್ಗಿ ಕಬ್ಬು ತುಂಬಿದ ಟ್ರ್ಯಾಕ್ಟರ್ ಹಾಗೂ ಬೈಕ್‌ಗಳಿಗೆ ಬೆಂಕಿ ಹಚ್ಚಿ ಕಲ್ಲು ತೂರಾಟ ನಡೆಸಿದ್ದಾರೆ ಎಂದು ಪ್ರಕರಣ ದಾಖಲಿಸಿದ್ದಾರೆ.

ಎಫ್‌ಐಆರ್‌ನಲ್ಲಿ 150 ಮಂದಿ ಉಲ್ಲೇಖ

ಕರ್ತವ್ಯನಿರತ ಹೆಚ್ಚುವರಿ ಎಸ್ಪಿ ಮಹಾಂತೇಶ್ವರ ಜಿದ್ದಿ, ಬನಹಟ್ಟಿ ಸಿಪಿಐ ಎಚ್.ಆರ್.ಪಾಟೀಲ, ತೇರದಾಳ ಪಿಎಸ್‌ಐ ಶಿವಾನಂದ ಸಿಂಗನವರ ಕರ್ತವ್ಯದ ಮೇಲೆ ಇದ್ದಾಗ ತಳ್ಳಾಟ, ನೂಕಾಟ ನಡೆಸಿ, ಅವರ ಮೇಲೆ ಕಲ್ಲು ತೂರಾಟ ನಡೆಸಿ ಕೊಲೆ ಮಾಡಲು ಯತ್ನಿಸಿದ್ದಾಗಿ ಮಹಾಲಿಂಗಪುರ ಪಿಎಸ್‌ಐ ಕಿರಣ ಸತ್ತಿಗೇರಿ ಎಂಬುವರು ದೂರು ದಾಖಲಿಸಿದ್ದಾರೆ. ಪ್ರಭು ತಂಬೂರಿ, ಯಂಕಪ್ಪ ಕೇದಾರಿ, ವಿಠಲ ಹೊಸಮನಿ, ದಸ್ತಗಿರಿ ಸಾಬ್ ನದಾಫ್, ಶಿವಲಿಂಗ ಶಿಂಧೆ ಸೇರಿದಂತೆ 150 ಜನರಿದ್ದರು ಎಂದು ಎಫ್‌ಆರ್‌ಐನಲ್ಲಿ ಉಲ್ಲೇಖಿಸಲಾಗಿದೆ.

ರಾಹುಲ್ ಪಾರ್ಟ್‌ಟೈಂ ರಾಜಕಾರಣಿ: ಅಶೋಕ್

ಚಾಮರಾಜನಗರ: ರಾಹುಲ್ ಗಾಂಧಿ ಒಬ್ಬ ಪಾರ್ಟ್‌ಟೈಂ ರಾಜಕಾರಣಿ. ಚುನಾವಣೆ ವೇಳೆ ಚುನಾವಣೆ ನಂತರ ವಿದೇಶ ಪ್ರವಾಸ ಮಾಡುತ್ತಾರೆ. ದೇಶ -ವಿದೇಶ ಸುತ್ತುವುದೇ ಇವರ ಕೆಲಸ ಎಂದು ರಾಹುಲ್ ಗಾಂಧಿ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ ಕಿಡಿಕಾರಿದರು.

> ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಸಾಧ್ಯತೆ: ಅಶೋಕ್

ಸುದ್ದಿಗಾರರ ಜತೆ ಮಾತನಾಡಿದ ಅವರು, ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಮಾತ್ರ ಇವಿಎಂ ಸರಿಯಾಗಿರುತ್ತೆ. ಬಿಜೆಪಿ ಅಥವಾ ಬೇರೆ ಪಕ್ಷ ಗೆದ್ದರೆ ಇವಿಎಂನಲ್ಲಿ ಮೋಸ ಆಗಿರುತ್ತೆ. ಇವರ ಮತ ಚೋರಿ ಸುಳ್ಳಿನ ಕಂತೆಯನ್ನು ದೇಶದ ಜನ ಒಪ್ಪಿಲ್ಲ. ಗಾಂಧಿ ಕುಟುಂಬದ ಆಟ ಯಾವುದೇ ಕಾರಣಕ್ಕೂ ನಡೆಯುವುದಿಲ್ಲ ಎಂದು ಟೀಕಿಸಿದರು.

ಬಿಹಾರ ವಿಧಾನಸಭೆ ಚುನಾವಣೆ ನಂತರ ರಾಹುಲ್ ಗಾಂಧಿ ಶೂನ್ಯವಾಗಿದ್ದಾರೆ. ಇನ್ಮೇಲೆ ರಾಜ್ಯದಲ್ಲಿ ಏನಿದ್ದರೂ ಸಿಎಂ ಸಿದ್ದರಾಮಯ್ಯರದ್ದೆ ಪ್ರಾಬಲ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅಸ್ತ್ರ ಬಿಹಾರ ಚುನಾವಣೆ ಯಲ್ಲಿ ವರ್ಕೌಟ್ ಆಗಿಲ್ಲ. ಬಿಹಾರ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್‌ನ ಎಲ್ಲ ಲೆಕ್ಕಾಚಾರಗಳು ಉಲ್ಟಾ ಆಗಿವೆ. ಕರ್ನಾಟಕದಲ್ಲಿ ಮಾತ್ರ ಕಾಂಗ್ರೆಸ್ ಸರಕಾರದ ಪ್ರಾಬಲ್ಯವಿದೆ. ಚುನಾವಣೆಯ ಪಲಿತಾಂಶ ಬಳಿಕ ಸಿಎಂ ಸಿದ್ದರಾಮಯ್ಯ ವರ್ಚಸ್ಸು ದುಪ್ಪಟ್ಟಾಗಿದೆ. ಸಿಎಂ ಕುರ್ಚಿನ ಸಿದ್ದರಾಮಯ್ಯ ಬಿಟ್ಟು ಕೊಡಲ್ಲ. ಡಿಕೆ ಶಿವಕುಮಾರ್ ಸುಮ್ನೆ ಇರೋಲ್ಲ. ಇವರಿಬ್ಬರ ತಿಕ್ಕಾಟದ ಮಧ್ಯ ಸರಕಾರ ಬಿದ್ದು ಹೋಗುತ್ತದೆ. ರಾಜ್ಯದಲ್ಲಿ ಮಧ್ಯಂತರ ಚುನಾವಣೆ ನಡೆಯಲಿದೆ ಎಂದು ಭವಿಷ್ಯ ನುಡಿದರು.

ಕಾಡಂಚಿನ ಗ್ರಾಮಸ್ಥರಿಗೆ ಮಾಸ್ಕ್ ವಿತರಿಸಿದ ಅರಣ್ಯ ಇಲಾಖೆ

ಹುಲಿ ದಾಳಿಯಿಂದ ಬಚಾವ್ ಆಗಲು ಮಾಸ್ಕ್

ಮೈಸೂರು: ಬಂಡೀಪುರ ಮತ್ತು ನಾಗರಹೊಳೆ ಹುಲಿ ಮೀಸಲು ಪ್ರದೇಶಗಳ ಗಡಿಯಲ್ಲಿರುವ ಹಳ್ಳಿಗಳಲ್ಲಿ ಹೆಚ್ಚುತ್ತಿರುವ ಮನುಷ್ಯ-ಹುಲಿ ಸಂಘರ್ಷವನ್ನು ಪರಿಹರಿಸಲು, ಅರಣ್ಯ ಅಧಿಕಾರಿಗಳು ಪಶ್ಚಿಮ ಬಂಗಾಳದ ಸುಂದರ್ ಬನ್ಸ್‌ನಲ್ಲಿರುವ ಸಮುದಾಯಗಳಿಂದ ಪ್ರೇರಿತವಾದ ವಿಶಿಷ್ಟ ತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಸುಂದರ್ ಬನ್ ಕಾಡಿನಲ್ಲಿ ಹುಲಿ ದಾಳಿಯನ್ನು ತಡೆಯಲು ಜನರು ತಲೆಯ ಹಿಂಭಾಗದಲ್ಲಿ ಮುಖವಾಡಗಳನ್ನು ಧರಿಸುತ್ತಾರೆ. ರಾಜ್ಯ ಅರಣ್ಯ ಇಲಾಖೆ ಸದ್ಯ ಈ ಕ್ರಮವನ್ನು ಅನುಕರಣೆ ಮಾಡಿದ್ದು, ಮೈಸೂರು ಜಿಲ್ಲೆ ಸೇರಿ ಹಲವು ಕಡೆ ಕಾಡಾಂಚಿನ ಗ್ರಾಮಗಳಲ್ಲಿ ಮಾಸ್ಕ್‌ಗಳನ್ನು ವಿತರಣೆ ಮಾಡುತ್ತಿದ್ದಾರೆ.

ಇತ್ತೀಚೆಗೆ ಮೂವರು ರೈತರು ಮೈಸೂರು ಜಿಲ್ಲೆಯಲ್ಲಿ ಹುಲಿದಾಳಿಯಿಂದ ಮೃತಪಟ್ಟಿದ್ದರು. ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡರು. ನಿರಂತರ ತಪಾಸಣೆ ಕಾರ್ಯಾಚರಣೆಗಳು ಮತ್ತು ಮರಿಗಳು ಸೇರಿದಂತೆ ಸುಮಾರು 10 ಹುಲಿಗಳನ್ನು ಸೆರೆಹಿಡಿಯಲಾಗಿದ್ದರೂ, ಗ್ರಾಮಸ್ಥರಿಗೆ ಹುಲಿ ಕಾಣಿಸಿಕೊಳ್ಳುತ್ತಲೇ ಇದೆ. ಕೃಷಿ ಅಥವಾ ಜಾನುವಾರು ಮೇಯಿಸಲು ತಮ್ಮ ಹೊಲಗಳಿಗೆ ಹೋಗಲು ಭಯಪಡುತ್ತಿದ್ದಾರೆ.

ಅರಣ್ಯ ಸಿಬ್ಬಂದಿ ಕಾಡಿನ ಬದಿಯ ಹಳ್ಳಿಗಳಿಗೆ ಭೇಟಿ ನೀಡಿ, ಕೃಷಿ ಮತ್ತು ಜಾನುವಾರು ಸಾಕಣೆಯಲ್ಲಿ ತೊಡಗಿರುವವರಿಗೆ ಮಾಸ್ಕ್‌ಗಳನ್ನು ವಿತರಿಸುತ್ತಿದ್ದಾರೆ. ಅವುಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಜನರು ಜಾಗರೂಕರಾಗಿರುವುದನ್ನು ಮತ್ತು ಹೊರಗೆ ಕಾಲಿಟ್ಟಾಗಲೆಲ್ಲಾ ಮಾಸ್ಕ್‌ಗಳನ್ನು ಧರಿಸುವುದನ್ನು ಖಚಿತಪಡಿಸಿಕೊಳ್ಳಲು ಆಟೋರಿಕ್ಷಾಗಳ ಮೂಲಕವೂ ಪ್ರಕಟಣೆಗಳನ್ನು ಹೊರಡಿಸಲಾಗುತ್ತಿದೆ ಎಂದರು. ಮಾಸ್ಕ್‌ಗಳ ಜತೆಗೆ, ಕಾಡು ಪ್ರಾಣಿಗಳ ಮುಖಾಮುಖಿಯ ಸಮಯದಲ್ಲಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದನ್ನು ಪಟ್ಟಿ ಮಾಡುವ ಕರಪತ್ರಗಳನ್ನು ಅರಣ್ಯ ಸಿಬ್ಬಂದಿ ಹಂಚುತ್ತಿದ್ದಾರೆ. ಹಲವಾರು ಹಳ್ಳಿಗಳಲ್ಲಿ ಸ್ವಯಂ ರಕ್ಷಣಾ ತಂತ್ರಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಸಹ ನಡೆಸಲಾಗುತ್ತಿದೆ.

ಆಯೋಗ ದುರುಪಯೋಗ ಮೇಲ್ನೋಟಕ್ಕೆ ಸಾಬೀತು: ಎಂ.ಬಿ.ಪಾಟೀಲ

ಸಂವಿಧಾನಕ್ಕಿಂತ ಚುನಾವಣಾ ಆಯೋಗ ದೊಡ್ಡದಲ್ಲ

ವಿಜಯಪುರ: ವೋಟ್ ಚೋರಿ ಮೊದಲಾದ ಗಂಭೀರ ಪ್ರಕರಣಗಳ ಬಗ್ಗೆ ತನಿಖೆ ಮಾಡಲು ಆಸಕ್ತಿ ತೋರದ ಚುನಾವಣಾ ಆಯೋಗದ ನಡವಳಿಕೆಗಳಿಂದ ಕೇಂದ್ರ ಸರಕಾರ ಚುನಾವಣಾ ಆಯೋಗವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಮೇಲ್ನೋಟಕ್ಕೆ ಸಾಬೀತಾಗುತ್ತಿದೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆ ಪ್ರತಿಪಕ್ಷ ನಾಯಕರಾಗಿರುವ ರಾಹುಲ್ ಗಾಂಧೀ ಅವರ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಬೇಕಾದ ಚುನಾವಣಾ ಆಯೋಗ ಅವರಿಗೆ ಅಫಿಡವಿಟ್ ಕೇಳಿದೆ. ಸಂವಿಧಾನ ಬದ್ಧವಾಗಿ ಪ್ರತಿಜ್ಞೆ ಸ್ವೀಕರಿಸಿಯೇ ಅವರು ಸಂಸದರಾಗಿದ್ದಾರೆ. ಪ್ರತಿಜ್ಞೆ ಸ್ವೀಕರಿಸಿಯೇ ಲೋಕಸಭೆ ಪ್ರತಿಪಕ್ಷ ನಾಯಕರಾಗಿದ್ದಾರೆ. ಚುನಾವಣಾ ಆಯೋಗ ಸಂವಿಧಾನಕ್ಕಿಂತ ದೊಡ್ಡದಲ್ಲ. ಅಫಿಡವಿಟ್ ಸಲ್ಲಿಸುವ ನಿಯಮಾವಳಿ ಇಲ್ಲ. ಹೀಗಾಗಿ ಸಲ್ಲಿಸಿಲ್ಲ ಎಂದರು. ಗಂಭೀರವಾದ ಆರೋಪಗಳ ಬಗ್ಗೆ ಚುನಾವಣಾ ಆಯೋಗ ತನಿಖೆ ನಡೆಸಬೇಕಾಗಿರುವುದು ಅಗತ್ಯವಾಗಿದೆ. ಬಿಹಾರ್ ಚುನಾವಣೆಯಲ್ಲಿ ಹೀನಾಯ ಸೋಲಿಗೆ ಕಾರಣಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸಂಶೋಧನಾ ತಂಡ ಅಧ್ಯಯನ ನಡೆಸುತ್ತಿದೆ. ಚುನಾವಣಾ ಪೂರ್ವದಲ್ಲಿಯೇ ಸರಕಾರಿ ಹಣವನ್ನೇ ಜನರ ಖಾತೆಗೆ ಜಮಾವಣೆ ಮಾಡಿದ್ದು, ಸಹ ಸೋಲಿಗೆ ಕಾರಣ ಎಂದು ವಿಶ್ಲೇಷಿಸಬಹುದಾಗಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ವಿಶೇಷವಾಗಿ ಕಬ್ಬು ಬೆಳೆಗಾರರ ಬಗ್ಗೆ ಚರ್ಚಿಸಲಿದ್ದಾರೆ. ಕೇಂದ್ರ ರೂಪಿಸಿರುವ ಎಫ್‌ಆರ್‌ಪಿ ದರದಿಂದ ರೈತರಿಗೆ ಅನ್ಯಾಯವಾಗುತ್ತದೆ. ಕಬ್ಬು ಕಟಾವು, ಸಾಗಾಣಿಕೆ ವೆಚ್ಚ ಸೇರಿ 3500 ರು. ನಿಗದಿ ಮಾಡಿರುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಇದರ ಪರಿಷ್ಕರಣೆ ಮೊದಲಾದ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದರು.

ನವೆಂಬರ್ ಡಿಸೆಂಬರ್ ಕ್ರಾಂತಿ ಯಾರಿಗೂ ಗೊತ್ತಿಲ್ಲ

ನವೆಂಬರ್ ಕ್ರಾಂತಿಯೋ, ಡಿಸೆಂಬರ್ ಕ್ರಾಂತಿಯೋ ಯಾವುದೋ ನಮಗೆ ಗೊತ್ತಿಲ್ಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ, ನಾನು ಸೇರಿದಂತೆ ಎಲ್ಲರೂ ಪಕ್ಷದ ಕಾರ್ಯಕರ್ತರು, ಸಚಿವ ಸಂಪುಟ ವಿಸ್ತರಣೆ, ಪುನರ್ ರಚನೆ ಎಲ್ಲವೂ ಹೈಕಮಾಂಡ್‌ಗೆ ಬಿಟ್ಟ ವಿಷಯ. ಈ ಬಗ್ಗೆ ನನಗೆ ಗೊತ್ತಿಲ್ಲ. ಸಲೀಂ ಅಹ್ಮದ್ ಸೇರಿದಂತೆ ಎಲ್ಲರೂ ಸಚಿವರಾಗಲು ಅರ್ಹರು, ಅವರು ಪಕ್ಷಕ್ಕೆ ದುಡಿದಿದ್ದಾರೆ. ಸಚಿವ ಸ್ಥಾನ ಅಪೇಕ್ಷಿಸುತ್ತಿರುವಲ್ಲಿ ತಪ್ಪಿಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ಪುನರುಚ್ಚರಿಸಿದರು.

ಮುಡಾ ವಿವಾದ: ಏಳು ಅಧಿಕಾರಿಗಳ ವಿಚಾರಣೆಗೆ ಅವಕಾಶ ಕೋರಿ ಪತ್ರ

ಮೈಸೂರು: ಮುಡಾ ಭೂಸ್ವಾಧೀನ ಪ್ರಕರಣ ಸಂಬಂಧ 2016ರಿಂದ 2024ರವರೆಗೆ ಕರ್ತವ್ಯ ಲೋಪ ಎಸಗಿರುವ ಏಳು ಅಧಿಕಾರಿಗಳನ್ನು ತನಿಖೆಗೊಳಪಡಿಸಲು ಅನುಮತಿ ನೀಡುವಂತೆ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರು ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದು ಅನುಮತಿ ಕೋರಿದ್ದಾರೆ.

ಬೆಲವತ್ತ ಗ್ರಾಮದ ಸರ್ವೆ ನಂಬರ್ 20/1, ಕ್ಯಾತಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 192, ಹೆಬ್ಬಾಳು ಗ್ರಾಮದ ಸರ್ವೆ ನಂಬರ್ 88/2, ಕೆಸರೆ ಗ್ರಾಮದ ಸರ್ವೆ ನಂಬರ್ 648 ಹಾಗೂ ಈರನಗೆರೆ ಗ್ರಾಮದ ಸರ್ವೆ ನಂಬರ್ 14/ಬಿ ಗೆ ಸಂಬಂಧಿಸಿದಂತೆ ಕಡತಗಳ ದಾಖಲಾತಿಗಳನ್ನು ಪರಿಶೀಲನೆ ನಡೆಸಿದ್ದೇನೆ ಎಂದು ಭೂಸ್ವಾಧೀನ ಪ್ರಕರಣದ ಬಗ್ಗೆ ಪತ್ರದಲ್ಲಿ ಮಾಹಿತಿ ನೀಡಿದ್ದಾರೆ. ಜಮೀನು ಮಾಲೀಕರೊಂದಿಗೆ ಮಾಡಿಕೊಂಡಿರುವ ಪರಸ್ಪರ ಒಪ್ಪಂದದ ಪಟ್ಟಿ, ಯುಎಲ್‌ಪಿ ಪಟ್ಟಿ ಹಾಗೂ ಪರಿಹಾರ ಪಾವತಿ ವಹಿಗಳ ಪ್ರತಿಗಳನ್ನು ದೃಢೀಕರಿಸಿ ಪ್ರತಿ ಒದಗಿಸುವಂತೆ ಕೋರಲಾಗಿದೆ.

ಈ ಪ್ರಕರಣ ಸಂಬಂಧ ಮುಡಾದಲ್ಲಿ 2016 ರಿಂದ 2024 ರವರೆಗೆ ಕರ್ತವ್ಯ ನಿರ್ವಹಿಸಿದ ಏಳು ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿದ್ದಾರೆ. ಮುಡಾ ಭೂ ಮಾಪಕರಾದ ಕಾವೇರಿಗೌಡ, ಎನ್.ಟಿ. ಹನುಮೇಗೌಡ, ವಿಶೇಷ ಭೂಸ್ವಾಧೀನಾಧಿಕಾರಿ ವಿಷ್ಣುವರ್ಧನ ರೆಡ್ಡಿ, ವಿಷಯ ನಿರ್ವಾಹಕ ದರ್ಶನ್, ವ್ಯವಸ್ಥಾಪಕಿ ಶೃತಿ, ಅಧೀಕ್ಷಕ ಇಂಜಿನಿಯರ್ ಚನ್ನಕೇಶವ, ಎಸ್‌ಡಿಎ ಸಚಿನ್ ಅವರ ಕರ್ತವ್ಯ ಲೋಪದ ಬಗ್ಗೆ ವಿಚಾರಣೆ ನಡೆಸುವಂತೆ ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕರಿಗೆ ಲೋಕಾಯುಕ್ತ ಎಸ್ಪಿ ಉದೇಶ್ ಅವರು ಪತ್ರ ಬರೆದು ಅನುಮತಿ ಕೋರಿದ್ದಾರೆ. ಈಗ ಲೋಕಾಯುಕ್ತ ಪೊಲೀಸ್ ಮಹಾ ನಿರ್ದೇಶಕರು ಸರಕಾರದ ಅನುಮತಿ ಕೋರಲಿದ್ದಾರೆ. ತರುವಾಯ ಸರಕಾರದ ತೀರ್ಮಾನದ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ನಿರೀಕ್ಷೆ ಇದೆ.

ಕನ್ನಡ ರಾಜ್ಯೋತ್ಸವ ಕಾರ್ಯಮ್ರಮದಲ್ಲಿ ಸಿ.ಸೋಮಶೇಖರ್‌ರಿಂದ ಪಾಲನೇತ್ರ ಅಭಿನಂದನೆ

ಹೋರಾಟಗಳಿಂದಾಗಿ ಕನ್ನಡ ಅಸ್ಮಿತೆ

ಬೆಂಗಳೂರು: ಕನ್ನಡ ಚಳವಳಿಗಳ ಹೋರಾಟದಿಂದ ನಮ್ಮ ರಾಜ್ಯದಲ್ಲಿ ನೈಜ ಭಾಷ ಅಸ್ಮಿತೆ ಉಳಿಯಲು ಸಾಧ್ಯವಾಗಿದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ. ಸೋಮಶೇಖರರವರು ಅಭಿಪ್ರಾಯಪಟ್ಟರು.

ಸರ್.ಎಂ.ವಿ. ಬಡಾವಣೆಯ ಶಿವಗಂಗಾ ರಂಗಮಂದಿರದಲ್ಲಿ ರಂಗಮಂಡಲ, ಶುಭದ ಚಾರಿಟೇಬಲ್ ಟ್ರಸ್ಟ್, ಅಕ್ಷಯ ಸೇವಾ ಫೌಂಡೇಶನ್, ಸ್ನೇಹ ಸೇವಾ ಫೌಂಡೇಶನ್ ಸಹಯೋಗದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ, ಕನ್ನಡ ಚಳುವಳಿಗಾರ ಪಾಲನೇತ್ರ ಅಭಿನಂದನೆ ಹಾಗೂ ಕನ್ನಡ ಚಳುವಳಿ ಕುರಿತಾದ ವಿಚಾರ ಸಂಕಿರಣದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಾಲನೇತ್ರಾರಂತಹ ಕನ್ನಡಪರ ನೈಜ ಹೋರಾಟ ಮತ್ತು ಚಳುವಳಿಗಳಿಂದ ಕನ್ನಡದ ಅಸ್ಮಿತೆ ಹಾಗೂ ಅಸ್ತಿತ್ವ ಉಳಿದಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ನೆಲಮಂಗಲ ಪವಾಡ ಶ್ರೀಬಸವಣ್ಣ ದೇವರ ಮಠದ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿ, ಕನ್ನಡದ ಉಳಿವಿಗೆ ಹಾಗೂ ಕರ್ನಾಟಕದ ಏಳಿಗೆಗೆ ಅರ್ಥಪೂರ್ಣಕಾರ್ಯಕ್ರಮಗಳ ಆಚರಣೆಗಳ ಮೂಲಕ ಶ್ರಮಿಸಬೇಕು, ಅಲ್ಲದೇ ಪಾಲನೇತ್ರರಂತಹ ನೈಜ ಕನ್ನಡ ಹೋರಾಟಗಾರರನ್ನು ಗುರುತಿಸಿ ಗೌರವಿಸುವ ಮೂಲಕ ಅವರ ಸೇವೆಯನ್ನು ಸ್ಮರಿಸಬೇಕು, ಈ ನಿಟ್ಟಿನಲ್ಲಿ ಕಾರ್ಯಕ್ರಮ ಸಾರ್ಥಕಗೊಂಡಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕನ್ನಡ ಹೋರಾಟಗಾರರಾದ ಪಾಲನೇತ್ರಾರವನ್ನು ಅಭಿನಂದಿಸಲಾಯಿತು.ಈ ಸಂದರ್ಭದಲ್ಲಿ ಎಚ್‌ಎಸ್ ಸುಧೀಂದ್ರ ಕುಮಾರ್ ಅವರು ಕನ್ನಡದ ಸ್ಥಿತಿಗತಿ ಬಗ್ಗೆ ವಿಷಯ ಮಂಡಿಸಿದರು. ಜನಪರ ಹೋರಾಟಗಾರ ಕ್ರಾಂತಿ ರಾಜು, ರಂಗ ಸಂಘಟಕರಾದ ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಪ್ರಶಾಂತ ಶುಭದ, ಅಕ್ಷಯ್ ಸೇವಾ ಫೌಂಡೇಶನ್ ಅಧ್ಯಕ್ಷರಾದ ಡಾ.ಎಸ್.ಎಸ್ .ಹಿರೇಮಠ, ಚಲನಚಿತ್ರ ನಟ ಆಸ್ಕರ್ ಕೃಷ್ಣ, ಬಡಾವಣೆ ಅಧ್ಯಕ್ಷರಾದ ರಮೇಶ್ ಎನ್, ಲಕ್ಷ್ಮಿ ಎಚ್ ಎನ್, ಸಂಗೀತವೇದಿ, ಸಿ.ಆರ್ ಶಿವಾನಂದ್, ಕವಿಗಳಾದ ಗುಂಡಿಗೆರೆ ವಿಶ್ವನಾಥ್ ಮುಂತಾದವರು ಉಪಸ್ಥಿತರಿದ್ದರು.

ಕೌಟುಂಬಿಕ ಕಲಹ: ದಂಪತಿ ನೇಣಿಗೆ ಶರಣು



ಬಳ್ಳಾರಿ: ಕೌಟುಂಬಿಕ ಕಲಹದಿಂದಾಗಿ ಪತಿ -ಪತ್ನಿ ಇಬ್ಬರೂ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕಿನ ದೊಡ್ಡ ರಾಜ್ ಕ್ಯಾಂಪ್‌ನಲ್ಲಿ ನಡೆದಿದೆ. ಪತಿ ಅಂಬರೀಶ್ (24) ಹಾಗೂ ಪತ್ನಿ ಶೃತಿ (20) ಆತ್ಮಹತ್ಯೆ ಮಾಡಿಕೊಂಡವರು. ಮನೆಯಲ್ಲೆ ಇಬ್ಬರೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಬರೀಶ್ ಹಾಗೂ ಶೃತಿ ಒಂದು ವರ್ಷದ ಹಿಂದಷ್ಟೇ ಮದ್ವೆ ಆಗಿದ್ರು. ಇಬ್ಬರ ಮಧ್ಯೆ ಜಗಳವಾಗಿತ್ತು ಎನ್ನಲಾಗಿದೆ. ಈ ಸಂಬಂಧ ಸಿರಿಗೇರಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

ಹನಿಗವನಗಳು

● ನಿಂಗಮ್ಮ ಭಾವಿಕಟ್ಟಿ, ಹುನಗುಂದ

ಛೇ!

ಜೀವನಪೂರ್ತಿ
ಹೊಂದಿಕೊಂಡಿದ್ದೇ ಆಯ್ತು
ನನ್ನೊಂದಿಗೆ ನಾ
ಇರಲು ಬಯಸಿದೆ
ಕಾಲ ಮಿಂಚಿಹೋಗಿತ್ತು.

ಕೊನೆ

ಅವನಿಗೆಂದು
ಎಷ್ಟು ಕಥೆ ಬರೆದೆ,
ಓದಿರಲಿಲ್ಲ
ಮೆಚ್ಚಿ ಫೋನಾಯಿಸಿದ
ಕೊನೆ ಮೆಟ್ಟಿಲೇರಿದ್ದೆ.

ಚೆನ್ನ

ಕಳಿಸುತ್ತಾನೆ
ತಾನು ಬಾರದಿದ್ದರೂ
ನೆನಪುಗಳ
ತಂಗಾಳಿಯ ಜತೆಗೆ
ಅವಗಿಂತವೇ ಚೆನ್ನ.

ಕಾರಣ

ಯಾರೂ ಹೇಳದ
ಎಂದೂ ಕೇಳದ ಮಾತಿಗೆ
ಹೃದಯ ಬೆಚ್ಚಿ
ಹೊಡೆದುಕೊಂಡ ಸದ್ದು
ಸದ್ಯ ಯಾರಿಗೂ ಕೇಳಿಲ್ಲ

ಧರ್ಮರಕ್ಷಣೆ

ಧರ್ಮರಕ್ಷಣೆ
ಬಡವರಿಗೆ ಪ್ರೀತಿ
ಸಮಯವಿಲ್ಲ
ಶ್ರೀಮಂತ ಜನರಿಗೆ
ಹೊಡೆದಾಟ, ಜೈಲಿಗೆ.

ಕಸ್ತೂರಿಕನ್ನಡ

● ಸುರೇಶ್ ಬಾಲಚಂದ್ರನ್

ಅಭಿಮಾನವಿರಲಿ ನಮ್ಮ ಭಾಷೆ ಕನ್ನಡ
ಹೆಮ್ಮೆರವಾದ ಶಾಸ್ತ್ರೀಯ ಭಾಷೆ ಕನ್ನಡ

ಲಿಪಿಗಳ ರಾಣಿ ಚೆಂದದ ಭಾಷೆ ಕನ್ನಡ
ಸಂಸ್ಕೃತಿಯ ಬೆಸೆವ ಸವಿಭಾಷೆ ಕನ್ನಡ

ಸಾಹಿತ್ಯಕ್ಕೆ ತಕ್ಕದಾದ ಸಿಹಿಭಾಷೆ ಕನ್ನಡ
ನಿತ್ಯನೂತನ ಹೆಮ್ಮೆಯ ಭಾಷೆ ಕನ್ನಡ

ಕಾಲಪ್ರವಾಹಕ್ಕೆ ಬಗ್ಗದ ಗಟ್ಟಿಭಾಷೆ ಕನ್ನಡ
ವಿಶ್ವತೋಮುಖಿವಾಗಿ ಬೆಳೆದ ಭಾಷೆ ಕನ್ನಡ

ಕಸ್ತೂರಿ ಪರಿಮಳ ಸೂಸುವ ಭಾಷೆ ಕನ್ನಡ
ಮನೆ-ಮನಗಳ ಸಂವಹನಕ್ಕೆ ಭಾಷೆ ಕನ್ನಡ

ಎಲ್ಲಿದ್ದರೇನು ನೆನಪಿರಲಿ ತಾಯಿಭಾಷೆ ಕನ್ನಡ
ದುರಭಿಮಾನದಲ್ಲಿ ಕೆಡದಿರಲಿ ಭಾಷೆ ಕನ್ನಡ

ವೈಭವದಿ ಮೆರೆಯುವ ಭಾರತದ ಭಾಷೆ ಕನ್ನಡ
ಬಳಸಿ ಬೆಳೆಸೋಣ ಸುಂದರವಾದ ಭಾಷೆ ಕನ್ನಡ
ಅನುಕ್ಷಣವು ಅಮರವಾದ ನಮ್ಮ ಭಾಷೆ ಕನ್ನಡ

ವೃಕ್ಷಮಾತೆ ತಿಮ್ಮಕ್ಕ

● ಗಿರಿಜಾಶಂಕರ್ ಜಿ.ಎಸ್., ಹೊಸದುರ್ಗ

ಬಿಸಿಲಿಗೆ ಮೈಯೊಡ್ಡಿ
ಮಕ್ಕಳಿಲ್ಲದ ಮನವ ಮರೆತು
ದಾರಿಹೋಕರ ಮನವ ತಣಿಸಿದಾಕೆ
ಬದುಕಿಗಾಸರೆಯಾದ ಸಾಲುಮರದ ತಿಮ್ಮಕ್ಕ.
ಸಮಾಜದ ಕೊಂಕಿಗೆ ಗಟ್ಟಿಗಿತ್ತಿಯಾಗಿ
ಗಿಡಮರಗಳನ್ನು ನಿಸರ್ಗದ ಹಸಿರಾಗಿಸಿ
ಆ ಹಸಿರಿಗೆ ಉಸಿರು ತುಂಬಿದಾಕೆ
ಜೀವದನಿಯಾದ ಸಾಲುಮರದ ತಿಮ್ಮಕ್ಕ.
ಉರಿಬಿಸಿಲಿನ ಹರದಾರಿಗೆ ತಂಪೆರಸಿ
ಮಳೆಯನ್ನು ಜೀವರಾಶಿಗಳ ಚೈತನ್ಯವಾಗಿಸಿ
ಚೈತನ್ಯಕ್ಕೆ ಹನಿಗೂಡಿಸಿದಾಕೆ

ನಾಳೆಗಳನ್ನು ಉಳಿಸಲು ನಮಗಿರುವ ಮಾರ್ಗ

● ಡಾ. ರವಿಶಂಕರ್ ಎ.ಕೆ., ಬೆಂಗಳೂರು

ಭಾರತೀಯ ದರ್ಶನದಲ್ಲಿ ಧರ್ಮವೇ ಸಂಸ್ಕೃತಿ. ಈ ಸಂಸ್ಕೃತಿಯು ಮನುಷ್ಯ ಧರ್ಮದಲ್ಲಿ ಮೂಡಬೇಕಾದರೆ, ಪ್ರಕೃತಿಯ ಕುರಿತು ಮೊದಲು ಆಲೋಚಿಸಬೇಕು. 'ಬೆಳಗಾಗಿ ನಾನೆದ್ದು ಯಾರ‍್ಯಾರ ನೆನೆಯಾಲಿ, ಎಳ್ಳು ಜೀರಿಗೆ ಬೆಳೆಯೋಳ ಭೂಮ್ತಾಯ ಎದ್ದೊಂದು ಗಳಿಗೆ ನೆನೆದೇನ' ಎನ್ನುವ ಸಂಸ್ಕೃತಿಯೇ ಮನುಷ್ಯನ ನಿಜವಾದ ಧರ್ಮ.

ನಾವು ಈ ಭೂಮಿಯನ್ನು ತಾಯಿಗೆ ಹೋಲಿಸಿರುವ ಶ್ರೇಷ್ಠ ಮಣ್ಣಿನವರು. ನಮ್ಮ ಜನಪದರು ಇಡೀ ಪ್ರಪಂಚಕ್ಕೆ, ಕೊಳ್ಳುಬಾಕತನದಿಂದ ಹೊರಬರಲು ಇಂಥ ಶ್ರೇಷ್ಠ ವ್ಯಾಖ್ಯಾನವನ್ನು ನೀಡಿದ್ದಾರೆ. ಮಣ್ಣು, ನೀರು ಮುಂತಾದ ಪಂಚಭೂತಗಳಿಂದ ಈ ಜೀವ ಸೃಷ್ಟಿಯಾಗಿದೆ; ಆದರೆ ಅದೇ ಪಂಚಭೂತಗಳನ್ನು ಮಾರುವ ಮತ್ತು ಕೊಳ್ಳುವ ಸಂಸ್ಕೃತಿ ಸೃಷ್ಟಿಯಾದರೆ, ಅಲ್ಲಿಯ ಧರ್ಮ ಮತ್ತು ಸಂಸ್ಕೃತಿ ನಾಶವಾಗುತ್ತಿದೆ ಎಂದರ್ಥ. ಈ ಕುರಿತಾದ ಒಂದಿಷ್ಟು ಒಳನೋಟಗಳು ಇಲ್ಲಿವೆ:

ರಕ್ತಪಿಪಾಸು ಪ್ರವೃತ್ತಿ

ಪ್ರಭುತ್ವ ಅಥವಾ ಕಾರ್ಪೊರೇಟ್ ಜಗತ್ತು ಸಂಪತ್ತಿನ ಕಡೆಯೇ ಆಲೋಚಿಸುತ್ತವೆ; ಅವಕ್ಕೆ ಬಡವರ ಬೆವರು ಬೇಕೇ ವಿನಾ, ಆ ಬೆವರಿನ ಹಿಂದೆ ಇಂಗಿಹೋಗುತ್ತಿರುವ ರಕ್ತ ಕಾಣುವುದಿಲ್ಲ. 'ರಕ್ತ ಇರುವ ತನಕ ಶ್ರಮಪಡು' ಎಂಬುದೇ ಇವುಗಳ ಧ್ಯೇಯ ವಾಕ್ಯ. ಬಳಸಿ ಬಿಸಾಡುವ ಸಂಸ್ಕೃತಿಯೇ ಎಲ್ಲ ಕಡೆ ಆವರಿಸಿಬಿಟ್ಟರೆ, ಸ್ಥಳೀಯ ಪ್ರಜ್ಞೆಗಳ ಆಲೋಚನೆ ಹೇಗೆ ತಾನೇ ಬಂದೀತು?! ಪಟ್ಟಣ-ನಗರಗಳು ಇಂದು ನಮ್ಮ ಸಂಸ್ಕೃತಿಯನ್ನು ನಾಶಮಾಡುವ, ವಿದೇಶಿ ಆಕರ್ಷಣೆಗಳಿಗೆ ಯುವಜನರನ್ನು ಬಲಿಕೊಡುವ ಯುದ್ಧಭೂಮಿಗಳಾಗಿಬಿಟ್ಟಿವೆ. ಗಂಡು-ಹೆಣ್ಣು ಸಮಾನವಾಗಿ ಸಿಗರೇಟು ಸೇದುತ್ತಾ, ಮದ್ಯದ ಹೊಳೆಯಲ್ಲಿ ತೇಲುತ್ತಾ, ಹೆಸರಿಲ್ಲದ ಸಂಬಂಧಗಳಲ್ಲಿ ಬದುಕುವಂತಾಗುವ ಹೀನ ಸಂಸ್ಕೃತಿಗೆ ಇವು ಮಡಿಲಾಗುತ್ತಿವೆ. ಈ ಪಿಡುಗು ಕ್ರಮೇಣ ಹಳ್ಳಿಗಳಿಗೂ ಹಬ್ಬುತ್ತಿರುವುದು ಶೋಚನೀಯ.

ಅಪೂರ್ವ ಪಶ್ಚಿಮ!!

ಬ್ರಿಟಿಷರ 'ಯಂತ್ರ ನಾಗರಿಕತೆ'ಯ ಪರಿಚಯವನ್ನು ಶಿಶುನಾಳ ಷರೀಫರು 19ನೇ ಶತಮಾನದಲ್ಲಿಯೇ ಹೀಗೆ ಪ್ರಶ್ನಿಸಿದ್ದಾರೆ: 'ಗಿರಣಿ ವಿಸ್ತಾರ ನೋಡಮ್ಮ, ಶರಣಿ ಕೂಡಮ್ಮ, ಧರಣಿಪತಿಯು ರಾಣಿ, ಕರುಣಾಕ ರಾಜ್ಯಕೆ ತರಿಸಿದ, ಘನಚೋದ್ಯವೋ ಚೀನಾದ ವಿದ್ಯವೋ'. ಹತ್ತಿಯ ಗಿರಣಿಗಳ ಪ್ರವೇಶವನ್ನು ದೇಹತಂತಿಯ ಮಹತ್ವವನ್ನು ಒಟ್ಟಿಗೆ ಹೀಗೆ ತತ್ವಪದದಲ್ಲಿ ನುಡಿಸುವ ಶರೀಫರು ಕೊನೆಯಲ್ಲಿ, 'ಪರಮಾನೆಂಬುವ ಪಟ್ಟೇವೋ ಅಲ್ಲೆ, ಮಾರಾಟಕ್ಕಿಟ್ಟೇವೋ' ಎನ್ನುತ್ತಾರೆ. ಇದು ಬ್ರಿಟಿಷರ ಲೂಟಿಯನ್ನೂ, ನಾಡಿನ ಸಂಪತ್ತಿನ ಮಹತ್ವವನ್ನೂ ಅವರು ಒಟ್ಟಿಗೆ ಹೇಳಿದ ಪರಿ. ಪಾಶ್ಚಾತ್ಯರ ಗಾಳಿಗೆ ಮಾರುಹೋದ ನಾವು, ನಮ್ಮ ಬೇರುಗಳನ್ನೇ ಕಳೆದುಕೊಳ್ಳುವುದು ಎಷ್ಟು ಸರಿ? ಒಂದು ಟನ್ ಕಬ್ಬಿನ ಬೆಲೆಯು ಮಹಾನಗರಿಯಲ್ಲಿನ ಶ್ರೀಮಂತರ ಒಂದೊತ್ತಿನ ಊಟಕ್ಕೆ ಸಮವೆಂದರೆ ಅದೆಲ್ಲಿಯ ಸಮತಾವಾದ?

ಕೀಲಿಕೈ ದಕ್ಕಿಸಿಕೊಳ್ಳೋಣ

ನಮ್ಮ ಅನ್ನವನ್ನು ನಾವೇ ತಿನ್ನಲಾಗದ ಈ ಸ್ಥಿತಿಗೆ ಕಾರಣವೇನು? ಸಿದ್ಧಮಾದರಿಯ ತಿನಿಸು-ಪಾನೀಯಗಳಿಗೆ ನಾವು ದಾಸರಾಗಿದ್ದೇವೆಯೇ? ಬಹುರಾಷ್ಟ್ರೀಯ ಕಂಪನಿಗಳ 'ಕೋಲಾ'ದಂಥ ಸಾಫ್ಟ್ ಡ್ರಿಂಕ್‌ಗಳನ್ನು ಪ್ರತಿಷ್ಠೆಯ ಸಂಕೇತವೆಂಬಂತೆ ಕೈಗೆತ್ತಿಕೊಳ್ಳುವ ನಾವು, ನಮ್ಮದೇ ಅನ್ನದಾತರು ನೀಡುವ ಎಳನೀರನ್ನೇಕೆ ಕಣ್ಣೆತ್ತಿಯೂ ನೋಡುವುದಿಲ್ಲ? ವಿದೇಶಿ ಕಂಪನಿಗಳು ನಮ್ಮದೇ ನೆಲ-ಜಲಗಳನ್ನು ಬಳಸಿಕೊಂಡು ಬಿಡುತ್ತಿರುವ ಹೊಗೆ ಮತ್ತು ಧಗೆ ಯಾವ ಬಗೆಯದ್ದು ಎಂಬುದನ್ನು ಆಲೋಚಿಸಬೇಕಿದೆ. ಬೆಂಗಳೂರಿನಂಥ ಮಹಾನಗರಿಗೆ ಸೀಮಿತವಾಗಿದ್ದ ಇವುಗಳ ಉತ್ಪನ್ನಗಳು ಈಗ ಬಯಲುಸೀಮೆ-ಮಲೆನಾಡು-ಕರಾವಳಿ ಪ್ರದೇಶಗಳ ಬೀದಿಬೀದಿಗಳಿಗೂ ದಾಂಗುಡಿಯಿಟ್ಟಿವೆ. ಪುರಾಣದಲ್ಲಿ ಬರುವ ರಕ್ತಬೀಜಾಸುರನ ಕಥೆ ಬಹುತೇಕರಿಗೆ ಗೊತ್ತಿರುವಂಥದ್ದೇ. ಈತನನ್ನು ಕೊಲ್ಲುವಾಗ ಒಂದು ಹನಿ ರಕ್ತವು ಭೂಮಿಗೆ ಬಿದ್ದರೆ, ಸಹಸ್ರಾರು ರಕ್ತಬೀಜಾಸುರರು ಹುಟ್ಟಿಕೊಳ್ಳುತ್ತಿದ್ದರಂತೆ. ಈ ಕಾರಣಕ್ಕಾಗಿ, ದೇವಿಯು ಆತನ ರಕ್ತವನ್ನೆಲ್ಲಾ ಹೀರುತ್ತಾಳೆ. ಈ ಕಥೆಯನ್ನು ವರ್ತಮಾನಕ್ಕೆ ಅನ್ವಯಿಸಿದರೆ, ನಮ್ಮ ನೆಲಮೂಲ ಸಂಸ್ಕೃತಿಗಳನ್ನು ಹೀರುವ ಯಾವುದೇ ಶಕ್ತಿಗಳನ್ನು ನಾಶಮಾಡಲು ನಮಗೊಂದು ಕೀಲಿಕೈ ದೊರೆಯುತ್ತದೆ.

ತಲ್ಲಣಗಳಿಗೆ ಕಾರಣ

ಧೂಮಪಾನ-ಮಧುಪಾನ-ಮಾದಕದ್ರವ್ಯ ಸೇವನೆಗೆ ಮುಂದಾಗುವ 'ವ್ಯಸನಗ್ರಸ್ತ' ಮನಸ್ಸುಗಳು ಓದಿನೆಡೆಗೆ ವಾಲಬೇಕಿದೆ. ವ್ಯಸನದಿಂದ ನಾಶವಾಗುವ ಮನಸ್ಸುಗಳಿಗೆ ಅಕ್ಷರಸಾಂಗತ್ಯ ದೊರಕಿ, ಅದು ಮಿದುಳಿಗೆ ಸಾಗಿ, ಹೃದಯದಲ್ಲಿ ಪ್ರೀತಿ ಮೂಡಬೇಕಿದೆ. ನನಗಿನ್ನೂ ನೆನಪಿದೆ, ಬಾಲ್ಯದಲ್ಲಿ ನಾವು, ಅಕ್ಷರಗಳನ್ನು ಹೊಂದಿದ ಯಾವುದೇ ಹಾಳೆಯನ್ನು ಸುಡುವಂತಿರಲಿಲ್ಲ. ಹಾಗೆ ಮಾಡಿದರೆ ದಡ್ಡರಾಗುತ್ತಾರೆ ಎಂಬ ನಂಬಿಕೆಯನ್ನು ಮನೆಯಲ್ಲಿ ಮೂಡಿಸಿದ್ದರು. ಹೀಗಾಗಿ ಪುಸ್ತಕ-ಪತ್ರಿಕೆಗಳು 'ಸರಸ್ವತಿ'ಯ ಸ್ಥಾನದಲ್ಲಿದ್ದವು. ಆದರೆ ಇಂದು ಓದಬೇಕಾದ ಅಕ್ಷರಗಳನ್ನು ಸುರುಳಿಸುತ್ತಿ, ತಿಂಡಿ-ತಿನಿಸುಗಳನ್ನು ತುಂಬಿಕೊಟ್ಟು ನಂತರ ಬಿಸಾಡಲಾಗುತ್ತಿದೆ. ಅಂಗಡಿಗಳಲ್ಲಿ ಪತ್ರಿಕೆ-ಪುಸ್ತಕಗಳು ಅಂದುಕೊಂಡಷ್ಟು ಮಾರಾಟವಾಗುತ್ತಿಲ್ಲ; ಆದರೆ ತಿನಿಸು-ಪಾನೀಯಗಳಿಗೆ ಮೀಸಲಾದ ಅಂಗಡಿಗಳು ಲಕ್ಷ ಲೆಕ್ಕದಲ್ಲಿ ವ್ಯವಹರಿಸುತ್ತಿವೆ. ನಮ್ಮ ಸ್ಥಳೀಯ ವಸ್ತುಗಳು 'ಆರ್ಗ್ಯಾನಿಕ್' ಹಣೆಪಟ್ಟಿಯಲ್ಲಿ ಕಾರ್ಪೊರೇಟ್ ಲೆಕ್ಕಾಚಾರಕ್ಕೆ ಏಣಿಹಾಕುತ್ತಿವೆ. ಕಾರಣವೇನಿರಬಹುದು? ಒಂದು ಎಳನೀರಿಗೆ 40ರಿಂದ 60 ರುಪಾಯಿವರೆಗೆ ಕೊಡಬೇಕು; ಆದರೆ ಒಂದು 'ಕೋಲಾ' ಬಾಟಲಿ ಹತ್ತೇ ರುಪಾಯಿಗೆ ನಮ್ಮ ಕೈಸೇರುತ್ತದೆ. ಸುಂದರವಾಗಿ, ವರ್ಣರಂಜಿತವಾಗಿ ಕಾಣುವ 'ಯಂತ್ರನಿರ್ಮಿತ' ಬಟ್ಟೆಗಳು, ಕೈಮಗ್ಗದ ಬಟ್ಟೆಗಳಿಗಿಂತ ಅಗ್ಗ. ಜನರು ವಾಲುವುದು ಕಡಿಮೆ ಬೆಲೆಯ ಉತ್ಪನ್ನಕ್ಕೇ ಅಲ್ಲವೇ? ಹುಡುಕುತ್ತ ಹೋದರೆ ವರ್ತಮಾನದ ಜನರ ತಲ್ಲಣಗಳಿಗೆ ಇಂಥ ಸಾಕಷ್ಟು ಕಾರಣಗಳು ಸಿಗುತ್ತವೆ.

ಇದಕ್ಕೆ ಸಂಭಾವ್ಯ ಪರಿಹಾರವೇನು? ನಮ್ಮ ಕಬ್ಬು, ಭತ್ತ, ಎಳನೀರು ಎಲ್ಲವೂ ಕಡಿಮೆ ಬೆಲೆಗೆ ಬೀದಿಬೀದಿಗಳಲ್ಲಿ ಸಿಗುವಂತಾಗಬೇಕು. ರಫ್ತು ಹಿತಾಸಕ್ತಿಗಳನ್ನು ತಗ್ಗಿಸಿ, ಮೊದಲಿಗೆ ನಮ್ಮ ಪ್ರದೇಶಗಳನ್ನು ಸಮೃದ್ಧಗೊಳಿಸಬೇಕು. ಬೇಡಿಕೆ ಹೆಚ್ಚಾದಂತೆ ಜನರೂ ಆಕರ್ಷಿತರಾಗುತ್ತಾರೆ. ಸರಕಾರವು ನಮ್ಮ ರೈತರಿಗೆ, ಅವರ ಉತ್ಪನ್ನಗಳಿಗೆ, ಕೃಷಿ ಸಾಮಗ್ರಿಗಳಿಗೆ ಸುಂಕರಹಿತ 'ನೆಲೆ-ಬೆಲೆ'ಯನ್ನು ಒದಗಿಸಬೇಕಿದೆ. ಆಗ ರೈತರು ನಗರಗಳಿಗೂ ಕೃಷಿ ಉತ್ಪನ್ನಗಳನ್ನು ಸ್ವತಃ ಸುಲಭವಾಗಿ ತಲುಪಿಸಬಲ್ಲರು. ಆಗ ಮಾತ್ರವೇ 'ಕೋಲಾ' ಪಾನೀಯ ಸೇರಿದಂತೆ ವಿವಿಧ ಬಹುರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳಿರುವ ಜಾಗದಲ್ಲಿ ಎಳನೀರು ಸೇರಿದಂತೆ ಹಲವು ದೇಸಿ ಉತ್ಪನ್ನಗಳನ್ನು ನಾವು ಕಾಣಬಹುದು. ಬಹುರಾಷ್ಟ್ರೀಯ ಕಂಪನಿಗಳು ಹಬ್ಬಿಸಿರುವ ಈ 'ಕಾರ್ಪೊರೇಟ್ ಉತ್ಪನ್ನ' ಎಂಬ ನುಸಿಯನ್ನು ಈಗಲೇ ನಾಶಮಾಡದಿದ್ದರೆ, ನಮ್ಮ ಅನ್ನವನ್ನೂ ನಾವು ದುಬಾರಿ ಬೆಲೆಗೆ ಕೊಳ್ಳಬೇಕಾಗುತ್ತದೆ.

ಹೀಗಿರಲಿ ತಂತ್ರಗಾರಿಕೆ

ಮೊದಲಿಗೆ ನಾವು ಸ್ಥಳೀಯ ವಸ್ತುಗಳನ್ನು ಸ್ಥಳೀಕರಿಗೆ ಕಡಿಮೆ ಬೆಲೆಯಲ್ಲಿ ತಲುಪಿಸುವ ಆಲೋಚನೆ ಮಾಡಬೇಕು. 'ಸಂತೆ' ಮಾದರಿಯಿಂದ 'ಮಾರುಕಟ್ಟೆ' ಮಾದರಿಗೆ ಆಗುವ ವಿಕಾಸವೇ ಅರ್ಥಹೀನ. ಸಂತೆಯು ಎಲ್ಲವನ್ನೂ ಕಡಿಮೆ ಬೆಲೆಗೆ ನೀಡುತ್ತಾ, ಸ್ಥಳೀಯರನ್ನು ತಬ್ಬಿ ಹಿಡಿದು, ಸಾಕಿ-ಸಲಹುತ್ತಿತ್ತು. ಈ 'ಸಾಕಿ-ಸಲಹುವ' ಪದ್ಧತಿ ಮತ್ತೆ ಬರಬೇಕು. ಊರು, ಹೋಬಳಿ, ತಾಲೂಕು, ಜಿಲ್ಲೆ ಹೀಗೆ ರೈತರೇ ಅಂಗಡಿ ಹೂಡಿಕೊಂಡು ಕುಳಿತು ವ್ಯಾಪಾರ ಮಾಡುವ ಸಂತೆಗಳು ಮತ್ತೆ ಬರಬೇಕು. ಸಂತೆಯ ಸೊಗಸು-ಸೊಗಡು ನಗರಗಳಿಗೂ ಹಬ್ಬಿದರೆ, ಅಲ್ಲಿನ ಬೀದಿಬೀದಿಯ ಮನೆಗಳೂ ಸ್ಥಳೀಯ ಉತ್ಪನ್ನಗಳ ಆಗರವಾಗುತ್ತವೆ.

ಜತೆಗೆ, ಇಂದಿನ ನಮ್ಮ ತಂದೆ-ತಾಯಿಯರು ತಮ್ಮ ಮಕ್ಕಳನ್ನು 'ದುಡಿಯುವ ಕೂಲಿ'ಗಳನ್ನಾಗಿ ಸೃಷ್ಟಿಸುವ ಬದಲು, ಸಂಸ್ಕೃತಿಯುಳ್ಳ ಮತ್ತು ತಮ್ಮ ಕಾಲಮೇಲೆ ತಾವೇ ನಿಲ್ಲಬಲ್ಲ ಮನುಷ್ಯರನ್ನಾಗಿಸಲು ಪಣ ತೊಟ್ಟರೆ, ತರಗತಿಯ ಮೇಷ್ಟ್ರು ಹೇಳುವ ಮಾತುಗಳಿಗೆ ಮೌಲ್ಯ ಬರುತ್ತದೆ. ಆಗ ಮಾತ್ರವೇ ಸಿಗರೇಟಿನ ಜಾಗದಲ್ಲಿ ಪುಸ್ತಕ ಕೂರುವುದು ತಡವಾಗುವುದಿಲ್ಲ ಮತ್ತು ಹತ್ತು ರುಪಾಯಿಗೂ ಎಳನೀರು ಸಿಗುತ್ತದೆ; ನಾಳೆಗೆ ನಾವು ಉಳಿಯುತ್ತೇವೆ, ನಾಳೆಗಳನ್ನು ಇಂದೇ ಉಳಿಸುತ್ತೇವೆ. ಇದುವೇ ನಾವು ಅನುಸರಿಸಬೇಕಿರುವ ಧರ್ಮ, ಇದುವೇ ನಮ್ಮ ಸಂಸ್ಕೃತಿ...

● ಡಾ.ಸುಧಾಕರ ಜಿ., ಲಕ್ಕವಳ್ಳಿ

ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವು ನಮ್ಮ ಮನಸ್ಸಿನ ಸ್ಥಿತಿ, ದಿನಚರಿ ಮತ್ತು ಜೀವನಶೈಲಿಯ ಮೇಲೆ ನೇರವಾಗಿ ಅವಲಂಬಿತವಾಗಿದೆ. ಕೋಪ, ಒತ್ತಡ ಮತ್ತು ನಿರಾಶೆಗಳು ದೇಹಕ್ಕೆ ಹಾನಿಮಾಡುತ್ತವೆ. ಆದರೆ ನಗು, ಸಂತೋಷ ಮತ್ತು ಧೈರ್ಯ ಇವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುತ್ತವೆ. ಹೀಗಾಗಿ, ಕಡಿಮೆ ಕೋಪ, ಹೆಚ್ಚು ನಗು ಎಂಬುದು ದೀರ್ಘಕಾಲಿಕ ಆರೋಗ್ಯಕರ ಬದುಕಿನ ರಹಸ್ಯವಾಗಿದೆ.

ಕೋಪವನ್ನು ನಿಯಂತ್ರಿಸಿ

ಕೋಪವು ದೇಹಕ್ಕೆ ಒತ್ತಡವನ್ನು ನೀಡುತ್ತದೆ. ಹೃದಯ, ಮಿದುಳು ಮತ್ತು ರಕ್ತಸ್ರಾವದ ಮೇಲೆ ಪರಿಣಾಮ ಬೀರುತ್ತದೆ. ಪ್ರತಿದಿನ 5-10 ನಿಮಿಷ ಧ್ಯಾನ ಅಥವಾ ಆಳವಾದ ಉಸಿರಾಟದ ಅಭ್ಯಾಸವನ್ನು ಕೈಗೊಂಡರೆ, ಅವು ಕೋಪವನ್ನು ಕಡಿಮೆ ಮಾಡುತ್ತವೆ. ಕೋಪದ ನಿಯಂತ್ರಣದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸಿಕೊಳ್ಳಬಹುದು.

ನಗುವಿನ ಶಕ್ತಿ

ನಗು ಕೇವಲ ಮನಸ್ಸಿಗೆ ಸಂತೋಷ ನೀಡುವುದಲ್ಲ, ಇದು ರೋಗ ನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ನಗುವಾಗ ದೇಹದಲ್ಲಿ ಸಂತೋಷದ ಹಾರ್ಮೋನುಗಳು ಬಿಡುಗಡೆ ಆಗುತ್ತವೆ, ಮಿದುಳಿನ ಕಾರ್ಯಕ್ಷಮತೆ ಸುಧಾರಿಸುತ್ತದೆ ಮತ್ತು ಹೃದಯದ ಆರೋಗ್ಯವೂ ಉತ್ತಮವಾಗುತ್ತದೆ. ದಿನನಿತ್ಯದ ಸಣ್ಣ ಸಂತೋಷದ ಕ್ಷಣಗಳಲ್ಲಿನ ನಗುವ ಅಭ್ಯಾಸವು, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಬಹಳ ಲಾಭಕರವಾಗಿದೆ.

ಸಕಾರಾತ್ಮಕ ಚಿಂತನೆ

ಸಕಾರಾತ್ಮಕ ಚಿಂತನೆಗಳು ಒತ್ತಡವನ್ನು ಕಡಿಮೆ ಮಾಡುತ್ತವೆ. ಸಮಸ್ಯೆಗಳನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡಿದರೆ ಮನಸ್ಸು ಶಾಂತವಾಗುತ್ತದೆ. ನಿತ್ಯದ ಸಮಸ್ಯೆಗಳಲ್ಲಿ ಹಾಸ್ಯ ಮತ್ತು ಧೈರ್ಯವನ್ನು ಉಳಿಸಿಕೊಂಡರೆ ಜೀವನ ಸುಲಭ ಮತ್ತು ಸಂತೋಷಕರವಾಗುತ್ತದೆ.

ಸರಳ ಜೀವನಶೈಲಿ

ಆಹಾರ, ನಿದ್ರೆ, ವ್ಯಾಯಾಮ ಮತ್ತು ವಿಶ್ರಾಂತಿ ಇವುಗಳನ್ನು ನಿಯತವಾಗಿ ಪಾಲಿಸುವುದು ದೀರ್ಘಾಯುಷ್ಯಕ್ಕೆ ಸಹಾಯಕ. ಸಂಕೀರ್ಣತೆ, ಹೆಚ್ಚು ಸ್ಪರ್ಧೆ ಮತ್ತು ಕೋಪದಿಂದ ದೂರವಾಗುವುದರಿಂದ ದೇಹ ಮತ್ತು ಮನಸ್ಸು ಆರೋಗ್ಯಕರವಾಗಿರುತ್ತವೆ.

ಒಳ್ಳೆಯ ಸಂಬಂಧಗಳು

ಮಿತ್ರರು, ಕುಟುಂಬದವರು ಮತ್ತು ನೆರೆಹೊರೆಯವರೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳುವುದು ಮನಸ್ಸಿಗೆ ಶಾಂತಿ ಮತ್ತು ಸಂತೋಷವನ್ನು ನೀಡುತ್ತದೆ. ಒಳ್ಳೆಯ ಸಂಬಂಧಗಳು ಒತ್ತಡವನ್ನು ಕಡಿಮೆಮಾಡುತ್ತವೆ, ಕೋಪವನ್ನು ತಗ್ಗಿಸುತ್ತವೆ ಮತ್ತು ಜೀವನದಲ್ಲಿ ನಗುವನ್ನು ಹೆಚ್ಚಿಸುತ್ತವೆ.

ಕೋಪ ಕಡಿಮೆ, ನಗು ಹೆಚ್ಚು, ಸಕಾರಾತ್ಮಕ ಚಿಂತನೆ ಮತ್ತು ಸರಳ ಜೀವನಶೈಲಿ ಇವು ದೀರ್ಘಕಾಲಿಕ ಆರೋಗ್ಯಕರ ಜೀವನಕ್ಕೆ ಮುಖ್ಯ. ಪ್ರತಿದಿನ ಹಾಸ್ಯ, ಸಂತೋಷ ಮತ್ತು ಧೈರ್ಯವನ್ನು ಪಾಲಿಸಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ನಗುವಿನ ಪ್ರತಿ ಕ್ಷಣವನ್ನು ಅನುಭವಿಸಿ, ಕೋಪವನ್ನು ಬಿಟ್ಟು ಬಾಳುವುದರಿಂದ ದೀರ್ಘಾಯುಷ್ಯ ನಿಮ್ಮದಾಗುತ್ತದೆ. ನಗುವಿನಿಂದ ತುಂಬಿದ ಜೀವನವು ದೈಹಿಕವಾಗಿ ಆರೋಗ್ಯಕರವಾಗಿರುತ್ತದೆ ಮತ್ತು ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		3	■	■	4		5
■		■	6		7	■	■	
8		9	■	■	10		11	
	■	12		13		■		■
14	15		■		■	16		17
■		■	18				■	
19				■	■	20	21	
	■	■	22		23	■		■
24			■	■	25			

ಎಡದಿಂದ ಬಲಕ್ಕೆ

1. ಹೆಚ್ಚು ಕಡಿಮೆ ಎನ್ನಿ (4)
4. ಮಾನಿನಿಗೇಕೆ ಬಂದಿದೆ ಸಂಶಯ (3)
6. ಮರ-ಗಿಡದ ಪಲ್ಲವ (3)
8. ಪ್ರತಿದಿನ ಬರುವ ಸೂರ್ಯ (3)
10. ನಮ್ಮೆಲ್ಲರ ಪಾಪ- ಪುಣ್ಯಗಳನ್ನು ಬರೆದಿಡುವ ಯಮ ಲೋಕದ ಗುಮಾಸ್ತ (4)
12. ಸರಾಗ ಎನ್ನುವುದೇ ತಿರುಗಿ ಬಂದಿದೆ (4)
14. ಯಾವ ಕಡೆಯಿಂದ ನೋಡಿದರೂ ಕಣ್ಣೇ (3)
16. ನನ್ನದೆಂಬ ಭಾವನೆ ಅಹಂಕಾರವೂ ಆಗಬಲ್ಲುದು (3)
18. ಪುಟ್ಟ ಕಂದನಿಗೆ ಮತ್ತೊಂದು ಹೆಸರು (4)
19. ಒಂದೇ ದಂತವಿರುವ ಗಣೇಶ (4)
20. ಮತ್ತೊಬ್ಬ ಸೂರ್ಯನೊಂದಿಗೆ ಬಂದಿರುವ ಗುಬ್ಬಚ್ಚಿ (3)
22. ರೀತಿಯೊಂದಿಗೇ ಬರುವ ಜೋಡಿಪದ (3)
24. ಕಷ್ಟ ಸುಖಗಳೆರಡರಲ್ಲೂ ಜತೆಯಾಗಿರುವ ಮಿತ್ರ (3)
25. ಯಾವಾಗಲೂ ಹೊತ್ತಿ ಕೊಂಡೇ ಇರುವ ದೀಪ (4)

ಮೇಲಿಂದ ಕೆಳಕ್ಕೆ

2. ರೋಗದ ಜತೆಗೇ ಬರುವ ಇನ್ನೊಂದು ಪದ (3)
3. ತಿಂಡಿ-ತಿನಿಸುಗಳ ಸ್ವಾದ (2)
5. ಯಾವುದೇ ವಿಷಯಕ್ಕೆ ಅಂಟಿಕೊಳ್ಳದವ (3)
7. ಇಷ್ಟವಾಗು ಎನ್ನುವುದರಲ್ಲಿ ಮತ್ತೊಂದು ಸ್ವಾದವಿದೆ (3)
8. ಹಿಂದಿನ ಕಾಲದ ಮಂತ್ರಿಗೆ ಈ ಹೆಸರು ಸೂಕ್ತವಾದೀತು (3)
9. ಕೆಳಕ್ಕೆ ಬೀಳುವಿಕೆ (3)
11. ಕೀಳುಮಟ್ಟದ ದಾಸ (3)
13. ದೊರಕು, ಸಿಗು (3)
15. ಮೃತ್ಯುದೇವನ ಜತೆಯಾದ ಜೋಡಿ (3)
16. ಅಸ್ಪಷ್ಟವಾಗಿದೆ, ಸರಿಯಾಗಿ ಕಾಣಿಸುತ್ತಿಲ್ಲ (3)
17. ಅಸ್ತವ್ಯಸ್ತವಾಗಿ ಬಂದಿರುವ ಪದ್ಯ (3)
18. ತೀಕ್ಷ್ಣತೆ ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ
19. ಉನ್ನತಿ ಅಥವಾ ಅಭಿವೃದ್ಧಿ (3)
21. ಪ್ರಾಚೀನ ಕಾಲದಲ್ಲಿದ್ದ ಚಿನ್ನದ ನಾಣ್ಯ ತಲೆಕೆಳಗಾಗಿದೆ (3)
23. ವಿಷ ಮೇಲೇರಿ ಬಂದಿದೆ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಏರುಪೇರು 4.ಗುಮಾನಿ 6.ಚಿಗುರು 8.ದಿನಪ 10.ಚಿತ್ರಗುಪ್ತ 12.ತಲಿಲಸು 14.ನಯನ 16.ಮಮತೆ 18.ಹಸುಗೂಸು 19.ಏಕದಂತ 20.ಕುರವಿ 22.ರಿವಾಜು 24.ಗೆಳೆಯ 25.ನಂದಾದೀಪ

ಮೇಲಿಂದ ಕೆಳಕ್ಕೆ
2.ರುಜಿನ 3.ರುಚಿ 5.ನಿರ್ಲಿಪ್ತ 7.ರುಚಿಸು 8.ದಿವಾನ 9.ಪತನ 11.ಗುಲಾಮ 13.ಲಭಿಸು 15.ಯಮಕ 16.ಮಸುಕು 17.ತೆಕವಿ 18.ಹತರಿ 19.ಏಳಿಗೆ 21.ರನಾದೀ 23.ಜುನಂ

ಮನಸ್ಸಿನ ಸಂಯಮ, ಸಂಬಂಧಗಳನ್ನು ಬೆಸೆಯುತ್ತದೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಮ್ಮೆ ಒಬ್ಬ ವ್ಯಕ್ತಿ ತನ್ನ ಸಮಸ್ಯೆಗೆ ಪರಿಹಾರ ಕೇಳಲು ಝೆನ್ ಗುರುವಿನ ಬಳಿ ಬಂದನು. ಆಗ ಆಶ್ರಮದಲ್ಲಿದ್ದ ಝೆನ್ ಗುರುಗಳಿಗೆ ಸಮಯವಿರಲಿಲ್ಲ. ಆಗಲೇ ಒಂದಷ್ಟು ಜನ ಝೆನ್ ಗುರುಗಳನ್ನು ಕಾಣಲು ಬಂದಿದ್ದು ಹೊರಗೆ ಕಾಯುತ್ತಿದ್ದರು. ಇದರಿಂದ ಆಗಿನ್ನೂ ಬಂದ ವ್ಯಕ್ತಿ ತನ್ನ ಸರದಿಗೆ ಕಾಯುತ್ತಾ ಕುಳಿತನು. ಬಹಳ ಹೊತ್ತು ಕಾದುಕಾದು ಸಾಕಾಗಿ ಅವನಿಗೆ ಕಿರಿಕಿರಿಯಾಗಿತ್ತು. ಅಂತೂ ಅವನ ಸರದಿ ಬಂದು ಗುರುಗಳು ಆತನಿಗೆ ಬರಲು ಹೇಳಿ ಕಳಿಸಿದರು. ಕಾದು ಸಾಕಾಗಿದ್ದ ವ್ಯಕ್ತಿಗೆ ಮೈ ಪರಚಿಕೊಳ್ಳುವಷ್ಟು ಸಿಟ್ಟು ಬಂದಿತ್ತು. ಆಶ್ರಮದೊಳಗೆ ಹೋಗುವ ಮೊದಲು ಅವನು ತನ್ನ ಪಾದರಕ್ಷೆಗಳನ್ನು ಬಿಚ್ಚಿ ಅಲ್ಲೇ ಬಿಸಾಕಿ, ಆಶ್ರಮದ ಬಾಗಿಲನ್ನು ಧಡಾರ್ ಅಂತ ತಳ್ಳಿ, ಒಳಗೆ ಬಂದು ಬಾಗಿಲನ್ನು ಜೋರಾಗಿ ಹಾಕಿ ಗುರುಗಳ ಬಳಿ ಬಂದನು. ಗುರುಗಳು ಮುಗುಳ್ನಗುತ್ತಾ ಅವನನ್ನೇ ಗಮನಿಸುತ್ತಿದ್ದರು.

ಸರಿ, ಆತ ಒಳಗೆ ಬಂದು ಗುರುಗಳ ಮುಂದೆ ನಿಂತು, ಏನೋ ಹೇಳಲು ಹೊರಟ. ತಕ್ಷಣ ಗುರುಗಳು, ''ನೀನು ಏನನ್ನೇ ಹೇಳುವ ಮೊದಲು, ನೀನು ಬರುವಾಗ ಹಾಕಿಕೊಂಡು ಬಂದ ಬಾಗಿಲಿಗೆ ಮತ್ತು ನಿನ್ನ ಪಾದರಕ್ಷೆಗಳಿಗೆ ಕ್ಷಮೆ ಕೇಳಿ ಬಾ'' ಎಂದರು.

ಆ ವ್ಯಕ್ತಿಗೆ ಆಶ್ಚರ್ಯವಾಗಿ, ''ಇದೇನು ಗುರುಗಳೇ, ನಾನು ಕಾಲಲ್ಲಿ ಧರಿಸುವ ಪಾದರಕ್ಷೆ ಹಾಗೂ ಬಾಗಿಲಿಗೆ ಕ್ಷಮೆ ಕೇಳಬೇಕೇ? ಏನು ಅಂತ ಹೇಳುತ್ತಿದ್ದೀರಿ?'' ಎಂದ. ಗುರುಗಳು ಶಾಂತಚಿತ್ತದಿಂದ, ''ಇಲ್ಲಪ್ಪ, ನೀನು ಅವುಗಳ ಮೇಲೆ ಕೋಪ ಮಾಡಿಕೊಂಡೆ ಎಂದ ಮೇಲೆ ಅವುಗಳಿಗೂ ನಿನಗೂ ಏನಾದರೂ ಸಂಬಂಧವಿರಬೇಕು ಅಲ್ಲವೇ? ನಿನಗೆ ಯಾರ ಮೇಲೆ ಕೋಪ ಮಾಡಿಕೊಳ್ಳುವ ಅರ್ಹತೆ ಇದೆಯೋ ಅವನ್ನು ಪ್ರೀತಿಸುವ ಅರ್ಹತೆಯೂ ಇರಬೇಕು. ಆದ್ದರಿಂದ ನೀನು ಯಾವ ವಸ್ತುಗಳ ಮೇಲೆ ಅಥವಾ ವ್ಯಕ್ತಿಗಳ ಮೇಲೆ ಕೋಪ ಮಾಡಿಕೊಳ್ಳುವೆಯೋ ಅವರಿಗೆ ಕ್ಷಮೆ ಕೇಳಲೇಬೇಕು. ಆಗ ಮಾತ್ರ ನಿನ್ನ ಮತ್ತು ಅವುಗಳ ಬಾಂಧವ್ಯ ಗಟ್ಟಿಯಾಗಿರುತ್ತದೆ. ಸಂಬಂಧಗಳು ಹುಟ್ಟುವುದು ಮನಸ್ಸಿನಿಂದ. ಆದ್ದರಿಂದ ಅವುಗಳ ಮೇಲೆ ಸುಖಾಸುಮ್ಮನೆ ಕೋಪ ಮಾಡಿಕೊಂಡರೆ, ಅದಕ್ಕಾಗಿ ಕ್ಷಮೆ ಕೇಳಬೇಕು'' ಎಂದರು.

ಇದೆಲ್ಲವನ್ನೂ ಕೇಳಿದ ವ್ಯಕ್ತಿ ತಾನು ಬಾಗಿಲಿಗೆ ತಟ್ಟಿದ ಶಬ್ದಕ್ಕಿಂತಲೂ ತನ್ನೊಳಗಿನ ಅಹಂಕಾರ ಹೆಚ್ಚು ಗದ್ದಲ ಮಾಡಿದೆ ಎಂದು ನಿಧಾನವಾಗಿ ಹೊಳೆಯಿತು. ತಾನು ಪಾದರಕ್ಷೆಯನ್ನು ಬಿಸಾಕಿದಷ್ಟೆಲ್ಲಾ ಕೋಪ ತನ್ನೊಳಗೆ ಆಳವಾಗಿ ನಾಟಿಕೊಂಡಿರುವುದೂ ಗೊತ್ತಾಯಿತು. ಗುರುವಿನ ಮಾತುಗಳು ಕೋಪವನ್ನು ಕರಗಿಸಿದವು, ಮನಸ್ಸು ನಿರಾಳವಾಯಿತು. ಅವನು ಮೆಲ್ಲಗೆ ಗುರುಗಳ ಮುಂದೆ ತಲೆಬಾಗಿ, ಹೊರಗೆ ಹೋಗಿ ಪಾದರಕ್ಷೆಗಳನ್ನು ಸರಿಯಾಗಿ ಜೋಡಿಸಿ, ಸಣ್ಣ ಮಗುವಿನಂತೆ ಬಾಗಿಲಿಗೆ ಕೈ ಜೋಡಿಸಿ ಕ್ಷಮೆ ಕೇಳಿದ.

ಈ ರೀತಿಯ ನಡವಳಿಕೆ ನಮ್ಮಲ್ಲೂ ಕಂಡುಬರುತ್ತದೆ. ಮಾಡಿದ ಅಡುಗೆ ಇಷ್ಟವಿಲ್ಲವೆಂದು ತಟ್ಟೆ-ಲೋಟದ ಮೇಲೆ ಸಿಟ್ಟನ್ನು ತೋರಿಸಿರುತ್ತೇವೆ. ಯಾರೊಡನೆಯಾದರೂ ವಾದ ಮಾಡುವಾಗ ವಿಷಯ ನಮಗೆ ವಿರುದ್ಧವಾಗುತ್ತಿದೆ ಎಂದಾದಾಗ ಸಿಟ್ಟಿನಿಂದ ಮೇಜು, ಕುರ್ಚಿ, ಬಾಗಿಲು, ಗೋಡೆ ಇವುಗಳನ್ನು ಬಡಿದು ನಾವು ಹೆಚ್ಚು ನೋವು ಅನುಭವಿಸುತ್ತೇವೆ. ಕೋಪಗೊಂಡಾಗ ಮಾಡಿದ ಅಡುಗೆಯನ್ನು ಊಟ ಮಾಡದೆ ನಮ್ಮನ್ನು ನಾವು ಶಿಕ್ಷಿಸಿಕೊಳ್ಳುತ್ತೇವೆ. ಪರೀಕ್ಷೆಗಳಲ್ಲಿ ಕಡಿಮೆ ಅಂಕ ಬಂದರೆ ಪುಸ್ತಕದ ಮೇಲೆ ನಮ್ಮ ಸಿಟ್ಟು ಹರಿಯುತ್ತದೆ.

ಆದರೆ ಇದ್ಯಾವುದರಿಂದಲೂ ಆ ಸಿಟ್ಟು ಪ್ರಾರಂಭವಾಗಿರುವುದಿಲ್ಲ; ಅದು ನಮ್ಮೊಳಗೆ ಬೇರೆಯೇ ಕಾರಣಕ್ಕೆ ಹುಟ್ಟಿ ಅನಗತ್ಯವಾಗಿ ಅವುಗಳ ಮೇಲೆ ಹರಿದಿರುತ್ತದೆ. ಕೆಲವೊಮ್ಮೆ ಸಂಬಂಧಪಡದ ಮನುಷ್ಯರ ಮೇಲೆ ಕೂಡ ಸಿಟ್ಟು ಮಾಡಿಕೊಳ್ಳುತ್ತೇವೆ. ಇವೆಲ್ಲವೂ ಕೊನೆಗೆ ಸಂಬಂಧಗಳನ್ನು ಹಾಳುಮಾಡುತ್ತವೆ. ಆದ್ದರಿಂದ ಸಿಟ್ಟಿನ ಮೇಲೆ, ಅಹಂಕಾರದ ಮೇಲೆ ನಿಯಂತ್ರಣ ಪಡೆದುಕೊಳ್ಳುವುದು ಬಹಳ ಮುಖ್ಯ. ಎಂಥದೇ ಸಮಯದಲ್ಲೂ ಮನಸ್ಸಿನ ನಿಯಂತ್ರಣವನ್ನು ಕಾಯ್ದುಕೊಂಡಾಗ ನಮ್ಮ ಯೋಚನೆಗಳು, ಮಾತನಾಡುವ ರೀತಿ ಸಂಬಂಧಗಳನ್ನು ನಿಭಾಯಿಸುವ ಪರಿ ಸುಧಾರಿಸುತ್ತಾ ಹೋಗುತ್ತದೆ. ಸಿಟ್ಟಿಗೆ, ಅಹಂಕಾರಕ್ಕೆ ಎಲ್ಲವನ್ನೂ ಹಾಳುಮಾಡಲು ಒಂದು ಕ್ಷಣ ಸಾಕು. ಸಮಾಧಾನದಿಂದ ಬದುಕು ಕಟ್ಟಿಕೊಳ್ಳಲು ನಿತ್ಯ ಪ್ರಯತ್ನಿಸಬೇಕು.

ಸಾಧಕರು ತೆರಬೇಕಾದ ಬೆಲೆ

● ಡಾ. ಎನ್.ಜಯರಾಮ ಶೆಟ್ಟಿ

ಎತ್ತರ ಏರುವುದು ಎಷ್ಟು ಪ್ರಯಾಸಕರ ಮತ್ತು ಅಪರೂಪವೋ, ಅಲ್ಲೇ ನಿಲ್ಲುವುದು ಇನ್ನೂ ಕಷ್ಟಕರವಾದುದು. ಸಾಧಕರು ನಿರಂತರ ಆತಂಕದಲ್ಲಿರುವುದು ಇದೇ ಕಾರಣಕ್ಕೆ. ಪ್ರಪಂಚ ನಮ್ಮ ಸಾಧನೆಯಲ್ಲಿ ನಿರಂತರತೆಯನ್ನು ಅಪೇಕ್ಷಿಸುತ್ತದೆ. ಪುನರಪಿ ಫಲಿತಾಂಶ ಕೊಡದಿದ್ದಲ್ಲಿ ಅದು ಪ್ರಶ್ನಿಸುತ್ತದೆ, 'ಶಿಕ್ಷಿಸುತ್ತದೆ' ಮತ್ತು ಕಟ್ಟಕಡೆಗೆ ನಮ್ಮ ಪ್ರಥಮ ಸಾಧನೆಯನ್ನು ಮೂಲೆಗೆ ತಳ್ಳಿ ಮರೆಯುತ್ತದೆ. ತಮ್ಮ ಕ್ಷಮತೆ, ಕೌಶಲ ಮತ್ತು ಕೊಡುಗೆಯನ್ನು ಉಳಿಸಿಕೊಳ್ಳುವುದರಲ್ಲಿ ನಾವು ಸೋಲುತ್ತೇವೆ. ಅಂಥ 'ಸೋಲಿನ' ಭಯ ನಮ್ಮ ಪ್ರಯತ್ನಶೀಲತೆಯನ್ನು ಕುಗ್ಗಿಸುವುದಲ್ಲದೆ ಒಟ್ಟಾರೆ ವ್ಯಕ್ತಿತ್ವ ವಿಕಸನಕ್ಕೆ ಅಡ್ಡಿಯಾಗಿ ನಿಲ್ಲುತ್ತದೆ.

ಇಟಲಿಯ ಎನ್ರಿಕೊ ಕಾರುಸೊ, ಕಳೆದ ಶತಮಾನದ ಪ್ರಸಿದ್ಧ ಸಂಗೀತಗಾರರಾಗಿದ್ದವರು. ಅವರ ಹಾಡುಗಳನ್ನು ಕೇಳಲು ಮಂದಿ ನೂರಾರು ಮೈಲಿಗಳಿಂದ ಬರುತ್ತಿದ್ದರು. ದಂತಕತೆಯಾಗಿದ್ದ ಎನ್ರಿಕೋ ಕಾರುಸೊ ಜತೆ ಹಾಡಲು ಅದೆಷ್ಟೋ ಯುವಕ-ಯುವತಿಯರು ತವಕಪಡುತ್ತಿದ್ದರೂ ಅದು ಸಾಧ್ಯವಾಗದ ಮಾತಾಗಿತ್ತು. ಪ್ರಾಯ ಅರವತ್ತು ಸಮೀಪಿಸುವ ಸಮಯದಲ್ಲಿ, ಎಡಿಥ್ ಮೇಸನ್ ನಾಮಧೇಯದ ಯುವತಿಯೊಬ್ಬಳು ಸಂಗೀತ ಕ್ಷೇತ್ರದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದಳು. ಆ ಕಾಲಘಟ್ಟದಲ್ಲಿ, ಮೇಸನಳಿಗೂ ಎನ್ರಿಕೋ ಜತೆ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಮಹದಾಸೆಯಿತ್ತು. ಅಂತೂ ಆ ಸುಸಂದರ್ಭ ಬಂದೇ ಬಂತು. ಆ ಸಂಜೆ ಅಭಿಮಾನಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿದ್ದರು.

ಇನ್ನೇನು ಕಾರ್ಯಕ್ರಮ ಆರಂಭವಾಗಬೇಕು ಎನ್ನುವಾಗ, ವೇದಿಕೆಯ ಹಿಂದಿನಿಂದ ಸ್ವಲ್ಪ ದೂರದಿಂದ ಅವರಿಬ್ಬರು ನಡೆದುಕೊಂಡು ಬರುವ ಚಿತ್ರವನ್ನು ಕಲ್ಪಿಸಿಕೊಳ್ಳಿ. ಎನ್ರಿಕೋ ಸ್ವಲ್ಪ ನಡುಗುತ್ತಿರುವುದನ್ನು ಗಮನಿಸಿ ಮೇಸನ್ ಕೇಳುತ್ತಾಳೆ, ''ಸರ್, ನೀವು ಆರಾಮವಾಗಿದ್ದೀರಿ ತಾನೆ. ಏನಾದರೂ ಸಹಾಯ ಬೇಕಿತ್ತೆ?'' ಆಗ ಎನ್ರಿಕೋರವರು ಹೇಳಿದ್ದನ್ನು ನಾವು ಗಮನಿಸಲೇಬೇಕು- ''ಮಗು, ಇಂದು ನಿನ್ನೊಡನೆ ವೇದಿಕೆಯಲ್ಲಿ ಹಾಡುವುದನ್ನು ನೆನೆದು ನನಗೆ ಕಂಪನವಾಗುತ್ತಿದೆ. ಇಂದು ಕೇಳುಗರು ನನ್ನಿಂದ ನೂರಲ್ಲ, ನೂರೈವತ್ತು ಪ್ರತಿಶತ ನಿರ್ವಹಣೆ ನಿರೀಕ್ಷಿಸುತ್ತಾರೆ. ನೀನು ಈಗ ತಾನೇ ಅವರ ಸಂಪರ್ಕಕ್ಕೆ ಬರುವವಳು. ನೀನು ಹೇಗೆ ಹಾಡಿದರೂ ಸಲ್ಲುತ್ತದೆ. ನನಗೆ ಆ ಅವಕಾಶ ಇಲ್ಲ. ನನ್ನ ಮೇರುಕೀರ್ತಿ ನನ್ನನ್ನು 'ಶಿಕ್ಷಿಸೀತು'. ಈ ಪರಿಸ್ಥಿತಿ ಮುಂದೆ ನಿನಗೆ ಬಾರದ ಹಾಗೆ ನೋಡಿಕೊ. ದೇವರು ನಿನ್ನನ್ನು ಕಾಪಾಡಲಿ''.

ಎನ್ರಿಕೋರವರ ಆ ದಿನದ ಹಾಡು 'ನ ಭೂತೊ ನ ಭವಿಷ್ಯತಿ' ಎನ್ನುವಂತಿತ್ತು. ಯುವ ತಾರೆ ಮೇಸನ್ ಕೂಡ ಅಷ್ಟೇ ಮಿಂಚಿದ್ದಳಂತೆ. ಇಲ್ಲಿ ನಾವು ಗಮನಿಸಬೇಕಾದುದು ಸಾಧಕನೊಬ್ಬನ ವಿಶಿಷ್ಟತೆ ಮತ್ತು ವಿನಮ್ರತೆಯ ಉತ್ತುಂಗವನ್ನು. ಪ್ರತಿಸಲ ನಾವು ಮೇಲೇರದಿರಬಹುದು, ಆದರೆ ಪ್ರತಿಸಲ ನಮ್ಮ ಅಹಂ ಅನ್ನು ನಾವೇ ಮೆಟ್ಟಿನಿಲ್ಲಬೇಕು. ಮಹಾನ್ ವಿಜ್ಞಾನಿ ನ್ಯೂಟನ್‌ರವರು ಹೇಳಿದ ಮಾತನ್ನು ಇಲ್ಲಿ ಹೇಳಿ ಮುಗಿಸೋಣ: ''ನಾನು ನನ್ನ ಸಾಧನಾಪಥದಲ್ಲಿ ಒಂದಿಷ್ಟು ಹೆಚ್ಚು ಮತ್ತು ದೂರ ನೋಡಿದ್ದೇನೆ ಎಂದಾದರೆ ಅದು ಬೇರೆ ಸಾಧಕರ ಹೆಗಲಿನ ಮೇಲೆ ಕುಳಿತು!''.

ಸಮಾಚಾರ ಸಣ್ಣದಲ್ಲ

2ನೇ ಟೆಸ್ಟ್‌ಗೆ ಗಿಲ್ ಅನುಮಾನ

ಕೋಲ್ಕತಾ: ಕುತ್ತಿಗೆ ನೋವಿನಿಂದ ಬಳಲುತ್ತಿರುವ ಟೀಮ್ ಇಂಡಿಯಾ ನಾಯಕ ಶುಭ್‌ಮನ್ ಗಿಲ್ ಅವರು ನವೆಂಬರ್ 22ರಿಂದ 26 ರ ತನಕ ಗುವಾಹಟಿಯ ಬರ್ಸಪಾರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಟೆಸ್ಟ್ ಪಂದ್ಯಕ್ಕೆ ಅಲಭ್ಯರಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಗಿಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಬಿಸಿಸಿಐ ಭಾನುವಾರ ದೃಢಪಡಿಸಿದೆ. ಕೋಲ್ಕತಾ ಟೆಸ್ಟ್‌ನ ಎರಡನೇ ದಿನವಾದ ಶನಿವಾರ ಬ್ಯಾಟಿಂಗ್ ನಡೆಸುವ ವೇಳೆ ಗಿಲ್ ಅವರಿಗೆ ತೀವ್ರ ಕುತ್ತಿಗೆ ಉಳುಕು ಸಂಭವಿಸಿತ್ತು. ನೋವಿನಿಂದ ನರಳಿದ ಅವರು ಅರ್ಧಕ್ಕೆ ಬ್ಯಾಟಿಂಗ್ ನಿಲ್ಲಿಸಿ ಮೈದಾನ ತೊರೆದಿದ್ದರು, ಬಳಿಕ ಫೀಲ್ಡಿಂಗ್‌ಗೂ ಆಗಮಿಸಿರಲಿಲ್ಲ. ಕೋಲ್ಕತ್ತಾದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಬಿಸಿಸಿಐ ಮೂಲಗಳ ಪ್ರಕಾರ, ಗಿಲ್ ಫಿಟ್ ಆಗಲು ಕೆಲವು ದಿನಗಳು ಬೇಕಾಗುತ್ತದೆ ಮತ್ತು ಆ ಕಾರಣದಿಂದಾಗಿ ಅವರು ಎರಡನೇ ಟೆಸ್ಟ್‌ನಲ್ಲಿ ಭಾಗವಹಿಸದಿರಬಹುದು ಎನ್ನಲಾಗಿದೆ.

ತಂಡ ತೊರೆದ ಬಿಎಫ್‌ಸಿ ಕೋಚ್

ಬೆಂಗಳೂರು: ಎರಡು ವರ್ಷಗಳಿಂದ ಬೆಂಗಳೂರು ಫುಟ್ಬಾಲ್ ಕ್ಲಬ್ ತಂಡದ ಮುಖ್ಯ ಕೋಚ್ ಆಗಿದ್ದ ಜೆರಾರ್ಡ್ ಝರ್ಗೋಝಾ ಅವರು ಪರಸ್ಪರ ಸಮ್ಮತಿ ಮೇರೆಗೆ ಕ್ಲಬ್ ತೊರೆದಿದ್ದಾರೆ. ತಂಡ ಸಹಾಯಕ ಕೋಚ್

ಸೆಬಾಸ್ಟಿಯನ್ ವೇಗಾ ಹಾಗೂ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಅಯೋನಿಸ್ ಗ್ಕಿಯೋಕಾಸ್ ಅವರೂ ತಕ್ಷಣದಿಂದ ಜಾರಿಗೆ ಬರುವಂತೆ ಬಿಎಫ್‌ಸಿಯಿಂದ ಬೇರ್ಪಟ್ಟಿದ್ದಾರೆ. ಇದನ್ನು ಶುಕ್ರವಾರ ಬಿಎಫ್‌ಸಿ ಖಚಿತಪಡಿಸಿದೆ. 'ಬೆಂಗಳೂರು ಎಫ್‌ಸಿ ತಂಡದೊಂದಿಗೆ ಕಳೆದ ಸಮಯಕ್ಕಾಗಿ ಜೆರಾರ್ಡ್ ಮತ್ತು ಅವರ ಸಿಬ್ಬಂದಿಗೆ ಧನ್ಯವಾದ ಅರ್ಪಿಸುತ್ತೇವೆ. ಹೊಸ ಸವಾಲನ್ನು ಎದುರು ನೋಡುತ್ತಿರುವ ಅವರಿಗೆ ಶುಭ ಹಾರೈಕೆಗಳು' ಹೇಳಿಕೆಯಲ್ಲಿ ತಿಳಿಸಿದೆ. ತಂಡದ ಸಹಾಯಕ ಕೋಚ್ ಆಗಿರುವ ರೆನೆಡಿ ಸಿಂಗ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಧ್ಯಂತರ ಮುಖ್ಯ ಕೋಚ್ ಆಗಿ ಬಿಎಫ್‌ಸಿ ನೇಮಿಸಿದೆ. ಸ್ಪೇನ್‌ನ 43 ವರ್ಷದ ಜೆರಾರ್ಡ್ ಅವರು 2023ರ ಡಿಸೆಂಬರ್‌ನಲ್ಲಿ ಬಿಎಫ್‌ಸಿಯ ಮುಖ್ಯ ಕೋಚ್ ಆಗಿ ಜವಾಬ್ದಾರಿ ವಹಿಸಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ತಂಡವು 2024-25ರ ಐಎಸ್‌ಎಲ್ ಋತುವಿನಲ್ಲಿ ರನ್ನರ್ಸ್ ಅಪ್ ಆಗಿತ್ತು. ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಗಳೊಂದಿಗೆ ಪ್ಲೇ ಆಫ್ ಪ್ರವೇಶಿಸಿದ್ದ ತಂಡವು ಫೈನಲ್‌ನಲ್ಲಿ 1-2ರಿಂದ ಮೋಹನ್ ಬಾಗನ್ ವಿರುದ್ಧ ಸೋತಿತ್ತು.

ಬ್ಯಾಟಿಂಗ್ ವೈಫಲ್ಯಕ್ಕೆ ಬೆಲೆ ತೆತ್ತ ಟೀಮ್ ಇಂಡಿಯಾ | ದ.ಆಫ್ರಿಕಾ ಬೌಲಿಂಗ್‌ಗೆ ತತ್ತರಿಸಿದ ಗಿಲ್ ಪಡೆ

ಭಾರತಕ್ಕೆ ಆಘಾತಕಾರಿ ಸೋಲು

ಕೋಲ್ಕತ್ತಾ: ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ನೀಡಿದ ಕೇವಲ 124 ರನ್‌ಗಳ ಗುರಿಯನ್ನು ಬೆನ್ನಟ್ಟಲಾಗದೇ 30 ರನ್‌ಗಳ ಸೋಲನ್ನು ಕಂಡಿದೆ.

ಭಾನುವಾರ 3ನೇ ದಿನ 7 ವಿಕೆಟ್‌ಗೆ 97 ರನ್‌ನೊಂದಿಗೆ ಬ್ಯಾಟಿಂಗ್ ಮುಂದುವರಿಸಿದ ದ.ಆಫ್ರಿಕಾ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 153 ರನ್ ಗಳಿಸಿತ್ತು. ಮೊದಲ ಇನ್ನಿಂಗ್ಸ್‌ನಲ್ಲಿ 30 ರನ್‌ಗಳ ಹಿನ್ನಡೆ ಹೊಂದಿದ್ದರಿಂದ ಭಾರತವು 124 ರನ್‌ಗಳ ಸಾಧಾರಣ ಗುರಿ ಪಡೆದಿತ್ತು, ಆದರೆ ಕೇವಲ 93 ರನ್‌ಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 30 ರನ್‌ಗಳ ಹೀನಾಯ ಸೋಲು ಕಂಡಿತು.

ಶುಭ್‌ಮನ್ ಗಿಲ್ ಗಾಯಗೊಂಡು ಪಂದ್ಯದಿಂದ ಹೊರಬಿದ್ದಿರುವುದರಿಂದ ಟೀಮ್ ಇಂಡಿಯಾ 10 ಆಟಗಾರರೊಂದಿಗೆ ಮಾತ್ರ ಚೇಸಿಂಗ್‌ಗೆ ಇಳಿದಿತ್ತು, ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಭಾರತ ತಂಡ ಮೊದಲ ಓವರ್‌ನಲ್ಲಿಯೇ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ (0) ವಿಕೆಟ್ ಕಳೆದುಕೊಂಡಿತು, ನಂತರ 1 ರನ್ ಗಳಿಸಿದಾಗ ಮತ್ತೊಬ್ಬ ಆರಂಭಿಕ ಬ್ಯಾಟರ್ ಕೆಎಲ್ ರಾಹುಲ್ ಕೂಡ ನಿರ್ಗಮಿಸಿದರು. ಅವರಿಬ್ಬರನ್ನೂ ಮಾರ್ಕೊ ಜಾನ್ಸೆನ್ ಪೆವಿಲಿಯನ್‌ಗಟ್ಟಿದರು.

ಈ ಹಂತದಲ್ಲಿ ಒಂದಾದ ವಾಷಿಂಗ್ಟನ್ ಸುಂದರ್ ಹಾಗೂ ಧ್ರುವ್ ಜುರೆಲ್ 32 ರನ್‌ಗಳ ಮಹತ್ವದ ಜತೆಯಾಟ ನಡೆಸಿ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು, ಆದರೆ ಜುರೆಲ್ 34 ಎಸೆತಗಳಲ್ಲಿ 3 ಬೌಂಡರಿಗಳ ಸಹಿತ ಕೇವಲ 13 ರನ್ ಗಳಿಸಿ ಹಾರ್ಮರ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಹಂಗಾಮಿ ನಾಯಕ ರಿಷಭ್ ಪಂತ್ ಕೇವಲ 2 ರನ್ ಗಳಿಸಿ ಹಾರ್ಮರ್ ಬೌಲಿಂಗ್‌ನಲ್ಲೇ ಅವರಿಗೇ ಕ್ಯಾಚ್ ನೀಡಿ ಔಟ್ ಆದರು.

5ನೇ ವಿಕೆಟ್ ಜತೆಯಾಟದಲ್ಲಿ ಸುಂದರ್ ಹಾಗೂ ಜಡೇಜಾ 26 ರನ್ ಸೇರಿಸಿದರು. ಆದರೆ 26 ಬಾಲ್‌ಗಳಲ್ಲಿ 18 ರನ್ ಗಳಿಸಿದ್ದ ಜಡೇಜಾರನ್ನು ಹಾರ್ಮರ್ ಅವರು ಎಲ್‌ಬಿಡಬ್ಲ್ಯು ಬಲೆಗೆ ಕೆಡವುತ್ತಿದ್ದಂತೆ ಭಾರತ ತಂಡದ ಗೆಲುವಿನ ಆಸೆ ಕಮರಿತು. ಜಡೇಜಾ ಬೆನ್ನಲ್ಲೇ 92 ಎಸೆತಗಳಲ್ಲಿ 31 ರನ್ ಗಳಿಸಿದ್ದ ವಾಷಿಂಗ್ಟನ್ ಸುಂದರ್ ಮಾರ್ಕ್ರಮ್ ಬೌಲಿಂಗ್‌ನಲ್ಲಿ ಹಾರ್ಮರ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು. ಕುಲ್ದೀಪ್ ಯಾದವ್ 1 ರನ್ ಗಳಿಸಿ ಹಾರ್ಮರ್‌ಗೆ 3ನೇ ಬಲಿಯಾದರು.

15 ವರ್ಷಗಳ ಬಳಿಕ ದ.ಆಫ್ರಿಕಾಕ್ಕೆ ಭಾರತದ ನೆಲದಲ್ಲಿ ಟೆಸ್ಟ್ ಗೆಲುವು

ಕಳೆದ 15 ವರ್ಷಗಳಿಂದ ದಕ್ಷಿಣ ಆಫ್ರಿಕಾ ತಂಡ ಭಾರತದ ನೆಲದಲ್ಲಿ ಒಂದೇ ಒಂದು ಟೆಸ್ಟ್ ಗೆದ್ದಿರಲಿಲ್ಲ. 2010ರಲ್ಲಿ ನಾಗ್ಪುರದಲ್ಲಿ ನಡೆದ ಪಂದ್ಯದಲ್ಲಿ ಭಾರತವನ್ನು ದಕ್ಷಿಣ ಆಫ್ರಿಕಾ ಸೋಲಿಸಿತ್ತು. ಆ ನಂತರ ಸತತ 7 ಪಂದ್ಯಗಳಲ್ಲಿ ಭಾರತದ ವಿರುದ್ಧ ಸೋಲು ಕಂಡಿದ್ದ ಹರಿಣ ಪಡೆ ಭಾನುವಾರ ಗೆಲುವು ಸಾಧಿಸಿದೆ. ಇದು ತೆಂಬ ಬವುಮಾ ನಾಯಕತ್ವದ 11ನೇ ಜಯವಾಗಿದೆ. ಬವುಮಾ ನಾಯಕತ್ವದಲ್ಲಿ ಹರಿಣ ಪಡೆ ಇದುವರೆಗೂ ಟೆಸ್ಟ್ ಪಂದ್ಯವನ್ನು ಸೋತೇ ಇಲ್ಲ ಎನ್ನುವುದು ಅಚ್ಚರಿಯ ಸಂಗತಿ.

ತಂಡದ ಮೊತ್ತ 77ಕ್ಕೆ 7 ಇದ್ದಾಗ ಅಕ್ಷರ್ ಪಟೇಲ್ ಸ್ಫೋಟಕ ಆಟಕ್ಕೆ ಮುಂದಾಗಿ ವಿಕೆಟ್ ಕೈ ಚೆಲ್ಲಿದರು. ಕೇಶವ್ ಮಹಾರಾಜರ ಒಂದೇ ಓವರ್‌ನಲ್ಲಿ ಒಂದು ಬೌಂಡರಿ, 2 ಸಿಕ್ಸರ್ ಸಿಡಿಸಿದ ಪಟೇಲ್ ಅದೇ ಓವರ್‌ನ 5ನೇ ಎಸೆತದಲ್ಲಿ

ಮತ್ತೊಂದು ದೊಡ್ಡ ಹೊಡೆತಕ್ಕೆ ಮುಂದಾಗಿ ವಿಕೆಟ್ ಕಳೆದುಕೊಂಡರು. ಸಿರಾಜ್ ಕೂಡ ಅದೇ ಓವರ್‌ನ ಕೊನೆಯ ಎಸೆತದಲ್ಲಿ ಔಟ್ ಆಗುವ ಮೂಲಕ ಭಾರತ ತನ್ನ 9ನೇ ವಿಕೆಟ್ ಕಳೆದುಕೊಂಡಿತು. ಶುಭ್‌ಮನ್ ಗಿಲ್ ಗಾಯಗೊಂಡಿದ್ದರಿಂದ ಅವರನ್ನು ರಿಟೈರ್ಡ್ ಔಟ್ ಎಂದು ಘೋಷಣೆ ಮಾಡಿ, ದಕ್ಷಿಣ ಆಫ್ರಿಕಾ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು.

ದಕ್ಷಿಣ ಆಫ್ರಿಕಾ ಪರ ಸಿಮೋನ್ ಹಾರ್ಮರ್ 21 ರನ್ ನೀಡಿ 4 ವಿಕೆಟ್ ಪಡೆದು ಗೆಲುವಿನ ರೂವಾರಿಯಾದರು. ಅವರು ಮೊದಲ ಇನ್ನಿಂಗ್ಸ್‌ನಲ್ಲೂ 4 ವಿಕೆಟ್ ಪಡೆದಿದ್ದರು. ಅವರಿಗೆ ಸಾಥ್ ನೀಡಿದ ಮಾರ್ಕೊ ಜಾನ್ಸನ್ 15 ರನ್‌ಗೆ 2 ವಿಕೆಟ್, ಕೇಶವ್ ಮಹಾರಾಜ 37 ರನ್‌ಗೆ 2 ವಿಕೆಟ್, ಐಡೆನ್ ಮಾರ್ಕ್ರಮ್ 1 ವಿಕೆಟ್ ಪಡೆದರು.

ಮಿಂಚಿದ ಸ್ಮರಣ್ ರವಿಚಂದ್ರನ್, ಕರುಣ್ ನಾಯರ್

ರಣಜಿ: ಸುಸ್ಥಿತಿಯಲ್ಲಿ ಕರ್ನಾಟಕ

ಹುಬ್ಬಳ್ಳಿ: ಸ್ಮರಣ್ ರವಿಚಂದ್ರನ್ ಅವರ ಅಜೇಯ ಶತಕ (110) ಹಾಗೂ ಕರುಣ್ ನಾಯರ್ ಅವರ ಆಕರ್ಷಕ ಬ್ಯಾಟಿಂಗ್ (95) ನೆರವಿನಿಂದ ಕರ್ನಾಟಕವು ಭಾನುವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಿನದಾಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 298 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡವು ಆರಂಭಿಕ ಆಘಾತವನ್ನು ಎದುರಿಸಿತು. ಮೊತ್ತ 13 ರನ್ ಗಳಾಗಿದ್ದಾಗ ಕೇವಲ 9 ರನ್ ಗಳಿಸಿದ್ದ ತಂಡದ ನಾಯಕ ಮಯಾಂಕ್ ಅಗರ್ವಾಲ್ ಅವರು ಜಗ್ಜೀತ್ ಸಿಂಗ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ವಿಕೆಟ್ ಕಳೆದುಕೊಂಡರು. ಆ ನಂತರದ ಓವರ್‌ನಲ್ಲಿ ಕೇವಲ 2 ರನ್ ಗಳಿಸಿದ್ದ ಕೆ.ವಿ.ಅನೀಶ್ ಅವರು ತಮ್ಮ ವಿಕೆಟ್ ಒಪ್ಪಿಸಿದರು.

ಬಳಿಕ ಕೆವಿಲ್ ಶ್ರೀಜಿತ್ ಮತ್ತು ಕರುಣ್ ನಾಯರ್ ಮಧ್ಯೆ ಜತೆಯಾಟ ಸಾಗಿತು. ಆದರೆ ತಂಡದ ಸ್ಕೋರ್ 64 ಆಗಿದ್ದ ವೇಳೆ 17 ರನ್ ಗಳಿಸಿದ್ದ ಕೆಎಲ್ ಶ್ರೀಜಿತ್ ನಿಶುಂಕ್ ಬಿರ್ಲಾ ಅವರ ಅವರ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಆಗಿ ತಮ್ಮ ವಿಕೆಟ್ ಕಳೆದುಕೊಂಡರು. ಬಳಿಕ ಕರುಣ್ ನಾಯರ್-ಸ್ಮರಣ್ ರವಿಚಂದ್ರನ್ ಮಧ್ಯೆ ಸೊಗಸಾದ ನಾಲ್ಕನೇ ವಿಕೆಟ್ ಜತೆಯಾಟ ಮೂಡಿಬಂತು.

164 ಬಾಲ್ ಎದುರಿಸಿ 95 ರನ್ ಗಳಿಸಿದ್ದ ಕರುಣ್ ನಾಯರ್ ಎಲ್‌ಬಿಡಬ್ಲ್ಯು ಆಗಿ ಔಟ್ ಆದರು.ಆಗ ಕರ್ನಾಟಕ ತಂಡದ ಮೊತ್ತ 183 ರನ್ ಆಗಿತ್ತು. ಕರುಣ್ ಅವರ ಇನ್ನಿಂಗ್ಸ್‌ನಲ್ಲಿ 1 ಸಿಕ್ಸರ್ ಮತ್ತು 12 ಬೌಂಡರಿಗಳಿದ್ದವು. ಆ ನಂತರ ಅಭಿನವ್ ಮನೋಹರ್ ಅವರು ಸ್ಮರಣ್ ರವಿಚಂದ್ರನ್ ಅವರಿಗೆ ಜತೆಯಾಗಿ ಇನ್ನಿಂಗ್ಸ್ ಮುಂದುವರಿಸಿದರು.

14 ಬಾಲ್ ಎದುರಿಸಿ 11 ರನ್ ಪಡೆದ ಅಭಿನವ್ ಮನೋಹರ್ ನಿಶುಂಕ್ ಬಿರ್ಲಾ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ಪೆವಿಲಿಯನ್

ಸೇರಿದರು. ಬಳಿಕ ಬಂದ ಶ್ರೇಯಸ್ ಗೋಪಾಲ್ ಅವರ ಜತೆ ಸ್ಮರಣ್ ರವಿಚಂದ್ರನ್ ಇನ್ನಿಂಗ್ಸ್ ಮುಂದುವರಿಸಿದರು. ಭಾನುವಾರ ಮೊದಲ ದಿನದಾಂತ್ಯಕ್ಕೆ ಶತಕ ಸಿಡಿಸಿದ ಸ್ಮರಣ್ ಅಜೇಯ 110 ರನ್ ಗಳಿಸಿ ಕ್ರೀಸ್‌ನಲ್ಲಿದ್ದು ಸೋಮವಾರಕ್ಕೆ ತಮ್ಮ ವಿಕೆಟ್ ಕಾಯ್ದು ಕೊಂಡಿದ್ದಾರೆ. ಅವರ ಇನ್ನಿಂಗ್ಸ್‌ನಲ್ಲಿ 1 ಸಿಕ್ಸರ್ ಮತ್ತು 11 ಬೌಂಡರಿಗಳಿದ್ದವು.

ಮತ್ತೊಂದೆಡೆ ಕ್ರೀಸ್‌ನಲ್ಲಿರುವ ಶ್ರೇಯಾಸ್ ಗೋಪಾಲ್ 80 ಬಾಲ್ ಎದುರಿಸಿ 34 ರನ್ ಗಳಿಸಿ ಅಜೇಯರಾಗಿ ಸೋಮವಾರಕ್ಕೆ ತಮ್ಮ ವಿಕೆಟ್ ಉಳಿಸಿಕೊಂಡಿದ್ದಾರೆ. ಸ್ಮರಣ್ ರವಿಚಂದ್ರನ್-ಶ್ರೇಯಾಸ್ ಗೋಪಾಲ್ ಜೋಡಿ ಸೋಮವಾರ ಉತ್ತಮವಾಗಿ ಆಡಲು ಸಾಧ್ಯವಾದರೆ ಕರ್ನಾಟಕದ ಮೊದಲ ಇನ್ನಿಂಗ್ಸ್ ಮೊತ್ತ 400 ರನ್ ದಾಟುವ ಸಾಧ್ಯತೆ ಇದೆ.

ಚಂಡೀಗಢ ತಂಡದ ಪರ ನಿಶುಂಕ್ ಬಿರ್ಲಾ 2 ವಿಕೆಟ್ ಪಡೆದರೆ, ಜಗ್ಜೀತ್ ಸಿಂಗ್, ರಾಜ್ ಅಂಗದ್ ಮತ್ತು ತನ್ಪ್ರೀತ್ ಸಿಂಗ್ ತಲಾ ಒಂದು ವಿಕೆಟ್ ಗಳಿಸಿದರು.

ವಿಶ್ವಕಪ್ ಚೆಸ್ ಟೂರ್ನಿ | ಎಂಟರ ಘಟಕ್ಕೆ ತಲುಪಿದ ಭಾರತದ ಗ್ರ್ಯಾಂಡ್ ಮಾಸ್ಟರ್

ಅರ್ಜುನ್ ಇರಿಗೇಶಿ ಕ್ವಾ. ಫೈನಲ್‌ಗೆ ಲಗ್ಗೆ

ಪಣಜಿ: ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಎರಡು ಬಾರಿಯ ವಿಜೇತ ಲೆವೋನ್ ಅರೋನಿಯನ್ ಅವರನ್ನು ಐದನೇ ಸುತ್ತಿನ ಎರಡನೇ ಕ್ಲಾಸಿಕಲ್ ಆಟದಲ್ಲಿ ಸೋಲಿಸಿ, ವಿಶ್ವಕಪ್ ಚೆಸ್ ಟೂರ್ನಿಯ ಎಂಟರ ಘಟ್ಟಕ್ಕೆ ದಾಪುಗಾಲಿಟ್ಟರು. ಅವರಿಬ್ಬರ ನಡುವಣ ಮೊದಲ ಆಟ ಡ್ರಾ ಆಗಿದ್ದು, ಅರ್ಜುನ್ ಪಂದ್ಯವನ್ನು 1.5-0.5ರಲ್ಲಿ ಗೆದ್ದರು.

ಕಪ್ಪು ಕಾಯಿಗಳಲ್ಲಿ ಆಡಿದ ಅರ್ಜುನ್ ಆಟದುದ್ದಕ್ಕೂ ನಿಯಂತ್ರಣ ಸಾಧಿಸಿದ್ದರು. 39ನೇ ನಡೆಯಲ್ಲಿ ಅಮೆರಿಕದ ಆರೋನಿಯನ್ ಸೋಲೊಪ್ಪಿಕೊಂಡರು. ಆರೋನಿಯನ್ ಟೂರ್ನಿಯುದ್ದಕ್ಕೂ ಅಮೋಘ ಫಾರ್ಮ್‌ನಲ್ಲಿದ್ದರು. ಅರ್ಜುನ್ ಈಗ ವಿಶ್ವಕಪ್‌ನಿಂದ ಮೂರು ಹೆಜ್ಜೆ ದೂರದಲ್ಲಿದ್ದಾರೆ. ಅರ್ಜುನ್ ಇರಿಗೇಶಿ ಜೊತೆ, ಉಜ್ಬೇಕಿಸ್ತಾನದ ನದಿರ್ಬೆಕ್ ಯಾಕುಬೊಯೆವ್, ಚೀನಾದ ವೀ ಯಿ ಸಹ ಎಂಟರ ಘಟ್ಟ ತಲುಪಿದರು. ಯಾಕುಬೊಯೆವ್ ಅವರು ಅರ್ಮೇನಿಯಾದ ಗೇಬ್ರಿಯಲ್ ಸರ್ಗಿಸಿಯಾನ್ ಅವರನ್ನು 1.5-0.5ರಿಂದ, ವೀ ಯಿ 1.5-0.5ರಿಂದ ಜರ್ಮನಿಯ ಸ್ಯಾಮುಯೆಲ್ ಸೆವಿನ್ ಅವರನ್ನು ಮಣಿಸಿದರು. ಯಾಕುಬೊ

ಯೆವ್, ವೀ ಯಿ ಇಬ್ಬರೂ ಎರಡನೇ ಆಟದಲ್ಲಿ ಗೆದ್ದರು. ಅಮೆರಿಕದ ಸ್ಯಾಮ್ ಶಂಕ್ಲಾಂಡ್ -ರಷ್ಯಾದ ಡೇನಿಯಲ್ ದುಬೋವ್, ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಮತ್ತು ಅಲೆಕ್ಸಿ ಗ್ರೆಬ್ನೆವ್, ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ, ವಿಯೆಟ್ನಾಮಿನ ಲೀಮ್ ಲೆ ಕ್ವಾಂಗ್ ಸಹ ಟೈಬ್ರೇಕರ್ ಆಡಬೇಕಾಗಿದೆ. ಗೆದ್ದವರು ಎಂಟರ ಘಟ್ಟ ತಲುಪಲಿದ್ದಾರೆ.

ಅಬುಧಾಬಿಯಲ್ಲಿ ಹರಾಜು ನಡೆಯಲಿರುವುದನ್ನು ಖಚಿತಪಡಿಸಿದ ಬಿಸಿಸಿಐ

ಡಿ.16ರಂದು ಐಪಿಎಲ್ ಹರಾಜು

ಮುಂಬಯಿ: 2026ರ ಋತುವಿಗೆ ಮುಂಚಿತವಾಗಿ ನಡೆಯಲಿರುವ ಐಪಿಎಲ್ ಹರಾಜು ಪ್ರಕ್ರಿಯೆಯು ಡಿಸೆಂಬರ್ 16ರಂದು ನಡೆಯಲಿದೆ ಎಂದು ಬಿಸಿಸಿಐ ದೃಢಪಡಿಸಿದೆ. ಅಬುಧಾಬಿಯಲ್ಲಿರುವ ಎತಿಹಾದ್ ಅರೆನಾವನ್ನು ಹರಾಜಿನ ಸ್ಥಳವಾಗಿ ಆಯ್ಕೆ ಮಾಡಲಾಗಿದೆ. ಹರಾಜಿನಲ್ಲಿ ವ್ಯವಹಿಸಲು ತಂಡಗಳು ಒಟ್ಟು 237.55 ಕೋಟಿ ರು. ಮೊತ್ತವನ್ನು ಹೊಂದಿರುತ್ತವೆ. ಉಳಿಸಿಕೊಂಡ ನಂತರ, ಹರಾಜಿನಲ್ಲಿ ಗರಿಷ್ಠ 77 ಸ್ಥಾನಗಳನ್ನು ಭರ್ತಿ ಮಾಡಬಹುದು, ಅದರಲ್ಲಿ 31 ಸ್ಥಾನಗಳು ವಿದೇಶಿ ಆಟಗಾರರು ಸೇರಿದ್ದಾರೆ. ಒಂದೇ ದಿನದಲ್ಲಿ ಮಿನಿ ಹರಾಜು ನಡೆಯಲಿದೆ.

ಆ್ಯಂಡ್ರೆ ರಸೆಲ್ ಮತ್ತು ವೆಂಕಟೇಶ್ ಅಯ್ಯರ್ ಅವರಂತಹ ಉನ್ನತ ಆಟಗಾರರನ್ನು ಬಿಡುಗಡೆ

ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್, ಅತಿ ಹೆಚ್ಚು ಹಣದೊಂದಿಗೆ ಹರಾಜಿಗೆ ಪ್ರವೇಶಿಸಲಿದೆ, ನಂತರ ಚೆನ್ನೈ ಸೂಪರ್ ಕಿಂಗ್ಸ್ ಎರಡನೇ ಸ್ಥಾನದಲ್ಲಿದೆ. ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಈಗ 20 ಆಟಗಾರರನ್ನು ಹೊಂದಿದ್ದು, ಕಡಿಮೆ ಹಣದೊಂದಿಗೆ (2.75 ಕೋಟಿ) ಹರಾಜಿಗೆ ಪ್ರವೇಶಿಸಲಿದೆ.

ಆರ್‌ಸಿಬಿ ವಿರುದ್ಧ ಟೀಕೆ: ಆರ್‌ಸಿಬಿ ತಂಡವು ಮುಂಬರುವ ಐಪಿಎಲ್ ಆವೃತ್ತಿಯಲ್ಲಿ ಎಡಗೈ ವೇಗಿ ಯಶ್ ದಯಾಳ್ ಅವರನ್ನು ತಂಡದಲ್ಲಿ ಉಳಿಸಿಕೊಂಡ ನಿರ್ಧಾರಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಅತ್ಯಾಚಾರ ಆರೋಪದಲ್ಲಿ ಎರಡು ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವಾಗ ಯಶ್ ದಯಾಳ್ ಅವರನ್ನು ತಮ್ಮ ತಂಡದಲ್ಲಿ ಉಳಿಸಿಕೊಂಡಿರುವುದಕ್ಕೆ ಅಭಿಮಾನಿಗಳಿಗಳಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ದಯಾಳ್ ಅವರನ್ನು ಉತ್ತರ ಪ್ರದೇಶ ಕ್ರಿಕೆಟ್ ಸಂಸ್ಥೆ (ಯುಪಿಸಿಎ) ಯುಪಿ ಟಿ20 ಲೀಗ್‌ನಲ್ಲಿ ಭಾಗವಹಿಸದಂತೆ ಅಮಾನತುಗೊಳಿಸಿದೆ, ಹೀಗಿರುವ ಆರ್‌ಸಿಬಿ ಏಕೆ ಅವರನ್ನು ರಿಟೇನ್ ಮಾಡಿದೆ ಎಂದು ಹಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಶ್ನಿಸಿದ್ದಾರೆ.

ರುಧ ಚಿತ್ರಕ್ಕೆ ಮುಹೂರ್ತ

ಮಹಿಳಾ ಪ್ರಧಾನ ಕಥೆಯ ರುಧ ಸೆಟ್ಟೇರಿದೆ. ಈ ಚಿತ್ರದ ಮುಹೂರ್ತ ಸಮಾರಂಭವು ಬೆಂಗಳೂರಿನ ಸಂಜಯ್ ನಗರದ ರಾಘವೇಂದ್ರ ಸ್ವಾಮಿಗಳ

ಬೃಂದಾವನ ಸನ್ನಿಧಿಯಲ್ಲಿ ನಡೆಯಿತು. ಪ್ರಥಮ ದೃಶ್ಯಕ್ಕೆ ನಟಿ ಅನು ಪ್ರಭಾಕರ್ ಮತ್ತು ರಘು ಮುಖರ್ಜಿ ಕ್ಲಾಪ್ ಮಾಡಿ ಶುಭ ಹಾರೈಸಿದರು. ಕೆಪಿಜಿ ವಿಷನ್ಸ್ ಬ್ಯಾನರ್‌ನಲ್ಲಿ ಪುಟ್ಟರಾಜು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದು, ಶರತ್ ಶಿಡ್ಲಘಟ್ಟ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ವರಲಕ್ಷ್ಮೀ, ಮಾನಸಾಗೌಡ, ರಥರ್ವ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಹದಿನಾಲ್ಕು ವರ್ಷಗಳ ಹಿಂದೆ ಕೇರಳದಲ್ಲಿ ನಡೆದಂತಹ ಸತ್ಯ ಘಟನೆಯನ್ನು ಆಧರಿಸಿ ಚಿತ್ರದ ಕಥೆಯನ್ನು ಹೆಣೆಯಲಾಗಿದ್ದು, ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಸಿನಿಮಾವನ್ನು ಕಟ್ಟಿಕೊಡಲಾಗುತ್ತದೆ. ರುಧ ಸಂಸ್ಕೃತ ಪದವಾಗಿದ್ದು, ನಟೋರಿಯಸ್ ಎಂಬ ಅರ್ಥ ಕೊಡುತ್ತದೆ. ಚಿತ್ರದಲ್ಲಿ ರಕ್ತದೋಕುಳಿ ಹೆಚ್ಚಾಗಿರಲಿದ್ದು, ಇದು ಸನ್ನಿವೇಶಗಳಿಗೆ ಪೂರಕವಾಗಿರುತ್ತದೆ. ಮೂರು ಮುಖ್ಯ ಪಾತ್ರಗಳನ್ನು ಹೊರತುಪಡಿಸಿ, ಉಳಿದಂತೆ ಅನುಭವಿ ರಂಗಭೂಮಿ ಕಲಾವಿದರುಗಳಿಗೆ ಅವಕಾಶ ಮಾಡಿ ಕೊಡಲಾಗುತ್ತಿದೆ. ಪ್ರಮೋದ್ ಮರವಂತೆ ಸಾಹಿತ್ಯದಲ್ಲಿ ಮೂರು ಹಾಡುಗಳು ಸಿದ್ಧವಾಗಿದ್ದು, ಸಂಗೀತ ಸಂಯೋಜನೆಯ ಕಾರ್ಯವೂ ನಡೆಯುತ್ತಿದೆ ಎಂದು ನಿರ್ದೇಶಕರು ತಿಳಿಸಿದರು.

ರಾಜು ಹೆಮ್ಮಿಗೆಪುರ ಛಾಯಾಗ್ರಹಣ, ವಿಜಯ್ ಸಂಕಲನ ಈ ಚಿತ್ರಕ್ಕಿದೆ. ನವೆಂಬರ್ ಕೊನೆ ವಾರದಿಂದ ಶೂಟಿಂಗ್ ಆರಂಭಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದ್ದು, ಕೊಡಗಿನ ಸುಂದರ ತಾಣಗಳಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಮೂನ್‌ವಾಕ್‌ಗೆ ರೆಹಮಾನ್ ಸಂಗೀತ

ದಕ್ಷಿಣ ಭಾರತದ ಖ್ಯಾತ ಸಂಗೀತ ಸಂಸ್ಥೆ ಲಹರಿ ಮ್ಯೂಸಿಕ್ ಎ.ಆರ್. ರೆಹಮಾನ್ ಮತ್ತು ಪ್ರಭುದೇವ ಅವರನ್ನು ಮತ್ತೆ ಒಟ್ಟುಗೂಡಿಸುತ್ತಿದೆ. ಅದು ಬರೋಬ್ಬರಿ ಇಪ್ಪತ್ತೊಂಬತ್ತು ವರ್ಷಗಳ ನಂತರ ಎಂಬುದು ವಿಶೇಷ. ಮೂನ್ ವಾಕ್ ಸಿನಿಮಾದ ಮೂಲಕ ಇದು ಸಾಧ್ಯವಾಗಿದೆ. ಬಿಹೈಂಡ್‌ವುಡ್ಸ್‌ನ ಮನೋಜ್ ನಿರ್ಮಲಾ ಶ್ರೀಧರನ್ ಮೂನ್‌ವಾಕ್ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸಂಗೀತ, ನೃತ್ಯ ಮತ್ತು ಕೌಟುಂಬಿಕ ಕಥಾಹಂದರದ ಸಿನಿಮಾ ಇದಾಗಿದ್ದು, ಆಸ್ಕರ್ ಪ್ರಶಸ್ತಿ ವಿಜೇತ, ಮ್ಯೂಸಿಕ್ ಮಾಂತ್ರಿಕ ಎ.ಆರ್. ರೆಹಮಾನ್ ಈ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ, ಪ್ರಭುದೇವ ನಾಯಕನಾಗಿ ನಟಿಸುತ್ತಿದ್ದಾರೆ. ಆ ಕಾರಣಕ್ಕೆ ಸಿನಿಮಾದ ಬಗ್ಗೆ ನಿರೀಕ್ಷೆ ದುಪ್ಪಟ್ಟಾಗಿದೆ.

ಲಹರಿ ಈ ಹಿಂದೆ ಜೆಂಟಲ್‌ಮನ್ ಮತ್ತು ಕಾದಲನ್‌ನಂತಹ ಮೈಲಿಗಲ್ಲು ಸ್ಥಾಪಿಸಿದ ಸಿನಿಮಾದ ಹಾಡುಗಳನ್ನು ಸಹ ಬಿಡುಗಡೆ ಮಾಡಿತ್ತು. ಇದೀಗ ಎ.ಆರ್.ರೆಹಮಾನ್ ಮತ್ತು ಪ್ರಭುದೇವ ಅವರೊಂದಿಗೆ ಮತ್ತೆ ಒಂದಾಗಿದೆ. ಮೂನ್‌ವಾಕ್ ಚಿತ್ರದಲ್ಲಿ ಪ್ರಭುದೇವ ನಾಯಕನಾಗಿ ನಟಿಸಿದ್ದು, ಯೋಗಿ ಬಾಬು, ಅಜು ವರ್ಗೀಸ್, ಅರ್ಜುನ್ ಅಶೋಕನ್, ಸ್ವಾಟ್ಜ್, ಸುಶ್ಮಿತಾ ನಾಯಕ್, ಸಂತೋಷ್ ಜಾಕೋಬ್, ದೀಪಾ ಶಂಕರ್ ಮತ್ತು ರಾಮ್‌ಕುಮಾರ್ ನಟರಾಜನ್ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ.

ಇದು ನಮ್ಮ ಸಂಗೀತ ಉದ್ಯಮದ ಐವತ್ತನೇ ವರ್ಷವಾಗಿದೆ. ಈ ನಡುವೆ ಮೂನ್‌ವಾಕ್ ಚಿತ್ರದ ಸಂಗೀತ

ಪಾಲುದಾರರಾಗಿರುವುದು ಸಂತೋಷ ತಂದಿದೆ. ಮೂನ್‌ವಾಕ್ ಸಿನಿಮಾದ ಹಾಡುಗಳು ಹೃದಯ ಬಡಿತದಂತಿವೆ. ಎ.ಆರ್.ರೆಹಮಾನ್ ಅವರ ಅಸಾಮಾನ್ಯ ಸಂಗೀತ ಜಗತ್ತಿನ ಮೂಲೆ ಮೂಲೆಗೆ ತಲುಪಲಿದೆ. ನಾನು ಐದು ಹಾಡುಗಳನ್ನು ಕೇಳಿದ್ದೇನೆ. ಅವೆಲ್ಲವೂ ವಿಭಿನ್ನ ಮತ್ತು ವಿಶಿಷ್ಟವಾಗಿವೆ ಎಂದು ಲಹರಿ ಮ್ಯೂಸಿಕ್ ಸಂಸ್ಥಾಪಕ ಮನೋಹರನ್ ನಾಯ್ಡು ಸಂತಸ ಹಂಚಿಕೊಂಡರು.

ಎ.ಆರ್. ರೆಹಮಾನ್ ಅವರ ಮೊದಲ ಆಲ್ಬಂ ರೋಜಾ ಗೀತೆಗಳನ್ನು ಪರಿಚಯಿಸಿದ ಹೆಗ್ಗಳಿಕೆ ಲಹರಿ ಸಂಸ್ಥೆಗೆ ಸಲ್ಲುತ್ತದೆ. ಅದು ಭಾರಿ ಯಶಸ್ಸು ಗಳಿಸಿ, ಭಾರತೀಯ ಸಂಗೀತ ಕ್ಷೇತ್ರದಲ್ಲಿ ದೊಡ್ಡ ಮೈಲಿಗಲ್ಲಾಯಿತು. ಇದೀಗ ಮತ್ತೆ ಅದೇ ಸಂಗೀತ ಮಾಂತ್ರಿಕರ ಜತೆಗೆ ಕೈ ಜೋಡಿಸಿದ್ದೇವೆ ಎಂದು ಮನೋಜ್ ನಿರ್ಮಲಾ ಶ್ರೀಧರನ್ ಹೇಳಿದರು.

ಸದ್ಯ ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗುತ್ತಿವೆ. ಈ ಚಿತ್ರದ ಮೊದಲ ಮ್ಯೂಸಿಕ್ ವಿಡಿಯೊ ಬುಧವಾರ ಬಿಡುಗಡೆಯಾಗಲಿದೆ.

ಭಾರತಿ ಟೀಚರ್ ಟ್ರೇಲರ್ ರಿಲೀಸ್

ಸ್ಫೂರ್ತಿದಾಯಕ ಕಥೆಯ ಜತೆಗೆ ಸಾಮಾಜಿಕ ಸಂದೇಶ ಹೊತ್ತು ಬರುತ್ತಿರುವ ಭಾರತಿ ಟೀಚರ್ ಏಳನೇ ತರಗತಿ ಚಿತ್ರದ ಬಾ ಬಾ ಕನ್ನಡಿಗ... ಮತ್ತು

ಎಳೆ ಜೀವ.. ಹಾಡುಗಳು ಬಿಡುಗಡೆಯಾಗಿದ್ದು ಸಂಗೀತ ಪ್ರಿಯರನ್ನು ಸೆಳೆಯುತ್ತಿವೆ. ಇದರ ಜತೆಗೆ ಟ್ರೇಲರ್ ಕೂಡ ಬಿಡುಗಡೆಯಾಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ.

ಪೂಜ್ಯಾಯ ಫಿಲಂಸ್ ಬ್ಯಾನರ್‌ನಲ್ಲಿ ರಾಘವೇಂದ್ರ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಎಂ.ಎಲ್.ಪ್ರಸನ್ನ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಸಿನಿಮಾದ ಹಾಡುಗಳಿಗೂ ಸಂಗೀತ ಸಂಯೋಜಿಸಿದ್ದಾರೆ.

ರೋಹಿತ್ ರಾಘವೇಂದ್ರ ನಾಯಕನಾಗಿ ನಟಿಸಿದ್ದು, ಕನ್ನಡ ಪರ ಹೋರಾಟಗಾರನಾಗಿ ಕಾಣಿಸಿಕೊಂಡಿದ್ದಾರೆ. ಭಾರತೀ ಟೀಚರ್ ಆಗಿ ಯಶಿಕಾ, ಶಿಕ್ಷಕರಾಗಿ ಸಿಹಿಕಹಿಚಂದ್ರು, ಕಾಮಿಡಿ ಕಿಲಾಡಿಗಳು ಖ್ಯಾತಿಯ ಗೋವಿಂದೇಗೌಡ ಮೊದಲ ಬಾರಿಗೆ ಖಳನಾಗಿ ಕಾಣಿಸಿಕೊಂಡಿದ್ದಾರೆ. ಸಚಿವ ಸಂತೋಷ್ ಲಾಡ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಉಳಿದಂತೆ ಅಶ್ವಿನ್ ಹಾಸನ್, ದಿವ್ಯಾ ಅಂಚನ್, ಬೆನಕಾ ನಂಜಪ್ಪ, ಸೌಜನ್ಯಾ ಸುನಿಲ್, ಎಂ.ಜೆ. ರಂಗಸ್ವಾಮಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಎಂ.ಬಿ.ಹಳ್ಳಿಕಟ್ಟಿ ಛಾಯಾಗ್ರಹಣ, ಸುಜಿತ್ ನಾಯಕ್

ಭಾರತಿ ಎನ್ನುವ ಏಳನೇ ತರಗತಿ ವಿದ್ಯಾರ್ಥಿಯೊಬ್ಬಳು ಶಿಕ್ಷಕಿಯಾಗುವ ಕನಸನ್ನು ಹೇಗೆ ನನಸು ಮಾಡಿಕೊಳ್ಳುತ್ತಾಳೆ. ಆ ಮೂಲಕ ಊರಿನ ಮಕ್ಕಳಿಗೆ ಹೇಗೆ ಮಾದರಿಯಾಗುತ್ತಾಳೆ ಎಂಬುದನ್ನು ಎಲ್ಲರಿಗೂ ಮನಮುಟ್ಟುವಂತೆ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ.
-ಎಂ.ಎಲ್.ಪ್ರಸನ್ನ ನಿರ್ದೇಶಕ

ಸಂಕಲನ, ಕಂಬಿರಾಜ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಮುಂದಿನ ತಿಂಗಳಲ್ಲಿ ಭಾರತಿ ಟೀಚರ್ ತೆರೆಗೆ ಬರಲಿದೆ.



ನಂದಿ ಏರಿಬಂದ ಮಹೇಶ್ ಬಾಬು

ಟಾಲಿವುಡ್ ಸ್ಟಾರ್ ನಿರ್ದೇಶಕ ರಾಜಮೌಳಿ ಸಿನಿಮಾಗಳು ಎಂದರೆ ಎಲ್ಲರಿಗೂ ಕುತೂಹಲ ಇದ್ದೇ ಇರುತ್ತದೆ. ಅಂತೆಯೇ ರಾಜಮೌಳಿ ಮತ್ತು ಮಹೇಶ್ ಬಾಬು ಕಾಂಬಿನೇಷನ್‌ನಲ್ಲಿ ಹೊಸ ಸಿನಿಮಾ ಮೂಡಿಬರುತ್ತಿದೆ ಎಂದಾಗ ಆ ಕುತೂಹಲ ದುಪ್ಪಟ್ಟಾಗಿತ್ತು. ಆದರೆ ಶೀರ್ಷಿಕೆ ಬಹಿರಂಗವಾಗಿರಲಿಲ್ಲ. ಅಂತೂ ಈಗ ಜಕ್ಕಣ್ಣ ಭವ್ಯ ಸಮಾರಂಭದಲ್ಲಿ ಚಿತ್ರದ ಶೀರ್ಷಿಕೆ ಬಿಡುಗಡೆ ಮಾಡಿದ್ದಾರೆ. ವಾರಣಾಸಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಸದ್ಯ ಈ ಚಿತ್ರದ ಪೋಸ್ಟರ್ ಟೀಸರ್ ಕೂಡ ರಿಲೀಸ್ ಆಗಿದ್ದು ಬಲು ರೋಚಕವಾಗಿದೆ. ತ್ರೇತಾಯುಗದಿಂದ ಆರಂಭವಾಗುವ ಸ್ಟೋರಿ ಪ್ರಸ್ತುತ ಕಾಲಘಟ್ಟದವರೆಗೂ ಸಾಗುತ್ತದೆ ಎಂಬುದು ಟೈಟಲ್ ಟೀಸರ್‌ನಲ್ಲಿ ತಿಳಿಯುತ್ತದೆ. ವಾರಣಾಸಿಯಿಂದ ನಂದಿ ಏರಿ ಬರುವ ಮಹೇಶ್ ಬಾಬು ಲುಕ್ ಅದ್ಭುತವಾಗಿದೆ. ದುರಳರನ್ನು ಸದೆಬಡಿಯಲು ಶಿವನಂತೆ ಅವತಾರ ತಾಳಿ ಬರುತ್ತಿರುವ ಸನ್ನಿವೇಶ ಇದು ಎಂಬುದು ಸ್ಪಷ್ಟವಾಗುತ್ತದೆ. ವಾರಣಾಸಿಯಲ್ಲಿ ಭರ್ಜರಿ ಸಾಹಸ ಸನ್ನಿವೇಶಗಳನ್ನು ನಿರೀಕ್ಷೆ ಮಾಡಬಹುದಾಗಿದ್ದು, ಚಿತ್ರದಲ್ಲಿ ಗ್ರಾಫಿಕ್ಸ್‌ಗೆ ಹೆಚ್ಚು ಒತ್ತು ನೀಡಲಾಗಿದೆ.

ಭಾರತದ ಪೌರಾಣಿಕ ಕಥೆಗಳನ್ನು ವಿಶ್ವಕ್ಕೆ ತೋರಿಸುವ ಗುರಿ ತಮ್ಮದು ಎಂದು ರಾಜಮೌಳಿ ಈ ಹಿಂದೆಯೇ ಹೇಳಿದ್ದರು, ಅದರಂತೆ ಈಗ ಪೌರಾಣಿಕ ಕಥೆಯಲ್ಲಿರುವ ಅತ್ಯಂತ ಪುರಾತನ ನಗರ ಎಂದೇ ಹೆಸರಾಗಿರುವ ವಾರಣಾಸಿಯ ಹೆಸರನ್ನೇ ತಮ್ಮ ಚಿತ್ರದ ಶೀರ್ಷಿಕೆಯಾಗಿಟ್ಟಿದ್ದಾರೆ. ಪ್ರಿಯಾಂಕಾ ಚೋಪ್ರಾ ನಾಯಕಿಯಾಗಿ ನಟಿಸಿದ್ದು, ಈ ಸಿನಿಮಾದ ಮೂಲಕ ಮತ್ತೆ ಭಾರತೀಯ ಚಿತ್ರರಂಗಕ್ಕೆ ಮರಳಿದ್ದಾರೆ. ಮಲೆಯಾಳಂ ಖ್ಯಾತ ನಟ ಪೃಥ್ವಿರಾಜ್ ಸುಕುಮಾರ್ ವಿಲನ್ ಪಾತ್ರದಲ್ಲಿ ನಟಿಸಿದ್ದು, ಮಾಧವನ್ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಾರಣಾಸಿ ಚಿತ್ರಕ್ಕೆ ಕೀರವಾಣಿ ಸಂಗೀತ ಸಂಯೋಜಿಸಿದ್ದಾರೆ.